
ಸಾಹಿತ್ಯ ದಾಸೋಹ – 242

ಸಂಚಿಕೆ 66 – ನವೆಂಬರ್ 2025 11.10.2025ರ ದಾಸೋಹದ ಬರಹಗಳ ಸಂಕಲನ

ಭೈರಪ್ಪ ನಮನ
ವಿಶೇಷ ಪುರವಣಿ



ಸಮನ್ವಯ ಸಮಿತಿ ಕನ್ನಡವೇ ಸತ್ಯ ಪ್ರತಿಷ್ಠಾನ

ನೋಡಿಯೋ ಸಾಹಿತ್ಯ ದಾಸೋಹ ವೇದಿಕೆ

ಪುಟ ತೆರೆಯುವ ಮುನ್ನ...

ನಮ್ಮ ಮಾತು

ಆತ್ಮೀಯರೆ,

ನಮ್ಮ ವೇದಿಕೆಯ ೨೪೨ನೆಯ ದಾಸೋಹವು ಎಂದಿನಂತೆ ೧೧ನೆಯ ಅಕ್ಟೋಬರ್ ೨೦೨೫ರಂದು ಶನಿವಾರ ಶ್ರೀ ಕೆ.ಎನ್. ಭಗವಾನ್ ಅವರ ಅಧ್ಯಕ್ಷತೆಯಲ್ಲಿ ನಡೆಯಿತು.

೨೪, ಸೆಪ್ಟೆಂಬರ್ ೨೦೨೫ – ಕನ್ನಡ ಸಾರಸ್ವತಲೋಕ ಓರ್ವ ಮಹಾನ್ ಸಾಧಕನನ್ನು ಕಳೆದುಕೊಂಡ ದಿನ. ನಾಡಿನ ಹೆಸರಾಂತ ಕಾದಂಬರಿಕಾರ ಡಾ.ಎಸ್.ಎಲ್.ಭೈರಪ್ಪನವರು ಅಂದು ಇಹಲೋಕ ತ್ಯಜಿಸಿದರು. ಆ ನಂತರ ನಮ್ಮ ಸಸಕಸ ವೇದಿಕೆಯಲ್ಲಿ ಭೈರಪ್ಪ ಸ್ಮರಣೆಯ ಬರಹಗಳು ಪುಂಖಾನುಪುಂಖವಾಗಿ ಬರತೊಡಗಿದವು. ಇದನ್ನು ಮನಗಂಡು ೨೮, ಸೆಪ್ಟೆಂಬರ್ ೨೦೨೫ರಂದು ಭಾನುವಾರವನ್ನು 'ಭೈರಪ್ಪನವರ ದಿನ'ವೆಂದು ಆಚರಿಸಿ, ಅಂದು ಇಡೀದಿನ ವೇದಿಕೆಯನ್ನು ಭೈರಪ್ಪನವರನ್ನು ಕುರಿತ ಬರಹಗಳಿಗೇ ಮೀಸಲಾಗಿಡಲಾಗಿತ್ತು. ಇದಕ್ಕೆ ಪ್ರತಿಕ್ರಿಯೆಯಾಗಿ ಬಂದ ಹಾಗೂ ಭೈರಪ್ಪನವರ ನಿಧನಾನಂತರ ವೇದಿಕೆಯಲ್ಲಿ ಪ್ರಸ್ತುತಪಡಿಸಿದ ಆಯ್ದ ೩೫ ಬರಹಗಳನ್ನೊಳಗೊಂಡ 'ಭೈರಪ್ಪ ನಮನ–ವಿಶೇಷ ಪುರವಣಿ' ಸಹಾ ಈ ಸಾಹಿತ್ಯ ದಾಸೋಹ ಸಂಚಿಕೆಯಲ್ಲಿದೆ.

ಈ ಬಾರಿಯ 'ತಿಂಗಳ ಬೆಳಕು–೨೦' ಕಾರ್ಯಕ್ರಮದಲ್ಲಿ ಶ್ರೀ ಬಿ.ಎಸ್.ಚಂದ್ರಶೇಖರ್ ಅವರು 'ಡಾ. ಭೈರಪ್ಪನವರ ಸಾಹಿತ್ಯ ಯಾನ' ಕುರಿತು ಮಾತನಾಡಿದರು.

ಸಾಹಿತ್ಯ ದಾಸೋಹ, ಭೈರಪ್ಪ ನಮನ ಹಾಗೂ ತಿಂಗಳ ಬೆಳಕು ಕಾರ್ಯಕ್ರಮಗಳನ್ನು ಏರ್ಪಡಿಸುವಲ್ಲಿ ಸಹಕರಿಸಿದ, ತಾಂತ್ರಿಕ ನೆರವು ನೀಡಿದ ಮತ್ತು ತಮ್ಮ ಬರಹಗಳನ್ನು ಪ್ರಸ್ತುತಪಡಿಸಿದ ಎಲ್ಲರಿಗೂ ನಮ್ಮ ಧನ್ಯವಾದಗಳು.

ತಮ್ಮ ಅನಿಸಿಕೆ, ಸಲಹೆಗಳಿಗೆ ಸ್ವಾಗತ.

ವಂದನೆಗಳೊಂದಿಗೆ,

ಸಂಚಾಲಕ ಸಮಿತಿ

ಸಮನ್ವಯ ಸಮಿತಿ ಕನ್ನಡವೇ ಸತ್ಯ ಪ್ರತಿಷ್ಠಾನ — 25 ನವೆಂಬರ್ 2025

ನೋಡಿಯೋ ಸಾಹಿತ್ಯ ದಾಸೋಹ ವೇದಿಕೆ

ದಾಸೋಹದ ಪುಟಗಳಲ್ಲಿ...

ಮುಖಪುಟದ ಚಿತ್ರ – ಡಾ. ಎಸ್.ಎಲ್.ಭೈರಪ್ಪ – (ಚಿತ್ರ ಕೃಪೆ: ಅಂತರ್ಜಾಲ)

'ಭೈರಪ್ಪ ನಮನ' ವಿಶೇಷ ಪುರವಣಿಯ ಬರಹಗಳು

ಸಮನ್ವಯ ಸಮಿತಿ ಕನ್ನಡವೇ ಸತ್ಯ ಪ್ರತಿಷ್ಠಾನ
ನೋಡಿಯೋ ಸಾಹಿತ್ಯ ದಾಸೋಹ ವೇದಿಕೆ

ಸಾಹಿತ್ಯ ದಾಸೋಹ – 242


ಕಾರ್ಯಕ್ರಮ ವರದಿ: ರಾಧಿಕಾ ವಿ. ಗುಜ್ಜರ್

11ನೆಯ ಅಕ್ಟೋಬರ್ 2025ರ ಶನಿವಾರದಂದು ನೆರವೇರಿದ ಅಕ್ಟೋಬರ್ ಮಾಹೆಯ 242ನೆಯ ನೋಡಿಯೋ ಸಾಹಿತ್ಯ ದಾಸೋಹ ಕಾರ್ಯಕ್ರಮವು ನಿಗದಿಯಂತೆ ಇಳಿ ಮಧ್ಯಾಹ್ನ 3.30ಕ್ಕೆ ಸರಿಯಾಗಿ ಅಂತರಜಾಲದಲ್ಲಿ ಗೂಗಲ್‌ಮೀಟ್ ಮುಖೇನ ಆರಂಭವಾಯಿತು. ಶ್ರೀ ಕೆ.ಎನ್.ಭಗವಾನ್ ಅವರು ದಾಸೋಹದ ಅಧ್ಯಕ್ಷತೆ ವಹಿಸಿದ್ದರು.

ಶ್ರೀ ಕೆ.ಎನ್.ಮಹಾಬಲ ಅವರು ಸಭೆಯ ಸಂಚಾಲಕತ್ವ ವಹಿಸಿ ಶುಭಾರಂಭ ಘೋಷಿಸಿದರು. ಶ್ರೀ ವಿ.ಎಸ್.ಇಜೇರಿ ಅವರು ಸಭಾಧ್ಯಕ್ಷರು, ಮತ್ತು ಸೋಹಿ ಮಿತ್ರರನ್ನು ಸ್ವಾಗತಿಸಿ, ಸಭೆಯ ಅಧ್ಯಕ್ಷರಾದ ಶ್ರೀ ಕೆ.ಎನ್. ಭಗವಾನ್ ಅವರನ್ನು ಪರಿಚಯಿಸಿದರು.

ಸಂಚಾಲಕ ಸಮಿತಿಯ ಪರವಾಗಿ ಶ್ರೀ ಬೆಂ.ಶ್ರೀ.ರವೀಂದ್ರ ಅವರು ತಮ್ಮ ಪ್ರಾಸ್ತಾವಿಕ ನುಡಿಗಳಲ್ಲಿ ಈ ಕೆಳಕಂಡ ವಿಷಯಗಳನ್ನು ಪ್ರಸ್ತಾಪಿಸಿದರು.

- ವೇದಿಕೆಯ ಹಿರಿಯ ಸದಸ್ಯ ಎಂ.ಜಿ. ವೆಂಕಟೇಶಮೂರ್ತಿ ಅವರು ಎರಡು ದಿನಗಳ ಹಿಂದೆ ದೈವಾಧೀನರಾದ ಕುರಿತು ತಮ್ಮ ಸಂತಾಪ ವ್ಯಕ್ತಪಡಿಸಿದರು. ಎಂಜಿವಿಯವರನ್ನು ಕುರಿತು ಸಾಕಷ್ಟು ಬರಹಗಳು ವೇದಿಕೆಯಲ್ಲಿ ಪ್ರಕಟವಾಗುತ್ತಿದ್ದು, ದಿವಂಗತರು ಹಲವು ಸಾಹಿತ್ಯ ದಾಸೋಹಗಳ ಅಧ್ಯಕ್ಷತೆ ವಹಿಸಿದ್ದರಲ್ಲದೆ ವೇದಿಕೆಯ ಎಲ್ಲ ಕಾರ್ಯಕ್ರಮಗಳಲ್ಲಿ ಸಕ್ರಿಯವಾಗಿ ಭಾಗವಹಿಸುತ್ತಿದ್ದರು. ಅವರ ಹಲವು ಪುಸ್ತಕಗಳೂ ಪ್ರಕಟವಾಗಿದ್ದು, ಅವರ ವ್ಯಕ್ತಿಚಿತ್ರದ ಬರಹಗಳು, ಚುಟುಕು ಕವನಗಳ ಕೃಷಿಯನ್ನು ಪ್ರಶಂಸಿಸಿದರು.
- 18ನೆಯ ಅಕ್ಟೋಬರ್ 2025ರಂದು ವೇದಿಕೆಯ ಸದಸ್ಯರು ರಚಿಸಿದ ಐದು ಪುಸ್ತಕಗಳ ಬಿಡುಗಡೆ ಸಮಾರಂಭ ಹಮ್ಮಿಕೊಂಡಿದ್ದು, ಅವುಗಳೆಂದರೆ– 1. ನನ್ನ ಅಪ್ಪ ಕೆ.ಎಸ್.ನ. (ಕೆ.ಎನ್. ಮಹಾಬಲ), 2. ಹಾಸ್ಯಾಲಾಪ (ಕೆ.ಎನ್.ಮಹಾಬಲ), 3. ಚಿರಂತನ ಭಾವಬಿಂದು (ಗಿರಿಜಾ ರಾಜ್) 4. ಅಯೋಧ್ಯಾ, ಕಾಶಿ, ಭೂತಾನ್ ಆಧ್ಯಾತ್ಮಿಕ ಪ್ರವಾಸ (ಹೆಚ್.ಶ್ರೀಧರ ರಾವ್) ಮತ್ತು 5. ಕಥಾಸುಧೆಯ ಕಡಲು (ವೇದಿಕೆಯ ನಾಲ್ಕು ಸದಸ್ಯರ ಸಹಯೋಗದ, ಶ್ರಾವಣದ ಸಣ್ಣಕಥಾ ಅಭಿಯಾನದ ಕತೆಗಳ ಸಂಕಲನ). ನಮ್ಮ ವೇದಿಕೆಯ ಅಡಿಯಲ್ಲಿ ಆಯೋಜಿಸಲಾಗಿರುವ ಈ ಕಾರ್ಯಕ್ರಮದಲ್ಲಿ ಎಲ್ಲ ಸದಸ್ಯರೂ ಭಾಗವಹಿಸಿ ಪ್ರೋತ್ಸಾಹಿಸಲು ಕರೆ ನೀಡಿದರು.



- 09ನೆಯ ಅಕ್ಟೋಬರ್ 2025ರಂದು "ಅದೃಶ್ಯ ಬೇರುಗಳು" ಎಂಬ ಝೋ ಕಾದಂಬರಿ ಬಿಡುಗಡೆ ಯಾಗಲಿದ್ದು, ಇದನ್ನು ವೇದಿಕೆಯ ಸದಸ್ಯರಾದ ಟಿ.ಆರ್.ಉಷಾರಾಣಿ, ಗಿರಿಜಾ ರಾಜ್, ಎನ್.ಶಂಕರ ರಾವ್, ಸಿಂಧು ಹರಿತಸ್, ಗಾಯತ್ರಿ ಮೂರ್ತಿ, ಹು.ವಾ. ಶ್ರೀಪ್ರಕಾಶ್ ಹಾಗೂ ಎನ್.ವಿ.ರಘುರಾಂ ಅವರು ರಚಿಸಿದ್ದಾರೆ. ಪುಸ್ತಕ ಪ್ರಕಾಶಕರೇ ಆಯೋಜಿಸಿರುವ ಈ ಕಾರ್ಯಕ್ರಮದಲ್ಲಿ ವೇದಿಕೆಯ ಎಲ್ಲ ಸದಸ್ಯರು ಭಾಗವಹಿಸಿ, ಪುಸ್ತಕಗಳನ್ನು ಖರೀದಿಸುವುದರ ಮೂಲಕ ಪ್ರೋತ್ಸಾಹಿಸಬೇಕೆಂದು ಕರೆ ನೀಡಿದರು.
- ವೇದಿಕೆಯ ಅತ್ಯಂತ ಕ್ರಿಯಾಶೀಲ ಬರಹಗಾರರಾದ ಶ್ರೀ ಗಣಪತಿ ಹೆಗಡೆ ಅವರು 2023 ಮತ್ತು 2024ರ ಶ್ರಾವಣ

ಕಥಾರಚನಾ ಅಭಿಯಾನದಲ್ಲಿ ಬರೆದ ತಮ್ಮ ಸಣ್ಣಕತೆಗಳ ಕಥಾ ಸಂಕಲನ "ಗುಲಾಬಿ ಹೂವು ಹಾಗೂ ಇತರ ಕತೆಗಳು" ಮತ್ತು "ನಲ್ನುಡಿ ಶತಕ" ಪುಸ್ತಕಗಳು ಪ್ರಕಟಣೆಗೆ ಸಿದ್ಧವಾಗಿರುವ ಬಗ್ಗೆ ತಿಳಿಸಿ, ಇವೆಲ್ಲವೂ ವೇದಿಕೆಯಲ್ಲಿ ಅವರು ಪ್ರಕಟಿಸಿದ ಬರಹಗಳ ಫಲವೆಂದು ಸಂತೋಷ ವ್ಯಕ್ತಪಡಿಸಿದರು.

- ವೇದಿಕೆಯ ಮತ್ತೊಬ್ಬ ಸದಸ್ಯೆ ಶ್ರೀಮತಿ ಶಾಂತಾ ನಾಗಮಂಗಲ ಅವರ "ಬಿಹಾರಿ ಲಾಲರ ದೋಹೆಗಳು" ಪುಸ್ತಕವು ಕುವೆಂಪು ಭಾಷಾ ಭಾರತಿಯ ಮೂಲಕ ಪ್ರಕಟವಾಗಿದ್ದು, ಇದರಲ್ಲಿರುವ ಬರಹಗಳು ಕೂಡಾ ಹಿಂದೆ ನಮ್ಮ ವೇದಿಕೆಯಲ್ಲಿ ಮೂಡಿಬಂದ ಬರಹಗಳೇ ಎಂಬುದು ಹೆಮ್ಮೆಯ ಸಂಗತಿ ಎಂದರು.
- ಇದಲ್ಲದೆ, ವೇದಿಕೆಯ ಹೊಸ ಸದಸ್ಯರಾದ ಶ್ರೀ ಉದಯ ಭಟ್ ವಲಕ್ಕುಂಜ ಅವರ ಕೃತಿ "ಅನುರಕ್ತ", ನುರಿತ ಲೇಖಕಿ ಡಾ. ಶುಭಶ್ರೀ ಪ್ರಸಾದ್ ಅವರ ಎರಡು ಕೃತಿಗಳಾದ "ತೆರೆದ ನೋಟ" ಮತ್ತು "ಹೊತ್ತಿಗೆ ಹಿಡಿಯುವ ಹೊತ್ತು" ಬಿಡುಗಡೆಯಾಗಿದ್ದು, ಶ್ರೀ ಗುರುಪ್ರಸಾದ್ ಹಾಲ್ಕುರಿಕೆ ಅವರ ಪ್ರವಾಸ ಕಥನ "ಚಾರಣ ಸವಿ ಹೂರಣ" ಸಹಾ ಬಿಡುಗಡೆಗೆ ಸಿದ್ಧವಾಗಿದೆ ಎಂದು ತಿಳಿಸಿದರು.
- ಶ್ರಾವಣ ಮಕ್ಕಳ ಸಣ್ಣಕತೆಗಳ ಅಭಿಯಾನದಲ್ಲಿ ಮೂಡಿಬಂದ ಕಥಾಸಂಕಲನ ಹೊರತರುವ ಕೆಲಸ ಸಾಗುತ್ತಿದ್ದು, ಅದರಲ್ಲಿನ ಕೆಲವು ಕತೆಗಳು ಮಕ್ಕಳ ಕತೆಯ ರೂಪದಲ್ಲಿಲ್ಲವೆನಿಸಿದ ಕಾರಣ ಕತೆಗಾರರಿಂದ ಸೂಕ್ತ ತಿದ್ದುಪಡಿ ಮಾಡಿಸಿದ ಮೇಲೆ ಸಂಕಲನದ ಸಂಪಾದಕರಾದ ಶ್ರೀ ಶ್ರೀರಂಗರಾಜನ್ ಹಾಗೂ ಶ್ರೀ ಹೆಚ್.ಆರ್.ಗುರುರಾಜ ಶಾಸ್ತ್ರಿ ಅವರಿಂದ ಸೈ ಎನಿಸಿಕೊಂಡ ನಂತರದಲ್ಲಿಯೇ ಪ್ರಕಟಿಸುವುದಾಗಿ ಮಾಹಿತಿ ನೀಡಿದರು.
- ವೇದಿಕೆಯು ಹೆಚ್ಚು ಫಲಭರಿತವಾಗುತ್ತಿದ್ದು ಹೆಚ್ಚು ಹೆಚ್ಚು ಕ್ರಿಯಾತ್ಮಕ ಬರಹಗಳು ಪ್ರಕಟವಾಗುತ್ತಿವೆ. ಇದು ವೇದಿಕೆಯ ಬೆಳವಣಿಗೆಯ ದೃಷ್ಟಿಯಿಂದ ನಾವೆಲ್ಲರೂ ಸಂತೋಷಪಡಬೇಕಾದ ವಿಷಯ, ಜೊತೆಗೆ ಪ್ರಕಟವಾಗುತ್ತಿರುವ ಪುಸ್ತಕಗಳನ್ನು ಎಲ್ಲರೂ ಕೊಂಡು ಪ್ರೋತ್ಸಾಹಿಸೋಣ ಎಂದು ಕರೆ ನೀಡಿದರು.

ಶ್ರೀ ಗುರುರಾಜ ಶಾಸ್ತ್ರಿ ಅವರು 241ನೆಯ ಸಾಹಿತ್ಯ ದಾಸೋಹದ ಸಂಚಿಕೆಯನ್ನು ಬಿಡುಗಡೆ ಮಾಡಿ, ಈ ಸಂಚಿಕೆಯನ್ನು ವೇದಿಕೆಯ ವಾಟ್ಸಾಪ್ ಗುಂಪಿನಲ್ಲಿ ಹಾಗೂ ವೇದಿಕೆಯ ಜಾಲತಾಣದಲ್ಲಿ ಹಾಕುವುದಾಗಿ ತಿಳಿಸಿದರು.

ದಾಸೋಹದಲ್ಲಿ ಲೇಖನಗಳನ್ನು ಪ್ರಸ್ತುತಪಡಿಸಲು ಹದಿನೇಳು ಸದಸ್ಯರು ನೋಂದಾಯಿಸಿದ್ದು, ಆ ಪೈಕಿ ಹದಿನೈದು ಲೇಖಕರು ತಮ್ಮ ವಿವಿಧ ಪ್ರಸ್ತುತಿಗಳನ್ನು ವಾಚಿಸಿದರು.

ಅಧ್ಯಕ್ಷರಾದ ಶ್ರೀ ಕೆ.ಎನ್. ಭಗವಾನ್ ಅವರು ಮೊದಲಿಗೆ ದಾಸೋಹದ ಎಲ್ಲ ಪ್ರಸ್ತುತಿಕರ್ತರಿಗೆ ಹಾಗೂ 242ನೆಯ ಸಾಹಿತ್ಯ ದಾಸೋಹದ ಅಧ್ಯಕ್ಷತೆಗಾಗಿ ತನ್ನನ್ನು ಆಹ್ವಾನಿಸಿದ ಶ್ರೀ ಕೆ.ಎನ್.ಮಹಾಬಲ ಅವರಿಗೆ ಕೃತಜ್ಞತೆಗಳನ್ನು ಸಲ್ಲಿಸಿದರು. ಪ್ರಸ್ತುತಿಗಳ ಕುರಿತ ಅಧ್ಯಕ್ಷೀಯ ಅವಲೋಕನದ ಮೊದಲು ಇತ್ತೀಚೆಗಷ್ಟೇ ದಿವಂಗತರಾದ ಶ್ರೀ.ಎಸ್.ಎಲ್. ಭೈರಪ್ಪ ಅವರ "ಯಾನ" ಕಾದಂಬರಿಯ ಅತ್ಯುತ್ತಮ ಪ್ರೌಢ ಪರಿಚಯ ಲೇಖನವನ್ನು ಪ್ರಸ್ತುತಪಡಿಸಿದರು. ನಂತರದಲ್ಲಿ, ದಾಸೋಹಿಗಳ ಪ್ರತಿಯೊಂದು ಪ್ರಸ್ತುತಿಗಳ ಕುರಿತು ತಮ್ಮ ಅವಲೋಕನವನ್ನು ಸಂಕ್ಷಿಪ್ತವಾಗಿ ಮತ್ತು ಬಹಳ ಸಮರ್ಥವಾಗಿ ನಡೆಸಿಕೊಟ್ಟರು. ಅನುಭವೀ ಲೇಖಕರು, ಭಾಷಾ ಜ್ಞಾನಿಗಳು ಹಾಗೂ ವೈವಿಧ್ಯಮಯ ಸಾಹಿತ್ಯ ಕೃಷಿಯನ್ನು ಮಾಡಿರುವ ಶ್ರೀಯುತರ ಅನುಭವದ ಮೂಸೆಯಲ್ಲಿ ಎಲ್ಲ ಲೇಖಕರ ಬರಹಗಳು ತಮ್ಮ ಹೊಳಪನ್ನು ತೆರೆದುಕೊಂಡವು.

ಶ್ರೀ ಕೆ.ಎನ್.ಮಹಾಬಲ ಅವರು ವಂದನಾರ್ಪಣೆಯನ್ನು ಸಲ್ಲಿಸುವ ಮೂಲಕ ಅಕ್ಟೋಬರ್ ತಿಂಗಳ ನೋಡಿಯೋ ಸಾಹಿತ್ಯ ದಾಸೋಹವು ಸಮಾಪ್ತವಾಯಿತು.

ಸಾಹಿತ್ಯ ದಾಸೋಹದ ಸಂಚಾಲಕತ್ವ : ಶ್ರೀ ಕೆ.ಎನ್.ಮಹಾಬಲ
ಜಿ ಮೀಟ್ ಆತಿಥ್ಯ : ಶ್ರೀಮತಿ ರಾಧಿಕಾ ವಿ. ಗುಜ್ಜರ್
ವಿಡಿಯೋ ಸಂಸ್ಕರಣೆ : ಶ್ರೀ ಹೆಚ್.ಆರ್. ಗುರುರಾಜ ಶಾಸ್ತ್ರಿ
ಸಂಚಿಕೆಯ ಪಿಡಿಎಫ್ ಆವೃತ್ತಿ ತಯಾರಕರು : ಶ್ರೀ ಶೃಂಗೇಶ್ವರ ಶರ್ಮ

***


ತಿಂಗಳಬೆಳಕು- 20

ಸಮನ್ವಯ ಸಮಿತಿ ಕನ್ನಡವೇ ಸತ್ಯ ಪ್ರತಿಷ್ಠಾನ
ನೋಡಿಯೋ ಸಾಹಿತ್ಯ ದಾಸೋಹ ವೇದಿಕೆ

ಡಾ. ಎಸ್.ಎಲ್. ಭೈರಪ್ಪನವರ ಸಾಹಿತ್ಯ ಯಾನ

ಉಪನ್ಯಾಸಕರು: ಶ್ರೀ ಬಿ.ಎಸ್. ಚಂದ್ರಶೇಖರ್

ವರದಿ: ಹು.ವಾ. ಶ್ರೀಪ್ರಕಾಶ್




ದಿನಾಂಕ 25.10.2025 ಶನಿವಾರದಂದು ನಡೆದ 'ತಿಂಗಳ ಬೆಳಕು' ಕಾರ್ಯಕ್ರಮದಲ್ಲಿ ಕವಿ, ಚಿಂತಕ ಶ್ರೀ ಬಿಎಸ್ ಚಂದ್ರಶೇಖರ್ ಅವರು ಡಾ. ಎಸ್.ಎಲ್.ಭೈರಪ್ಪನವರ ಸಾಹಿತ್ಯ ಯಾನದ ಬಗ್ಗೆ ಮಾತನಾಡಿದರು

ಗೂಗಲ್ ಮೀಟ್ ಅಂತರ್ಜಾಲ ವೇದಿಕೆಯಲ್ಲಿ ನಡೆದ ಈ ಕಾರ್ಯಕ್ರಮದ ಆರಂಭದಲ್ಲಿ ಶ್ರೀ ರವಿ ಕುಸುಬಿಯವರು ಪ್ರಾಸ್ತಾವಿಕ ಮಾತುಗಳನ್ನಾಡಿದರು. ಶ್ರೀ ಶ್ರೀರಂಗರಾಜನ್‌ರವರು ಉಪನ್ಯಾಸಕರಾದ ಶ್ರೀ ಬಿ.ಎಸ್.ಚಂದ್ರಶೇಖರ್ ಅವರನ್ನು ಔಪಚಾರಿಕವಾಗಿ ಪರಿಚಯಿಸಿ, ಎಲ್ಲರನ್ನೂ ಸ್ವಾಗತಿಸಿದರು.

ಶ್ರೀ ಬಿ.ಎಸ್. ಚಂದ್ರಶೇಖರ್ ಅವರು ತಮ್ಮ ಉಪನ್ಯಾಸದಲ್ಲಿ ಭೈರಪ್ಪನವರ ಕೃತಿಗಳಾದ 'ಸತ್ಯ ಮತ್ತು ಸೌಂದರ್ಯ', 'ಉತ್ತರಕಾಂಡ' ಹಾಗೂ 'ಯಾನ' ಕೃತಿಗಳ ಬಗ್ಗೆ ಮಾತನಾಡಿದರು.

'ಸತ್ಯ ಮತ್ತು ಸೌಂದರ್ಯ' ಕೃತಿಯ ಬಗ್ಗೆ ಮಾತನಾಡುತ್ತಾ, ಬುದ್ಧಿಗೆ ಎರಡು ಬಗೆಯ ಶಕ್ತಿ ಇದೆ. ಒಂದು ವಿಚಾರ ಶಕ್ತಿ ಮತ್ತೊಂದು ಕಲ್ಪನಾ ಶಕ್ತಿ. ವಿಚಾರ ಶಕ್ತಿಯ ಫಲ ಸತ್ಯ, ಕಲ್ಪನಾ ಶಕ್ತಿಯ ಫಲ ಸೌಂದರ್ಯ. ಸತ್ಯ ಮತ್ತು ಸೌಂದರ್ಯ ಎರಡೂ ಬುದ್ಧಿಶಕ್ತಿಯ ಸೃಷ್ಟಿ. ಸೌಂದರ್ಯದ ಕಲ್ಪನೆ ಸೋತು ಶರಣಾದಾಗ ಭವ್ಯದ ಕಲ್ಪನೆ ಮೂಡುತ್ತದೆ. ಕೃಷ್ಣ ಬಹಳ ಸುಂದರ ವ್ಯಕ್ತಿ. ಆತನ ವಿಶ್ವರೂಪ ಭವ್ಯ, ಯಾಕೆಂದರೆ ಅದು ವಿವರಿಸಲು ಅಸಾಧ್ಯ ಎಂದ ಅವರು ಸಾಕಷ್ಟು ವಿಸ್ತಾರವಾಗಿ ಕೃತಿಯನ್ನು ವಿಶ್ಲೇಷಿಸಿದರು.

'ಉತ್ತರಕಾಂಡ' ವಾಲ್ಮೀಕಿ ಅವರ ರಾಮಾಯಣವನ್ನು ಆಧರಿಸಿದ್ದರೂ ಸೀತೆಯ ದೃಷ್ಟಿಯಿಂದ ಇದು ಭಿನ್ನವಾಗಿದೆ. ವಾಲ್ಮೀಕಿ ಏರ್ಪಡಿಸುವ ಧರ್ಮಸಭೆಯಲ್ಲಿ ಸೀತೆ ಕಟ್ಟುನಿಟ್ಟಾಗಿ ಮಾತಾಡುತ್ತಾಳೆ. ಇಲ್ಲಿ ಸೀತೆ ರಾಮನ ಪತಿತ್ವವನ್ನು ಒಪ್ಪಿಕೊಳ್ಳುವುದಿಲ್ಲ. ಇಕ್ಷ್ವಾಕು ವಂಶ ನನ್ನದಲ್ಲ ಎನ್ನುತ್ತಾಳೆ. ಸೀತೆಯ ದಿಟ್ಟತನ, ಆಕೆಯ ಕೃಷಿಯ ಬಗೆಗಿನ ಆಸಕ್ತಿ ಇಲ್ಲಿ ವ್ಯಕ್ತವಾಗಿದೆ. ವಿವಾಹ ಸಂಬಂಧ ಬಂದಾಗ ದಶರಥ ಜಾತಿ ಕೇಳುವುದು, ವಾಲ್ಮೀಕಿ ಸೃಷ್ಟಿಸಿದ ವಿನಯವಂತ ದಶರಥ ಚಕ್ರವರ್ತಿಗಿಂತ ಭಿನ್ನ ಅನಿಸುತ್ತದೆ. ಹಾಗೆಯೇ ರಾವಣ ಸೀತೆಯನ್ನು ಕದ್ದೊಯ್ಯುವ ರೀತಿ ಒಪ್ಪುವುದು ಕಷ್ಟ, ಅತಿ ವಾಸ್ತವಿಕತೆ ಒಪ್ಪುವುದು ಕಷ್ಟ. ವಿಭೀಷಣನ ಪತ್ನಿ ಸುರಮೆ, ಶಬರಿ, ಊರ್ಮಿಳೆ, ಅನಸೂಯೆ, ಗುಹಾ, ಲಕ್ಷ್ಮಣ ಮುಂತಾದ ಪಾತ್ರಗಳಿಗೆ ಹೆಚ್ಚಿನ ಕಳೆ ಬಂದಿದೆ. ಕೊನೆಯಲ್ಲಿ ರಾಮ ಆತ್ಮಹತ್ಯೆ ಮಾಡಿಕೊಳ್ಳುವಂತೆ ಚಿತ್ರಿಸಲಾಗಿದೆ ಎಂದರು.



'ಯಾನ' ಕಾದಂಬರಿ ಅಂತರಿಕ್ಷಯಾನದ ಬಗೆಗೆ ಇದೆ. ವಂಶ ಬೀಜಕ್ಕೆ ಸೇರುತ್ತದೋ, ಕ್ಷೇತ್ರಕ್ಕೆ ಸೇರುತ್ತದೋ ಎಂಬ ಪ್ರಶ್ನೆ ಇಲ್ಲಿ ಚರ್ಚಿತವಾಗಿದೆ. ಕೃಷ್ಣ ರಂಧ್ರಗಳ ಬಗ್ಗೆ ಅಧ್ಯಯನ ಮಾಡಿದ ಸುದರ್ಶನ್‌ಗೆ ಪತ್ನಿ ಉತ್ತರೆ ಅರ್ಥವಾಗುವುದಿಲ್ಲ. ಕೊನೆಗೆ ಉತ್ತರೆಯ ಪಾದಕ್ಕೆ ಹಣೆ ಮುಟ್ಟಿಸುತ್ತಾನೆ. ತಾಯಿ ತಂದೆಯರ ಡೈರಿಯಿಂದ ಹುಟ್ಟಿನ ಗುಟ್ಟು ತಿಳಿದುಕೊಳ್ಳುವ ಪ್ರಯತ್ನ ಮಾಡುವ ಮಕ್ಕಳಿಗೆ ಸುದರ್ಶನ್, ಉತ್ತರೆ ನಿಮ್ಮ ತಾಯಿ ಎಂದೂ ತಾನು ತಂದೆ ಅಲ್ಲ ಎಂದೂ ಸ್ಪಷ್ಟಪಡಿಸುತ್ತಾನೆ. ಸೂರ್ಯನ ವಲಯ ದಾಟಿದ ನಂತರ ಸೌರಮಂಡಲದ ನೀತಿ ನಿಯಮಗಳು ಕಾಲ ದೇಶವನ್ನು ಮೀರಿದಾಗ ಅನ್ವಯಿಸುವುದಿಲ್ಲ ಎಂದು ಭೈರಪ್ಪನವರು ತಮ್ಮ ಈ ಕೃತಿಯಲ್ಲಿ ಪ್ರತಿಪಾದಿಸುತ್ತಾರೆ.

ಅನೇಕ ದೇಶಗಳನ್ನು ಸುತ್ತಿದ್ದರೂ ಭೈರಪ್ಪನವರಿಗೆ ಇನ್ನಷ್ಟು ಸುತ್ತುವ ಬಯಕೆ ಇತ್ತು. ಭಾರತದ ಉದ್ದಗಲಕ್ಕೂ ಸಂಚರಿಸಿದ ಅವರಿಗೆ ಭಾರತದ ಮತ್ತು ವಿದೇಶದ ತಾತ್ವಿಕ ಚಿಂತನೆ ಜನಜೀವನ ಮತ್ತು ಹಲವು ಭಾಷೆಗಳ ಅರಿವು ಇತ್ತು. ಅವರು ರಸ ಸೃಷ್ಟಿಯ ಸೂಕ್ಷ್ಮ ಬಲ್ಲವರು.

ಮುಂದಿನ ಜನ್ಮದಲ್ಲಿ ಸಂಗೀತಗಾರನಾಗಬೇಕೆಂಬ ಬಯಕೆಯನ್ನು 'ಮಂದ್ರ' ಕೃತಿಯನ್ನು ಬರೆದ ನಂತರ ವ್ಯಕ್ತಪಡಿಸಿದ್ದರು. ಅವರಿಗೆ ಹಿಂದೂಸ್ತಾನಿ ಸಂಗೀತ ಬಹಳ ಪ್ರಿಯವಾಗಿತ್ತು. ಅಂತರಿಕ್ಷಯಾನದ ಬಯಕೆಯೂ ಅವರಿಗಿತ್ತು. ನಮಗೆ ತಿಳಿಯದ ಪರಮ ಸತ್ಯ ಒಂದು ಇದೆ ಎಂಬ ಆಜ್ಞೇಯತಾ ವಾದದ ಚಿಂತನೆ ಅವರದಾಗಿತ್ತು ಎಂದರು.

ಕೊನೆಯಲ್ಲಿ ಸಂವಾದ ಕಾರ್ಯಕ್ರಮ ನಡೆಯಿತು.

ಶ್ರೀ ಗುರುರಾಜ ಶಾಸ್ತ್ರಿಯವರು ಎಲ್ಲರಿಗೂ ವಂದನೆಗಳನ್ನು ಅರ್ಪಿಸುವುದರೊಂದಿಗೆ ಕಾರ್ಯಕ್ರಮ ಮುಕ್ತಾಯವಾಯಿತು.

***

ಕವಿಮನ

ಓದಬೇಕೆ?

ನಾನು ಇನ್ನು ಮುಂದೆ ಓದಲಾರೆ
ತಿಳಿದಿರುವ ತಿಳುವಳಿಕೆ ಸಾಕು ನನಗೆ
ಇದೇ ಸೃಷ್ಟಿಸಿಹುದು ನೂರಾರು ಗೊಂದಲ
ಹೊಸದಾಗಿ ಇನ್ನೊಂದ ಏಕೆ ಸೇರಿಸಲಿ?

ಕಬ್ಬಿಣದ ಕಡಲೆ ಗಣಿತವಂತೆ
ಒಂದು ಅಡಿ ಯಾರದೋ ಪಾದವಂತೆ
ಸೊನ್ನೆ ಎಂದರೆ ಶೂನ್ಯವಂತೆ
ಏನೂ ಇಲ್ಲವಂತೆ
ಋಣಾತ್ಮಕ ಚಿಹ್ನೆ ಹೊತ್ತ ಸಂಖ್ಯೆಗಳನ್ನು
ಲೆಕ್ಕ ಹಾಕುವಾಗ ಮಾತ್ರ ಬಳಸುತ್ತಾರಂತೆ

ಡಾರ್ವಿನ್ ನ ಸಿದ್ಧಾಂತ ಬದಲಾಗಿದೆಯಂತೆ
ಲೆ ಮಾರ್ಕ್ ಎಂದೋ ಮೂಲೆ ಸೇರಿದ್ದಾನೆ
ಬೆಳಕ ಚಲನೆಯಲ್ಲೂ ವಕ್ರತೆ ಇದೆಯಂತೆ
ಪ್ಲೂಟೊ ನಮ್ಮ ಕಣ್ಣ ಮುಂದೆಯೇ ಮಾಯವಾಗಿದೆಯಲ್ಲ.

ಇನ್ನು ಇತಿಹಾಸದ ಬಗ್ಗೆ ಯೋಚಿಸಿದರೆ
ಅದೊಂದು ಗೊಂದಲದ ಗೂಡು
ರಾಜರ ವೈಭವ ಶೂರತ್ವ ಕ್ರೂರತ್ವಗಳ ವೈಭವೀಕರಣ
ಸಾಮಾನ್ಯನ ನೋವು ನಲಿವುಗಳ ಕಾಣೆವೆಂದೆಂದಿಗೂ
ಇದೆಲ್ಲ ಏಕೆ ಬೇಕು ನನಗೆ
ಸಾಕು ನನಗೆ ನನ್ನ ಬದುಕು.

ಪುರಾಣ ಪುಣ್ಯ ಕತೆಗಳ ಬಗ್ಗೆ ಹೇಳುವಂತಿಲ್ಲ
ಉತ್ತರದ ಪ್ರತಿಗೂ ದಾಕ್ಷಿಣಾತ್ಯ ಕೃತಿಗೂ
ವ್ಯತ್ಯಾಸ ಅಜಗಜಾಂತರ
ದಶಾವತಾರದಲ್ಲಿ ಒಂದೆಡೆ ಬುದ್ಧನಾದರೆ
ಇನ್ನೊಂದೆಡೆ ಬಲರಾಮ.

ಕವಿಗಳ ಕಾವ್ಯಗಳ ಬಗ್ಗೆ ಹೇಳಲಿ ಏನು
ಏನನ್ನೂ ಅನುಭವಿಸದೆ
ಪರಕಾಯ ಪ್ರವೇಶ ಮಾಡಿ
ಅನುಭವಿಸದವರಿಗಿಂತ ಹೆಚ್ಚು ನೋವು ಪಟ್ಟು
ಭಾವನಲೋಕಗಳ ಜಾಲದಲ್ಲಿ ಸಿಲುಕಿ
ಭಾಷಾ ಪಾಂಡಿತ್ಯ ಮೆರೆಯಲು
ಇದ್ದದ್ದು ನಡೆದದ್ದರ ಮೇಲೆ
ಕರುಣೆಯ ತೆರೆಗಳನೆಳೆದು
ಅವಾಸ್ತವ ಬಿಂಬಿಸುವರು.

ರಾಜಕೀಯದ ಬಗ್ಗೆ ಓದಲು
ಮುತ್ಸದ್ಧಿಗಳೇ ಇಲ್ಲ
ಎಲ್ಲಾ ಸಮಯ ಸಾಧಕರು
ಮಾಡಿರುವುದೇನೆ ಇರದಿದಿದ್ದರು
ತಮಟೆ ಬಾರಿಸುತಿಹರು
ತಮ್ಮ ಕಹಳೆಗಳ ತಾವೇ ಊದುತ್ತಿಹರು.

ಇಂದು ಪ್ರೀತಿ ಪ್ರೇಮ ವ್ಯಾಪಾರದ ಸರಕು
ಇನ್ನೇನ ಓದಲಿ ಗೆಳೆಯರೆ
ತಿಳಿಸಿ ನೀವೇನಾದರೂ ಹೊಸದ ಓದಿದ್ದರೆ?

– ಎಂ. ಮಲ್ಲಿಕಾರ್ಜುನ
01.10.2025

ಕವಿಮನ

ಜೀವನ ಎಷ್ಟೊಂದ್ ಸಂದಾಕೈತಿ

ಒಂದಾನೊಂದು ಕಾಲದಾಗ ಏಸೊಂದು ಮುದವಿತ್ತ
ಗಡಿಯಾರ ನಮ್ಮದಿತ್ತ ಎಲ್ಲವೂ ನಮ್ಮ ಕೈಯಾಗಿತ್ತ
ಹೈಕಳೂ ನಮ್ಮವಿತ್ತ, ಕನಸೂ ನಮ್ಮದಿತ್ತ
ಭವಿಷ್ಯವೂ ನಮ್ಮ ಹಿಡಿಯಲಿತ್ತಲ್ವರಾ

ಭಾಳ ಚಲೋ ಯೋಚನೆ ಮಾಡಿದ್ವಿ
ಕನಸಾನೆಲ್ಲ ಹೃದಯ್ದಾಗೆ ಮಡಿಗಿದ್ವಿ
ಅಂದು ಅಂಗೇನೇ ಮಾಡಬೇಕಿತ್ತ
ಹಾಗಂತ ಜೀವ್ನ ನಮ್ಮ ಕೇಳ್ಯಾಕ್ಹತ್ತಿತ್ತ

ಅದು ಹೇಳ್ತು ಜತನ ಮಾಡ್ ಮನ್ಸಾ
ದಾರ್ಯಾಗ್ದೀಪ ಹಚ್ಚು ಆಸರಾಗ್ತಿರು
ಅದ್ನೆಲ್ಲಾ ಮಾಡಿದ್ವಿ ಭಯಭಕ್ತಿ ಮಡಗಿ
ಮನಸ್ನಾಗ ಧೈರ್ಯ ತುಂಬಿ ಬದುಕಿದ್ವಿ

ನೋಡ್ತಿದ್ದಂಗೆ ಕಾಲ ಬದಲಾಯ್ತು ಕಣ್ಲಾ
ಹಿಡ್ಕೊಂಡಿದ್ದೆಲ್ಲ ಕೈ ಜಾರಿ ಹೋಯ್ತಲ್ಲ
ಜಾರಿದ್ದೆಲ್ಲ ನಮಗೆ ದುಖ್ಖ ತರ್ಲಿಲ್ಲ
ಒಮ್ಮೊಮ್ಮೆ ಸುಖ್ದಾಗೆ ಮೆರೀತಿದ್ವಿ ಕಣ್ಲಾ

ಹೈಕ್ಳು ದೊಡ್ಡವ್ರಾಗಿ ಪಟ್ಣ ಸೇರ್ಕೊಂಡ್ಬಿಟ್ರು
ಹೃದಯ್ದಾಗೆ ಭಕ್ತಿ ಮಡಿಕ್ಕೊಂಡೇ ಓದ್ರು
ತಮ್ಕಾಲ್ಮ್ಯಾಗ್ಗ ತಾವೇ ನಿಂತ್ಕೊಳಾಕಂತ
ಹೆಮ್ಮೆಯಿಂದ ಬಾಳು ನಡ್ಸೋಕ್ಕಂತ ಓದ್ರು

ಹಳೇ ಮನೇನ ನಾವ್ ಮಾರ್ಯಾಕ್ಬಿಟ್ವಿ
ಹಳೆ ಗೆಪ್ತಿನೆಲ್ಲಾ ಮನಸ್ನಾಗ ಕೂಡ್ಯಾಕ್ಬಿಟ್ವಿ
ಮೆಟ್ಲ ಹತ್ಯಾಕ ನಮ್ಕೈಲಾಗ್ತಿರ್ಲಿಲ್ಲ
ಮಂಡೀ ಕಟ್ಕಟಾಂತ ಹಾಡ್ಯಾಕ್ಹತ್ತಿತ್ತಲ್ವ

ನನ್ಹಿಗ್ರೀ ದೋಸ್ತ್ ದೊಡ್ಸಾಹೇಬಿದ್ದ
ಇನ್ನೊಬ್ಬ ಇಂಜಿನೀರ ಒಬ್ಬ ಡಾಕಟ್ರು
ನಾನಂತೂ ಮಣ್ಣಿನ್ಮಗ್ನಾಗಿ ಸುಖವಾಗಿದ್ದೆ
ಈಗದೆಲ್ಲ ಹಳೇ ಕತೆಯಾಗೋಗೈತಲ್ಲ

ಹಗಲ್ನಾಗೇ ಮೌನ ಆವರಿಸ್ತೈತೀಗ
ಕಣ್ಮುಂದೇನೆ ಜೀವ್ನ ಬದಲಾಗೋಯ್ತು
ಹಿಂದೆ ದಿನ್ ದಿನಾನೂ ಮಾತ್ನಾಡ್ತಿದ್ರಲ್ಲ
ಈಗ ಸಂದೇಸಾ ಮಾತ್ರ ಕಳಿಸ್ತಾವ್ರಲ್ಲ

ಮುಖ್ದಾಗೆಲ್ಲಾ ಸುಕ್ಕುಸ್ಕ್ಯಾಗ್ಬಿಡ್ತಲ್ಲ
ಕನ್ನಡೀನೆ ಗೆರ್ಗೆರೆನಾ ಎಳೀತೈತೆ
ಅದ್ಕೇನು ನೋವಿಲ್ಲ ಯೋಚ್ನೆಯಿಲ್ಲ
ಒಂಥರಾ ಸುಖಾನೆ ಕಾಣ್ತಿರ್ತೈತೆ

ಬರ್ತಾ ಬರ್ತಾ ನಮ್ಗೆ ಮೆಲ್ಗೆ ಗೊತ್ತಾಗ್ತೈತಿ
ಕೊಡೋದು ಬಿಟ್ಟಾಕ್ಬಿಡೋದು ಕಷ್ಟಿಲ್ಲಾಂತ
ಹೊಸ್ದಿಕ್ಜಾಗ ಬಿಟ್ಕೊಟ್ ಕಲೀಲಿಕ್ಕಾಯ್ತು
ಸುಕ್ಶಾಂತಿ ಮೌನ ಧ್ಯಾನ್ದಾಗೆ ಮುಳುಗಿದ್ದಾಯ್ತು

ಬಿಟ್ಟಾಕ್ಬಿಡೋದಂದ್ರೆ ಏನಂದ್ಕೊಂಡ್ರಿ
ಹಳೇದೆಲ್ಲ ಮನಸ್ನಾಗೆ ಬಚ್ಚಿಟ್ಕೊಂಡ್ವಿ
ನಾವಂತೂ ಲೋಕದ್ಮಧ್ಯಾದಾಗಿಲ್ಲೀಗ
ಯಾವ್ದೋ ಮೂಲೆನಾಗೆ ಮಲ್ಕ್ಕೊಂಡ್ಬಿಟ್ವಿ

ಅಂತೂ ನಾವ್ ಸಂದಾಕಿದ್ದೀವ್ನೋಡು
ಜೀವ್ನದ ಬೆಲ್ಲದ್ಪಾನಕ ಸವಿತಾ ಇದೀವಿ
ಬಿಟ್ಟಾಕಿಬಿಡೋದೇನೂ ಕಷ್ಟದ್ದಲ್ಲ
ದೇವ್ರ ವರ ಅಲ್ದೆ ಪ್ರಸಾದಾನು ಕಣ್ಲಾ

ನದೀ ನೀರು ಹ್ಯಾಂಗ್ಹರೀತೈತೆ
ಕಲ್ಬಂಡೇನ ಸುತ್ತಾಕಿ ಓಗ್ತಿರ್ತೈತಿ
ಅಂಗೇನೇ ನಾವೂ ನಡೀತಿದೀವಿ
ಅಡ್ತಡೇನೆಲ್ಲ ತೊಡೆದಾಕ್ಕೊಂಡು

ಹಿಡ್ದಿಟ್ಕೊಳೋದ್ಕಡ್ಮೆ ಅನ್ಭವ್ಸೋದ್ಜಾಸ್ತಿ
ಹಿಂದೆ ಓಡಾಕಿಲ್ಲ ಮೆಚ್ಕೊಳೋದ್ಜಾಸ್ತಿ
ಮಾತ್ನಾಡೋದ್ಕಡ್ಮೆ ಆಡಿದ್ರೆ ತೂಕದ್ನಾತು
ಮನಸ್ನಾಗೆ ಭಾವ್ನೆಗಳು ಆಳ್ದಲ್ಲೈತಿ

ಕಿಟ್ಕೀ ಸರಳಿನ್ಬದೀಲಿ ಕೂತ್ಕೊಂಡ್
ಬಿಸೀ ಚಹಾದ ಗುಟ್ಕರಿಸ್ತಾ ಇದೀವಿ
ಜೀವನ ಎಷ್ಟೊಂದ್ ಸಂದಾಕೈತಿ
ಪ್ರೇಮತ್ಯಾಗ್ದಾಗೆ ಜೀವ್ನದ್ಸುಖ ಕಂಡ್ವಿ

– ಎಸ್. ಮಂಜುನಾಥ (ಹಿಮನಾಥ)
08.10.2025

ಕವಿಮನ

ಉಪ್ಪಿನಕಾಯಿ

ಎಲೆಗಳ ಮರೆಯಲ್ಲವಿತರೇನು ಕಾಯಿ
ಛಲದಿಂದ ಹುಡುಕುವರು ಬಿಡುವರೆ
ಹುಲುಸಾದ ಕಾಯಿಗಳ ಕೊಂಡು
ಕಲೆಹಾಕಿ ಕೂಡಿಸುವರು

ಸಮುದ್ರದುಪ್ಪನ್ನು ತೆಗೆದು
ಸಮನಾಗಿ ಬೆರೆಸಲು ಕಾಯಿಗೆ
ಶಮನ ಮಾಡಿತು ಹುಳಿಯನ್ನು
ಧಮನಿ ಧಮನಿಗೆ ರುಚಿಯ ನುಣಿಸಿತು

ಹೊಲದಲರಳಿದ ಮೆಣಸುಕಾಯಿ
ಬಳಿಸಾರಿ ಸೇರಿಸಿತು ಬಣ್ಣ
ಬಲವಕೊಡುತ ಮಿಶ್ರಣಕೆ
ನೆಲೆ ಕಂಡುಕೊಂಡಿತದರೊಂದಿಗೆ

ಸಾಸಿವೆ ಮೆಂತ್ಯದ ಪುಡಿ
ಸೂಸುತಲಿ ಘಮವನ್ನು
ಮಾಸದಾ ಸವಿನೀಡಿ ಮನಕೆ
ಘಾಸಿ ಮಾಡಿತು ಸವಿ ಮರೆಯದಂತೆ

ಕಡಿಕಾಳು ಗಾಣಿಸೆಣ್ಣೆ ತೆಗೆದು
ಸಡಗರದಿ ಸೇರಿಸಲು ಬಿಡದೆ
ಒಡನಾಡಿ ಕಲೆತು ಮಿಶ್ರಣಕೆ
ಮಿಡಿಯಿತು ಮನ ಮಾವಿನುಪ್ಪಿನ ಕಾಯಿಗೆ

ಎಲ್ಲಿ ಮಾವಿನಕಾಯಿ ಎಲ್ಲಿಯಾವುಪ್ಪು
ಎಲ್ಲೊ ಬೆಳೆದ ಮೆಣಸು ಸಾಸಿವೆ ಮೆಂತ್ಯ
ಎಲ್ಲ ಸೇರಿದಾಗಲೇ ರುಚಿಯೆಂಬ
ಸೊಲ್ಲ ತಿಳಿಸಿತು ಅಂತ್ಯ

ಹಲವು ಗುಣಗಳ ಮಾನವ
ಕಲೆತು ಬದುಕಲು ಸಾರ್ಥಕ
ಒಲವು ಮೂಡುತ್ತೆಲ್ಲರ ನಡುವೆ
ಕಲೆಯ ಬಾಳಿದು ಕೇಳುತಾನಾಗಿ ಒಡವೆ

– ರಂಗೋಪಂತ್ ನರಸಿಂಗರಾವ್
15.10.2025

ಜೀವನದಾಟೋಪ

ಚಿಂತೆ ಪಾದವು ಸುಳಿಯದಿರಲಿ ಎಮ್ಮ ಮುಂದೆ
ದೂರಕ್ಕಟ್ಟಿರದನು ನಗೆ ಹೆಜ್ಜೆಗಳ ತಂದು ಮುಂದೆ
ಕಿಲಕಿಲನೆ ನಗುವ, ನಗಿಸಿ ನಗುತ ಬಾಳುವ ಮಂದಿ
ನೋವನುಂಗಿ ತೋರುವರು ಮುಗುಳ್ನಗೆಯ ದೊಂದಿ

ಇರಬೇಕು ಇಂತಹವರು ನಮ್ಮ ಜೀವನದಿ ಸದಾ
ಆಗಲದು ನಮ್ಮ ಜೀವನವೂ ನಿರಂತರ ಸಾದಾ
ನಗುವಲ್ಲಿ ತೊಳೆಯುವರು ದುಃಖದಾ ಹೊಂಡ
ಅವರಿರುವಲ್ಲಿ ಜೀವನ ಯಾತ್ರೆಯು ಅಖಂಡ

ಇರುವೆಯೂ ಬದುಕುವುದು ಹೆಮ್ಮೆಯಿಂದಲಿ
ದಿನನಿತ್ಯ ತಾ ತರುವ ಆಹಾರ ತಿನ್ನುತಲಿ
ಸ್ವಾಭಿಮಾನವು ನಮಗಿರಲಿ ನಮ್ಮ ಜೀವನದಿ
ಆತ್ಮಾಭಿಮಾನವು ಉಕ್ಕತಿರಲಿ ಅನವರತದಲಿ

ಪರರ ಮಾತಿಗೆ ನಿಮ್ಮ ಮನ ನೋಯಿಸದಿರಿ
ಆರಕ್ಕೇರುತ ಮೂರಕ್ಕಿಳಿಯದ ಮನವ ಗಳಿಸಿರಿ
ಹೊಗಳಿಕೆಯ ತೆಗಳಿಕೆಯ ಗಣಿಸದೆ ನಡೆಯಿರಿ
ಪ್ರತಿಕರ್ಮದಲು ನಿಮ್ಮಾತ್ಮ ಮೆಚ್ಚುವಂತೆ ನಡೆಯಿರಿ

ಕಲೆ ಕಲ್ಮಶಗಳ ತೊಳೆದು ನಡೆಯುತಿರಿ ಅನವರತ
ನಗುವಲ್ಲಿ ಗೆಲ್ಲಿರಿ ದುಗುಡ ದುಮ್ಮಾನಗಳ ಸತತ
ಹೃದಯ ಶುದ್ಧತೆಯಿರಲಿ ನಿಮ್ಮೆಲ್ಲ ಚಿಂತೆಯಲಿ
ಕ್ಷಮೆಯಿರಲಿ ನಮಗಾಗದವರಾಟೋಪದಲಿ

– ಡಾ. ಸತ್ಯವತಿ ಮೂರ್ತಿ
22.10.2025

ಕವಿಮನ

ಸ್ಥಿತಪ್ರಜ್ಞ

ಶಾಪದಲಿ ನಾವು ಕಲ್ಲಾಗಲಿಲ್ಲ
ಮನವ ಕಲ್ಲಾಗಿಸಿ ಕುಳಿತಿದ್ದೇವೆ
ಯಾವ ಸ್ಪರ್ಶದಲ್ಲೂ ಬದಲಾಗುವುದಿಲ್ಲ
ನಮ್ಮದೇ ಯೋಚನೆಯಲಿ ಬಂಧಿಯಾಗಿದ್ದೇವೆ

ಮರಗಳೆಲ್ಲಾ ಇಟ್ಟಿಗೆಯ ಗೂಡಾಗಿರಲು
ಗಿಳಿ, ಕೋಗಿಲೆಗಳ ಉಲಿಯೇಕೆ?
ಝಣ ಝಣ ಶಬ್ದವಿರಲು, ಹೊಂಗನಸು ತುಂಬಿರಲು
ದೂರದ ರಸ್ತೆಯ ಗೊಡವೆಯೇಕೆ?

ಕಣ್ಮುಚ್ಚಿ ಕುಳಿತ ಧೃತರಾಷ್ಟ್ರರು
ಭುವಿಯೆಲ್ಲವನು ಕುರುಕ್ಷೇತ್ರ ಮಾಡಿಹರು
ಅರಿಯಲು ಬಾರದ ಮಂದಿ ನುಡಿವರು
ಇಂದ್ರಪ್ರಸ್ಥದ ಒಡ್ಡೋಲಗಕೆ ಹಲವರು

ರಾಗ ತಾಳಗಳಿಲ್ಲದೆಯೇ ಹಾಡುವೆವು
ಕುಳಿತಲ್ಲಿಯೇ ರಾಜ್ಯಭಾರದ ಕನಸು
ಕುರಿಯ ಮೇಯಿಸುವುದು ಸುಲಭ ಕುರುಬನಿಗೆ
ಭೂಕಂಪದ ಕೇಡರಿಯದು ಸ್ಥಿತಪ್ರಜ್ಞನಿಗೆ

– ಶ್ರೀರಂಗರಾಜನ್
29.10.2025

ನಮ್ಮೂರೇ ಚಂದ

– ಸ್ನೇಹಾ ಶಶಿಧರ

ಟಿಂಗ್ ಟಾಂಗ್ ಅಂತ ಕಾಲಿಂಗ್ ಬೆಲ್ ಸದ್ದಾದಾಗ ಶಾಲಿನಿ ಗಡಿಯಾರದ ಕಡೆ ನೋಡಿಕೊಂಡು ಹೋಗಿ ಬಾಗಿಲು ತೆರೆದಳು. ಕೈಯಲ್ಲಿ ಮೈಸೂರುಪಾಕ್ ಹಾಗೂ ಮಲ್ಲಿಗೆ ಹೂವು ಹಿಡಿದು ನಗುತ್ತಾ ನಿಂತಿದ್ದ ಮನೋಹರನನ್ನು ಕಂಡು, "ಇದೇನ್ರಿ, ಇವತ್ತು ಇಷ್ಟು ಬೇಗ ಬಂದ್ರಿ?", ಕೇಳಿದಳು ಶಾಲಿನಿ.

"ಹೂ ಕಣೆ ಶಾಲು! ಸಧ್ಯ ನಮ್ ಮೈಸೂರು ಮಾಮೂಲಿ ಹಂಗೆ ಆಯಿತಪ್ಪ. ಅಬ್ಬಬ್ಬಾ ಹೋದ ವಾರ ಎಲ್ಲ ಅದೆಷ್ಟು ಟ್ರಾಫಿಕ್ಕೂ ಅದೇನ್ ಕಥೆ. ಅದ್ರು ಜೊತೆ ಹಾಳಾದ್ ಒನ್‌ವೇಗಳು ಬೇರೆ. ಗಾಡಿ ಓಡ್ಸೋದೆ ಸಾಕಾಗಿತ್ತು. ಈಗ ನಮ್ಮೂರು ಆರಾಮಾಯಿತಪ್‌ಪ" ಅಂತ ಏದುಸಿರು ಬಿಟ್ಟ ಮನೋಹರ.

ಗಂಡನ ಕೈಯಿಂದ ಸಿಹಿ ಮತ್ತು ಹೂವನ್ನು ತೆಗೆದುಕೊಂಡು, "ಓಹೋ ಅದಿಕ್ಕೆ ಈ ಖುಶಿ. ಸರಿ ಸರಿ, ಫ್ರೆಶ್ ಆಗಿ ಬನ್ನಿ, ಕಾಫಿ ಮಾಡ್ತೀನಿ".

ಕೈಕಾಲು ಮುಖ ತೊಳೆದು ಬಂದ ಮನೋಹರ, "ನೀನೇನೋ ಮಾಡ್ತಿದ್ದೀಯಾ. ನ್ಯೂಸ್ ಪೇಪರ್‌ನೆಲ್ಲ ಏನೋ ಕಟ್ ಮಾಡ್ತಿದ್ದೀಯಾ" ಅಂತ ಕೇಳಿದ.

"ನಂದು, ನನ್‌ನ ಗೆಳತಿಯರದ್ದು ಬಣ್ಣ ಬಣ್ಣದ ಸೀರೆಯ ಫೋಟೋ ನೋಡಿ ಪೇಪರಿನಲ್ಲಿ", ಹುರುಪಿನಿಂದ ತೋರಿದಳು ಶಾಲು. ಮನೋಹರ ಕಾಫಿ ಹೀರುತ್ತಾ ಹೆಂಡತಿಯನ್ನು ಕೆಣಕಿದ, "ಪರ್ವಾಗಿಲ್ಲ ಕಣೆ, ನೀವು ಹೆಂಗಸರು ಹೀಗೆಲ್ಲ ಶೋಕಿ ಮಾಡ್ತೀರಾ. ಅದ್ಯಾವೋನೋ ಸೀರೆ ಅಂಗಡಿಯವ ಶುರುಮಾಡಿದ್ದು ಇದೆಲ್ಲ. ಈ ದಿನ, ಈ ಬಣ್ಣ, ಅದು ಇದು ಅಂತ. ನಮ್ ಕಾಲದಲ್ಲಿತ್ತಾ ಇದೆಲ್ಲ? ಸುಮ್ನೆ ಗಂಡಸರ ಜೇಬಿಗೆ ಕತ್ರಿ ಹಾಕೋ ಪ್ಲಾನ್‌ಗಳು".

"ಅಯ್ಯೋ, ಇರೋ ಸೀರೇನಲ್ಲೇ ಬಣ್ಣ ಹೊಂದಿಸಿಕೊಂಡು ಹಾಕ್ಕೊಂಡ್ವಿ. ಏನೀಗ? ನೋಡಿ, ಮೂರು ಪೇಜು ಆಗೋಷ್ಟು ಚಿತ್ರಗಳು. ಇನ್ನೇನ್ ಮಾಡಬೇಕು ನಾವು? ಊರೆಲ್ಲ ಮಹಾರಾಣಿಯಂತೆ ಸಿಂಗಾರವಾಗಿದೆ. ನೀವೆಲ್ಲೂ ಕರಕೊಂಡೇ ಹೋಗ್ಲಿಲ್ಲ".

ತನ್ನ ಬಾಣ ತಿರುಗಿ ತನ್ನಕಡೆಯೇ ಬೌನ್ಸರ್ ಆಗಿ ಬರುತ್ತಿದೆ ಅಂತ ಗೊತ್ತಾಗಿ, "ಇಷ್ಟೊಂದು ಜನಸಂದಣಿಯಲ್ಲಿ ಎಲ್ಹೋಗೋದು ಚಿನ್ನ? ಮೊದ್ಲೇ ನೋಡಿದೀವಲ್ಲ, ಚಿನ್ನಸ್ವಾಮಿ ಗ್ರೌಂಡು, ಚೆನ್ನೈ ಎಲ್ಲ ಕಡೆ. ಅದಿಕ್ಕೆ ಬೇಡ ಅಂತ, ಹಾ! ಅವತ್ತು ಆಹಾರ ಮೇಳಕ್ಕೆ ಹೋಗಿದ್ವಲ್ಲ", ಡಿಫೆಂನ್ಸಿವ್ ಬ್ಯಾಟಿಂಗ್ ಮಾಡಿದ ಮನೋಹರ.

"ಆಹಾರ ಮೇಳದಲ್ಲಿ ತಿಂದು ಮೂರು ದಿನ ಹೊಟ್ಟೆ ಕೆಟ್ಟು, ಬೊಂಬೆ ಬಾಗಿನವೂ ತಿನ್ನೋಕ್ಕಾಗದೇ, ಮಜ್ಜಿಗೆ ಅನ್ನ ತಿಂದ್ರಿ. ಅದಿಕ್ಕೇನು ನಿಮ್ಮ ಉತ್ತರ?"

ಈ ಯಾರ್ಕರ್ ಬಾಲ್‌ಗೆ ಕ್ಲೀನ್ ಬೌಲ್ಡ್ ಆದ ಮನೋಹರ. ಥರ್ಡ್ ಅಂಪೈರ್‌ಗೆ ಮರುಪರಿಶೀಲನೆಗೆ ಕೇಳುವ ಹಾಗೆ ಒಂದ್ ಟ್ರೈ ಮಾಡೋದಿಕ್ಕೆ ಹೋಗಿ, ಬೇಡ ಅಂತ ಸುಮ್ಮನಾದ.

"ಪಕ್ಕದ ಮುಖ್ಯ ರಸ್ತೆ, ಈಗ ಹದಿನೈದು ದಿನದ ಕೆಳಗೆ ರಿಪೇರಿಯಾಗಿತ್ತಲ್ಲ", ಶಾಲು ರಾಗ ಎಳೆದಳು.

ಸದ್ಯ, ಟಾಪಿಕ್ ಬದಲಾಯಿತಲ್ಲ ಅಂತ ಮನೋಹರ, "ಹೌದು ಚಿನ್ನ. ನೋಡು ನಮ್ಮೂರಿನ ಗಮ್ಮತ್ತು. ದಸರಾಗ್ ಮುಂಚೆ ಎಲ್ಲ ರಸ್ತೆನೂ ಕ್ಲೀನ್! ಹೆಂಗೆ?" ಎಂದ.

ಶಾಲು ಗೆಲುವಿನ ನಗೆ ಬೀರುತ್ತಾ, "ಅದರಲ್ಲಿ ದೊಡ್ಡ ಗುಂಡಿಯಾಗಿ ಇವತ್ತು ಮಧ್ಯಾಹ್ನ ಒಂದು ಆಕ್ಸಿಡೆಂಟ್ ಆಯಿತು. ಪಕ್ಕದ್ ಮನೆ ಕಮಲಮ್ಮ ಹೇಳಿದ್ರು. ಅಲ್ಲಾ, ಈ ಬೇಕಾಬಿಟ್ಟಿ ತೋರಿಕೆಯ ಕೆಲಸ ಯಾಕೆ ಅಂತ."

"ಹೋಗ್ಲಿ ಬಿಡು ಶಾಲು, ನಮಗ್ಯಾಕೆ ದೊಡ್ಡೋರ್ ಲೆಕ್ಕಾಚಾರ. ಈಗ ಬೇಗ ರೆಡಿಯಾಗು. ಲೈಟಿಂಗ್ ನೋಡಕ್ಕೆ ಹೋಗೋಣ" ಎಂದ ಮನೋಹರ.

"ಈ ಲೈಟಿಂಗ್ ಕಥೆ ಕೇಳ್ಬೇಡಿ. ನೀವೇನು ಬೆಳಗ್ಗೆಯಿಂದ ಸಂಜೆವರೆಗೆ ಆಫೀಸ್ನಲ್ಲಿರ್ತೀರ. ಎ ಸಿ ನಲ್ಲಿ ಕೂತಿರ್ತೀರಾ. ನಮ್ ಕಷ್ಟ ನಿಮಗೇನ್ ಗೊತ್ತು. ಇಲ್ಲಿ ಬೆಳಗ್ಗೆಯಿಂದ ಕರೆಂಟೇ ಇರೋಲ್ಲ. ಇವರಿಗೆ ಊರಿಗೆಲ್ಲ ಲೈಟ್ ಹಾಕಿ ಅಂತ ನಾವ್ ಹೇಳಿದ್ದೇವ? ನಮ್ನ ಕತ್ತಲಲ್ಲಿ ಮುಳುಗ್ಸಿ ಊರ್ ಶೋಕಿ ಮಾಡ್ಬೇಕಾ?" ಎಂದಳು.

"ಹೋಗ್ಲಿ, ಇವತ್ತಿನ ಪೇಪರ್ ಕೊಡು, ನಿಮ್ಮ ಸೀರೆಪುರಾಣ ಇಲ್ಲದೇ, ಯಾವುದಾದರು ಒಳ್ಳೆ ಸಮಾಚಾರ ಇದ್ಯೇನೋ ನೋಡೋಣ."

ಶಾಲು ಅದನ್ನೇ ಕಾಯುತ್ತಿರುವ ಹಾಗೆ ಪೇಪರ್ ಹಿಡಿದು ಬಂದು, ಒಂದು ಸುದ್ದಿಯನ್ನು ತೋರಿದಳು. "ದಸರೆಯ ನಂತರದ ಸ್ವಚ್ಛನಗರಿ??" ಎಂದು ದಪ್ಪ ಅಕ್ಷರದಲ್ಲಿ ಬರೆದಿತ್ತು. ಕೆಳಗಡೆ ಒಂದಷ್ಟು ಚಿತ್ರಗಳು. ಎಲ್ಲದರಲ್ಲೂ ಕಸ ಅಲ್ಲಿ ಇಲ್ಲಿ ಬಿದ್ದಿರುವುದು.

ಸೋತ ಮೊರೆ ಹಾಕಿದ್ದ ಮನೋಹರ ಕೇಳಿದ, "ನಾನೇನು ಮಾಡ್ಲಿ ಚಿನ್ನ. ನಿನ್ನನ್ನು ಹೊರಗೆ ಕರ್ಕೊಂಡು ಹೋಗಿಲ್ಲ ಅಂತನಾ? ನಾವು ಲೋಕಲ್ಲು. ಇಲ್ಲಿ ನಮಗೆ ರಜೆ ಸಿಗೋಲ್ಲ. ಬೇರೆ ಊರಿನವರು ನವರಾತ್ರಿಗೆ, ದೀಪಾವಳಿಗೆ ಅವರವರ ಊರಿಗೆ ಹೋಗ್ತಾರೆ. ನಾವು ಆಫೀಸಿಗೆ ಹೋಗಿ ಜವಾಬ್ದಾರಿ ತೋರಬೇಕಲ್ಲ"

ಗಂಡನ ಕೊರಳ ಸುತ್ತ ಕೈ ಹಾಕಿ, "ನೀವು ಒಳ್ಳೆ ಮೂಡ್ನಲ್ಲಿ ಬಂದ್ರಲ್ಲ. ಸುಮ್ನೆ ಕಾಲು ಎಳೆಯೋಣ ಅನ್ನುಸ್ತು. ಬೆಳಗ್ಗೆ ನಮ್ಮೂರಿಗೆ ಆಡ್ಕೊಂಡಿದ್ರಿ. ಅದಿಕ್ಕೆ ಈ ಕೌಂಟರ್ರು. ಬೇಜಾರ್ ಮಾಡ್ಕೋಬೇಡಿ. ಬನ್ನಿ, ಲೈಟಿಂಗ್ ನೋಡ್ಕೊಂಡ್ ಮೈಲಾರಿ ದೋಸೆ ತಿಂದ್ಕೊಂಡ್ ಬರೋಣ" ಎಂದಳು.

ಸದ್ಯ ಇಲ್ಲಿಗೆ ಮುಗೀತಲ್ಲ ಅಂತ ನಿಟ್ಟುಸಿರು ಬಿಟ್ಟ ಮನೋಹರ. ಇಬ್ಬರೂ ಕಾರು ಹತ್ತಿ ರೇಡಿಯೋ ಹಾಕಿದರು. ಹಾಡು ಬರುತ್ತಿತ್ತು. "ನಮ್ಮೂರು ಚೆಂದವೋ... ನಿಮ್ಮೂರು ಚೆಂದವೋ... ಎಂದೆನ್ನಾ ಕೇಳಲೇಕೇ... ಎನ್ನರಸ ಸುಮ್ಮನಿರಿ ಎಂದಳಾಕೆ..."

***

ನೀರ ಹನಿ

– ಹಿಮನಾಥ

ಸಾಗರದಂಚಿನಲಿ ನಿಂತಿರುವೆ ನಾನು
ಜಲರಾಶಿಯನು ಕಂಗಳಲೇ ಹಿಡಿದು
ನಿನ್ನನರಿತವರಾರು ಈ ಜಗದೊಳು
ಯಾವ ಹನಿಯು ಎತ್ತ ಹೋಗುವುದು
□ □ □

ಒಂದು ಹನಿ ನೀರಿನ ತೂಕವೆಷ್ಟು
ಹನಿಗಳಿಹುದು ಲೋಕದೊಳೆಷ್ಟು
ನದಿ ಸರಗಳಲಿ ಸೇರಿದ ಹನಿಗಳೆಷ್ಟು
ಮೇಘದಲೆಷ್ಟು ಹನಿ ಸಾಗರದಲೆಷ್ಟು
□ □ □

ಯಾವ ಹನಿಯು ಆವಿಯಾಗುವುದೆಂದು
ಉಸುಕು ಹೊಸಕುವುದು ಯಾವ ಹನಿಯ
ಯಾವ ಬಿಂದು ಯಾವ ಮೋಡದಲಿ ಸೇರಿ
ಯಾವ ಮೋಡ ಎತ್ತ ಸಾಗುವುದೆಂದು
□ □ □

ಯಾರು ಅರಿತಿರುವರಿಂದು ಇದನು ಹೇಳು
ಒಂದು ಮೇಘದಲೆಷ್ಟು ಬಿಂದುಗಳೆಂದು
ಯಾವ ಬಿಂದು ಎಲ್ಲಿ ಬೀಳುವುದೆಂದು
ಬಿದ್ದ ಹನಿಯು ಮತ್ತೆ ಹರಿವುದೆಲ್ಲೆಂದು
□ □ □

ಧರೆಗೆ ಸೇರುವುದೋ ನದಿಗೆ ಹರಿವುದೋ
ಧರೆಯೊಳಗೆ ಯಾವ ಬೇರಿಗುಣಿಸುವುದೋ
ನದಿಯಲಿನ ಬಿಂದು ಸಾಗರವ ಸೇರುವುದೋ
ಭುವಿಯೊಳಗೆಯೇ ಇಂಗಿ ತಂಗುವುದೋ
□ □ □

ಹನಿಯು ಇಂಗಿ ಬಾವಿಯಲೋ ಕೆರೆಯಲೋ
ಹನಿಯದರ ಯಾರ ದಾಹ ತಣಿಸುವುದೋ
ದಾಹ ತಣಿದವರು ಹನಿಯ ನೆನೆಸುವರೇನು
ಪರಿವೆಯಿಲ್ಲದೆ ನಿರಂತರ ಜಗವ ಸುತ್ತುವೆಯಾ
□ □ □

ಬಿಂದು ಬಿಂದುಗಳು ಸೇರಿ ಸಾಗರವಾದಂತೆ
ಪದಕೆ ಪದವ ಸೇರಿ ಕವನವು ಹರಿದಂತೆ

***

ಚಿನ್ನದ ಚಂಪಕ

– ಹಿಮನಾಥ

ಹೊನ್ನಿನ ಬಣ್ಣದ ಚಂಪಕ ನೀನು
ಅಚ್ಚ ಕನ್ನಡದಿ ಸಂಪಿಗೆ ನೀನು
ಮರದ ಮೇಲೆಯೇ ತುತ್ತತುದಿಗೆ
ಅರಳುವೆಯೇಕೆ ಎಟುಕಲಾರದೆ

ಕಂಡೂಕಾಣದೆ ಹಸಿರೆಲೆ ಮರೆಯಲಿ
ದಿನಬೆಳಗಾದರೆ ಅರಳುವೆ ನೀನು
ಹಳದಿಯ ಬಣ್ಣದ ಮೃದುತನದಲ್ಲಿ
ಕರೆಯುತಲಿರುವೆ ಯಾರನು ನೀನು

ರೆಂಬೆಯ ತುದಿಗೆ ತೂಗುಯ್ಯಾಲೆಯಲಿ
ರಂಭೆಯ ಕರೆಯುವ ಮಾಯೆಯು ನೀನು
ಸೆಳೆಯುವ ಕಂಪನು ಸುತ್ತಲು ಸೂಸುತ
ಮರುಳರ ಮಾಡುತ ನಗುತಿಹೆ ನೀನು

ಪೀತವರ್ಣದ ಎಸಳುಗಳು ಹರಿತ
ಮಧುಕರರಾರೂ ಸುಳಿಯದ ಜೀವಿತ
ಭೃಂಗವು ಬರದಿರ ಕಂಪನು ಹರಡುತ
ಅಂಗನೆ ಕೊರಳಲಿ ಹಾರವು ಮೋಹಿತ

ದಳಗಳು ನಿನ್ನವು ನವಿರಲೂ ಕೋಮಲ
ಕೋಮಲೆಯರಿಗೆ ಮುಡಿಯುವ ಹಂಬಲ
ನಾರದ ಮುನಿಯ ಶಾಪದ ಪ್ರತಿಫಲ
ಹಿಮನಾಥ ಪೂಜೆಗೆ ಸಲ್ಲದೆ ಅಳುತಿಹೆಯೇನು

***

ಹರಿಣಿಯ ಹಳ್ಳಿ ಕತೆ

– ಸಿಂಧು ಹರಿತಸ್

ಹರಿಣಿ ಮತ್ತು ಕಿರಣ್ ನವದಂಪತಿಗಳು. ಇಬ್ಬರೂ ಬೆಂಗಳೂರಿನಲ್ಲಿ ಒಳ್ಳೆಯ ಕೆಲಸದಲ್ಲಿದ್ದರು. ಮದುವೆಯಾದ ಕೆಲವು ದಿನಗಳ ನಂತರ ಕಿರಣ್ ಹರಿಣಿಯನ್ನು ಕರೆದುಕೊಂಡು ತಮ್ಮ ಹಳ್ಳಿಯಲ್ಲಿ ಕುಲದೇವಿಯ ದರ್ಶನ ಮಾಡಿಸಲು ಮುಂದಾದ. ಹಳ್ಳಿಯ ಗಂಧಗಾಳಿ ಇಲ್ಲದ ಹರಿಣಿ ಉತ್ಸಾಹದಿಂದ ಒಪ್ಪುವುದಲ್ಲದೆ, ಅಲ್ಲೇ ಒಂದೆರಡು ದಿನ ಕಾಲ ಕಳೆಯಲು ಆಸೆಪಟ್ಟಳು. ಹಳ್ಳಿಯ ಜೀವನವನ್ನು ಮೊದಲ ಬಾರಿ ಅನುಭವಿಸಲು ಹರಿಣಿ ಸಜ್ಜಾದಳು.

ಮಾರನೆ ದಿನ, ಕನ್ನಂಬಾಡಿಯಿಂದ ಸ್ವಲ್ಪ ದೂರದಲ್ಲಿದ್ದ ಊರನ್ನು ನಾಲ್ಕೈದು ಘಂಟೆಗಳ ಪ್ರಯಾಣ ಮಾಡಿ ನವಜೋಡಿ ತಲುಪಿದರು. ಆಗ ಮಟಮಟ ಮದ್ಯಾಹ್ನ, ಬಿಸಿಲು ಜೋರಾಗಿತ್ತು. ಅಜ್ಜಿ ಮನೆಯ ಆಳು ರಂಗಣ್ಣ ಇವರು ಬರುವ ದಾರಿಯನ್ನೇ ಕಾಯುತ್ತ, ಎಳನೀರು ಕೊಟ್ಟು ಸ್ವಾಗತಿಸಿದ. ಕಿರಣನ ಅಜ್ಜಿ ತಾತ ಗತಿಸಿದ ನಂತರ, ಮನೆ, ಜಮೀನು ಎಲ್ಲವನ್ನೂ ರಂಗಣ್ಣನ ಕುಟುಂಬವೇ ನೋಡಿಕೊಳ್ಳುತ್ತಿತ್ತು. ಈ ಮನೆಯ ಹಿತ್ತಲಿನಲ್ಲಿ ಒಂದು ಗುಡಿಸಲು ಕಟ್ಟಿಕೊಂಡು ವಾಸಿಸುತ್ತಿತ್ತು ಆ ಬಡ ಕುಟುಂಬ. ರಂಗಣ್ಣ ತೋಟದಲ್ಲಿ ಅಡಿಕೆ, ತೆಂಗು ಮತ್ತು ತರಕಾರಿಗಳ ಬೇಸಾಯ ಮಾಡುತ್ತಿದ್ದ. ಅವನ ಹೆಂಡತಿ ಕೆಂಪಿ ಇವರ ಮನೆಯನ್ನೆಲ್ಲ ಸಾರಿಸಿ ಗುಡಿಸಿ ಶುಚಿಯಾಗಿಟ್ಟಿದ್ದಳು.

ಬೆಂಗಳೂರಿನಿಂದ ಇವರ ಮನೆಯವರು ಬರುವುದು ತಿಳಿದರೆ ಸಾಕು, ಅವರಿಗೆ ಚೆನ್ನಾಗಿ ಉಪಚಾರ ಮಾಡುವರು. ಈ ಸಲ ನವದಂಪತಿಗಳ ಆಗಮನ ಬೇರೆ, ಸ್ವಾಗತ ಜೋರಾಗೇ ಇತ್ತು. ಮನೆ ಮುಂದೆ ಚಪ್ಪರ, ಬಣ್ಣ ಬಣ್ಣದ ರಂಗೋಲಿಯ ಜೊತೆ ಹೋಳಿಗೆ ಊಟದ ವ್ಯವಸ್ಥೆಯನ್ನೂ ಮಾಡಿಸಿದ್ದ ರಂಗಣ್ಣ.

ಊಟ ಮಾಡಿ ಸ್ವಲ್ಪ ಹೊತ್ತು ವಿಶ್ರಮಿಸಿದ ನಂತರ ಕಿರಣ್, "ಪಕ್ಕದಲ್ಲೆ ಲಕ್ಕಜ್ಜಿ ಅಂತ ಒಬ್ಬರಿದ್ದಾರೆ. ಅವರ ಮನೆಗೆ ಹೋಗೋಣ, ನಾನು ರಜೆಗೆಂದು ಇಲ್ಲಿಗೆ ಬಂದಾಗೆಲ್ಲಾ ಅವರೊಟ್ಟಿಗೆ ಬಹಳ ಸಮಯ ಕಳೆದಿದ್ದೇನೆ. ಅವರ ಕೈತುತ್ತಿನ ರುಚಿ, ಆಹಾ! ಈಗಲೂ ನೆನೆಸಿಕೊಂಡರೆ ಬಾಯಲ್ಲಿ ನೀರು ಬರುತ್ತೆ" ಎಂದ. ಸರಿ ಎಂದು ಗಂಡಹೆಂಡಿರಿಬ್ಬರೂ ಲಕ್ಕಜ್ಜಿ ಮನೆಗೆ ಹೊರಟರು. ಅಲ್ಲಿನ ಉಪಚಾರಕ್ಕೆ ಸುಸ್ತಾಗಿ ಹೊಟ್ಟೆ ಮೇಲೆ ಕೈಯಿಟ್ಟು ಕುಳಿತಿದ್ದ ಹರಿಣಿಯನ್ನು ನೋಡಿದ ಲಕ್ಕಜ್ಜಿ, "ಎಷ್ಟ್ ತಿಂಗ್ಳು?" ಎಂದು ಕುತೂಹಲದಿಂದ ಕೇಳಿದರು. "ಇಲ್ಲ, ಮದುವೆಯಾಗಿ ಇಪ್ಪತ್ತು ದಿನಗಳಾಗಿವೆ ಅಷ್ಟೆ" ಎಂದು ಮುಜುಗರದಿಂದ ಹರಿಣಿ ಉತ್ತರಿಸಿದಳು. "ಮತ್ತೆ, ಎರಡು ತಿಂಗಳ ಹಿಂದೇನೆ ನೀವಿಬ್ರೂ ಮೈಸೂರು ಅರಮನೆ ಮುಂದೆ ಕೈ ಕೈ ಹಿಡ್ಕೊಂಡು, ತಬ್ಕೊಂಡು ಮಾಡ್ಕೊಂಡಿರೊ ಚಿತ್ರಗಳನ್ನ ನಮ್ ಗಣೇಶ ತೋರಿಸಿದ್ದ" ಎಂದು ಗಲಿಬಿಲಿಗೊಂಡು ಕೇಳಿದರು ಅಜ್ಜಿ. "ಅಜ್ಜಿ, ಅದನ್ನ ಪ್ರೀ ವೆಡ್ಡಿಂಗ್ ಫೋಟೊ ಅಂತಾರೆ, ಗೊತ್ತಿಲ್ದೆ ಏನೇನೊ ಹೇಳ್ಬೇಯಲ್ಲ" ಎಂದು ಹಲ್ಲು ಕಚ್ಚುತ್ತ ಅವರ ಮೊಮ್ಮಗ ಗಣೇಶ ಅಜ್ಜಿಯನ್ನು ಸುಮ್ಮನಿರುವಂತೆ ಸಂಜ್ಞೆ ಮಾಡಿದ. ಮೊಮ್ಮಗನ ಮಾತು ಕೇಳಿದ ಲಕ್ಕಜ್ಜಿ ಮುಖ ಗಂಟಿಕ್ಕಿ, "ಏನು! ಮದ್ವೇಗೆ ಮುಚೇನೆ ಮೈಕೈ ಮುಟ್ಟಿಸಿಕೊಳ್ಳೋದ! ಥು" ಎನ್ನುತ್ತ ಸ್ವಲ್ಪ ಒರಟಾಗೇ ಮೂಗು ಮುರಿದರು. ಅವರ ಮಾತಿಗೆ ಬೇಸರಗೊಂಡ ಹರಿಣಿ ಮರು ಮಾತನಾಡಲಿಲ್ಲ. ಸುಮ್ಮನೆ ಗಂಡನ ಕಡೆ ನೋಡಿದಳು. ಕಿರಣ್ ಎಲ್ಲರ ಅಪ್ಪಣೆ ಪಡೆದ. ಇಬ್ಬರೂ ಮನೆ ಕಡೆ ನಡೆದರು.

ಮುಂದಿನ ದಿನ ಬೆಳಗ್ಗೆ ತೋಟ ತೋರಿಸುವುದಾಗಿ ಕಿರಣ್ ಹೇಳಿದ್ದ. ಹರಿಣಿ ಹುಮ್ಮಸ್ಸಿನಿಂದ, ಚಲನಚಿತ್ರಗಳಲ್ಲಿ ನೋಡಿದ್ದ ಹಾಗೆ ಮೊಣಕಾಲುದ್ದ ಸೀರೆ ಉಟ್ಟು, ತಲೆ ತುಂಬಾ ಹೂ ಮುಡಿದು ಕಿರಣ್ ಜೊತೆ ಹೊರಟಳು. ದಾರಿಯಲ್ಲಿ ಅವಳನ್ನು ನೋಡಿ, ಒಂದಿಬ್ಬರು ಚೂಡಿದಾರ ತೊಟ್ಟ ಹುಡುಗಿಯರು ಇವಳ ಬಳಿ ಓಡಿ ಬಂದು, "ಅಕ್ಕ, ಶೂಟಿಂಗಾ? ಸಿನಿಮಾನೋ ಸೀರಿಯಲ್ಲೊ? ಗೊಂಬೆ ಥರ ಇದ್ದೀರ, ನೀವೇ ನಾಯಕಿನಾ?" ಎಂದು ಕೇಳಿದರು. ಹರಿಣಿ ಅವರ ಮಾತಿಗೆ, "ಇಲ್ಲ, ನಾನು ವೆಂಕಯ್ಯನವರ ಮನೆ ಸೊಸೆ. ನಟಿಯಲ್ಲ" ಎಂದು ನಸುನಗುತ್ತ ಹೇಳಿದಳು. ಆ ಹುಡುಗಿಯರು ಅಲ್ಲಿಂದ ಹೋಗುವ ಮುನ್ನ, "ಮತ್ತ್ಯಾಕೆ ಈ ವೇಷ" ಎಂದು ಗೇಲಿ ಮಾಡಿ ನಕ್ಕರು. ಬೇಸರ ತೋರಿಸಿಕೊಳ್ಳದೆ ಹರಿಣಿ ಮುಂದೆ ಸಾಗಿದಳು.

ತೋಟವನ್ನು ತಲುಪಿದಾಗ ರಂಗಣ್ಣ ಮತ್ತೆ ಎಳನೀರು ಕೀಳಿಸಿ ಕೊಟ್ಟ. ಅದನ್ನು ಕುಡಿದು ಮುಂದೆ ಸಾಗಿದಾಗ ಜೋಳದ ಗಿಡಗಳು ಎದೆಯೆತ್ತರ ಬೆಳೆದಿದ್ದವು. ತುತ್ತ ತುದಿಯಲ್ಲಿ ಎಳೆ ಜೋಳಗಳು ಬಿಟ್ಟಿದ್ದನ್ನು ಆಸೆ ಕಂಗಳಿಂದ ನೋಡುತ್ತಿದ್ದ ಹರಿಣಿಯ ಮನಸ್ಸನ್ನು ತಿಳಿದ ಕಿರಣ್, ರಂಗಣ್ಣನಿಗೆ ಅದನ್ನು ಕೀಳಿಸಿಕೊಡಲು ಕೇಳಿದನು. ರಂಗಣ್ಣ ತಲೆಯಾಡಿಸುತ್ತ, "ಐನೋರ, ಇದು ಇನ್ನೂ ಎಳೇದು. ಬಲಿತಮೇಲೆ ಕಿತ್ತು, ಸುಟ್ಟು ತಿನ್ಬೇಕು. ಇನ್ನೊಸಿ ದಿನ ಬಿಟ್ಟು ಬನ್ನಿ, ಕಿತ್ಕೊಡ್ತೀನಿ" ಎಂದ. "ಇಲ್ಲ ರಂಗಣ್ಣ, ಇದನ್ನ ನಾವೆಲ್ಲ ಹೀಗೆ ತಿಂತೀವಿ. ನಮ್ ಹರಿಣಿ ಬೇಬಿಕಾರ್ನ್ ಮಂಚೂರಿ ಬೇಬಿಕಾರ್ನ್ ಚುರುಮುರಿ ಎಷ್ಟ್ ಚೆನ್ನಾಗಿ ಮಾಡ್ತಾಳೆ ಗೊತ್ತ, ಸಂಜೆ ನೀವು ತಿಂದ್ನೋಡಿ" ಎಂದ. ರಂಗಣ್ಣ ತಟ್ಟನೆ ಹುಬ್ಬೇರಿಸಿ, "ಬೇಡ್ರಯ್ಯ, ನೀವು ಪೇಟೆಯವರು ತಿಂದ್ರೆ ಸರಿ, ನಾವು ತಿಂದ್ರೆ, ದನದ ಮೇವು ತಿಂತಾನೆ ಅಂತ ಜನ ಆಡ್ಕೋತಾರೆ" ಎಂದು ತಲೆ ಕೆರೆದು ಒಂದಿಷ್ಟು ಬೇಬಿಕಾರ್ನನ್ನು ಕಿತ್ತು ಒಂದು ಬುಟ್ಟಿಯಲ್ಲಿಟ್ಟು ಕಿರಣನ ಕೈಗೆ ಕೊಟ್ಟ.

ರಂಗಣ್ಣನ ಮಾತಿಗೆ ನಗುವುದೋ ಅಳುವುದೋ ತಿಳಿಯದೆ ಸುಮ್ಮನೆ ಮನೆಕಡೆ ನಡೆದರು ಹರಿಣಿ ಮತ್ತು ಕಿರಣ್. ಅಲ್ಲಿ ಊಟ ಮಾಡುತ್ತಿರುವಾಗ, ಕೆಂಪಿ, "ಮದ್ವೆ ಆದ್ಮೇಲೆ ಸುತ್ತೋಕೆಲ್ಲಿ ಹೋಗಿದ್ರಿ?" ಎಂದು ನಾಚಿಕೊಂಡು ಹರಿಣಿಯನ್ನು ಕೇಳಿದಳು. "ನಾವು ಅಂಡಮಾನ್‌ಗೆ ಹೋಗಿದ್ವಿ" ಎಂದು ಸಹಜವಾಗಿ ಉತ್ತರಿಸಿದ ಹರಿಣಿ, ತನ್ನ ಫೋನ್ ತೆಗೆದು ಅಲ್ಲಿನ ಚಿತ್ರಗಳನ್ನು ತೋರಿಸಿದಳು. ಅಷ್ಟು ನೀರು ನೋಡಿದ ಕೆಂಪಿ, "ಕನ್ನಂಬಾಡಿಯ ಆಚೆ ಇರೋ ಜಾಗವಾ ಇದು? ಕಾವೇರವ್ವ, ಕಾಪಾಡು ತಾಯಿ" ಎನ್ನುತ್ತ ಚಿತ್ರಕ್ಕೆ ಕೈಮುಗಿದು ನಮಿಸಿದಳು. ಹರಿಣಿ ಸಮಾಧಾನದಿಂದ, "ಇಲ್ಲ, ಇದೊಂದು ಸಮುದ್ರ. ಕಾವೇರಿ ಹರಿದು ಸೇರುವ ಜಾಗ. ಕಾವೇರಿಗಿಂತ ಎಷ್ಟೋ ಪಾಲು ದೊಡ್ಡದು" ಎಂದು ಅರ್ಥಮಾಡಿಸಲು ಪ್ರಯತ್ನಿಸಿದಳು. ಅದಕ್ಕಾಕೆ, "ಹಾ, ನಾವು ಹಳ್ಳಿಯವರು ತಿಳಿಯಕ್ಕಿಲ್ಲ ಅಂತ ಏನೇನೋ ಹೇಳ್ಬೇಡ್ರವ್ವ, ನಮ್ ಕನ್ನಂಬಾಡಿಗಿಂತ ದೊಡ್ಡದು ಯಾವ್ದು ಇಲ್ಲ" ಎಂದು ದಬಾಯಿಸಿದಾಗ ಹರಿಣಿ ಗಪ್‌ಚುಪ್ ಆದಳು.

ಸುಮ್ಮನೆ ಊಟ ಮುಗಿಸಿ, ಸಂಜೆ ಆಗುವವರೆಗೂ ಮೌನವ್ರತದಲ್ಲಿ ಕುಳಿತುಬಿಟ್ಟಳು ಹರಿಣಿ. ಸಂಜೆ ದೇವಸ್ಥಾನಕ್ಕೆ ಹೋಗಿ, ರಾತ್ರಿಯೇ ಹಳ್ಳಿಯಿಂದ ಹೊರಡಲು ಗಂಡನನ್ನು ಪೀಡಿಸಿದಳು. ಹೇಗೋ ಹೊರಟು ಊರು ತಲುಪಿದರು ಇಬ್ಬರೂ.

ಅಂತೂ ಮೊದಲ ಹಳ್ಳಿ ಪ್ರಯಾಣ ಹರಿಣಿಯ ನೆನಪಿನ ಹೊತ್ತಿಗೆಯಲ್ಲಿ ಮರೆಯಲಾರದ ನೆನಪಾಗಿ ಉಳಿಯಿತು.

***

ಕುಂಚಕಲಾ ಪ್ರದರ್ಶನ
ಭಾರತ ಮಹಿಳೆಯ ಪ್ರಥಮ ಹೆಜ್ಜೆಗುರುತು

– ಶಾಂತಿ ವಾಸು



ಸುಮಾರು 10,000 ವರ್ಷಗಳಷ್ಟು ಹಳೆಯವು ಎನ್ನಲಾದ ಶಿಲಾಯುಗದ ವರ್ಣಚಿತ್ರಗಳು ಇಂದಿಗೂ ನಮಗೆ ಭೀಮ್ ಬೆಟ್ಕಾದಲ್ಲಿ ಕಾಣಸಿಗುತ್ತವೆ. ಹಾಗೂ ಅವುಗಳೇ ಅತ್ಯಂತ ಪುರಾತನ ವರ್ಣಚಿತ್ರಗಳು ಎಂದೂ ಹೇಳಲಾಗುತ್ತದೆ. ಬಂಡೆಗಳ ಮೇಲೆ ಕೆತ್ತುವ ಕಲೆಯನ್ನು ಶಿಲಾಲಿಪಿಗಳು ಎನ್ನುತ್ತಾರೆ. ತಾಪಮಾನ ಬದಲಾವಣೆಯ ಕಾರಣದಿಂದ ಹಲವಾರು ಕಲಾಕೃತಿಗಳು ಕಳೆದುಹೋಗಿ ಈಗ ಕೆಲವಷ್ಟೇ ಉಳಿದಿದ್ದರೂ ಸಹ ಆ ಕಲಾಕೃತಿಗಳೇ ನಮ್ಮ ಪುರಾತನ ಕಾಲಘಟ್ಟದ ಜೀವನ ಶೈಲಿಯ ಬಲವಾದ ಸಾಕ್ಷಿಯಾಗಿವೆ.

ಮೊದಮೊದಲು ಭಾರತೀಯ ವರ್ಣಚಿತ್ರಗಳನ್ನು ಭಿತ್ತಿಚಿತ್ರ ಗಳಲ್ಲಿ ಅಂದರೆ ಗೋಡೆಗಳ ಮೇಲೆ ಹಾಗೂ ಛಾವಣಿಯ ಒಳಭಾಗದಲ್ಲಿ ಬಿಡಿಸಿರುವುದು ಕಂಡುಬರುತ್ತದೆ. ಉದಾ ಹರಣೆಗೆ ಕೈಲಾಸನಾಥ ಹಾಗೂ ಅಜಂತಾ ಗುಹೆಗಳಲ್ಲಿ ಈ ರೀತಿಯ ಹಾಗೂ ಅಷ್ಟೇ ಹಳೆಯದು ಎನ್ನಲಾದ ಭಿತ್ತಿಚಿತ್ರ ಗಳನ್ನು ನೋಡಬಹುದು.

ಶತಮಾನಗಳು ಕಳೆದಂತೆಲ್ಲಾ ಕಲೆಯನ್ನು ಪ್ರಸ್ತುತಪಡಿಸುವ ರೀತಿಯಲ್ಲಿ ಮಹತ್ತರವಾದ ಬದಲಾವಣೆ ಕಾಣಬಹುದು. ಚಿಕಣಿ ಚಿತ್ರಗಳನ್ನು ಬಟ್ಟೆಯ ಮೇಲೆ, ಒಣಗಿದ ತಾಳೆ ಎಲೆಗಳು ಹಾಗೂ ಹಸ್ತಪ್ರತಿಗಳ ಮೇಲೆ ಚಿತ್ರಿಸಲಾಗುತ್ತಿತ್ತು. ಪ್ರಾಚೀನ ಭಾರತದ ಜನಪ್ರಿಯ ಕಲಾ ಮಾಧ್ಯಮವಾಗಿ ಬಟ್ಟೆಯ ಮೇಲೆ ಮಾಡಿದ ಚಿತ್ರಕಲೆಯನ್ನು ಬೋಪರು ಮತ್ತು ಚಿತ್ರಕಥಿಯಂತಹ ಮಹಾಕಾವ್ಯದ ಪ್ರಯಾಣಿಕ ವಾಚನಕಾರರು ಬಳಸುತ್ತಿದ್ದುದು ತಿಳಿದುಬರುತ್ತದೆ. ಜನರನ್ನು ಮಹಾಕಾವ್ಯದತ್ತ ಸೆಳೆಯುವ ಅತ್ಯಂತ ಜನಪ್ರಿಯ ಮಾಧ್ಯಮವಾಗಿ ಇದು ಸಫಲವಾಯಿತು.

ತೀರ್ಥಯಾತ್ರೆಯ ನೆನಪಿಗಾಗಿಯೂ ಸಹ ಇದನ್ನು ಜನರು ಖರೀದಿಸಿ ತಂದು ಮನೆಯಲ್ಲಿ ಜೋಪಾನ ಮಾಡುತ್ತಿದ್ದರು. ಇನ್ನು ರಾಜ ಮಹಾರಾಜರುಗಳಿಗೆ ಸ್ನೇಹ ಬೆಸುಗೆಯ ಸಂಕೇತವಾಗಿಯೂ ಸಹ ಇಂತಹ ಬಟ್ಟೆಯ ಮೇಲೆ ಮಾಡಿದ ಕಲಾಕೃತಿಯನ್ನು ನೀಡುತ್ತಿದ್ದ ಇತಿಹಾಸದ ವಿಶೇಷ ಎಲ್ಲರಿಗೂ ತಿಳಿದಿರುವಂತದ್ದು. ರಾಜರ ಅರಮನೆಗಳಂತಹ ಜನಪ್ರಿಯ ಕಟ್ಟಡಗಳಲ್ಲಿ ಹಾಗೂ ಬಟ್ಟೆಯ ಮೇಲೆ ಚಿಕಣಿ ವರ್ಣಚಿತ್ರಗಳನ್ನು ಹೆಚ್ಚಾಗಿ ನಿರ್ಮಿಸಲಾಗುತ್ತಿತ್ತು.

ಹುಮಾಯೂನ್ ರಾಜನಾಗಿ ಯಶಸ್ವಿಯಾಗಿ ಆಳ್ವಿಕೆ ಮಾಡಿದವ. ಇವನು ಪರ್ಷಿಯನ್ ಕಲೆ, ವಾಸ್ತುಶಿಲ್ಪ ಮತ್ತು ಸಾಹಿತ್ಯದ ಪ್ರೋತ್ಸಾಹಕನಾಗಿದ್ದ ಎನ್ನುವುದು ಎಲ್ಲರಿಗೂ ತಿಳಿದ ಸಂಗತಿಯೇ ಸರಿ. ಪರ್ಷಿಯನ್ ಕಲೆಗೆ ಮಾರುಹೋಗಿದ್ದ ಹುಮಾಯೂನ್ ಹದಿನೈದು ವರ್ಷಗಳ ಗಡಿಪಾರಿನ ನಂತರ 1555ರಲ್ಲಿ ಪರ್ಷಿಯನ್ನರ ಸಹಾಯದಿಂದ ಭಾರತಕ್ಕೆ ಮರಳಿದಾಗ ಪರ್ಷಿಯಾ

ದಿಂದಲೇ ತನ್ನೊಂದಿಗೆ ಪರ್ಷಿಯನ್ ಕಲಾವಿದರನ್ನೂ ಕರೆತಂದ. ಆ ಕಲಾವಿದರು ಮೊಘಲರ ಮಹಲಿನ ಖಾಸಾ ದರ್ಬಾರುಗಳಲ್ಲಿ ಪರ್ಷಿಯನ್ ಕಲೆಯೊಂದಿಗೆ ಪ್ರಾಚೀನ ಭಾರತೀಯ ಸಂಪ್ರದಾಯ ಕಲೆಯಾದ ಚಿಕಣಿ ಕಲೆಯನ್ನು ಮಿಳಿತಗೊಳಿಸಿ ಚಂದದ ಕಲಾಕೃತಿಗಳನ್ನು ರಚಿಸಿದರು. ಅದನ್ನು ಈಗಲೂ ಅಲ್ಲಿ ಕಾಣಬಹುದಾಗಿದೆ.

ನಂತರ ಯುರೋಪಿಯನ್ ಕಲೆಗೆ ಭಾರತೀಯ ಕಲೆ ಮಿಳಿತವಾಗಲು ಆರಂಭವಾಯಿತು. ಇದಕ್ಕೆ ಉದಾಹರಣೆಯಾಗಿ ವರ್ಲಿ, ಮಧುಬನಿ, ಸೌರ, ಕಲಂಕರಿ, ಗೊಂಡ್, ಚಿಕನಿ, ಕಾಳಿಘಾಟ್, ಪಟಚಿತ್ರ, ಕೇರಳ ಬಿತ್ತಿ, ಪಿಚ್ವಾಯ್ ಕಲಾಪ್ರಕಾರಗಳನ್ನು ಮುಂಚೂಣಿಯಲ್ಲಿ ಗುರುತಿಸಬಹುದು.

1990ರ ದಶಕದಲ್ಲಿ ಭಾರತೀಯ ಆರ್ಥಿಕತೆಯನ್ನು ಉದಾರೀಕರಣಗೊಳಿಸಿ ವಿಶ್ವ ಆರ್ಥಿಕತೆಯೊಂದಿಗೆ ಸಂಯೋಜಿಸಲಾಯಿತು. ಇದು ಭಾರತದ ಒಳಗೆ ಹಾಗೂ ಹೊರಗೆ ಸಂಸ್ಕೃತಿಯ ಮುಕ್ತ ಹರಿವಿಗೆ ಕಾರಣವಾಯಿತು. ಅಂತಾರಾಷ್ಟ್ರೀಯ ಮಟ್ಟದಲ್ಲಿ ಮಾರುಕಟ್ಟೆಯಲ್ಲಿ ಕಾಣಿಸಿಕೊಂಡ ಕಲಾಕೃತಿಗಳು ದುಬಾರಿ ಬೆಲೆಗೆ ಹರಾಜಿನಲ್ಲಿ ಮಾರಾಟವಾಗಿ ಇತಿಹಾಸ ನಿರ್ಮಿಸಿತು. ಹಾಗೆಯೇ ಮುಂದುವರೆದು ತಂತ್ರಜ್ಞಾನದ ನೆರಳಿನಲ್ಲಿ ಅದರ ವ್ಯಾಪ್ತಿ ಕಲ್ಪನೆಗೆ ಮೀರಿ ಬೆಳೆದಿದೆ. ಅದೇನೇ ಇದ್ದರೂ ಅಡಿಪಾಯ ಹಾಕಿದವರನ್ನು ಮರೆಯುವಂತಿಲ್ಲ ಅಲ್ಲವೇ?

ನನ್ನ ಜೀವನದಲ್ಲಿ ಸಾಹಿತ್ಯ ರಚನೆ ಹಾಗೂ ಕುಂಚಕಲೆ ಎರಡೂ ಸಮಾನ ಅಭಿರುಚಿಯ ಕ್ಷೇತ್ರಗಳು. ಯಾವುದೇ ಕಲೆಯಾದರೂ ಅದಕ್ಕೆ ಸಮಯವನ್ನು ವಿನಿಯೋಗಿಸದೆ ನಮಗೆ ಒಲಿಯುವುದಿಲ್ಲ. ಇಷ್ಟಕ್ಕೇ ಅದು ಮುಗಿಯುವುದಿಲ್ಲ. ಆ ಕಲೆಯ ಪ್ರದರ್ಶನ ಕೂಡ ಒಂದು ದೊಡ್ಡ ಸಾಹಸ ಯಾತ್ರೆಯೇ ಸರಿ. ಹಾಗೆ ನೋಡಿದರೆ ಕುಂಚಕಲೆ ಅನ್ನುವುದು ಬೇರಾವುದೇ ಕಲೆಗಳಾದ ನೃತ್ಯ, ಗಾಯನ, ಸಾಹಿತ್ಯ, ಕ್ರೀಡೆ ಹೀಗೆ ಎಲ್ಲಕ್ಕಿಂತಲೂ ಸಂಪೂರ್ಣ ಭಿನ್ನ. ನಮ್ಮ ಸಮಾಜದಲ್ಲಿ ವಿಶಿಷ್ಟ ಹಾಗೂ ಕ್ರಿಯಾತ್ಮಕ ಕಲೆಯನ್ನು ಗುರುತಿಸುವ ಮನಸ್ಸುಗಳು ಬೆರಳೆಣಿಕೆಯಷ್ಟು ಮಾತ್ರ. ಬಹುಶಃ ಅದರ ಆಳ ಹಾಗೂ ಅಂತರಂಗ ಅನುಭೂತಿಯ ಬಗ್ಗೆ ಇರುವ ಮಾಹಿತಿಯ ಕೊರತೆಯೂ ಒಂದು ಕಾರಣವಿರಬಹುದು. ಹಾಗಾಗಿಯೇ ಆ ಕಲೆ ಎಲ್ಲರಿಗೂ ಎಟುಕುವುದು ಸಾಧ್ಯವಿಲ್ಲ.

ಎಲ್ಲ ಕಲೆಗಳಿಗಿರುವಂತೆ ಈ ಕಲೆಯಲ್ಲಿಯೂ ಕೇಳಿದ್ದನ್ನು, ನೋಡಿದ್ದನ್ನು ಚಿತ್ರಿಸಿ ಬಣ್ಣ ತುಂಬುವುದು ಬೇರೆ. ರೇಖೆಗಳಲ್ಲಿ ಅಥವಾ ಬಣ್ಣಗಳಲ್ಲಿ ವಿಶೇಷ ಶೈಲಿಯನ್ನು ಜಗತ್ತಿಗೆ ಪರಿಚಯಿಸಿ ಸೈ ಅನ್ನಿಸಿಕೊಳ್ಳುವುದು ಬೇರೆ. ಈ ವಿಶೇಷತೆಯೇ ಕಲಾವಿದರನ್ನು ವಿಶೇಷ ವ್ಯಕ್ತಿಯಾಗಿಸುವುದು ಎನ್ನುವುದರಲ್ಲಿ ಸಂಶಯವಿಲ್ಲ.

ಇನ್ನಷ್ಟು ಮುಂದುವರೆದರೆ ಸಾಹಿತ್ಯಕ್ಕಿರುವಂತೆ ಕುಂಚಕಲೆಗೆ ಲಿಪಿ ಇಲ್ಲ. ಆದರೂ ಅದರ ಒಳಹೊಕ್ಕು ನೋಡಿದವರಿಗೆ ಅದು ಕೈಗೂಸಾದರೆ, ಅರ್ಥಮಾಡಿಕೊಳ್ಳುವಲ್ಲಿ ಸೋಲುವವರ ಪಾಲಿನ ಕಬ್ಬಿಣದ ಕಡಲೆ. ಅಕಾಡೆಮಿಗಳ ಹಾಗೂ ಸಂಘ ಸಂಸ್ಥೆಗಳ ಸಹಕಾರದಿಂದ ಭಾರತದ ಬೇರೆ ಬೇರೆ ಪ್ರದೇಶಗಳಿಗೆ ತಮ್ಮ ಕಲಾಕೃತಿಗಳನ್ನು ಕೊಂಡೊಯ್ದು ಪ್ರದರ್ಶಿಸಿ, ಮಾರಾಟ ಮಾಡಿ ಜೀವನ ಸಾಗಿಸುವ ಎಷ್ಟೋ ಕಲಾವಿದರು ನಮ್ಮ ನಡುವೆ ಇದ್ದಾರೆ. ಯಾವುದೇನೇ ಇದ್ದರೂ ಪ್ರದರ್ಶನಗೊಂಡ ವಿಶೇಷ ಶೈಲಿಯ ಕಲಾಕೃತಿಗಳು ದೇಶ ವಿದೇಶದ ವ್ಯಾಪ್ತಿ ಮೀರಿ ಕಲಾವಿದನಿಗೆ ಕೀರ್ತಿ ತಂದು ಕೊಡುವುದಂತೂ ನಿಜ. ಕಲೆಗೆ ಲಿಂಗಬೇಧವಿಲ್ಲ. ಆದರೆ ಪುರುಷ ಪ್ರಧಾನ ಸಮಾಜದಲ್ಲಿ ಮಹಿಳೆಯರ ಸಾಧನೆಯನ್ನು ವಿಶೇಷವಾಗಿ ಗುರುತಿಸುವ ಸಾಧ್ಯತೆ ಕಡಿಮೆ ಎನ್ನುವುದರಲ್ಲಿ ಎರಡು ಮಾತಿಲ್ಲ. ಅದನ್ನು ಸಾಕ್ಷೀಕರಿಸುವ ಒಂದು ಸಂಧರ್ಭ ಹೀಗಿದೆ.

ಕೇಂದ್ರ ಸರ್ಕಾರಿ ಸ್ವಾಮ್ಯದ ಐಸಿಸಿಆರ್ (ಇಂಡಿಯನ್ ಕೌನ್ಸಿಲ್ ಫಾರ್ ಕಲ್ಚುರಲ್ ರಿಲೇಶನ್) ಸಂಸ್ಥೆಯ ವತಿಯಿಂದ 'ವೇದಿಕೆಗಳಲ್ಲಿ ಹಾಡಿಗೆ ಚಿತ್ರ ಬಿಡಿಸುವ ಕರ್ನಾಟಕದ ಮೊದಲ ಮಹಿಳೆ' ಎನ್ನುವ ಪ್ರಮಾಣ ಪತ್ರ ಹಾಗೂ ರಾಜ್ಯಸರ್ಕಾರದ ಪ್ರಶಸ್ತಿಯನ್ನು ಪಡೆದಿರುವ ನನಗೆ ಪ್ರತಿ ಕ್ಷೇತ್ರದ ಮೊದಲುಗಳನ್ನು ಹುಡುಕುವ ಅಭ್ಯಾಸ. ಹಾಗೂ ಐಸಿಸಿಆರ್ ಸಂಸ್ಥೆಯ ನಲವತ್ತೆರಡು ವರ್ಷಗಳ ಇತಿಹಾಸದಲ್ಲಿ ಇದು ಮೊದಲ ಕಾರ್ಯಕ್ರಮ ಅನ್ನುವುದೂ ನನ್ನ ಹಿರಿಮೆಯಾಗಿದೆ. ಮುಂದುವರೆದು

ವಿದೇಶಗಳಲ್ಲಿ ತಮ್ಮ ಸ್ವರಚಿತ ಕಲಾಕೃತಿಗಳನ್ನು ಪ್ರದರ್ಶಿಸಿದ ಮೊದಲ ಮಹಿಳಾ ಕುಂಚಕಲಾವಿದೆ ಯಾರಿರಬಹುದು ಎನ್ನುವ ಪ್ರಶ್ನೆ ಕಲಾವಿದೆಯಾದ ನನ್ನನ್ನು ಬಹುವಾಗಿ ಕಾಡಿದ್ದುಂಟು. ಅದೇ ವಿಚಾರವನ್ನೇ ಮುಂದಿಟ್ಟುಕೊಂಡು ವಿಷಯ ಸಂಗ್ರಹಿಸಲು ತೊಡಗಿದೆ. ಆಸಕ್ತಿ ಕೆರಳಿಸುವ ಅನೇಕ ಸಂಗತಿಗಳನ್ನು ಗಮನಿಸುತ್ತಾ ಹೋದಂತೆ ಮಹಿಳೆ ಎಷ್ಟೇ ದೊಡ್ಡ ಹೆಸರು ಮಾಡಿದ ಕುಟುಂಬದಲ್ಲಿ ಹುಟ್ಟಿದ್ದರೂ ಆಕೆಯ ಕಲೆಯನ್ನು ಉದಾಸೀನ ಮಾಡಿದ ಬಗ್ಗೆ ತಿಳಿದು ವಿಷಾದವೆನಿಸಿತು. ಹಾಗೆಯೇ ಮಹಿಳಾ ವಿಮೋಚನೆಗಾಗಿಯೇ ಅಹರ್ನಿಶಿ ಹೋರಾಡಿದವರ ವಂಶದ ಸೊಸೆಯಾದ ನಂತರವೇ ಆಕೆಯ ಕಲೆಯು ವಿದೇಶಗಳಲ್ಲಿ ಪ್ರದರ್ಶನಗೊಂಡವು ಎನ್ನುವುದು ಒಂದಷ್ಟು ನೆಮ್ಮದಿ ನೀಡುವ ವಿಷಯ.

ಕಲೆಯನ್ನು ಎಷ್ಟೇ ಅದುಮಿಟ್ಟರೂ ಅದರ ಕಂಪನ್ನು ಮುಚ್ಚಿಡಲು ಯಾರಿಂದಲೂ ಸಾಧ್ಯವಿಲ್ಲ ಎಂಬುದನ್ನೂ ನಾವಿಲ್ಲಿ ಗಮನಿಸಬೇಕು. ಇರಲಿ. ಅದೇ ಹಿನ್ನೆಲೆಯಲ್ಲಿ ಇಣುಕುವ ಮೊದಲು ಒಂದಷ್ಟು ಮಾಹಿತಿಯನ್ನೇ ಪಡೆದು ಮುನ್ನಡೆಯೋಣ. ಕಲೆ+ಸ್ತ್ರೀವಾದ (Art+Feminism) ಎಂಬುದು ವಿಕಿಪೀಡಿಯಾ ಇತರ ಸಂಸ್ಥೆಗಳ ಸಹಯೋಗದೊಂದಿಗೆ ನಡೆಸಲಾಗುವ ಒಂದು ಯೋಜನೆಯಾಗಿದ್ದು, ಇದು ಕಲೆಯ ಜಗತ್ತಿನಲ್ಲಿ ಪುರುಷ ಪ್ರಾಬಲ್ಯವನ್ನು ಪ್ರಶ್ನಿಸಲು ಮತ್ತು ಮಹಿಳಾ ಕಲಾವಿದರಿಗೆ ಸಮಾನತೆ, ಗುರುತಿಸುವಿಕೆ ಮತ್ತು ಸ್ತ್ರೀವಾದಿ ದೃಷ್ಟಿಕೋನಗಳನ್ನು ಎತ್ತಿ ತೋರಿಸಲು ಪ್ರಯತ್ನಿಸುತ್ತದೆ. ಇದು ಕಲಾ ಇತಿಹಾಸ, ಸಿದ್ಧಾಂತ ಹಾಗೂ ಅಭ್ಯಾಸಗಳಲ್ಲಿ ಮಹಿಳೆಯರ ಕೊಡುಗೆಗಳನ್ನು ಗುರುತಿಸಿ ಅದನ್ನು ಎಲ್ಲ ಕಡೆ ತಿಳಿಯುವಂತೆ ಮಾಡುವ ಸಲುವಾಗಿ ಕೆಲಸ ಮಾಡುತ್ತದೆ. ಮಹಿಳಾ ಇತಿಹಾಸದ ತಿಂಗಳಲ್ಲಿ (ಮಾರ್ಚ್) ವಿಶೇಷವಾಗಿ ಕಾರ್ಯಕ್ರಮಗಳನ್ನು ಆಯೋಜಿಸುವ ಮೂಲಕ, ಸಂಭಾಷಣೆಗಳು ಮತ್ತು ಇತರ ಚಟುವಟಿಕೆಗಳ ಮೂಲಕ ವಿಕಿಪೀಡಿಯಾದಲ್ಲಿ ವಿಷಯಗಳನ್ನು ಹಂಚಿಕೊಳ್ಳುವ ಕೆಲಸ ಮಾಡುತ್ತದೆ.

ಈ ತರಹದ ಅಭಿಯಾನದವರೆಗೆ ವಿಕಿಪೀಡಿಯದಿಂದಲೂ ಮರೆಯಾಗಿದ್ದ ಸುನಯನಿ ದೇವಿಯವರು ಮೊಟ್ಟ ಮೊದಲು ತನ್ನ ಕುಂಚ ಕಲೆಯನ್ನು ವಿದೇಶದಲ್ಲಿ ಪ್ರದರ್ಶಿಸಿದ ಭಾರತೀಯ ಮಹಿಳೆ ಎಂದು ಇತ್ತೀಚೆಗೆ ತಿಳಿದು ಬಂದಿದೆ. ಅವರು ಭಾರತದ ಸುಪ್ರಸಿದ್ಧ ಮನೆತನವಾದ ಟ್ಯಾಗೋರ್ ಮನೆತನಕ್ಕೆ ಸೇರಿದ್ದರೂ ಸಹ ಅವರನ್ನು ಪ್ರಸಿದ್ಧಿಯಿಂದ ದೂರವಿಡಲಾಗಿತ್ತು. ಗೌರವಾನ್ವಿತ ಬರಹಗಾರರು, ವರ್ಣಚಿತ್ರಕಾರರೇ ತುಂಬಿದ್ದ ಬಂಗಾಳಿ ನವೋದಯ ಕಾಲದ ಕೇಂದ್ರ ಬಿಂದುವಾಗಿದ್ದ ಈ ಟ್ಯಾಗೋರ್ ಮನೆತನದಲ್ಲಿ ಹುಟ್ಟಿದ ಈಕೆ ರವೀಂದ್ರನಾಥರ ಸೋದರ ಸೊಸೆ. ಅಬನೀಂದ್ರನಾಥ ಟ್ಯಾಗೋರ್, ಗಗನೇಂದ್ರನಾಥ ಟ್ಯಾಗೋರ್ ಸಮರೇಂದ್ರನಾಥ್ ಟ್ಯಾಗೋರ್ ಅವರು ಸುನಯನಿ ದೇವಿಯ ಸಹೋದರರು.



ಸ್ವಾತಂತ್ರ್ಯ ಚಳುವಳಿಯ ಸಂದರ್ಭದಲ್ಲಿ ಭಾರತೀಯ ರಾಷ್ಟ್ರೀಯತೆಯನ್ನು, ಸ್ವತಂತ್ರ ರಾಷ್ಟ್ರದ ಪರಿಕಲ್ಪನೆಯನ್ನು ಮತ್ತು ಸ್ವದೇಶಿ ಆದರ್ಶಗಳನ್ನು ಉತ್ತೇಜಿಸುವ ಸಲುವಾಗಿ ರಚಿಸಲಾದ 'ಭಾರತಮಾತಾ' ಕೃತಿಯನ್ನು ಅಬನೀಂದ್ರನಾಥ ಟ್ಯಾಗೋರರು 1905ರಲ್ಲಿ ಚಿತ್ರಿಸಿದ್ದಾರೆ. ಇದೇ ಭಾರತಮಾತೆಯ ಪ್ರಥಮ ಕಲಾಕೃತಿ. ಸಾಧ್ವಿಯಂತೆ ಕೇಸರಿ ಬಣ್ಣದ ವಸ್ತ್ರದಿಂದ ಅಲಂಕೃತಗೊಳಿಸಿ, ಅಪಾರ ಶಕ್ತಿಗೆ ಸಮನಾಗಿವೆ ಎಂದು ಬಿಂಬಿಸುವ ಸಲುವಾಗಿ ನಾಲ್ಕು ಕೈಗಳನ್ನು ರಚಿಸಿ ಒಂದು ಕೈಲಿ ಪುಸ್ತಕ, ಮತ್ತೊಂದರಲ್ಲಿ ಭತ್ತದ ತೆನೆಯ ಕಟ್ಟು, ಇನ್ನೊಂದರಲ್ಲಿ ಬಿಳಿ ತುಂಡುಬಟ್ಟೆ ಹಾಗೂ ಮತ್ತೊಂದು ಕೈಲಿ ರುದ್ರಾಕ್ಷಿ ಹಾರ ಹಿಡಿದಿರುವ ಪವಿತ್ರ ಮಹಿಳೆಯನ್ನು ಚಿತ್ರಿಸಲಾದ ಈ ಕಲಾಕೃತಿಯು ಭಾರತದ ಮತ್ತು ಭಾರತೀಯ ಕಲಾ ಇತಿಹಾಸದ ದೃಷ್ಟಿಕೋನವನ್ನು ಬದಲಾಯಿಸಿತು.

ಟ್ಯಾಗೋರ್ ಅವರ ಈ ಚಿತ್ರಕಲೆ ಭಾರತದ ಸ್ವಾತಂತ್ರ್ಯ ಚಳುವಳಿಯ ಸಂದರ್ಭದಲ್ಲಿ ಪ್ರಮುಖ ಪಾತ್ರವಹಿಸಿತು ಮತ್ತು ಭಾರತೀಯ ಸಂಸ್ಕೃತಿಯನ್ನು ಪ್ರತಿನಿಧಿಸುವ ಕಲಾಕೃತಿಯಾಗಿ ಗಮನ ಸೆಳೆಯಿತು. ಇದಕ್ಕೂ ಮೊದಲು ಬಂಕಿಮಚಂದ್ರ ಚಟರ್ಜಿಯವರು ಇದೇ ಕಲಾಕೃತಿಯನ್ನು ರಚಿಸಿದ್ದರು.

ಅಂತಹ ಹಿನ್ನೆಲೆಯಿಂದ ಬಂದಿರುವ ಸುನಯನಿಗೆ ಚಿತ್ರಕಾರರಾಗಿ ಜೀವನ ಪ್ರಾರಂಭಿಸಲು ಎಲ್ಲಾ ಪ್ರೋತ್ಸಾಹ ಸಿಕ್ಕಿರಬೇಕು ಎಂದು ಯಾರಾದರೂ ಭಾವಿಸಿದ್ದರೆ ಅದು ಭ್ರಮೆ ಅಷ್ಟೇ. ಆದರೆ ವಾಸ್ತವವಾಗಿ ಅವರ ಮೂವರು ಸಹೋದರರೂ ತೆರೆಯ ಹಿಂದೆ ಮಾಡುತ್ತಿದ್ದ ಜಪಾನಿನ ತೊಳೆಯುವ ತಂತ್ರಗಳಂತಹ ವಿಭಿನ್ನ ಕಲಾಪ್ರಕಾರಗಳನ್ನು ಮರೆಯಲ್ಲಿ ನೋಡಿ ಸ್ಫೂರ್ತಿಹೊಂದಿ, ಸ್ವಯಂ ತರಬೇತಿ ಪಡೆದು ಕಲಾಕೃತಿಗಳನ್ನು ರಚಿಸುತ್ತಿದ್ದರಾಗಲಿ ಅವರಿಗೆ ಯಾರೂ ತರಬೇತಿ ನೀಡುವ ಪ್ರಯತ್ನವನ್ನೇ ಮಾಡಲಿಲ್ಲ. ಸುನಯನಿಯವರ ಹನ್ನೆರಡನೇ ವಯಸ್ಸಿಗೇ ರಜನಿ ಮೋಹನರಾಯರ ಜೊತೆಗೆ ಮದುವೆಯಾದ ಪರಿಣಾಮ ಅಭ್ಯಾಸ ನಿಧಾನಗತಿಗೆ ಸರಿಯಿತು. ನಂತರ ಮತ್ತೆ ತಮ್ಮ ಮೂವತ್ತರ ಹರೆಯದಲ್ಲಿ ಕಲೆಯನ್ನು ಗಂಭೀರವಾಗಿ ತೆಗೆದುಕೊಂಡರು.

ರಜನಿ ಮೋಹನರಾಯ್ ಅವರು ಸತಿ ಪದ್ಧತಿ ಹಾಗೂ ಹೆಣ್ಣುಮಕ್ಕಳ ವಿದ್ಯಾಭ್ಯಾಸಕ್ಕಾಗಿ ಹೋರಾಡಿದ ರಾಜಾರಾಮ್ ಮೋಹನ್ ರಾಯ್ ಅವರ ಮೊಮ್ಮಗ. ಮದುವೆಯಾಗಿ ನಂತರದ ಹಲವು ವರ್ಷಗಳ ತರುವಾಯ ಪತಿಯ ಪ್ರೋತ್ಸಾಹದಿಂದ ಪೂರ್ಣ ಚಿತ್ರಕಾರರಾಗಿ ಕಲಾಯಾನದಲ್ಲಿ ಮುಂದುವರೆದು ಸುಮಾರು ಹದಿನೈದು ವರ್ಷಗಳ ಕಾಲ ವಿಶಿಷ್ಟ ಶೈಲಿಯ ಕಲಾಕೃತಿಯ ರಚನೆಯಲ್ಲಿ ಸಕ್ರಿಯರಾಗಿದ್ದರು. ಆದರೆ ಪತಿಯ ನಿಧನದ ನಂತರ ಚಿತ್ರಿಸುವ ಚೈತನ್ಯ ಸಂಪೂರ್ಣ ನಂದಿಹೋಗಿ ಅವರಲ್ಲಿದ್ದ ಕಲಾತ್ಮಕತೆ ಮರೆಯಾಗಿ ಹೋಯಿತು.

18 ಜೂನ್ 1875ರಲ್ಲಿ ಪಶ್ಚಿಮ ಬಂಗಾಳದ ಕಲ್ಕತ್ತಾದಲ್ಲಿ ಜನಿಸಿದ ಸುನಯನಿಯವರು, 23 ಫೆಬ್ರವರಿ 1962ರಂದು ತಮ್ಮ 86ನೇ ವಯಸ್ಸಿನಲ್ಲಿ ಮರಣ ಹೊಂದಿದರು. ಇವರ ತಾಯಿ ಸೌಧಾಮಿನಿ ದೇವಿ ಹಾಗೂ ತಂದೆ ಗುಣೇಂದ್ರನಾಥ ಟ್ಯಾಗೋರ್. ವಿಪರ್ಯಾಸವೆಂದರೆ ಆಕೆಯ ಕಲೆ ಮೌಲ್ಯಯುತವಾದದ್ದು ಎಂದು ಸ್ವತಃ ಆಕೆಗೇ ತಿಳಿದಿರಲಿಲ್ಲ. ಹಾಗಾಗಿ ಅವರು ಕೆಲವು ಚಿತ್ರಗಳನ್ನು ಹಾಳೆಯ ಎರಡು ಬದಿಯಲ್ಲಿಯೂ ಚಿತ್ರಿಸಿದ್ದಾರೆ. 1908ರಿಂದ ಆರಂಭಗೊಂಡು ಕಲ್ಕತ್ತಾ, ಅಲಹಾಬಾದ್, ಲಂಡನ್ ಹಾಗೂ ಅಮೇರಿಕಾದ ಹಲವು ನಗರಗಳಲ್ಲಿ ಅವರ ಕಲಾಕೃತಿಗಳು ಸಾರ್ವಜನಿಕವಾಗಿ ಪ್ರದರ್ಶನ ಕಂಡು 'ವಿದೇಶಗಳಲ್ಲಿ ಭಾರತದ ಕಲೆಯನ್ನು ಪ್ರದರ್ಶಿಸಿದ ಮೊದಲ ಮಹಿಳೆ' ಎನ್ನುವ ಕೀರ್ತಿಗೆ ಪಾತ್ರರಾಗಿದ್ದಾರೆ, ಸುನಯನಿ.

***

ಕಾಡುಬೆಕ್ಕು

– ಟಿ.ಆರ್. ಉಷಾರಾಣಿ

ಹೊಸ ವಿಲ್ಲಾ ಬಂಗಲೆಗೆ ಬಂದು ಒಂದು ವಾರವಾಗಿತ್ತು. ರಮ್ಯ ತುಂಬಾ ಸಂತೋಷದಿಂದಿದ್ದಳು. ಗಂಡ ಆಫೀಸಿಗೆ ಹೋದ ಮೇಲೆ ಒಬ್ಬಳೇ ಮನೆಯ ಪ್ರತಿಯೊಂದು ಜಾಗವನ್ನೂ ಸಂಭ್ರಮದಿಂದ ನೋಡುತ್ತಿದ್ದಳು. ಕಿಟಕಿಯಿಂದ ನೋಡುತ್ತಿದ್ದವಳಿಗೆ ಶಾಕ್ ಹೊಡೆದಂತಾಯಿತು. ಮನೆಯ ಮುಂಭಾಗಕ್ಕೆ ಸರಿಯಾಗಿ ಗುಡಿಸಲುಗಳು ಏಳುತ್ತಿವೆ. ಎಲ್ಲಾ ಕೆಳವರ್ಗದ ಜನಗಳು ತಮ್ಮ ಪಾತ್ರೆಪಡಗಗಳನ್ನು ಲಾರಿಯಿಂದ ಇಳಿಸಿಕೊಂಡು ರಸ್ತೆಯಲ್ಲೇ ಎರಡು ಇಟ್ಟಿಗೆ ಜೋಡಿಸಿಕೊಂಡು ಅಡುಗೆ ಮಾಡಿ ಕೊಳ್ಳುತ್ತಿದ್ದಾರೆ. ತಕ್ಷಣ ಅವಳಿಗೆ ಮೈಯೆಲ್ಲಾ ಉರಿದು ಹೋಯಿತು. ಬಿಲ್ಡರ್‌ಗೆ ಫೋನಾಯಿಸಿದಳು. "ಈ ಏರಿಯಾ ಬಹಳಾ ಚೆನ್ನಾಗಿದೆ, ತುಂಬಾ ಶ್ರೀಮಂತರು ಮಾತ್ರ ವಾಸಿಸುವಂತಹ ಜಾಗ ಎಂದು ಬೊಗಳೆ ಹೊಡೆದಿರಿ. ದರಿದ್ರ ಆ ಮಿಡ್ಲ್‌ಕ್ಲಾಸ್ ಕಾಲೋನಿಯಿಂದ ಹೊರಗೆ ಬಂದೆವೆಂದು ಖುಷಿಯಲ್ಲಿದ್ದರೆ, ಛೀ ಅದಕ್ಕಿಂತಾ ಕಡೆ, ಅತ್ಯಂತ ಕೆಳವರ್ಗದ ಜನರ ಗುಡಿಸಲುಗಳು ರಾತ್ರೋರಾತ್ರಿ ಮೇಲೆದ್ದಿವೆ."

"ಮೇಡಂ, ಅವರೆಲ್ಲಾ ರಸ್ತೆ ದುರಸ್ತಿ ಕಾಮಗಾರಿಯ ಕೆಲಸಗಾರ ಕುಟುಂಬಗಳು. ಜಾಸ್ತಿ ದಿನ ಇರಲ್ಲ, ಕೆಲಸ ಮುಗಿಯುತ್ತಿದ್ದಂತೆ ಇವರನ್ನೆಲ್ಲಾ ಎತ್ತಂಗಡಿ ಮಾಡಿಸುತ್ತಾರೆ. ಸ್ವಲ್ಪ ದಿನ ಅಷ್ಟೇ ಮೇಡಂ." ಬಿಲ್ಡರ್ ಅವಳಿಗೆ ಸಮಾಧಾನ ಮಾಡುವ ಅಲ್ಪ ಪ್ರಯತ್ನ ಮಾಡುತ್ತಿದ್ದ. ಸರಿಯಾಗಿ ಇವರ ಮನೆಯ ಮುಂದಿದ್ದ ಗುಡಿಸಲಿನ ಹೆಂಗಸೊಬ್ಬಳು ಗೇಟು ತಳ್ಳಿಕೊಂಡು ಒಳಬಂದಾಗ ರಮ್ಯಾಳಿಗೆ ನಖಶಿಖಾಂತ ಉರಿದುಹೋಯಿತು.

"ಅಮ್ಮಾ ತುಂಬಾ ಚಳಿ. ಒಂದು ಹಳೆಯ ಚಾದರ ಇದ್ದರೆ ಕೊಡ್ತೀರಾ ಮಗೀಗೆ" ಎಂದು ಅಂಗಲಾಚಿದಳು.

"ಏಯ್ ಯಾಕೆ ಬಂದೆ ಒಳಗೆ? ನಡಿಯೇ. ಚಾದರನೂ ಇಲ್ಲ ಎಂತದ್ದೂ ಇಲ್ಲ. ಇನ್ನೇನಾದರೂ ನೆಪ ಮಾಡಿಕೊಂಡು ಮನೆ ಕಡೆ ಬಂದ್ರೆ ಅಷ್ಟೇ ನಿನ್ನ ಕಥೆ..." ತೀರ ತೀಕ್ಷ್ಣವಾದ ಯಜಮಾನಿಯ ಮಾತು ಕೇಳಿ ಬಂದವಳು ಹೆದರಿಬಿಟ್ಟಳು. ಆದರೂ ಸಾವರಿಸಿಕೊಂಡು "ಅಮ್ಮಾ, ಇಲ್ಲಿ ಕಾಡುಬೆಕ್ಕುಗಳ ಕಾಟ ತುಂಬಾ ಇದೆ ರವಷ್ಟು ಜಾಗ್ರತೆಯಿಂದಿರಿ" ಎಂದು ಹೇಳಿ ಹೊರಟು ಹೋದಳು.

ಮತ್ತೆ ಕಾಲಿಂಗ್ ಬೆಲ್ ಒತ್ತಿದ ಶಬ್ದ. ಪಕ್ಕದ ವಿಲ್ಲಾದ ಮಾಲೀಕ ರಾಂಮೋಹನ್ ಪರಿಚಯದ ನಗೆ ಬೀರುತ್ತಾ ಒಳಗಡಿಯಿಟ್ಟ. ಸುಮಾರು ನಲವತ್ತರಂಚಿನವನು. ಒಂದು ಮಾಸಿದಂತಿದ್ದ ಜೀನ್ಸ್ ಪ್ಯಾಂಟ್, ಟೀ ಶರ್ಟ್ ಧರಿಸಿದ್ದ. ತಾನು ಅಂತಾರಾಷ್ಟ್ರೀಯ ಕಂಪನಿಗೆ ಕೆಲಸ ಮಾಡುವುದಾಗಿ ವರ್ಕ್ ಫ್ರಂ ಹೋಂ ಮಾಡುತ್ತಿರುವುದಾಗಿ ತಿಳಿಸಿದ. ಹೆಂಡತಿಯೂ ಟೆಕ್ಕಿ, ಆದರೆ ಅವಳು ವಾರಕ್ಕೆ ಮೂರು ದಿನ ಕೆಲಸಕ್ಕೆ ಹೋಗಬೇಕಾಗುತ್ತದೆ ಎಂದು ತಮ್ಮ ಪರಿಚಯ ಮಾಡಿಕೊಂಡ. ಅಕ್ಕಪಕ್ಕದ ಮನೆಯವರ ಪರಿಚಯ ಇರುವುದು ಒಳ್ಳೆಯದೇ ಎಂದುಕೊಂಡ ರಮ್ಯ ಅವನಿಗೆ ಆದರೋಪಚಾರ ಮಾಡಿದಳು. ಹರಟುತ್ತಾ ಅವಳಿಗೆ ಸಮಯ ಹೋದದ್ದೇ ತಿಳಿಯಲಿಲ್ಲ. ಪ್ರತಿನಿತ್ಯ ಆತ ಬರತೊಡಗಿದ. ಇಬ್ಬರ ಸ್ನೇಹ ಗಾಢವಾಗುತ್ತಿದ್ದಂತೆ ತನ್ನ ಅಂತರಂಗದ ವಿಷಯಗಳೆಲ್ಲವನ್ನೂ ರಮ್ಯ ಅವನೊಂದಿಗೆ ಹಂಚಿಕೊಳ್ಳುತ್ತಿದ್ದಳು. ಅವರಿಬ್ಬರೂ ಕಾಫಿಯ ಮಗ್ ಕೈಗೆ ತೆಗೆದುಕೊಂಡಿದ್ದರು. ಹೊರಗೆ ಜೋರಾದ ಗಲಾಟೆ ಕೇಳಿಸಿತು. "ಥೂ ದರಿದ್ರ, ಈ ಲೋ ಕ್ಲಾಸ್ ಜನಗಳೇ ಹೀಗೇ" ಎಂದು ಅವರ ಬಗ್ಗೆ ಹೀನಾಯವಾಗಿ ಮಾತನಾಡಿ ಕಾಫಿ ಮಗ್ ಕೆಳಗಿಟ್ಟಳು. "ಎಸ್ ಎಸ್" ಅವನೂ ಅವಳ ಮಾತಿಗೆ ದನಿಗೂಡಿಸಿದ್ದ. ಗಲಾಟೆ ಜೋರಾದಾಗ ಬಾಗಿಲು ತೆಗೆದು "ಏನದು ಗಲಾಟೆ" ಎಂದು ಅವನೇ ಕೇಳಿದ.

"ಸಾರ್, ಒಂದು ಕಾಡುಬೆಕ್ಕು ನಮ್ಮ ಗುಡಿಸಿಲಿನಲ್ಲಿ ಹೊಕ್ಕು ಎಳೆಗೂಸನ್ನು ಎಳೆದುಕೊಂಡು ಹೋಗುತ್ತಿತ್ತು ಅದು ಕೊಡುವ ತೊಂದರೆ ಒಂದೇ ಎರಡೇ ಎದುರಿಗೆ ಬಂದವರಿಗೆ ಪರಚುತ್ತದೆ. ಮಾಡಿಟ್ಟ ಅಡುಗೆಯನ್ನೆಲ್ಲಾ ಕಬಳಿಸಿಕೊಂಡು ಹೋಗುತ್ತದೆ.

ಹುಷಾರು ಮೇಡಂ, ಒಳ್ಳೆಯ ಚಿರತೆಯ ಕಣ್ಣುಗಳು, ನೋಡಿದರೆ ಭಯವಾಗುತ್ತೆ. ನೀವು ಬಾಗಿಲು ಭದ್ರಪಡಿಸಿಕೊಳ್ಳಿ'' ಎಂದನೊಬ್ಬ ರಮ್ಯಾಳ ಕಡೆ ತಿರುಗಿ.

ಮತ್ತೆ ಎರಡು ದಿನಗಳ ನಂತರ ರಾಂಮೋಹನ್ ಮತ್ತು ರಮ್ಯ ಹರಟುತ್ತಾ ಕುಳಿತಿದ್ದರು ಹೊರಗೆ ಅದೇ ಗಲಾಟೆ. ಅವರ ಸ್ನೇಹ ಈಗ ಏಕವಚನಕ್ಕೆ ತಿರುಗಿತ್ತು. ಜ್ಯೂಸ್ ಕೊಡಲು ಬಂದ ರಮ್ಯಾಳ ಕೈಹಿಡಿದೆಳೆದು ''ರಮ್ಮು'' ಎಂದು ಅವನು ಅವಳ ಹೆಗಲ ಮೇಲೆ ಕೈಹಾಕಿದಾಗ ರಮ್ಯ ಬೆಚ್ಚಿದಳು. ''ನೋಡಿ ನಾವು ಸ್ನೇಹಿತರಷ್ಟೇ'' ರಮ್ಯ ಹೆದರಿ ಬೀದಿಯ ಬಾಗಿಲು ತೆಗೆದು ಅವನನ್ನು ಹೋಗುವಂತೆ ಸೂಚಿಸಿದಳು. ಹೊರಗೆ ಆ ಗುಡಿಸಲ ಜನರ ಪ್ರಯತ್ನಕ್ಕೆ ಸಿಕ್ಕ ಕಾಡುಬೆಕ್ಕನ್ನು ಹೊಡೆದು ಉರುಳಿಸಿದ್ದರು. ಚಾದರ ಕೇಳಲು ಬಂದ ಅದೇ ಹೆಂಗಸು ಮಗುವನ್ನು ಕಂಕುಳಲ್ಲಿ ಕೂರಿಸಿಕೊಂಡು ಗೇಟಿನಿಂದ ದೂರವೇ ನಿಂತು ಹೇಳಿದಳು ''ಮೇಡಂ, ಬೆಕ್ಕು ಸಿಕ್ಕಿತು. ಮುಗಿಯಿತು ಅದರ ಕಥೆ. ಇನ್ನುಮುಂದೆ ಎಲ್ಲರಿಗೂ ಅದರ ಕಾಟ ತಪ್ಪಿತು. ಆದರೂ ನೀವು ಹುಷಾರು ಮೇಡಂ, ಎಲ್ಲರಿಗೂ ಬಾಗಿಲು ತೆರೆಯಬೇಡಿ. ಜೋಪಾನ'' ಎಂದಳು ವಿಜಯೋತ್ಸಾಹದಿಂದ. ರಾಂಮೋಹನ್ ಆ ಹೆಂಗಸಿನ ಕಡೆ ನೋಡಿ ಹಲ್ಲು ಕಡಿದುಕೊಂಡು ತನ್ನ ಮನೆಯತ್ತ ಹೆಜ್ಜೆ ಹಾಕಿದ.

''ಏಯ್ ಏನು ನಿನ್ನ ಹೆಸರು?''

''ದ್ಯಾವೀರಿ ಅಮ್ಮೋರೆ''

''ನೀನು ಚಾದರ ಕೇಳಿದೆ ಅಲ್ಲವೇ? ಒಳಗೆ ಬಾ, ನಿನಗಾಗಿ ತೆಗೆದಿಟ್ಟಿದೀನಿ'' ಎಂದು ಚಾದರ, ಅದರ ಜೊತೆ ಸ್ವಲ್ಪ ತಿಂಡಿ ತಂದುಕೊಟ್ಟಳು.

''ಬೋ ಉಪಕಾರ ಆಯ್ತು ಅಮ್ಮೋರೆ'' ಅವಳ ಮುಖ ಖುಷಿಯಿಂದ ಅರಳಿತು.

ಉಪಕಾರ ಆಗಿದ್ದು ನಿನಗಲ್ಲ ನನಗೆ ಎಂದುಕೊಂಡಳು ರಮ್ಯ ಮನಸ್ಸಿನಲ್ಲಿ.

***

ಶಿಥಿಲ ದ್ವಿತ್ವ

– ಗಣಪತಿ ಹೆಗಡೆ

ಕನ್ನಡ ಭಾಷೆಯ ವೈಶಿಷ್ಟ್ಯವನ್ನು ಕೇಶಿರಾಜ ಈ ಕೆಳಗಿನಂತೆ ಹೇಳಿದ್ದಾನೆ.

"ಗಮಕ ಸಮಾಸದಿಂ ಱಳಕುಳಕ್ಷಳದಿಂ ಶ್ರುತಿಸಹ್ಯ ಸಂಧಿಯಿಂ।
ಸಮುಚಿತಮಾಗಿ ಬರ್ಪ ಸತಿಸಪ್ತಮಿಯಿಂ ಸಮಸಂಸ್ಕೃತೋಕ್ತಿಯಿಂ॥
ವಮಹಪ ಭೇದದಿಂ ವಿರಹಿತಾವ್ಯಯಸಂಸ್ಕೃತ ಲಿಂಗದಿಂ ಪದೋ।
ತ್ತಮಶಿಥಿಲತ್ವದಿಂ ಯತಿವಿಲಂಘನದಿಂದರಿದಲ್ತೆ ಕನ್ನಡಂ॥'

ಇಲ್ಲಿ ಶಿಥಿಲತ್ವ ಅಂದರೆ ಶಿಥಿಲ ದ್ವಿತ್ವ. ಈ ಶಿಥಿಲ ದ್ವಿತ್ವ ಕನ್ನಡ ಭಾಷೆಯ ವೈಶಿಷ್ಟ್ಯಗಳೊಂದು ಅಂತ ಕೇಶೀರಾಜನು ಗುರುತಿಸಿ ಹೇಳಿದ್ದಾನೆ.

ದ್ವಿತ್ವ ಅಂದರೆ 'ಎರಡನ್ನು ಹೊಂದಿರುವುದು'. ಇದನ್ನೇ ವ್ಯಾಕರಣದಲ್ಲಿ ಒತ್ತಕ್ಷರ ಅಥವಾ ಸಂಯುಕ್ತಾಕ್ಷರ ಎನ್ನುತ್ತಾರೆ. ಮಾತ್ರೆಯನ್ನು ಗುರುತಿಸುವಾಗ ಈ ಒತ್ತಕ್ಷರದ ಹಿಂದಿನ ಅಕ್ಷರ 'ಲಘು'ವಾದರೂ 'ಗುರು'ವಾಗಿಯೇ ಗುರುತಿಸುತ್ತಿದ್ದಾರೆ. (ಉದಾ: ಸುಮ್ಮನೆ, ಕತ್ತಲೆ. ಇಲ್ಲಿ 'ಸು' ಹಾಗೂ 'ಕ' ಲಘುವಾದರೂ, ಗುರುವಾಗಿಯೇ ಪರಿವರ್ತಿತವಾಗುತ್ತದೆ. ಆದರೆ ಕೆಲವೊಮ್ಮೆ ಶಬ್ದದಲ್ಲಿ ಒತ್ತಕ್ಷರ ಬಂದರೂ ಅದರ ಹಿಂದಿನ ಅಕ್ಷರ 'ಲಘುವಾಗಿಯೇ' ಇರುತ್ತದೆ. ಅಂದರೆ ಒತ್ತಕ್ಕರವನ್ನು ಒತ್ತಿ ಹೇಳದೇ ತೇಲಿಸಿ ಹೇಳಬೇಕು.

ಕೇಶೀರಾಜನು ನಾಲ್ಕು ರೀತಿಯ ಶಿಥಿಲತ್ವವನ್ನು ಹೇಳಿದ್ದಾನೆ.

ನಾಮ ಶಿಥಿಲದ್ವಿತ್ವ:

ಪಿಂತಮರ್ದಿರೆ ಱಳಕುಳರೇ।
ಫಾಂತಂ ಹ್ರಸ್ವಾದಿಲಿಂಗಮಂತಾಗಳ್ ಮೇ॥
ಣಂತೆ ಚತುರ್ಥಿಯ ಗೆಯೆ ಮೇ।
ಣ್ಮುಂತಮರ್ದಿರೆ ಪಿರಿದುಮೊದವುಗುಂ ಶಿಥಿಲಂ॥

(ಪದಚ್ಛೇದ: ಪಿಂತೆ ಅಮರ್ದು ಇರೆ ಱಳ, ಕುಳ, ರೇಫಾಂತ ಹ್ರಸ್ವಾದಿಲಿಂಗಂ ಅಂತು ಅವು ಗಳ್ ಅಂತೆ ಚತುರ್ಥಿಯ ಗೆಯೆ ಮೇಣ್ ಮುಂತೆ ಅಮರ್ದು ಇರೆ ಪಿರಿದುಂ ಒದವುಗುಂ ಶಿಥಿಲತ್ವಂ)

(ಭಾವಾರ್ಥ: ನಾಮಪ್ರಕೃತಿಯ (ಲಿಂಗದ) ಆದಿಯ ಅಕ್ಷರವು ಲಘುವಾಗಿದ್ದು ಱಳ ಕುಳ ರೇಫೆಗಳು ಅದರ ಅಂತ್ಯದಲ್ಲಿದ್ದು ಅವುಗಳಿಗೆ ಬಹುವಚನದ 'ಗಳ್' ಪ್ರತ್ಯಯ ಅಥವಾ ಚತುರ್ಥಿಯ 'ಗೆ' ಪ್ರತ್ಯಯ ಪರವಾದರೆ ಬಹುಳವಾಗಿ ಶಿಥಿಲ ದ್ವಿತ್ವವಾಗುತ್ತದೆ)

ಎಸಱ+ಗಳ್=ಎಸಱ್ಗಳ್
ಎಸಱ್+ಗೆ=ಎಸಱ್ಗೆ
ಅಮಳ್+ಗಳ್=ಅಮಳ್ಗಳ್
ಅಮಳ್+ಗೆ=ಅಮಳ್ಗೆ
ಬೆಮರ್+ಗಳ್=ಬೆಮರ್ಗಳ್
ಬೆಮರ್+ಗೆ=ಬೆಮರ್ಗೆ

ಸಮಾಸ ಶಿಥಿಲದ್ವಿತ್ವ:

ಗದವಜಕಾರಮವಿದಿರಿರೆ।
ಪದಮಧ್ಯಂ ವಿಷಯಮಾಗನೇಕಾಕ್ಷರದೊಳ್॥
ಮದಿಯೆ ಲಘೂಪಧೆ ಕೆಲಕೆಲ।
ವೊದವಿರ್ಕುಂ ರಾಂತಳಾಂತಮವು ಶಿಥಿಲತೆಯಂ॥

(ಪದಚ್ಛೇದ: ಗದವಜಕಾರಂ ಅವು ಇದಿರ್ ಇರೆ ಪದಮಧ್ಯಂ ವಿಷಯಂ ಆಗೆ ಅನೇಕಾಕ್ಷರದೊಳ್ ಮದಿಯೆ ಲಘೂಪಧೆ ಕೆಲಕೆಲವು ಒದವಿ ಇರ್ಕುಂ ರಾಂತಳಾಂತ ಅವು ಶಿಥಿಲತೆಯಂ)

(ಭಾವಾರ್ಥ: ಅನೇಕಾಕ್ಷರಗಳಿದ ಕೂಡಿದ ಆದಿಹ್ರಸ್ವ, ಲಘೂಪಧೆಯಾದ ರಾಂತ, ಳಾಂತ ಪದಗಳು ಪೂರ್ವಪದಗಳಾಗಿದ್ದು, ಅವುಗಳ ಮುಂದೆ ಗ, ದ, ವ, ಜ ಕಾರಾದಿಯಾದ ಪದಗಳು ಪರವಾಗಲು ಶಿಥಿಲದ್ವಿತ್ವ ಉಂಟಾಗುತ್ತವೆ.

ರಾಂತಕ್ಕೆ:
ಕುಳಿರ್+ಗಾಳಿ=ಕುಳಿರ್ಗಾಳಿ.
ಬೆಮರ್+ಪನಿ=ಬೆಮರ್ವನಿ.

ಳಾಂತಕ್ಕೆ:
ಮುಗುಳ್+ಕಾಯಿ=ಮುಗುಳ್ಗಾಯಿ.
ಎಸಳ್+ಪಸೆ=ಎಸಳ್ವಸೆ

ಕ್ರೀಯಾ ಶಿಥಿಲದ್ವಿತ್ವ:

ಮಗೆ ದದಪವಕಾರಂ ವಿಧಿ।
ಯ ಗೆಕಾರಂ ವರ್ತಮಾನ ಕಾಲದ ಗುಂ ಧಾ॥
ತುಗೆ ಱಟಕುಳರೇಫಾಂತ।
ಕ್ಕೊಗೆಗುಂ ಶಿಥಿಲತ್ವಮಗುರುಪೂರ್ವ ಸ್ಥಿತಿಯಿಂ॥

(ಪದಚ್ಛೇದ: ಮಗೆ ದದಪವಕಾರಂ ವಿಧಿಯ ಗೆ ಕಾರಂ ವರ್ತಮಾನ ಕಾಲದ ಗುಂ ಧಾತುವಿಗೆ ಱಟ ಕುಳ ರೇಫಾಂತಕ್ಕೆ ಒಗೆಗುಂ ಶಿಥಿಲತ್ವಂ ಅಗುರು (ಲಘು) ಪೂರ್ವಸ್ಥಿತಿಯಿಂ.)

(ಭಾವಾರ್ಥ: ಆದಿಹ್ರಸ್ವ, ಱಟ ಕುಳ ರೇಫಾಂತ ಧಾತುಗಳ ಮುಂದೆ ಭೂತಕಾಲದ 'ದ', ವರ್ತಮಾನಕಾಲದ 'ದಪ' ಭವಿಷ್ಯತ್ಕಾಲದ 'ವ' ವಿಧ್ಯರ್ಥದ 'ಗೆ' ವರ್ತಮಾನಕಾಲದ 'ಗುಂ' ಪ್ರತ್ಯಯಗಳು ಪರವಾಗಲು ಶಿಥಿಲದ್ವಿತ್ವ ಉಂಟಾಗುತ್ತದೆ.

ಱಟಾಂತಕ್ಕೆ:
ತೆಗಱ್+ದ+ಅಂ= ತೆಗಱ್ದಂ.
ತೆಗಱ್+ದಪ+ಅಂ= ತೆಗಱ್ದಪಂ.
ತೆಗಱ್+ವ+ಅಂ= ತೆಗಱ್ವಂ.
ತೆಗಱ್+ಗೆ= ತೆಗಱ್ಗೆ.
ತೆಗಱ್+ಗುಂ= ತೆಗಱ್ಗುಂ.

ಕುಳಾಂತಕ್ಕೆ:
ಮಗುಳ್+ದ+ಅಂ=ಮಗುಳ್ದಂ.
ಮಗುಳ್+ದಪ+ಅಂ= ಮಗುಳ್ದಪಂ.
ಮಗುಳ್+ವ+ಅಂ= ಮಗುಳ್ವಂ.
ಮಗುಳ್+ಗೆ= ಮಗುಳ್ಗೆ.
ಮಗುಳ್+ಗುಂ= ಮಗುಳ್ಗುಂ.

ರೇಫಾಂತಕ್ಕೆ:
ತೊಡರ್+ದ+ಅಂ= ತೊಡರ್ದಂ.
ತೊಡರ್+ದಪ+ಅಂ= ತೊಡರ್ದಪಂ.
ತೊಡರ್+ವ+ಅಂ= ತೊಡರ್ವಂ.
ತೊಡರ್+ಗೆ= ತೊಡರ್ಗೆ.
ತೊಡರ್+ಗುಂ=ತೊಡರ್ಗುಂ.

ಸಹಜ ಶಿಥಿಲ ದ್ವಿತ್ವ:

ಬರ್ದಿಲಂ ಸಗ್ಗಕ್ಕೆ ಪೆಸರ್।
ಗರ್ದುಗೆಸೆವಮರ್ದಮರ್ದುವಳ್ಳಿ ಕಂಪಲರ್ದುದೆನ॥
ಲ್ಕೆರ್ದೆವಾಯದಿರ್ಮುತ್ತೆ ಪೊದ।
ಳ್ದೆರ್ದೆಯೆಂಬಿವು ಸಹಜ ಶಿಥಿಲವೃತ್ತಿಯನಾಳ್ಗುಂ॥

(ಪದಚ್ಛೇದ: ಬರ್ದಿಲಂ ಸಗ್ಗಕ್ಕೆ ಪೆಸರ್, ಗರ್ದುಗು, ಎಸೆವ ಅಮರ್ದ, ಅಮರ್ದುವಳ್ಳಿ, ಕಂಪಲರ್ದುದು ಎನಲ್ಕೆ, ಎರ್ದೆವಾಯ್, ಅದಿರ್ಮುತ್ತೆ, ಪೊದಟ್ದು, ಎರ್ದೆ ಎಂಬವು ಸಹಜ ಶಿಥಿಲವ್ರತ್ತಿಯಂ ಆಳ್ಗು.)

(ಭಾವಾರ್ಥ: ಬರ್ದಿಲ(ಸ್ವರ್ಗದ ಹೆಸರು), ಗರ್ದುಗು, (ಒಪ್ಪುವ) ಅಮರ್ದು, ಅಮರ್ದುವಳ್ಳಿ, ಕಂಪಲರ್ದುದು, ಎರ್ದೆವಾಯ್, ಅದಿರ್ಮುತ್ತೆ, (ಪ್ರಸಿದ್ಧಿಪಡೆದ) ಎರ್ದೆ ಎಂಬ ಎಂಟು ಶಬ್ದಗಳು ಸಹಜವಾಗಿಯೇ ಶಿಥಿಲವ್ರತ್ತಿಯನ್ನು ತಾಳುತ್ತವೆ.

ಶಿಥಿಲ ದ್ವಿತ್ವ ಎಂದರೆ ಒಂದು ಒತ್ತಕ್ಷರವನ್ನು ಒತ್ತಿ ಉಚ್ಚರಿಸದೆ, ತೇಲಿಸಿ (ಸಡಿಲವಾಗಿ) ಉಚ್ಚರಿಸುವುದು. ಛಂದಸ್ಸಿನಲ್ಲಿ, ಇದು ಒತ್ತಕ್ಷರದ ಹಿಂದಿನ ಅಕ್ಷರವನ್ನು ಗುರುವಾಗಿಸದೆ ಲಘುವಾಗಿಯೇ ಉಳಿಯುವಂತೆ ಮಾಡುತ್ತದೆ.

ವಿವರಣೆ: ಸಾಮಾನ್ಯವಾಗಿ, ಛಂದಸ್ಸಿನಲ್ಲಿ ಒತ್ತಕ್ಷರದ ಹಿಂದಿನ ಅಕ್ಷರವು ಗುರು (ದೀರ್ಘ) ಅಕ್ಷರವಾಗಿರುತ್ತದೆ. ಆದರೆ, ಶಿಥಿಲ ದ್ವಿತ್ವದಲ್ಲಿ, ಒತ್ತಕ್ಷರವು ಸಡಿಲವಾಗಿರುವುದರಿಂದ, ಅದಕ್ಕೆ ಹಿಂದಿನ ಅಕ್ಷರವು ಗುರು ಆಗುವುದಿಲ್ಲ, ಲಘುವಾಗಿಯೇ ಉಳಿಯುತ್ತದೆ

ಉದಾಹರಣೆ: "ಕೆಸರ್" ಎಂಬ ಪದದಲ್ಲಿ 'ರ್' ಅಕ್ಷರ ಶಬ್ದಾಂತ್ಯದಲ್ಲಿದೆ. ಆದರೆ, ಇದರ ಮುಂದೆ 'ಗಳ್' ಸೇರಿದಾಗ, 'ಕೆಸರ್ಗಳ್' ಆಗುತ್ತದೆ. ಶಬ್ದಾಂತ್ಯದಲ್ಲಿರುವ 'ರ್' ಒತ್ತಕ್ಷರವು (ರೇಫ) ಶಿಥಿಲವಾಗಿರುವುದರಿಂದ, 'ಸ' ಅಕ್ಷರವು ಗುರು ಆಗುವುದಿಲ್ಲ.
ಮಗುಳ್ದಂ ಎಂಬಲ್ಲಿ 'ಳ್ದಂ' ಒತ್ತಕ್ಷರ ದ ಹಿಂದಿನ 'ಗು' ಅಕ್ಷರ ಗುರುವಾಗದೇ ಲಘುವಾಗಿಯೇ ಇರುತ್ತದೆ.

ಸಾರಾಂಶ: ಶಿಥಿಲ ದ್ವಿತ್ವವು ಒತ್ತಕ್ಷರಗಳ ಸಡಿಲವಾದ ಉಚ್ಚಾರಣೆಯನ್ನು ಸೂಚಿಸುತ್ತದೆ. ಸಾಹಿತ್ಯ ಕೃತಿಗಳನ್ನು ಓದುವಾಗ, ಉಚ್ಚಾರದ ಕಾರಣಕ್ಕಾಗಿ, ಈ ಶಿಥಿಲ ದ್ವಿತ್ವವು ಸಹಜವಾಗಿಯೇ ಓದಿಸಿಕೊಂಡು ಹೋಗುತ್ತದೆ.

***

ಸಫಲವಾಗದ ಕೋದಂಡನ ರಜ

– ಗೋಪಿನಾಥ್

ನಮ್ಮ ಕೋದಂಡ ಯಾರಿಗೆ ತಾನೇ ಗೊತ್ತಿಲ್ಲ, ಅವನು ಒಂದು ತರಹ ಲ್ಯಾಂಡ್ ಮಾರ್ಕ್. ಜನ ಕೋದಂಡನ ಹೆಸರು ಹೇಳಿದರೆ ಸಾಕು, ಗುರುತು ಹಿಡಿದುಬಿಡುತ್ತಾರೆ. ಹಾಗಂತ ತುಂಬ ಹೆಸರುವಾಸಿ ಎಂದುಕೊಳ್ಳಬೇಡಿ.. ಆದರೂ ಒಂಥರಾ ಹೆಸರುವಾಸಿಯೇ, ಹೇಗೆ ಗೊತ್ತೆ? ಅವನಷ್ಟು ಒಳ್ಳೆಯ ಗಂಡ ಬೇರೊಬ್ಬರಿಲ್ಲ.

ಹೆಂಡತಿಯನ್ನು ಮೆಚ್ಚಿಸುವುದಕ್ಕೆ ಏನೆಲ್ಲ ಮಾಡುತ್ತಾನೆ ಗೊತ್ತಾ? ಗೊತ್ತಿಲ್ಲದಿದ್ದರೆ ತಿಳಿದುಕೊಳ್ಳಿ. ವಿಷಯ ತಿಳಿದುಕೊಂಡರೆ ನಿಮಗೂ ಸಲಹೆ ಎಂದಾದೀತು. ಮುಂದೊಂದು ದಿನ ಹೆಂಡತಿಯನ್ನು ಒಲಿಸಿಕೊಳ್ಳೋಕ್ಕೆ ಪ್ರಯೋಜನವಾಗುತ್ತೆ. ಅಂತಹದೇನಪ್ಪ ಎಂದು ತಿಳಿಯಲು ಆತುರ ಬೇಡ, ಹೇಳತ್ತೇನೆ...

ಒಂದು ಸಲ ಪ್ರೀತಿ ಹೆಚ್ಚಾಗಿ ಹೆಂಡತಿ ಏಳುವ ಮುಂಚೆಯೇ ಕಾಫಿ ಮಾಡಿ ಅವಳಿಗೆ ಕೊಟ್ಟರೆ ಎನ್ನುವ ಆಲೋಚನೆ ಬಂದು ಫ್ರಿಡ್ಜ್‌ನಿಂದ ಹಾಲು ಕಾಯಿಸಲು ಇಟ್ಟು, ಹಾಲು ಉಕ್ಕುವುದನ್ನೇ ಕಾಯುತ್ತಿದ್ದ. ಎಲ್ಲಿ ಕಾಯುತ್ತೆ, ಗಡಿಬಿಡೀಲಿ ದೋಸೆಹಿಟ್ಟು ಸ್ಟೋವ್ ಮೇಲಿಟ್ಟು ಕಾಯಿ ದ. ಕಾಯುವ ಬದಲು ಪಾತ್ರೆ ಕರಕಲಾಯಿತು. ಮೆಚ್ಚಿಸುವಲ್ಲಿ ಇಂತಹ ಎಡವಟ್ಟು ಅದೆಷ್ಟು ಮಾಡಿದ್ದಾನೋ ಕೋದಂಡ!

ಕೋದಂಡ ಆಫೀಸ್ ಕೆಲಸ ಮಾಡುವುದರಲ್ಲಿ ಬುದ್ಧಿವಂತನಾದರೂ, .ಹೆಂಡತಿಯ ಕುಡಿನೋಟಕ್ಕೆ ಹಂಬಲಿಸುವ ವ್ಯಕ್ತಿ. ಸದಾ ಹೆಂಡತಿ ತನ್ನತ್ತಲೇ ನೋಡುತ್ತಿರಬೇಕು, ಮೋಹಕ ನಗೆ ಬೀರಬೇಕು, ತುಟಿ ಕಚ್ಚಿಕೊಂಡು ಕಣ್ ಸನ್ನೆ ಮಾಡಬೇಕು ಎನಿಸಿ ಮನೆಯಲ್ಲಿ ಇದ್ದಷ್ಟು ಹೊತ್ತೂ ಹೆಂಡತಿ ಸತ್ಯಭಾಮೆಯ ಹಿಂದೆ ಮುಂದೆ ಓಡಾಡುತ್ತಿರುತ್ತಾನೆ. ಅದಕ್ಕಾಗಿ ಏನುಬೇಕಾದರೂ ಮಾಡುತ್ತಾನೆ.

"ಏನೂಂದ್ರೆ.. ಇವತ್ತು ರಜಾನ" ಎಂದು ಅವಳು ಕೇಳಿಬಿಟ್ಟರೆ ಮುಗೀತು, ಆಫೀಸಿಗೆ ಹಾಲಿಡೇ ಇಲ್ಲದಿದ್ದರೂ ರಜ ಹಾಕಿಬಿಟ್ಟು, "ಏನಾಗಬೇಕು ಚಿನ್ನ, ನಿನ್ನ ಇಷ್ಟದಂತೆ ರಜ ಹಾಕಿದ್ದೇನೆ. ಒಮ್ಮೆ ನನ್ನ ನೋಡಿ ನಗಬಾರದೆ?" ಗೋಗರೆಯುತ್ತಾನೆ.

"ಸುಮ್ಮಸುಮ್ಮನೆ ರಜ ಹಾಕೋದು ನೋಡು.., ನೀವಿನ್ನೂ ಸಣ್ಣ ಹುಡುಗರೇ ಹೆಂಡತಿ ಸೆರಗು ಹಿಡಕೊಂಡು ಹಿಂದೆ ಸುತ್ತಕ್ಕೆ" ಎನ್ನುತ್ತಾಳೆ ರಸಿಕಭಾಮೆ ಮೋಹಕವಾಗಿ.

ಆ ಮಾತಿನಿಂದ ದಂಡನಿಗೆ ಕಿಕ್ ಏರಿದ ಹಾಗಾಯಿತು. ಇವನು "ಭಾಮೆ.. ಭಾಮೆ.. ಸತ್ಯಭಾಮೆ.." ಅಂತ ಅಣ್ಣಾವ್ರ ಹಾಡು ಜ್ಞಾಪಿಸಿಕೊಂಡು ಅವರದೇ ಹಾವಭಾವದಲ್ಲಿ ಹೆಜ್ಜೆ ಹಾಕಿ ಹೆಂಡತಿಯನ್ನು ಬರಸೆಳೆಯಲು ಹಾತೊರೆದು.. ಮುಂದಡಿಯಿಡುತ್ತಾನೆ.

ಹೆಂಡತಿ ಪ್ರಸನ್ನಳಾಗಿ, "ದಂಡ.. ದಂಡ.. ಓ ಗಂಡ... ನನ್ನ ನಲ್ಲ, ಬೆಳಿಗ್ಗೆ ಹತ್ತು ಗಂಟೆಯಾಯಿತು, ತಿಂಡಿ ಯೋಚನೆ ಬೇಡವೆ. ಇಡ್ಲಿ ಹಿಟ್ಟಿದೆ, ಮಸಾಲೆ ಇಡ್ಲಿ ಮಾಡಿದರೆ ಚೆನ್ನ, ಸ್ವಲ್ಪ ಹಸಿಮೆಣಸಿನಕಾಯಿ, ಕೊತ್ತಂಬರಿ ಸೊಪ್ಪು ಹೆಚ್ಚಿಡಿ, ಹಸಿಕೊಬ್ಬರಿ ಸಣ್ಣ ಚೂರು ಮಾಡಿಕೊಡಿ, ಕೊನೆಯದಾಗಿ ಮೆಣಸು ಮತ್ತು ನೆನಸಿದ ಕಡಲೆಬೇಳೆಯಿದೆ... ಎಲ್ಲವನ್ನೂ ಇಡ್ಲಿ ಹಿಟ್ಟಿಗೆ ಹಾಕಿ ಕಲಸಿಡಿ. ಮತ್ತೆ ಚಟ್ನಿ ಬೇಕಲ್ಲವೇ? ಬೇಕಾದ ಕೊಬ್ಬರಿ, ಹಸಿಮೆಣಸಿನಕಾಯಿ, ಕೊತ್ತಂಬರಿ, ಸ್ವಲ್ಪ ಹುಣಿಸೆಹಣ್ಣು, ಉಪ್ಪು ರುಚಿಗೆ ತಕ್ಕಷ್ಟು.. ಹುರಿಗಡಲೆ ಎಲ್ಲ ಹಾಕಿ ತಿರುವಿದರೆ ಚಟ್ನಿಯಾಗುತ್ತೆ, ನನಗಾಗಿ ಇಷ್ಟು ಮಾಡಿ ಚಿನ್ನ" ಎಂದು ಕುಡಿನೋಟ ಬೀರುತ್ತಾಳೆ. "ನಾನು ಕುಕ್ಕರಲ್ಲಿ ಇಡ್ಲಿಗೆ ಇಡುತ್ತೇನೆ ನಿಮಗಾಗಿ.., ನೀವಿಲ್ಲದಿದ್ದರೆ ನನಗೆ ಅಡಿಗೆ ಪೂರೈಸುವುದಕ್ಕೇ ಆಗಲ್ಲ, ಅದೆಷ್ಟು ಪ್ರೀತಿನಪ್ಪ ನಿಮಗೆ ನನ್ನ ಕಂಡರೆ" ಎನ್ನುತ್ತಾಳೆ, ಕಣ್ಣಗಲಿಸಿ ಪ್ರೀತಿಯಿಂದ.

"ಚಿನ್ನ, ಈ ಮಾತು ಕೇಳಲಲ್ಲವೆ ನಾನು ರಜ ಹಾಕಿದ್ದು, ಸಾರ್ಥಕವಾಯಿತು." ಎಂದು ಸನಿಹ ಹೋಗುತ್ತಾನೆ.

"ಸ್ವಲ್ಪ ತಾಳಿ, ಇಡ್ಲಿ ತಿಂದ ಮೇಲೆ ಮುಂದುವರಿಸಿ" ಎನ್ನುತ್ತಾಳೆ.

ಇಡ್ಲಿ ತಿಂದು ಖುಷಿ ಹೆಚ್ಚಾಗಿ.. ಒಮ್ಮೆಯಾದರೂ ಹೆಂಡತಿಯನ್ನು ಅಪ್ಪಿಕೊಳ್ಳಬೇಕು, ಇಲ್ಲದಿದ್ದರೆ ರಜ ಹಾಕಿ ಏನು ಪ್ರಯೋಜನ ಎಂದುಕೊಂಡು ಮುಂದಡಿಯಿಡುತ್ತಾನೆ. ಇವನ ಚಲನೆ ಅರಿತ ಭಾಮೆ ಹಿಂದೆ ಸರಿದು ಬಿಡುತ್ತಾಳೆ. ಕೋ...ದಂಡ ನುಗ್ಗಿದ್ದಕ್ಕೆ ತಲೆ ಅಡಿಗೆ ಕಟ್ಟೆಗೆ ಬಡಿದು ಕೆಳಗೆ ಬೀಳುತ್ತಾನೆ. ತಲೆ ಬೋರು ಬಂದಿರುತ್ತೆ. ಕೆಳಗಿದ್ದ ಕಡಗೋಲು ಮೇಲೆ ಬಿದ್ದು ಬೆನ್ನು ಮೂಳೆಗೆ ಬಲವಾದ ಪೆಟ್ಟು ಬಿದ್ದಿದೆ. ದಂಡ ಕುಯ್ ಗುಟ್ಟಿದ..

ಹೆಂಡತಿ ಎಷ್ಟಾದರೂ ಹೆಂಡತಿಯಲ್ಲವೆ, ದಂಡನ್ನ ಹಿಡಿದೆತ್ತಿ ಮೆಲ್ಲಗೆ ನಡೆಸಿ ಒಡು ಹೋಗಿ ಮಂಚದ ಮೇಲೆ ಮಲಗಿಸುತ್ತಾಳೆ. "ತುಂಬ ನೋವಾಗುತ್ತಿದೆಯ ನಾಥ'' ಎಂದು ತಲೆ ಸವರಿದಾಗ...

"ಅಬ್ಬ ಕೊನೆಗೂ ನನ್ನ ಆಸೆ ಈಡೇರಿತು ಚಿನ್ನ, ನೀನು ಹಾಗೆ ಪ್ರೀತಿಯಿಂದ ತಲೆ ನೇವರಿಸುತ್ತಿದ್ದರೆ, ನೀ ಪಕ್ಕದಲ್ಲಿದ್ದರೆ ಈ ನೋವೆಲ್ಲ ಕೇವಲವೆನಿಸುತ್ತೆ ಚಿನ್ನ" ಎಂದು ಕಷ್ಟಪಟ್ಟು ಒಮ್ಮೆ ಅಪ್ಪಿಕೊಂಡ.

"ಇದೆಲ್ಲ ಈಗೇಕೆ, ಮತ್ತಷ್ಟು ಸೊಂಟ ನೋವಾಗುತ್ತೆ ನೋಡಿ" ಎಂದು ಭಾಮೆ ಹೇಳಿದಾಗ...

"ಆಗಲಿ ಬಿಡು, ಪಕ್ಕದಲ್ಲಿ ನೀ ಇರುತ್ತೀಯಲ್ಲ, ಇನ್ನೆರಡು ದಿನ ರಜ ಹಾಕಿದರಾಯಿತು'' ಎಂದ ರಸಿಕ ಕೋದಂಡ!

***

ಸಾಧಕ ಏಕನಾಥ ರಾನಡೆ

(19-11-1914ರಿಂದ 22-08-1982)

– ಮನೋಹರ ಎಂ.ಗೋಖಲೆ



ಭಾರತದ ದಕ್ಷಿಣದ ತುದಿ ಕನ್ಯಾಕುಮಾರಿಯಲ್ಲಿ ವಿವೇಕಾನಂದ ಶಿಲಾಸ್ಮಾರಕವನ್ನು ಸಂದರ್ಶಿಸದೆ ಇರಲು ಸಾಧ್ಯವೇ. ಆ ಆಕರ್ಷಣೀಯ ಕಟ್ಟಡ, ಒಳಗಿರುವ ವಿವೇಕಾನಂದರ ಭವ್ಯ ಮೂರ್ತಿ, ನೋಟ ಎಲ್ಲವೂ ಅವಿಸ್ಮರಣೀಯ. ಈ ಸ್ಮಾರಕದ ರೂವಾರಿ ಏಕನಾಥ ರಾನಡೆಯವರು. 1925ರಲ್ಲಿ ಆರಂಭವಾದ ರಾಷ್ಟ್ರೀಯ ಸ್ವಯಂ ಸೇವಕ ಸಂಘಕ್ಕೆ ಈಗ ಶತಾಬ್ದಿ ಸಂಭ್ರಮ. ಏಕನಾಥ ರಾನಡೆಯವರು ಈ ಸಂಘಕ್ಕೆ 1926ರಲ್ಲಿ ಸ್ವಯಂಸೇವಕರಾಗಿ ಸೇರಿ ಪ್ರಾಂತ ಪ್ರಚಾರಕರಾಗಿ 1948-49ರ ಗಾಂಧಿ ಹತ್ಯೆ ಮತ್ತು ಸಂಘದ ನಿಷೇಧದ ಅವಧಿಯಲ್ಲಿ ಸರಸಂಘಚಾಲಕ ಹುದ್ದೆಯಲ್ಲಿ ಭೂಗತರಾಗಿದ್ದುಕೊಂಡು ಕಾರ್ಯನಿರ್ವಹಿಸಿದವರು. ಸಂಘಕ್ಕೆ ಒಂದು ಲಿಖಿತ ಸಂವಿಧಾನ ರಚನೆಗೆ ಕಾರಣಕರ್ತರಾಗಿದ್ದವರು. 1963ರಿಂದ 1972ರವರೆಗೆ ವಿವೇಕಾನಂದ ಶಿಲಾ ಸ್ಮಾರಕ ನಿರ್ಮಾಣದ ಜವಾಬ್ದಾರಿಯನ್ನು ವಹಿಸಿಕೊಂಡು, ತಮ್ಮ ಮುಂದಾಳತ್ವ, ಸಾಮರ್ಥ್ಯ, ದಕ್ಷತೆ, ಸೇವಾ ಮನೋಭಾವ ಮತ್ತು ಕರ್ತವ್ಯನಿಷ್ಠೆಗಳನ್ನು ಧಾರೆಯೆರೆದು ವಿವೇಕಾನಂದ ಶಿಲಾಸ್ಮಾರಕವು ಭಾರತದ ಅಸ್ಮಿತೆಯ ರೂಪದಲ್ಲಿ ಮೂಡಿಬರಲು ದುಡಿದರು. ಇವರ ನಿರ್ಭೀತ ವ್ಯಕ್ತಿತ್ವ, ಸೇವಾದಕ್ಷತೆ, ಕಾರ್ಯನಿಷ್ಠೆಗಳು ಆದರ್ಶ ಮತ್ತು ಅನುಕರಣೀಯ. ವಿವೇಕಾನಂದ ಕೇಂದ್ರ ಹೆಸರಿನಲ್ಲಿ ಸೇವಾ ಕೇಂದ್ರವನ್ನು ಆರಂಭಿಸಿದರು. ಇಂದಿಗೂ ದೇಶದಾದ್ಯಂತ ಸುಮಾರು 600ಕ್ಕೂ ಮಿಕ್ಕಿ



ಶಾಖೆಗಳನ್ನು ಹೊಂದಿರುವ ವಿವೇಕಾನಂದ ಕೇಂದ್ರ ಸೇವಾನಿರತವಾಗಿರುವುದನ್ನು ಕಾಣಬಹುದು. ರಾನಡೆಯವರು ಲೇಖಕರಾಗಿಯೂ ಹೆಸರು ಮಾಡಿದ್ದರು. ಕಾವ್ಯ ನಮನದ ಮೂಲಕ ಈ ಮೇರು ಸಂಘಜೀವಿಯ ಪರಿಚಯ ಮಾಡಿಕೊಡುವ ಪ್ರಯತ್ನ ಇಲ್ಲಿದೆ.

ಇಸವಿ ಹತ್ತೊಂಭತ್ತು ನೂರ ಅರವತ್ತ ಮೂರು
ವೀರಸನ್ಯಾಸಿ ವಿವೇಕಾನಂದರು ಇದ್ದಿದ್ದರೆ ನೂರು
ಆಗಬೇಕು ಅವರ ಹೆಸರಿಗೊಂದು ಭವ್ಯ ಸ್ಮಾರಕ
ಹಿಂದೂ ಮಹಾಸಾಗರ ಮಧ್ಯದ ಬಂಡೆ ಇದಕೆ ಸೂಕ್ತ

ಗುರೂಜಿ ಆದೇಶ ಏಕನಾಥನೇ ಕಾರ್ಯಕೆ ಯೋಗ್ಯ
ನಿಷ್ಠಾವಂತ ಚಾಣಾಕ್ಷ ನಿರ್ಭೀತನಲಿದೆ ಸಾಮರ್ಥ್ಯ
ರಾಮಕೃಷ್ಣ ಮಿಷನ್ ಮಾಧವಾನಂದಜೀ ಬೆಂಬಲ
ಸರಕಾರದ ಅನುಮತಿ ಧನಬಲ ಎಲ್ಲವೂ ಗೊಂದಲ

ಸ್ವಾಮೀಜಿ ವ್ಯಕ್ತಿತ್ವ ವಿಚಾರ ಸುದೀರ್ಘ ಅಧ್ಯಯನ
ಜನಸಾಮಾನ್ಯರ ಓದಿಗೆ ಜನಪ್ರಿಯ ಕೃತಿ ಸಂಕಲನ
ಸ್ಮಾರಕ ಸಮಿತಿಯ ಹುದ್ದೆ ಸಂಘಟಕ ಕಾರ್ಯದರ್ಶಿ
ಪತ್ರ ಸಂಪರ್ಕನಿರತ ಸರಕಾರಿ ಅಧಿಕಾರಿಗಳ ಭೇಟಿ

ಕೇಂದ್ರ ಸಂಸ್ಕೃತಿ ಸಚಿವರದೇ ಸ್ಮಾರಕಕೆ ತಕರಾರು
ತೀಕ್ಷ್ಣ ಪತ್ರಿಕಾ ಸಂಪಾದಕೀಯಗಳಿಗೆ ಬಗ್ಗಿದ ಸಚಿವರು
ಮದರಾಸು ಮುಖ್ಯಮಂತ್ರಿಗಳಿಂದಲೂ ಅಡಚಣೆ
ಸೌಹಾರ್ದ ಮಾತುಕತೆಗಳಿಂದ ಎಲ್ಲವೂ ನಿವಾರಣೆ

'ಶ್ರೀಪಾದ ಬಂಡೆ' ತನ್ನದೆಂದು ದೇವಸ್ಥಾನ ಮಂಡಳಿ
'ಝೇವಿಯರ್ ಬಂಡೆ' ಎಂದಿತು ಕ್ರಿಶ್ಚಿಯನ್ ಸಮಿತಿ
ಸೇತುಪತಿ ರಾಜರ ವಿಗ್ರಹ ಅಲ್ಲಿರಬೇಕೆಂಬ ತಗಾದೆ
ಬೇಡಿಕೆಗಳಿಗೆಲ್ಲ ಸೋಲು ಇರಲಿಲ್ಲ ಸೂಕ್ತ ದಾಖಲೆ

ಲಾಲ್ ಬಹದ್ದೂರ್ ಶಾಸ್ತ್ರಿ ತೋರಿದರು ಕಾರ್ಯಪಥ
ನಿಷ್ಠೆ ಬದ್ಧತೆ ಛಲದ ಮಾತಿನಿಂದ ಗೆಲ್ಲಬಲ್ಲ ಏಕನಾಥ
ಧರ್ಮ ಜಾತಿ ಗಡಿ ಭಾಷೆ ಮೀರಿದ ವಿವೇಕಾಭಿಯಾನ
ತತ್ವ ಭಿನ್ನಮತ ಪಕ್ಷ ಸಂಸದರ ಸಹಿ ಪತ್ರ ಅಭಿಯಾನ

ಸಮಸ್ಯೆ ಸವಾಲುಗಳ ಎದುರಿಸಿ ದೊರಕಿತು ವಿಜಯ
ನೆಹರೂ ಅವರಿಂದ ಸ್ಮಾರಕಕೆ ಲಭಿಸಿತು ಶುಭಾಶಯ
ಧನ ಸಂಗ್ರಹಕೆ ಎಲ್ಲ ರಾಜ್ಯಗಳಲಿ ಸಮಿತಿಗಳ ನೇಮಕ
ದೇಶದಾದ್ಯಂತ ದಾನಿಗಳಿಂದ ಧನ ಸಂಗ್ರಹ ಕಾಯಕ

ಅದಮ್ಯ ಉತ್ಸಾಹ ಅನವರತ ಕಾರ್ಯನಿರ್ವಹಣೆ
ಸ್ಮಾರಕದ ವಾಸ್ತು ವಿನ್ಯಾಸ ನಿರ್ಮಾಣದ ಸಾಧನೆ
ವಿವೇಕಾನಂದರ ಮಹಾನ್ ವ್ಯಕ್ತಿತ್ವಕ್ಕೊಂದು ಸ್ಮಾರಕ
ಏಕನಾಥರ ರಾಷ್ಟ್ರಪ್ರೇಮ ತಪಸ್ಸಿಗೊಂದು ದ್ಯೋತಕ

ಶಿಲಾಸ್ಮಾರಕ ನಂತರ ಚಿತ್ತ ವಿವೇಕಾನಂದ ಕೇಂದ್ರ
ಆಧ್ಯಾತ್ಮಿಕ ಸಂಘಟನೆಗೆ ಸೇವಾ ಯುವಕೇಂದ್ರ
ವಿವೇಕವಾಹಿನಿ ಹರಿಯುತಿರಬೇಕು ಅನವರತ
ಏಕನಾಥ ರಾನಡೆ ತೋರಿದ ವಿಶ್ವವಿವೇಕ ಭಾರತ

ಏಕನಾಥ ರಾನಡೆ ಅಸಾಧಾರಣ ದೇಶಭಕ್ತ
ರಾಷ್ಟ್ರೀಯ ಸ್ವಯಂ ಸೇವಕ ಸಂಘದ ಸೇವಕ
ತ್ಯಾಗ ನಿಷ್ಠೆ ಸೇವೆ ಸಚ್ಚಾರಿತ್ರ್ಯವೇ ಮೂಲ ಮಂತ್ರ
ಸಂಘಟನೆ ನಿರ್ವಹಣೆ ಸಾಧನೆಯ ಕಾರ್ಯತಂತ್ರ.

***

ಕೀಳರಿಮೆಯ ಸಂಕೀರ್ಣತೆ ನಿವಾರಣೆ

(Overcoming the Inferiority Complex)

– ಶ್ರೀಧರ ರಾವ್ ಹೆಚ್.

ನಾವು ಸಮಾಜದಲ್ಲಿ ವೈವಿಧ್ಯಮಯ ವ್ಯಕ್ತಿತ್ವದ ಜನಗಳನ್ನು ನೋಡುತ್ತಿರುತ್ತೇವೆ. ವ್ಯಕ್ತಿತ್ವವನ್ನು ವಿಂಗಡಿಸಿದಾಗ, ಪ್ರಜ್ಞಾವಂತರು, ಅನುಭವಕ್ಕೆ ಮುಕ್ತರಾಗಿರುವವರು, ಬಹಿರ್ಮುಖತೆಯನ್ನು ಪ್ರದರ್ಶಿಸುವವರು, ಹಿತ–ಮಿತವಾದ ನಡವಳಿಕೆ ಹೊಂದಿರುವ ಸಮಾನ ಚಿತ್ತರು ಮತ್ತು ನಕಾರಾತ್ಮಕ ಭಾವನಾಗ್ರಸ್ತರು ಎಂದು ಮುಖ್ಯವಾಗಿ ಗುರುತಿಸಬಹುದು. ನಾವೀಗ ಚರ್ಚಿಸ ಹೊರಟಿರುವ ಕೀಳರಿಮೆಯವರನ್ನು ನಕಾರಾತ್ಮಕ ಭಾವನಾಗ್ರಸ್ತರೆಂದು ಪರಿಗಣಿಸಬಹುದು. ಏಕೆಂದರೆ ಖಿನ್ನತೆ, ಆತಂಕ, ಕೋಪ ಪ್ರವೃತ್ತಿಗಳೆಲ್ಲವೂ ನಕಾರಾತ್ಮಕ ಭಾವನೆಗಳೇ ಮತ್ತು ಅವುಗಳು 'ಕೀಳರಿಮೆಯ ಸಂಕೀರ್ಣತೆ' ಹೊಂದಿರುವ ವ್ಯಕ್ತಿಗಳಲ್ಲಿ ಎದ್ದು ಕಾಣುತ್ತವೆ.

ಎಷ್ಟೋ ಬಾರಿ ನಮ್ಮ ವ್ಯಕ್ತಿತ್ವದಲ್ಲಿಯೂ, ಕೀಳರಿಮೆಯ ಸಂಕೀರ್ಣತೆ ಆಗಾಗ ಮೇಲ್ಮೈಗೆ ಬರುವುದನ್ನು ಗಮನಿಸಬಹುದು. ಚಿಕ್ಕವರಿರಲಿ, ದೊಡ್ಡವರಿರಲಿ, ಉದ್ಯೋಗದಲ್ಲಿರಲಿ, ವ್ಯವಹಾರದಲ್ಲಿರಲಿ, ಸಮಾಜದ ಬಹುತೇಕ ಮಜಲುಗಳಲ್ಲಿ ಈ ಕೀಳರಿಮೆಯ ಸಂಕೀರ್ಣತೆ ಹೊಂದಿರುವ ವ್ಯಕ್ತಿಗಳು ಕಾಣಸಿಗುತ್ತಾರೆ. ಯಾವುದೇ ಕೆಲಸವಾಗಲಿ, ಜವಾಬ್ದಾರಿಯಾಗಲಿ ಅವರು ತಮ್ಮ ಸ್ವಯಂ ಆಸಕ್ತಿಯಿಂದ ವಹಿಸಕೊಳ್ಳಲಾರರು. ತಮ್ಮನ್ನು ತಾವು ಆದಷ್ಟು ಸಂರಕ್ಷಿಸಿಕೊಳ್ಳುವಲ್ಲಿ ಆದ್ಯತೆಯನ್ನು ತೋರಿಸುತ್ತಾರೆ. ಜವಾಬ್ದಾರಿಯನ್ನು ನೀಡಿದಾಗಲೂ ಅದನ್ನು ನಿಭಾಯಿಸಲು ಹಿಂಜರಿಕೆಯನ್ನು ತೋರಿಸುತ್ತಾರೆ. ಏನೇ ಕಾರ್ಯವನ್ನು ವಹಿಸಿದರೂ,

"ಈ ಕೆಲಸ ನನಗೆ ತಿಳಿಯದು. ನನ್ನ ಕೈಲಾಗದು. ಹೇಗೆ ಕಾರ್ಯವನ್ನು ನಿರ್ವಹಿಸಬೇಕು? ಗುರಿ ತಲುಪಲು ಸಾದ್ಯವಾಗುತ್ತದೋ ಇಲ್ಲವೋ?" ಎಂಬಿತ್ಯಾದಿ ಪ್ರತಿಕ್ರಿಯೆಗಳನ್ನೇ ನೀಡುತ್ತಿರುತ್ತಾರೆ. ಅದರಲ್ಲಿಯೂ, ಇಂತಹ ವ್ಯಕ್ತಿಗಳು ಗುಂಪಿನಲ್ಲಿದ್ದಾಗ, ಜವಾಬ್ದಾರಿಯನ್ನು ಇತರರೊಂದಿಗೆ ಹಂಚಿಕೊಂಡು ನಿರ್ವಹಿಸುವಾಗ ಕೀಳರಿಮೆಯ ಭಾವನೆಯನ್ನು ಹೆಚ್ಚುಹೆಚ್ಚಾಗಿ ಪ್ರದರ್ಶಿಸುತ್ತಾರೆ. ಅದೇ ವ್ಯಕ್ತಿ ಒಬ್ಬನೇ ಇದ್ದಾಗ ತಾನು ಯಾವುದನ್ನು ಕೈಲಾಗದು ಎಂದಿದ್ದನೋ ಅದೇ ಕೆಲಸವನ್ನು ಅಚ್ಚುಕಟ್ಟಾಗಿ ಮಾಡಬಲ್ಲನು. ತಾನು ಹಾಡಲಾರೆ ಎಂದವನು ಮಧುರವಾಗಿ ಹಾಡಿಯಾನು. ನಾನು ಚಿತ್ರ ಬರೆಯಲಾರೆ ಎಂದವನು ಸುಂದರ ಚಿತ್ರವನ್ನು ಬಿಡಿಸಿಯಾನು, ದಡ್ಡ ಅಂದುಕೊಂಡವನು ಶಾಲೆಯಲ್ಲಿ ಒಳ್ಳೆಯ ಅಂಕವನ್ನು ಗಳಿಸಿಯಾನು. ಆತ ಸ್ಪರ್ಧೆಯನ್ನೂ ಒಡ್ಡಬಲ್ಲನು. ಹಾಗಾದರೆ, ಗುಂಪಿನಲ್ಲಿ ಆ ತೆರನಾದ ಜಟಿಲತೆ ಏಕೆ? ನಕಾರಾತ್ಮಕ ಭಾವವೇಕೆ?

ಈ ನಕಾರಾತ್ಮಕ ಭಾವನೆಗಳೇ, 'ಕೀಳರಿಮೆಯ ಸಂಕೀರ್ಣತೆ' ಯನ್ನು ವ್ಯಕ್ತಿಯಲ್ಲಿ ಹುಟ್ಟು ಹಾಕುವುದು. ಇತರರ ಮುಂದೆ ತನ್ನ ವೈಯಕ್ತಿಕ ಸಾಮರ್ಥ್ಯವನ್ನು ಪ್ರದರ್ಶಿಸಿದರೆ, ತಾನು ಅಪೂರ್ಣ ಎನಿಸಿಕೊಂಡೇನು, ಅವಹೇಳನಕ್ಕೆ ತುತ್ತಾದೇನು ಎಂಬ ಭಾವನೆ ಆತನ ಮನಸ್ಸಿನಲ್ಲಿ ಅವ್ಯಕ್ತ ಭಯದ ಬೀಜವನ್ನು ಬಿತ್ತುತ್ತದೆ. ಆ ಭಯದ ಬೀಜವನ್ನು ಕಿತ್ತು ಹಾಕಲು, ಆ ಸಂಕೀರ್ಣತೆಯಿಂದ ಮುಕ್ತನಾಗಲು ಅವನಿಗೆ ಬೇಕಿರುವುದು ತನ್ನ ಸಾಮರ್ಥ್ಯ, ಜಾಣ್ಮೆ, ತಿಳುವಳಿಕೆಯ ಸ್ವಯಂ ಮೌಲ್ಯಮಾಪನ. ತನ್ನತನದ ಸ್ವೀಕೃತಿ. ಒಮ್ಮೆ ತನ್ನ ಸಾಮರ್ಥ್ಯ, ದೌರ್ಬಲ್ಯಗಳನ್ನೂ ಅಂದಾಜಿಸಿ, ಅವುಗಳನ್ನು ರೂಢಿಸಿಕೊಳ್ಳಲು, ಮೆಟ್ಟಿನಿಲ್ಲಲು ಪ್ರಯತ್ನಿಸಿದಾಗ, ಆತನ ಕಲಿಕೆಯ ಹಂಬಲ ವೃದ್ಧಿಯಾಗುತ್ತದೆ. ಇದು ಸಾಕ್ಷಾತ್ಕಾರವಾದಾಗ ವ್ಯಕ್ತಿ ತನ್ನ ಪಯಣವನ್ನು ಕೀಳರಿಮೆಯಿಂದ ಮೇಲೇರಲು ಆರಂಭಿಸಿರುವನೆಂದರ್ಥ.

ಆದರೆ, ಕೀಳರಿಮೆಯಿಂದ ಮೇಲಕ್ಕೆ ಬರುವಂತಹ ಮಾರ್ಗದರ್ಶನ ಸಿಕ್ಕದೆ, ಪ್ರಯತ್ನವನ್ನು ಮಾಡದೆ, ಎಷ್ಟೋ ಯುವಕ, ಯುವತಿಯರು ತಮ್ಮ ಭವಿಷ್ಯವನ್ನೇ ಅಂಧಕಾರಮಯವನ್ನಾಗಿ ಮಾಡಿಕೊಂಡಿರುವಂತಹ ಹಲವಾರು ಉದಾಹರಣೆಗಳು ನಮ್ಮ ಸಮಾಜದಲ್ಲಿ ಕಂಡುಬರುತ್ತವೆ. ಕೀಳರಿಮೆಯ ಸಂಕೀರ್ಣತೆಯ ಪರಾಕಾಷ್ಠತೆ ಖಿನ್ನತೆ. ನಿರುತ್ಸಾಹ, ಅನಾಸಕ್ತಿ, ಅನಪೇಕ್ಷತೆ,

ಅಭದ್ರತೆ, ಅಸಮಪರ್ಕತೆಗಳೆಲ್ಲವೂ ವ್ಯಕ್ತಿಯಲ್ಲಿ ಪಾದಾರ್ಪಣೆ ಮಾಡುವುದು ಖಿನ್ನತೆಯ ಮನೋಭಾವನೆಯಿಂದಲೇ! ಈ ಭಾವನೆಗಳು ವ್ಯಕ್ತಿಯನ್ನು ತನ್ನ ಸಾಮರ್ಥ್ಯವನ್ನು ಒರೆಗೆ ಹಚ್ಚದಿರುವಂತೆ, ವಿಶಾಲವಾದ ಗುರಿಯನ್ನು ಹೊಂದದಿರುವಂತೆ, ಗುರಿಗಾಗಿ ಪ್ರಯತ್ನವನ್ನು ಪಡದಿರುವಂತೆ, ಗುರಿ ಸಾಧನೆಯ ಫಲವನ್ನು ಬೆಳೆಸಿಕೊಳ್ಳದಿರುವಂತೆ ತಡೆಯನ್ನು ಒಡ್ಡುತ್ತದೆ.

ಕೀಳರಿಮೆಯ ಕೆಲವು ಉದಾಹರಣೆಗಳನ್ನು ಯುಗಾಂತರಗಳಿಂದಲೂ ಕಾಣಬಹುದು. ತ್ರೇತಾಯುಗದಲ್ಲಿ ಹನುಮಂತನಿಗೆ ತನ್ನ ಶಕ್ತಿ, ಸಾಮರ್ಥ್ಯದ ತಿಳುವಳಿಕೆ ಇದ್ದಿರಲಿಲ್ಲ. ಆದರೆ ಆತನ ಬಂಧು-ಭಾಂದವರು, ಕಪಿ ಸೈನ್ಯ ಆತನಲ್ಲಿ ಶಕ್ತಿ ಸಾಮರ್ಥ್ಯವಿದೆ ಎಂದು ಹುರಿದುಂಬಿಸಿ ಸಾಗರೋಲ್ಲಂಘನೆಗೆ ಪ್ರಚೋದಿಸಿ ಆತನ ನಿಜವಾದ ಶಕ್ತಿ ಸಾಮರ್ಥ್ಯವನ್ನು ಬಳಸಿಕೊಳ್ಳುತ್ತಾರೆ. ರಾಮಾಯಣದ ಮಹಾ ಯುದ್ಧದಲ್ಲಿ ತನ್ನ ಕೀಳರಿಮೆಯಿಂದ ಮೇಲೆದ್ದು, ಹನುಮಂತ ಲಂಕಾದಹನ, ಸೀತಾನ್ವೇಷಣೆ, ರಾವಣ ಸಂಹಾರದಲ್ಲಿ ಶ್ರೀ ರಾಮನೊಂದಿಗೆ ಮಹತ್ತರ ಜವಾಬ್ದಾರಿಯನ್ನು ನಿರ್ವಹಿಸುತ್ತಾನೆ.

ಎರಡನೆಯ ಉದಾಹರಣೆ ಎಂದರೆ ಕರ್ಣನು ತಾನು ಸೂತಕುಲದಲ್ಲಿ ಹುಟ್ಟಿದವನು ಎಂಬ ಕೀಳರಿಮೆಯನ್ನು ತನ್ನ ಜೀವನ ಪರ್ಯಂತ ತೋರ್ಪಡಿಸುವುದು. ತನ್ನ ನಿಜ ಹುಟ್ಟಿನ ಬಗ್ಗೆ ತಿಳಿದಾಗ ಅದನ್ನು ಸಂಭ್ರಮಿಸುವ ಅವಕಾಶದಿಂದ ವಂಚಿತನಾಗಿದ್ದುದು ಕರ್ಣನ ದುರ್ವಿಧಿ.

ಪ್ರಸಕ್ತ ಕಾಲಮಾನಕ್ಕೆ ಬಂದರೆ ಭಾರತ ಬ್ರಿಟಿಷರ ಗುಲಾಮಗಿರಿಯಲ್ಲಿ ಇದ್ದಾಗ, ಹಲವು ಹಿಂದೂ ರಾಜರು ಬ್ರಿಟಿಷರಿಗಿಂತ ಸಮರ್ಥ, ಧೈರ್ಯಶಾಲಿಗಳಿದ್ದರೂ, ಅವರ ಸಾಮಾಜಿಕ ನಡವಳಿಕೆಗಳಿಗೆ ಸರಿದೂಗಲಾರದೆ, ತಮ್ಮ ಕೀಳರಿಮೆಯಿಂದ, ಭಯಗ್ರಸ್ತರಾಗಿ ಅವರಿಗೆ ಕಪ್ಪ ಕಾಣಿಕೆಗಳನ್ನು ಸಲ್ಲಿಸುತ್ತಾ ಸಾಮಂತ ರಾಜರಾಗಿದ್ದುದು.

ನನ್ನ ವೈಯಕ್ತಿಕ ವಿಚಾರದಲ್ಲಿ ಒಮ್ಮೆ ಶಾಲಾ ದಿನದಲ್ಲಿ ಅಧ್ಯಾಪಕರ ಬಲವಂತದಿಂದ ಒಂದು ಸಭೆಯಲ್ಲಿ ಮಾತನಾಡಬೇಕೆಂದಾಗ, ಪ್ರೇಕ್ಷಕಸಮೂಹವನ್ನು ಎದುರಿಸಲಾರೆನೆಂಬ ಕೀಳರಿಮೆಯಿಂದ ಸಭಾಂಗಣದಿಂದಲೇ ಓಡಿಹೋಗಿದ್ದೆ. ಈ ಕೀಳರಿಮೆಯ ಅರಿವು ಮನದಲ್ಲಿ ಚುಚ್ಚುತ್ತಲಿದ್ದಾಗ, ಅದನ್ನು ಎದುರಿಸಲೇಬೇಕೆಂಬ ಛಲವುಂಟಾಯಿತು, ಅದಕ್ಕಾಗಿ ಬೇಕಾದ ಮಾತನಾಡುವ ಕಲೆ, ಶಿಕ್ಷಣ ಮತ್ತು ವಿಚಾರಗಳ ಸಂಗ್ರಹವನ್ನು ಮಾಡುವ ಪ್ರಯತ್ನದಲ್ಲಿ ಯಶಸ್ವಿಯಾಗಿ ಮತ್ತೆ ಶಾಲಾ ದಿನಗಳಲ್ಲಿಯೇ ಉತ್ತಮ ವಾಗ್ಮಿ ಎಂಬ ಹೆಸರನ್ನೂ, ಪ್ರಶಸ್ತಿಗಳನ್ನು ಪಡೆದಿದ್ದೆ.

'ಕೀಳರಿಮೆಯ ಸಂಕೀರ್ಣತೆ' ಏಕೆ ಬರುತ್ತದೆ ಎಂಬುದನ್ನು ಕೂಲಂಕಷವಾಗಿ ವಿಶ್ಲೇಷಿಸಿದಾಗ ಮುನ್ನೆಲೆಗೆ ಬರುವುದು ಈ ಕೆಳಗಿನ ಕೆಲವು ವಾಸ್ತವ ಅಂಶಗಳು ಮತ್ತು ಪರಿಸ್ಥಿತಿಗಳು.

- ತಾನು ಎಲ್ಲರಂತಲ್ಲ, ತಿಳುವಳಿಕೆ ಇಲ್ಲ, ಬುದ್ಧಿವಂತನಲ್ಲ ಎಂದು ತನಗೆ ತಾನೇ ಹಾಕಿಕೊಂಡ ಬೇಲಿ, ವಿಧಿಸಿಕೊಂಡ ಮಿತಿ.
- ಹುಟ್ಟಿನಿಂದ ವ್ಯಕ್ತಿಗಳಲ್ಲಿರುವ ದೈಹಿಕ ಅಥವಾ ಮಾನಸಿಕ ನ್ಯೂನತೆಗಳು.
- ತನ್ನ ಪ್ರಯತ್ನಗಳಲ್ಲಿ ಸತತವಾಗಿ ಕಂಡ ಕಷ್ಟ ನಷ್ಟಗಳು, ಸೋಲು.
- ತೀವ್ರ ಸ್ಪರ್ಧೆಯನ್ನು ಎದುರಿಸಲು ಹಿಂಜರಿದು ಇದ್ದುದರಲ್ಲಿಯೇ ತೃಪ್ತನೆಂಬ ಮನಸ್ಥಿತಿ.
- ತಾನು ಎಲ್ಲರನ್ನೂ ಗೆಲ್ಲಲೇಬೇಕು, ಎಲ್ಲರಿಂದಲೂ ಹೊಗಳಿಸಿಕೊಳ್ಳಲೇ ಬೇಕೆಂಬ ಅಹಂಕಾರ.
- ಚಿರಪರಿಚಿತರಿಂದ 'ನಿನ್ನಿಂದ ಏನೂ ಆಗುವುದಿಲ್ಲ ನೀನು ಅಪ್ರಯೋಜಕ' ಎಂಬಿತ್ಯಾದಿ ಧೃತಿಗೆಡಿಸುವ ಮೂದಲಿಕೆ.
- ವ್ಯಕ್ತಿಯಲ್ಲಿರುವ ಸಾಮರ್ಥ್ಯ, ಕೌಶಲ್ಯಗಳನ್ನು ಪರೀಕ್ಷೆಗೆ ಒಡ್ಡಿಕೊಳ್ಳದಿರುವ ಪರಿಸ್ಥಿತಿ.
- ಕೆಳವರ್ಗದಲ್ಲಿ, ಬಡತನದಲ್ಲಿ ಜನಿಸಿದ್ದೇನೆಂಬ ಸಾಮಾಜಿಕ ಕಲ್ಪಿತ ಚಿಂತನೆ.

ಕೀಳರಿಮೆ ಮನಸ್ಥಿತಿಯಿಂದ ಹೊರಬರುವುದು ಹೇಗೆ?

- ಒಂದು ರೀತಿಯಲ್ಲಿ ಕೀಳರಿಮೆ ಎನ್ನುವುದು ಒಂದು ಸ್ವಯಂಕಲ್ಪಿತ ಕಠಿಣ ವ್ಯೂಹ. ಆ ವರ್ತುಲದಿಂದ ಹೊರಬರಲು ತನ್ನ ಕೌಶಲ್ಯಗಳನ್ನು, ಸಾಮರ್ಥ್ಯಗಳನ್ನು ಆಗಾಗ ಪ್ರದರ್ಶಿಸಲೇ ಬೇಕಾಗಿರುವುದು ವ್ಯಕ್ತಿಯ ಆದ್ಯತೆಯಾಗಿರಬೇಕು.
- ಸೋಲು ಅಥವಾ ನಷ್ಟಗಳಿಗೆ ಭಯಭೀತರಾಗಬಾರದು. ಪ್ರಯತ್ನವನ್ನು ಮುಂದುವರಿಸುತ್ತಾ, ಆತ್ಮವಿಶ್ವಾಸವನ್ನು ಹೆಚ್ಚಿಸಿಕೊಂಡಾಗ ವ್ಯಕ್ತಿಗೆ ತನ್ನ ಶಕ್ತಿಸಾಮರ್ಥ್ಯವನ್ನು ಪ್ರದರ್ಶಿಸಲು ಧೈರ್ಯ ಬರುತ್ತದೆ. ತನ್ನ ವ್ಯಕ್ತಿತ್ವದ ಸ್ವಯಂ ಮೌಲ್ಯಮಾಪನವನ್ನು ಮಾಡಿಕೊಂಡು ಸಾಮರ್ಥ್ಯವನ್ನು ಅಂದಾಜಿಸಿದಾಗ, ಮೇಲರಿಮೆಯ ದಾರಿಯಲ್ಲಿ ಕ್ರಮಿಸುವುದು ಸುಲಭ ಸಾಧ್ಯವಾಗುತ್ತದೆ.
- ಕೀಳರಿಮೆಯಿಂದ ಮೇಲೆ ಏರಲು, ವ್ಯಕ್ತಿಗೆ ಬೇಕಿರುವುದು 'ಸ್ವ-ಸಹಾನುಭೂತಿ', 'ಸ್ವಯಂ ಮೌಲ್ಯ'. 'ನಾನು ಇರಬೇಕಾಗಿರುವುದು ನನ್ನಂತೆಯೇ. ಇತರರೊಂದಿಗೆ ಅತಿಯಾಗಿ ನನ್ನನ್ನು ನಾನು ಹೋಲಿಸಿಕೊಳ್ಳಬಾರದು.' ಎಂಬ ಆಂತರಿಕ ಪ್ರಜ್ಞೆ. ಪ್ರತಿ ವ್ಯಕ್ತಿಯು ಎಲ್ಲ ಚಟುವಟಿಕೆಗಳಲ್ಲಿಯೂ ಪ್ರತಿಭಾವಂತನಾಗಲು ಸಾಧ್ಯವಿರುವುದಿಲ್ಲ ತನ್ನ ಸಾಮರ್ಥ್ಯದ ಇತಿಮಿತಿಗಳನ್ನ ಅರಿತು ಅವುಗಳನ್ನು ವೃದ್ಧಿಸಿಕೊಳ್ಳಲು ಬೇಕಾದಂತಹ ಅಂತಃಶಕ್ತಿಯನ್ನು ಬೆಳೆಸಿಕೊಳ್ಳಬೇಕು.
- ಇತರರೊಡನೆ ಸರಳವಾಗಿ, ನೇರವಾಗಿ, ಪ್ರಾಮಾಣಿಕವಾಗಿ, ಸಾಮಾಜಿಕವಾಗಿ ಬೆರೆಯುವುದನ್ನು ಅಭ್ಯಸಿಸಬೇಕು.
- ತನ್ನ ಯಾವುದೇ ಚಟುವಟಿಕೆಯಾದರೂ, ಮೊದಲೇ ಯೋಚಿಸಿ, ವ್ಯವಸ್ಥಿತವಾಗಿ ಯೋಜನೆಗಳನ್ನು ರೂಪಿಸಿಕೊಂಡು ಶಿಸ್ತಿನಿಂದ ಮಾಡಿ ಅದರಿಂದ ಅದು ಹೆಚ್ಚು ಫಲವನ್ನು ಪಡೆಯಬೇಕು.
- ಮುಕ್ತ ಅವಕಾಶ ಸಿಕ್ಕಾಗಲೆಲ್ಲ ನಮ್ಮ ತಿಳುವಳಿಕೆಯನ್ನು, ಜ್ಞಾನವನ್ನು ಹೆಚ್ಚಿಸಿಕೊಳ್ಳುವಂತಹ ಪ್ರಯತ್ನವನ್ನು ಮಾಡುತ್ತಲೇ ಇರಬೇಕು.
- ವ್ಯಕ್ತಿಯು ತನಗೆ ಯಾವ ಕ್ಷೇತ್ರದಲ್ಲಿ ಅಭಿರುಚಿ ಮತ್ತು ಒಲವು ಇರುತ್ತದೆಯೋ ಆ ಕ್ಷೇತ್ರದಲ್ಲಿಯೇ ಮತ್ತಷ್ಟು ಸಾಧನೆ ಮತ್ತು ಕೌಶಲ್ಯ ಅಭಿವೃದ್ಧಿಯನ್ನು ಮಾಡಿಕೊಂಡಾಗ, ಅದರಿಂದ ಶೀಘ್ರ ಹಾಗೂ ಉತ್ತಮ ಫಲ ಪ್ರಾಪ್ತಿಯಾಗುತ್ತದೆ.
- ತನ್ನ ಶಕ್ತಿ ಮತ್ತು ಯುಕ್ತಿಗೆ ಮೀರಿದ ಕೆಲಸವನ್ನು ಸವಾಲಾಗಿ ಸ್ವೀಕರಿಸಿದರೆ, ಅದರಲ್ಲಿ ನಿಷ್ಣಾತರನ್ನು ಸಂಪರ್ಕಿಸಿ ಅವರ ಅನುಭವದ ಪ್ರಯೋಜನವನ್ನು ಪಡೆಯಬೇಕು.
- ಯಾವುದೇ ಕಾರಣಕ್ಕೂ ಮನಸ್ಸು ಆತಂಕ ಮತ್ತು ಖಿನ್ನತೆಯ ಎಡೆಗೆ ವಾಲದೇ ಇರುವಂತೆ ಜಾಗ್ರತೆವಹಿಸಬೇಕು. ಈ ರೀತಿಯ ಮನೋಸ್ಥೈರ್ಯವನ್ನು, ಆತ್ಮವಿಶ್ವಾಸವನ್ನು, ಸಾಧನೆಯ ಗುರಿಯನ್ನು, ಸಾಧಿಸುವ ಛಲವನ್ನು, ಬೆಳೆಸಿಕೊಂಡಾಗ ಕೀಳರಿಮೆಗೆ ನಿಮ್ಮ ವ್ಯಕ್ತಿತ್ವದಲ್ಲಿ ಸ್ಥಾನವೇ ಇರುವುದಿಲ್ಲ. ನಿಮಗೆ ನೀವೇ ಸಮರ್ಥರು, ಗುರಿ ಸಾಧಕರು, ಪ್ರಯತ್ನಶೀಲರು ಎಂಬ ಹೆಗ್ಗಳಿಕೆಗೆ ಲಭಿಸುತ್ತದೆ. ಅದರಿಂದ ನಿಮ್ಮ ಕೀಳರಿಮೆ ನಶಿಸಿ ಮೇಲರಿಮೆಯ ಸವಿಯನ್ನು ಸವಿಯಬಲ್ಲಿರಿ.

ಮಹಾಭಾರತದಲ್ಲಿ ಶ್ರೀಕೃಷ್ಣನು ಅರ್ಜುನನಿಗೆ ಗೀತೋಪದೇಶ ಮಾಡುವಾಗ ಕೀಳರಿಮೆಯ ಕುರಿತಾಗಿಯೂ ಉಪದೇಶ ನೀಡಿದ್ದಾನೆ.

"ಪ್ರತಿಯೊಬ್ಬ ಜೀವಿಯೂ, ದೇವರ ಅಂಶವೇ ಆಗಿರುವಾಗ, ಆತನಲ್ಲಿ ಮೇಲರಿಮೆ, ಕೀಳರಿಮೆ ಇರಬೇಕಾಗಿಲ್ಲ. ಪ್ರತೀ ಜೀವಿಯಲ್ಲಿಯೂ ಆಂತರಿಕ, ಸ್ವಯಂಮೌಲ್ಯ ಇದ್ದೇ ಇರುತ್ತದೆ. ಖಿನ್ನತೆ, ಅಭದ್ರತೆ, ಕೀಳರಿಮೆಯೆಲ್ಲವೂ ಬಾಹ್ಯ ಸಂದರ್ಭಾನುಸಾರ ಯೋಚನೆಗಳೇ ಹೊರತಾಗಿ, ಆಂತರಿಕ ಅಪೂರ್ಣತೆಯಲ್ಲ. ಆಧ್ಯಾತ್ಮಿಕ ಸ್ವಭಾವ, ಆಚರಣೆಯನ್ನು ಅಭ್ಯಸಿಸಲು ಆರಂಭಿಸಿದಾಗ ಕೀಳರಿಮೆಯ ಸಂಕೀರ್ಣತೆಯಿಂದ ಹೊರಬರಬಹುದು. ಅದರ ಮೊದಲ ಹಂತ ದೀನತೆ ಅಥವಾ ನಮ್ರತೆ. ಅದು ಕೀಳರಿಮೆಯಿಂದ ಮೇಲೇರುವಲ್ಲಿ ಮೊದಲ ಮೆಟ್ಟಿಲು. ಈ ಮೆಟ್ಟಲಿನಲ್ಲಿ ನಾವು ನಮ್ಮನ್ನು ಆಂತರಿಕವಾಗಿ ವೀಕ್ಷಿಸಬೇಕು. ಅಂದಾಜಿಸಬೇಕು. ನನ್ನ ಶಕ್ತಿ ಯಾವುದು? ನನ್ನ ಸಾಮರ್ಥ್ಯವೇನು? ನಾನೇನು ಮಾಡಬಲ್ಲೆ? ನನ್ನಿಂದ ಏನಾದೀತು? ಏನಾಗಲಾರದು? ಎಂಬ ಪ್ರಶ್ನೆಗಳನ್ನು ಕೇಳುವುದರ ಜೊತೆಯಲ್ಲಿಯೇ, 'ನಾ ನಿಮಿತ್ತ ಮಾತ್ರ, ನನ್ನಿಂದ ಆ ದಿವ್ಯ


ಚೇತನ ಅಸಾಧ್ಯವನ್ನು ಸಾಧ್ಯಮಾಡೀತು' ಎಂಬ ಧನಾತ್ಮಕ ಕಲ್ಪನೆಯೇ ಕರ್ತೃತ್ವ ಶಕ್ತಿಗೆ ನಾಂದಿಯಾಗುತ್ತದೆ. 'ಕರ್ಮಣ್ಯೇ ವಾ ಅಧಿಕಾರಸ್ತೇ, ಮಾ ಫಲೇಷು ಕದಾಚನ' ನಿನ್ನ ಕರ್ತವ್ಯವನ್ನು ನೀನು ನಿಭಾಯಿಸು, ಅದರಿಂದ ಏನು ಫಲ ಲಭಿಸೀತು ಎಂಬ ಚಿಂತನೆ ನಿನಗೆ ಬೇಡ. ವಾಸ್ತವದಲ್ಲಿದ್ದು ಸಂತೃಪ್ತಿಯನ್ನು ಹೊಂದಬೇಕು."

ಇಂದಿನ ದಿನಗಳಲ್ಲಿ, ಸಮಾಜ ಮತ್ತು ಸಂಸ್ಕೃತಿಗಳ ವಿಶಾಲತೆಯ ಅರಿವಾಗುತ್ತಿದೆ. ಇಡೀ ಪ್ರಪಂಚವೇ ಒಂದು 'ಜಾಗತಿಕ ಗ್ರಾಮದಂತೆ' ಭಾಸವಾಗುತ್ತದೆ. ವಿಭಿನ್ನ ನಾಗರಿಕತೆ, ವಿಶಾಲ ಸಾಮಾಜಿಕತೆ, ಅಪೂರ್ವ ಅವಕಾಶ, ಅಸಾಮಾನ್ಯ ಸ್ಪರ್ಧಾ ಮನೋಭಾವನೆಗಳಿಂದ ವೈಯಕ್ತಿಕ ಕೀಳರಿಮೆ ಹೆಚ್ಚಾಗಿ ಆವರಿಸಿಕೊಳ್ಳುವುದು ಸ್ವಾಭಾವಿಕ. ಸಣ್ಣ ಸಣ್ಣ ವಿಚಾರ, ಆಚರಣೆ, ಸಾಧನೆ, ಗೆಲುವು ಇತ್ಯಾದಿ ಎಲ್ಲವನ್ನೂ ವೈಭವೀಕರಿಸುವ ಮುಕ್ತ ಅವಕಾಶಗಳು ಇರುವುದರಿಂದ ಕೀಳರಿಮೆಯೂ ಸ್ವಾಭಾವಿಕವಾಗಿ ಹೆಚ್ಚಾಗುತ್ತಲಿದೆ. ಅದನ್ನು ನಿಯಂತ್ರಿಸುವುದು ನಿಮ್ಮ ಮಾನಸಿಕ ದೃಢತೆ ಮತ್ತು ಸಮತೋಲನದ ಮೇಲೆ ನಿರ್ಧರಿತವಾಗಿರುತ್ತದೆ.

ಸಾಮಾಜಿಕ ಪರಿಪಕ್ವತೆಗಾಗಿ ಸದಾಕಾಲ ನಿಮ್ಮ ಸಾಮರ್ಥ್ಯದ ಅರಿವು ನಿಮ್ಮೊಳಗೆ ಇರಲಿ. 'ನಾನು ಈ ಮುಕ್ತ ಪರಿಸರದಲ್ಲಿದ್ದೇನೆ ಮುಕ್ತ ಅವಕಾಶಗಳಿವೆ ಅವಕಾಶಗಳನ್ನು ಉಪಯೋಗಿಸಿಕೊಂಡು ಮಹತ್ತರವಾದುದನ್ನು ಸಾಧಿಸುತ್ತೇನೆ' ಎಂಬ ಮನೋಬಲ ಮತ್ತು ಧೀಮಂತ ಶಕ್ತಿ ಸದಾಕಾಲ ರೂಡಿಸಿಕೊಳ್ಳುತ್ತಿದ್ದಲ್ಲಿ ವ್ಯಕ್ತಿಯು ತನ್ನಲ್ಲಿರುವ ಪ್ರತಿಭೆಯ ಸಾಮರ್ಥ್ಯದ ಪೂರ್ಣ ಅಥವಾ ಹೆಚ್ಚಿನ ಉಪಯೋಗವನ್ನು ತನಗೆ, ತನ್ನ ಕುಟುಂಬಕ್ಕೆ ಹಾಗೂ ತನ್ನ ಸಮಾಜಕ್ಕೆ ನೀಡಬಲ್ಲನು. ಹಾಗಾದಾಗ ಮಾತ್ರ ವ್ಯಕ್ತಿಯು ಕೀಳರಿಮೆಯ ಸಂಕೀರ್ಣತೆಯನ್ನು ಗೆದ್ದು ಸಮರ್ಥನಾಗಿದ್ದಾನೆ, ಸಂತುಷ್ಟನಾಗಿದ್ದಾನೆ ಎನ್ನಬಹುದು.

***

ಪುಸ್ತಕ ಪರಿಚಯ



ಪ್ರಕಾಶಕರು: ಬೆನಕ ಬುಕ್ಸ್ ಬ್ಯಾಂಕ್
ಪುಟಗಳು: ೧೪೨, ಬೆಲೆ: ರೂ. ೧೮೦/-
ಅಧಿಕೃತ ಮಾರಾಟಗಾರರು:
ಗಹನಾ ಬುಕ್ಸ್ ಲಿಂಕ್ಸ್ (೯೦೦೮೪೩೫೩೬)

"ಹೆಗಲು"

(ಲೇಖಕರು; ಭಾರತಿ ಹೆಗಡೆ)

– ಬೆಂ.ಶ್ರೀ. ರವೀಂದ್ರ

ಬದುಕು ಹಲವು ಸಾಧನೆಗಳಿಗೆ ಅವಕಾಶ ನೀಡುವ ರಂಗಮಂಚ.

ಯಾವ ಸಾಧನೆಯನ್ನೂ ಒಬ್ಬ ವ್ಯಕ್ತಿ ಮಾಡಲಾರ. ಆತನಿಗೆ ಹತ್ತಾರು ಜನರ ಸಹಕಾರ ಇದ್ದೇ ಇರುತ್ತದೆ. ಅದು ಅವನ ಅರಿವಿಗೆ ಬರಬಹುದು ಅಥವಾ ಬಾರದಿರಬಹುದು. ಈ ಸಾಧನೆಗಳು ವ್ಯಷ್ಟಿಯಾಗದೆ ಸಮಷ್ಟಿಯಾದಾಗ ಮಾತ್ರ ಸಾರ್ಥಕ ವಾಗುತ್ತದೆ. ಸಾಧಿಸಿ ಮುಂದೆ ನಡೆದವನು ತನ್ನನ್ನು ಆ ಎತ್ತರಕ್ಕೆ ಕರೆದೊಯ್ದವರನ್ನು ಪ್ರಜ್ಞಾಪೂರ್ವಕವಾಗಿ ಕೃತಜ್ಞತೆಯಿಂದ ನೆನಪಿಸಿಕೊಂಡಾಗ ಆ ಸಾಧನೆಗೂ, ವ್ಯಕ್ತಿಗೂ ಗೌರವ ಬರುತ್ತದೆ. ಅಂತಹ ಸಾರ್ಥಕತೆ "ಹೆಗಲು" ಪುಸ್ತಕದಲ್ಲಿ ಕಾಣುತ್ತದೆ.

"ಹೆಗಲು", ಒಂದು ಅಪರೂಪದ ಜೀವನಗಾಥೆ. ಈ ಕಥನದಲ್ಲಿ "ಅಪ್ಪನ ಹೆಗಲು ಅಮ್ಮನ ಮಡಿಲು" ಕೂಡ ಆಗುವ ಚಮತ್ಕಾರದ ಚಿತ್ರಣವಿದೆ. ಒಬ್ಬ ಸರಳ, ನಿಸ್ಪೃಹ, ಪಾರದರ್ಶಕ ವ್ಯಕ್ತಿಯ ಆಂತರ್ಯದಲ್ಲಿ 'ತಾನೇ ಕೇಂದ್ರವಾಗಿ ಉಳ್ಳ ವ್ಯಕ್ತಿತ್ವ'ದ ಜೊತೆಯಲ್ಲಿ ಅಷ್ಟೇ ಶಕ್ತಿಯುತವಾದ ತಾಯಿ, ತಂದೆ, ಸಹೋದರ, ಗೆಳೆಯ, ಆತ್ಮಬಂಧು ಮೊದಲಾದ ಸಕಾರಾತ್ಮಕ ಭಾವಗಳೂ ಇರುತ್ತವೆ ಮತ್ತು ಅವುಗಳು ರಕ್ತ ಸಂಬಂಧಗಳನ್ನು ಮೀರಿ ಇರಲು ಸಾಧ್ಯ ಎಂಬುದನ್ನು ಈ ಜೀವನಚಿತ್ರವು ಸಮಾಜಕ್ಕೆ ಯಶಸ್ವಿಯಾಗಿ ತಿಳಿಸುತ್ತದೆ.

ಖ್ಯಾತ ಶಿಕ್ಷಣತಜ್ಞ ಡಾ. ಎಂ.ಕೆ.ಶ್ರೀಧರ ಅವರನ್ನು ಕರ್ನಾಟಕ ಮಾತ್ರವಲ್ಲ, ಇಡೀ ಭಾರತವು ಬಲ್ಲದು. ವಾಣಿಜ್ಯ ಶಾಸ್ತ್ರದ ಪ್ರಾಧ್ಯಾಪಕರಾಗಿ, ಬೆಂಗಳೂರಿನ ವಿಜಯಾ ಕಾಲೇಜು ಹಾಗೂ ಬೆಂಗಳೂರು ವಿಶ್ವವಿದ್ಯಾಲಯದಲ್ಲಿ ದುಡಿದು ವಿದ್ಯಾರ್ಥಿಗಳಿಂದ ಮನ್ನಣೆ ಪಡೆದವರು. ಮೈಸೂರು ವಿಶ್ವವಿದ್ಯಾನಿಲಯದಿಂದ ಬ್ಯಾಂಕಿಂಗ್‌ನಲ್ಲಿ ಪಿಎಚ್‌ಡಿ ಪದವಿಯನ್ನು ಪಡೆದು, ಸ್ವತಃ ಹಲವಾರು ವಿದ್ಯಾರ್ಥಿಗಳಿಗೆ ಪಿಎಚ್‌ಡಿ ನಿರ್ದೇಶಕರಾಗಿ ಕೆಲಸ ಮಾಡಿದವರು. ಜ್ಞಾನ ಆಯೋಗ, ರಾಷ್ಟ್ರೀಯ ಶಿಕ್ಷಣ ನೀತಿ ಸಮಿತಿಯಲ್ಲಿ ಪ್ರಮುಖ ಜವಾಬ್ದಾರಿಗಳನ್ನು ಹೊತ್ತವರು. ಮಿಗಿಲಾಗಿ ಹಲವಾರು ಸಂಘ ಸಂಸ್ಥೆಗಳಲ್ಲಿ ಕ್ರಿಯಾಶೀಲವಾಗಿ ತೊಡಗಿಕೊಂಡವರು. ಪದ್ಮಶ್ರೀ, ಕರ್ನಾಟಕ ರಾಜ್ಯೋತ್ಸವ ಪ್ರಶಸ್ತಿ, ಭಾರತೀಯ ವಿಜ್ಞಾನ ಕಾಂಗ್ರೆಸ್ ಅಧ್ಯಕ್ಷರ ಚಿನ್ನದ ಪದಕ... ಮೊದಲಾದ ಹಲವಾರು ಪ್ರಶಸ್ತಿಗಳನ್ನು ಪಡೆದು ಜನಮನ್ನಣೆಯನ್ನು ಗಳಿಸಿದವರು. ಇಂತಹ ಹಲವಾರು ಸಾಧನೆಗಳನ್ನು ಮಾಡುತ್ತಾ ಜನಮುಖಿಯಾಗಿ ದುಡಿಯುತ್ತಿರುವ ಶ್ರೀಧರ್ ಅವರು ಪೋಲಿಯೋದಿಂದಾಗಿ ಎರಡು ಕಾಲು ಹಾಗೂ ಒಂದು ಕೈಯನ್ನು ಉಪಯೋಗಿಸಲಾರರು. ಗಾಲಿ ಕುರ್ಚಿಗೆ ಬಂಧಿತರಂತೆ ಕಂಡರೂ, ತಮ್ಮ ದೈಹಿಕ ಇತಿಮಿತಿಗಳನ್ನು ಮೀರಿ ಪ್ರಬಲವಾದ ಆತ್ಮಶಕ್ತಿ ಮತ್ತು ದೃಢ ಮನೋಭಾವದಿಂದ, ಸತತ ಜನ ಸಂಪರ್ಕ, ಸೇವೆಗಳಿಂದ ಜನಜನಿತರಾಗಿರುವವರು.

ಆದರೆ, ಈ ಜೀವನ ಚರಿತ್ರೆ ಅವರದಲ್ಲ, ಶ್ರೀಧರ್ ಅವರ ನೆರಳು ಅನ್ನುವುದಕ್ಕಿಂತ ಅವರ ಭಾಗ ಹಾಗೂ ಭಾವವೇ ಆಗಿರುವ ಶ್ರೀ ನರಸಿಂಹ ಅವರದ್ದು. ೧೯೮೪ ರಿಂದ, ಕಳೆದ ೪೦ ವರ್ಷಗಳಿಂದ ಶ್ರೀಧರ್ ಅವರ ಆಪ್ತ ಸಹಾಯಕರಾಗಿ ೨೪ ಗಂಟೆಗಳ ಕಾಲ ಅವರ ಎಲ್ಲಾ ಅಗತ್ಯಗಳಿಗೆ ಸ್ಪಂದಿಸುತ್ತಾ ಇರುವವರು ಶ್ರೀ ನರಸಿಂಹ ಅವರು.

ಲೇಖಕರಾದ ಶ್ರೀಮತಿ ಭಾರತಿ ಹೆಗಡೆಯವರು ಜೀವನ ಚರಿತ್ರೆಯನ್ನು ದಾಖಲಿಸಲು ವಿಭಿನ್ನವಾದ ತಂತ್ರವನ್ನು ಅಳವಡಿಸಿಕೊಂಡಿದ್ದಾರೆ. ನರಸಿಂಹ, ಅವರ ಪತ್ನಿ ಸುಧಾ, ಶ್ರೀಧರ್ ಅವರೂ ಸೇರಿದಂತೆ ಒಟ್ಟು ೧೭ ಜನರಿಂದ ವಿಷಯವನ್ನು ಸಂಗ್ರಹಿಸಿದ್ದಾರೆ. ಇವರೆಲ್ಲರೂ ನರಸಿಂಹ ಅವರ ಬದುಕನ್ನು, ತಮ್ಮ ಅನುಭವ ಮತ್ತು ಗ್ರಹಿಕೆಗಳನ್ನು ನೇರವಾಗಿ (ಪ್ರಥಮ ಪುರುಷದಲ್ಲಿ) ತಮ್ಮ ಮಾತುಗಳಲ್ಲಿ ಅಭಿವ್ಯಕ್ತಿಸಿದ್ದಾರೆ. ಲೇಖಕರು ಅಕ್ಷರರೂಪ ನೀಡಿದ್ದಾರೆ.

ನರಸಿಂಹ ಅವರದ್ದು ಮಂಚೇನಹಳ್ಳಿ. ದೊಡ್ಡ, ಬಡ ಕುಟುಂಬ. ಅನ್ನ, ಆಹಾರಕ್ಕಾಗಿ ತಿಣುಕುವ ಪರಿಸ್ಥಿತಿ. ಮಂಚೇನಹಳ್ಳಿಯಲ್ಲಿ, ನಿಪ್ಪಟ್ಟು, ಚಕ್ಕುಲಿ, ಹಣ್ಣು ಮಾರುತ್ತಾ ಸಂಸಾರಕ್ಕೆ ಸಹಕಾರಿಯಾಗಿದ್ದ, ಕಥಾ ನಾಯಕರು, ಬೇರೆ ಕೆಲಸ ಹುಡುಕುತ್ತಿರುತ್ತಾರೆ.

ಸಮಾರಂಭವೊಂದರಲ್ಲಿ, ಶ್ರೀಧರ್ ಅವರ ತಂದೆ 'ಮಗನನ್ನು ನೋಡಿಕೊಳ್ಳಲು ಬರುತ್ತೀಯಾ" ಎಂದು ಕರೆದಾಗ, ಒಪ್ಪಿಕೊಂಡು ಬೆಂಗಳೂರಿಗೆ ಬರುತ್ತಾರೆ. ಅಲ್ಲಿಂದ ಆತ ಹಿಂತಿರುಗಿ ನೋಡಲಿಲ್ಲ. ಯಾವ ತಪಸ್ವಿಗೂ ಕಡಿಮೆ ಇಲ್ಲದ ನಿಷ್ಠೆಯಿಂದ, ಒಪ್ಪಿಕೊಂಡ ಕೆಲಸವನ್ನು ಕಳೆದ ೪೦ ವರ್ಷಗಳಿಂದ ಮಾಡುತ್ತಿದ್ದಾರೆ.

ಮೊದಲಲ್ಲಿ, ಶ್ರೀಧರ್ ಅವರಿಗೆ ದೈಹಿಕ ಸಹಾಯ ಒದಗಿಸುತ್ತಿದ್ದ ನರಸಿಂಹ, ನಂತರದ ದಿನಗಳಲ್ಲಿ ವೈಯುಕ್ತಿಕ ಆಡಳಿತ ಸಹಾಯಕರೂ ಆಗುತ್ತಾರೆ. ಶ್ರೀಧರ್ ಅವರು ಪಿಎಚ್‌ಡಿ ಮಾಡುವಾಗ, ನಂತರ ಜ್ಞಾನ ಅಯೋಗದಲ್ಲಿ, ಶಿಕ್ಷಣ ಸಮಿತಿಯಲ್ಲಿ ಶ್ರೀಧರ್ ಅವರಿಗೆ ಮಾಹಿತಿ ಸಂಗ್ರಹಣೆ, ಸಂವಹನ, ಸಂಪರ್ಕ, ಸಮೀಕ್ಷೆ, ಸಭೆಗಳನ್ನು ಕರೆಯುವುದು, ಸಂಘಟಿಸುವುದು ಮೊದಲಾದ ಬಹುಮುಖ್ಯ ಕೆಲಸಗಳಲ್ಲಿ ನಂಬಿಕೆಯ ಸಹಾಯಕರಾಗಿದ್ದಾರೆ.

ಶ್ರೀಧರ ಅವರ ನಂಬಿಕೆ ಹಾಗೂ ವಿಶ್ವಾಸವನ್ನು ಎಂದೂ ನರಸಿಂಹ ಮುರಿದಿಲ್ಲ. ಶ್ರೀಧರ್ ಹೇಳುತ್ತಾರೆ– "ನರಸಿಂಹ ನನ್ನನ್ನು ನೋಡಿಕೊಳ್ಳಲು ಬಂದರೂ, ಅದೊಂದು ಉದ್ಯೋಗವೇ ಆಗಿತ್ತು. ಆದರೆ ನರಸಿಂಹ ಅದನ್ನು ಕೇವಲ ಒಂದು ಉದ್ಯೋಗವೆಂದು ನೋಡದೆ ಒಂದು ಸೇವೆಯೆಂದು ಪರಿಗಣಿಸಿದರು. ತುಂಬ ಪ್ರೀತಿಯಿಂದ ನನ್ನನ್ನು ಮತ್ತು ನನ್ನ ಕೆಲಸಗಳನ್ನು ನೋಡಿದರು. ನನ್ನಂಥ ಅಂಗವೈಕಲ್ಯ ಇರುವವರಿಗೆ ಸಹಾಯಕರ ಅಗತ್ಯ ಇದ್ದೇ ಇರುತ್ತದೆ. ಆದರೆ ನನ್ನನ್ನು ನೋಡಿಕೊಳ್ಳುವುದೆಂದರೆ ನನ್ನ ಇಡೀ ಕಾರ್ಯವ್ಯಾಪ್ತಿಯನ್ನು ಕಲಿಯದೆಯೇ, ಓದದೆಯೇ ನರಸಿಂಹ ನೋಡಿಕೊಂಡರಲ್ಲ, ಅದು ನನ್ನನ್ನು ಇವತ್ತಿಗೂ ಬೆರಗುಗೊಳಿಸಿದೆ."

ಸರಸಿಂಹ ಅವರು ಮಾತ್ರವಲ್ಲ, ಅವರ ಹೆಂಡತಿ ಶ್ರೀಮತಿ ಸುಧಾ ಅವರೂ ಅಸಾಧಾರಣವಾದ ಹೊಂದಾಣಿಕೆಯನ್ನು ಮಾಡಿಕೊಂಡು ಈ ವಿಶಿಷ್ಟವಾದ ಜೀವನದ ಅಂಗವಾಗಿದ್ದಾರೆ. ನರಸಿಂಹ ಅವರ ಮಗ ಭರತ್ ಕೂಡಾ ಶ್ರೀಧರ್ ಕುಟುಂಬದ ಭಾಗವಾಗಿದ್ದಾರೆ.

ಶ್ರೀಧರ್ ಅವರು ತಮ್ಮ ಜೀವನದ ಸಾಧನೆಗೆ ನರಸಿಂಹ ಅವರ ಕಾಣಿಕೆ ಬಲು ದೊಡ್ಡದು ಎಂದು ಗುರುತಿಸಿದ್ದಾರೆ.

ಓದುಗರಿಗೆ ಅನ್ನಿಸಬಹುದು. ಅಂಗವೈಕಲ್ಯದ ಸವಾಲನ್ನು ದೃಢಚಿತ್ತದಿಂದ ಗೆದ್ದು, ಶಿಕ್ಷಣ, ಸಾಮಾಜಿಕ ಕ್ಷೇತ್ರಗಳಿಗೆ ಅಪಾರ ಸೇವೆ ಸಲ್ಲಿಸಿದ ಶ್ರೀಧರ್ ಜೀವನ ಚರಿತ್ರೆಯನ್ನು ರಚಿಸುವುದು ಸರಿ. ಆದರೆ, ನರಸಿಂಹ ಅವರ ಜೀವನ ಚರಿತ್ರೆ ಯಾಕೆ? ಅಂತ. ಈ ಪ್ರಶ್ನೆಗೆ ಶ್ರೀಧರ್ ಅವರೇ ಉತ್ತರಿಸಿದ್ದಾರೆ ಕೆಳಕಂಡಂತೆ. "ನಾನೀಗ ನರಸಿಂಹರ ಕುರಿತಾಗಿ ಪುಸ್ತಕ ಹೊರತರಬೇಕು

ಅಂದುಕೊಂಡಿದ್ದಕ್ಕೂ ಒಂದು ಕಾರಣ ಇದೆ. ಅದು ಅವರನ್ನು ಸಂತೈಸುವುದಕ್ಕೆ ಅಥವಾ ಇವರಿಗೇನೋ ಕಿರೀಟ ಕೊಡುವುದಕ್ಕೆ ಅಲ್ಲ. ಬದಲಾಗಿ ಸಮಾಜದಲ್ಲಿ ಇಂಥ ವ್ಯಕ್ತಿ ಇದ್ದಾರೆ. ನಿಸ್ವಾರ್ಥವಾಗಿ, ಸೇವಾ ಮನೋಭಾವನೆಯಿಂದ ಕೆಲಸ ಮಾಡುತ್ತಿದ್ದಾರೆ. ಬೇರೆಯವರಿಗಾಗಿ ಬದುಕಿದ, ಅದರಲ್ಲೂ ವಿಶೇಷಚೇತನ ವ್ಯಕ್ತಿಗಳನ್ನು ಬೆಳಕಿಗೆ ತರಬೇಕೆಂಬ ಉದ್ದೇಶದಿಂದ ಮಾತ್ರ ಈ ಪುಸ್ತಕವನ್ನು ತರುತ್ತಿರುವುದು"

"ಹೆಗಲು", ಎರಡು ಹೆಗಲುಗಳನ್ನು ಬೆಳಕಿಗೆ ತಂದಿದೆ. ಒಂದು ಸಮಾಜಕ್ಕೆ ಹೆಗಲಾದ ಶ್ರೀಧರ್ ಅವರದ್ದು, ಮತ್ತೊಂದು ಶ್ರೀಧರ್ ಅವರಿಗೆ ಹೆಗಲಾದ ನರಸಿಂಹ ಅವರದ್ದು. ಮಹಾತ್ಮ ಗಾಂಧಿಯವರ ಮಾತೊಂದು ಇಲ್ಲಿ ಸೂಕ್ತವೆನಿಸುತ್ತಿದೆ. "ನಿಮ್ಮನ್ನು ಹುಡುಕುವ ಅತ್ಯುತ್ತಮ ಮಾರ್ಗವೆಂದರೆ ಇತರರ ಸೇವೆಯಲ್ಲಿ ತೊಡಗುವುದು"

ಕನ್ನಡಿಗರು " ಹೆಗಲು" ಓದಿ, ಸ್ಫೂರ್ತಿ ಪಡೆದುಕೊಂಡರೆ ಭಾರತಿ ಹೆಗಡೆಯವರ ಶ್ರಮ ಸಾರ್ಥಕವಾಗುವುದು.

***

ಕೇಶವಂಗೆ ಕೊನೆಯಿಲ್ಲ

– ಶೀಲಾ ಅರಕಲಗೂಡು

ಭಾರತದ ರಾಷ್ಟ್ರೀಯ ಸಂಘಟನೆಗಿದೆ ಶಕ್ತಿ
ಭವಿತವ್ಯ ರೂಪಿಸಲು ದೃಢವಾಗಿ ನಿಲಲು
ಹಿರಿಕಿರಿಯರೆನ್ನದೇ ಸರ್ವರೊಗ್ಗೂಡುತಲಿ
ಭಾವೈಕ್ಯ ಮೆರೆಯುತ್ತ ಮುನ್ನಡಿಯನಿಡಲು

ನೂರು ವರುಷಗಳುರುಳಿ ಮತ್ತಷ್ಟು ಬಲ ಪಡೆದು
ಸಾವಿರದ ಚೈತನ್ಯವರಳಿಹುದು ಬಿರಿದು
ಧ್ವಜ ದಂಡ ಹಿಡಿಯುತ್ತ ದೇಶಹಿತ ಕಾಯುತ್ತ
ಹಿಗ್ಗದೆಯೆ ಕುಗ್ಗದೆಯೆ ಸಾಗಿಹುದು ಕಾದು

ವಿಜಯದಶಮಿಯ ದಿನದಿ ಆರಂಭಗೊಂಡಿತ್ತು
ನೂರು ವರುಷದ ಹಿಂದೆ ಬಲು ಪುಟ್ಟದಾಗಿ
ವಿಜಯಘೋಷದ ಶಂಖವಂದು ಮೊಳಗಿಸಿದ ದನಿ
ಇಂದಿಗೂ ಕೇಳುತಿದೆ ಮುಗಿಲ ಸಿಡಿಲಾಗಿ

ಹುಟ್ಟು ಹಾಕಿದರಂದು ಹೆಡಗೆವಾರ್ ಕೇಶವರು
ಪುಟ್ಟ ಸಂಘವನೊಂದು ಬೀಜದೊಲು ನೆಟ್ಟು
ರಾಷ್ಟ್ರೀಯ ಸ್ವಯಂಸೇವಕ ಸಂಘವೆಂದದಕೆ
ಹೆಸರಿಟ್ಟು ಬೆಳೆಸಿದರು ತಮ್ಮನ್ನೆ ಕೊಟ್ಟು

ದೇಶದಾ ಉದ್ದಗಲ ಬೇರುಗಳ ಹರಡುತ್ತ
ಸಂಘ ಬೆಳೆಯಿತು ಬಲದಿ ಅಡಿಪಾಯ ಭದ್ರ
ಕಾಲಕಾಲಕು ಜನರು ದೇಶ ಸೇವೆಯ ಜಲವ
ಸುರಿಸುತ್ತ ಬೆಳೆಸಿದರು ಮರವೀಗ ರುದ್ರ

ವ್ಯಕ್ತಿತ್ವ ರೂಪಿಸುತ ಪೂರ್ಣತ್ವ ದೊರಕಿಸುತ
ಸ್ವಾವಲಂಬನೆಯತ್ತ ಮೊಗ ಮಾಡಿ ನಡೆದು
ಬುದ್ಧಿವಂತಿಕೆ ಜೊತೆಗೆ ಬಾಹುಬಲ ಬೆಳೆಸುತ್ತ
ಪರರ ನೋವಿಗೆ ಮಿಡಿದು ಸೇವೆಗೈಯುವುದು

ದೇಶ ಸಂರಕ್ಷಣೆಗೆ ಧರ್ಮ ಸಂಸ್ಥಾಪನೆಗೆ
ಕಟಿಬದ್ಧ ಸಂಸ್ಥೆಯಿದು ಮಾಡಿಹುದು ಮೋಡಿ
ಶಿಸ್ತು ಸಂಯಮದಿಂದ ಕಾರ್ಯದಲಿ ತೊಡಗಿರುವ
ಕೋಟಿ ಕೇಶವರಿಲ್ಲಿ ಹುಟ್ಟಿಹರು ನೋಡಿ

ಬನ್ನಿರೆಲ್ಲರು ಬನ್ನಿ ದೇಶಸೇವೆಗೆ ಬನ್ನಿ
ನಮ್ಮ ದೇಶದ ಸ್ವತ್ವವರಿಯೋಣ ಬನ್ನಿ
ತಾಯಿ ಭಾರತಮಾತೆ ಪೊರೆದಿಹಳು ನಮ್ಮನ್ನು
ಈ ನೆಲದ ಋಣವನ್ನು ತೀರಿಸಲು ಬನ್ನಿ

***

ಗುಂಡಿಗಳು ಸಾರ್..., ಗುಂಡಿಗಳು

– ನಾಗರತ್ನ ಚಂದ್ರಶೇಖರ್

"ಅಮ್ಮ ನನ್ ಶರ್ಟಿನ ಗುಂಡಿ ಕಿತ್ತೋಗಿತ್ತಲ್ಲ, ಅದನ್ನ ಇನ್ನೂ ರಿಪೇರಿ ಮಾಡಿಲ್ವಾ?", ಮಗನ ಪ್ರಶ್ನೆಯ ಬೆನ್ನಲ್ಲೇ, "ಹೌದಲ್ವಾ, ನನ್ನ ಶರ್ಟ್ ಗುಂಡೀನು ಕಿತ್ತು ಹೋಗಿದೆ ಅಂತ ಹೇಳಿ ಎಷ್ಟು ದಿನ ಆಯ್ತು ಶಾರಿ, ಇನ್ನು ಹಾಕೇ ಇಲ್ಲವಲ್ಲ" ಗಂಡನ ಬೇಡಿಕೆ.

"ಅಲ್ರೀ..., ನಮ್ಮನೆ ಮುಂದಿರೋ ರಸ್ತೆಯಲ್ಲಿ ಎಷ್ಟು ಗುಂಡಿಗಳಿದೆ ನೋಡಿದೀರಲ್ವಾ? ಅದನ್ನ ರಿಪೇರಿ ಮಾಡೋಕೆ ಪಾಲಿಕೆಯವರಿಗೆ ಇನ್ನೂ ಸಾಧ್ಯವಾಗಿಲ್ಲ. ಅಂದ್ಮೇಲೆ, ಈ ಶರ್ಟು, ಪ್ಯಾಂಟಿನ ಗುಂಡಿಗಳನ್ನ ರಿಪೇರಿ ಮಾಡಿಲ್ಲ ಅಂತ ಅಪ್ಪ, ಮಗ ಇಬ್ಬರೂ ಅದೆಷ್ಟು ಜೋರ್ ಮಾಡ್ತಾ ಇದ್ದೀರಾ? ಇಷ್ಟು ಜೋರು ಜಬರ್ದಸ್ತ್ ರಸ್ತೆ ಗುಂಡಿ ಮುಚ್ಚಿಸೋದ್ರಲ್ಲಿ ತೋರಿಸಿದ್ದಿದ್ದರೆ, ನಮ್ ಪಕ್ಕದ ಮನೆ ರಂಗಮ್ಮ ಅವರು ಕಾಲು ಮುರ್ಕೊತಾನೆ ಇರಲಿಲ್ಲ."

"ಅವರು ಯಾಕೆ ಸ್ಕೂಟರ್‌ನಲ್ಲಿ ಓಡಾಡ್ತಾರೋ. ಫ್ರೀ ಬಸ್ ಇರುವುದು ಯಾಕೆ? ಊರೇನು, ಇಡೀ ರಾಜ್ಯನೇ ಸುತ್ತಾಡಿದ್ರೂ ಒಂದು ಪೈಸೆ ಖರ್ಚಿಲ್ವಲ್ಲ. ಅದಕ್ಕೆ ಸರ್ಕಾರ ಗುಂಡಿ ಮುಚ್ಚೋಕೆ ತಡ ಮಾಡುತ್ತಿದೆ".

ನಮ್ ಮಾತು ಕೇಳಿಸಿಕೊಳ್ಳುತ್ತಿದ್ದ ಮಗಳು ಮಧ್ಯೆ ಬಾಯಿ ಹಾಕಿದ್ಲು. "ಅಮ್ಮ, ನಿಂಗೆ ಗೊತ್ತಾ? ನಮ್ ಶಾಲೆಯಿಂದ ಈ ಸಾರಿ ವನಮಹೋತ್ಸವಕ್ಕೆ 100 ಗಿಡ ನೆಡುವ ಕಾರ್ಯಕ್ರಮ ಇದೆಯಂತೆ. ಮಳೆ ಬಂದು ಗುಂಡಿಗಳೆಲ್ಲ ತುಂಬಿವೆ ಅಲ್ವಾ. ಅದರೊಳಗೆ ಗಿಡಗಳ್ನೆಲ್ಲ ನೆಟ್ಟರೆ ಚೆನ್ನಾಗಿ ಬೆಳೆಯುತ್ತೆ ಅಂತ ನಾವೆಲ್ಲ ಯೋಚನೆ ಮಾಡುತ್ತಿದ್ದೇವೆ". ಮಗಳು ಹೇಳಿದ ಐಡಿಯಾ ಸೂಪರ್ ಆಗಿದೆ ಅನಿಸ್ತು. ನಮ್ಮ ಗಾರ್ಡನ್ ಸಿಟಿ ಹೆಸರು ಈಗ ಗಾರ್ಬೇಜ್ ಸಿಟಿ ಆಗ್ತಿದೆ. ಇರೋ ಮರಗಿಡಗಳನ್ನೆಲ್ಲ ನಗರೀಕರಣ ಅಂತ ಕತ್ತರಿಸಿ ಹಾಕಿದ್ದಾರೆ.

ಅದರ ಹೆಸರನ್ನಾದರೂ ಉಳಿಸಬೇಕು ಅಂದ್ರೆ 'ಗಿಡ ನೆಡಿ, ಗಿಡ ನೆಡಿ, ಗಿಡ ನೆಡಿ, ಮನೆಯ ಹಿಂದೆ, ಮನೆಯ ಮುಂದೆ' ಅಂತ ಇರೋದನ್ನ, 'ಗಿಡ ನೆಡಿ, ಗಿಡ ನೆಡಿ, ಗಿಡ ನೆಡಿ, ಮನೆ ಹಿಂದೆ, ಮುಂದೆ ಇರೋ ರಸ್ತೆ ಗುಂಡಿನಲ್ಲಿ' ಅಂತ ಬದಲಾಯಿಸಿದರೆ ಆಯ್ತು.

ಸೂಜಿ, ದಾರ ಹುಡುಕಿ ಮಗನ ಪ್ಯಾಂಟಿನ ಗುಂಡಿ ರಿಪೇರಿ ಮೊದಲು ಮಾಡಿಕೊಟ್ಟು, ಅವನನ್ನು ಶಾಲೆಗೆ ಕಳಿಸಿದ್ದಾಯಿತು. ಗಂಡನ ಶರ್ಟಿನ ಗುಂಡಿ ಹಾಕಲು ಅಂತಹ ಎಮರ್ಜೆನ್ಸಿ ಏನೂ ಇರಲಿಲ್ಲ. ಬೇಕಾದಷ್ಟು ಶರ್ಟುಗಳಿತ್ತಲ್ಲ, ಹಾಕಿಕೊಳ್ಳಲಿ ಎಂದು ಉಳಿದ ಕೆಲಸ ಮಾಡಲು ಅಡುಗೆ ಮನೆಗೆ ಧಾವಿಸಿದೆ. ಆ ದಿನ ಪೂರ್ತಿ ನನ್ನ ತಲೆ ತುಂಬಾ ಗುಂಡಿಗಳದೇ ಗುಂಗು. ಅಲ್ಲ ಈ ಗುಂಡಿಗಳೇ ಬೀಳದಂತೆ ರಸ್ತೆಗಳ ನಿರ್ಮಾಣ ಮಾಡಬಾರದಾ? ಹಾಗೆ ಮಾಡಿದರೆ ಸಮಸ್ಯೆನೇ ಇರಲ್ವಲ್ಲ. ಸಮಸ್ಯೆ ಇದ್ದರೆ ತಾನೆ ಸರ್ಕಾರಕ್ಕೆ ಖರ್ಚು ಮಾಡಲು ಸಾಧ್ಯವಾಗುವುದು.

"ನೋಡು, ಮಳೆ ಬಂದಾಗೆಲ್ಲ ಹಳ್ಳಕೊಳ್ಳ ತುಂಬಿ ಪ್ರವಾಹ ಬರೋದು ಪ್ರತಿ ವರ್ಷ ಇರುತ್ತೆ. ಹಾಗಂತ ಮಳೆನಾ ತಡೆಯೋಕೆ ಆಗುತ್ತಾ? ರಸ್ತೆ ಅಂದ್ಮೇಲೆ ಗುಂಡಿ ಬೀಳೋದು ಸಹಜತಾನೆ? ಆದರೆ ಆ ಗುಂಡಿ ಒಳಗೆ ಬಂಡಿ ಉರುಳಿದರೆ ಮಂಡಿ ಮೂಳೆ ಮುರಿಯೋದು ಕೂಡ ಸಹಜ ಅಂತೀಯಾ?"

"ಹಾಗಲ್ಲ ನೋಡು, ಒಂದು ಸಣ್ಣ ಉದಾಹರಣೆ ಕೊಡ್ತೀನಿ. ರೈತರು ಬೇಕಾದಷ್ಟು ಹೂ ಬೆಳೀತಾರೆ. ಅದನ್ನು ಮಾರಾಟ ಮಾಡೋದರಿಂದ ಅವರಿಗೊಂದು ಉದ್ಯೋಗ. ಹೂ ಮಾರಾಟ ಮಾಡೋ ವ್ಯಾಪಾರಿಗಳು ದೇವಸ್ಥಾನಗಳಿಗೆ, ಮದುವೆ ಮನೆಗೆ, ಛತ್ರಗಳಿಗೆ, ಪೂಜೆ, ಪುನಸ್ಕಾರಗಳಿಗೆ ಹೂ ಮಾರ್ತಾರೆ. ಮಾಲೆ ಕಟ್ಟೋರಿಗೊಂದು ಉದ್ಯೋಗ. ಇಷ್ಟೊಂದು ಜನ ಹೂವಿನ

ಮೇಲೆ ಜೀವನ ಕಟ್ಟಿಕೊಳ್ಳುತ್ತಾರೆ ಅಲ್ವಾ? ಹಾಗೇನೇ ಈಗ ರಸ್ತೆ ಮಾಡುವಾಗ ಸರ್ಕಾರ ಎಷ್ಟೊಂದ್ ಜನಕ್ಕೆ ಉದ್ಯೋಗ ಕೊಡುತ್ತಾರೆ. ಕಳಪೆ ರಸ್ತೆ ಮಾಡಿದ್ರೆ ಮಳೆ ಬಂದಾಗ ಗುಂಡಿ ಬೀಳುತ್ತೆ. ಮುಂದೆ ಗುಂಡಿ ಮುಚ್ಚೋಕೆ ಬೇಕಾದ ಟಾರು, ಸಿಮೆಂಟು, ಜಲ್ಲಿ, ಮರಳು ಹೀಗೆ ಇವನ್ನೆಲ್ಲ ಸಪ್ಲೈ ಮಾಡೋರಿಗೂ ಉದ್ಯೋಗ. ಗುಂಡಿ ಮುಚ್ಚುವ ಕಂಟ್ರಾಕ್ಟರ್‌ಗೆ ದೊಡ್ಡ ಉದ್ಯೋಗ. ಮತ್ತೆ ಗುಂಡಿಗೆ ಬಿದ್ದ ಅದೆಷ್ಟೋ ಜನರಿಗೆ ಮಂಡಿ ಮೂಳೆ ಮುರಿದು ಹೋಗಿದ್ರೆ ಮೂಳೆ ಡಾಕ್ಟರಿಗೆ ಗೆ ಉದ್ಯೋಗ''.

''ಆ ಸುಂದರ ಚಂದಿರನ ಅಂಗಳದಲ್ಲೂ ಬೃಹತ್ತಾದ ಗುಂಡಿಗಳದೇ ಸಾಮ್ರಾಜ್ಯವಂತಲ್ಲ .ಇನ್ನು ನಮ್ಮ ಭೂಮಿಯ ಮಾತು ಬಿಡಿ. ನೀವಿನ್ನು ಜಾಸ್ತಿ ಮಾತಾಡಿದ್ರೆ ಯಾವುದಾದರೂ ರಸ್ತೆ ಗುಂಡಿಲೇ ಒಂದಿನ ಬಿಳ್ತೀರಾ ಹುಷಾರ್...''

"ಅಯ್ಯೋ ಬೇಡ... ಬೇಡ, ಗುಂಡೀಲಿ ನಾನು ಬೀಳೋದಿಲ್ಲ"

"ಶಾರಿ, ರಾತ್ರಿ ಎಲ್ಲ ಗುಂಡಿ, ಗುಂಡಿ ಅಂತ ಕನವರಿಸ್ತಾನೆ ಇದ್ಯಲ್ಲೇ. ಬೆಳಗಾಗಿದೆ ಎದ್ದೇಳು. ನಮ್ಮ ತಿಂಡಿ ಬಗ್ಗೆನೂ ಸ್ವಲ್ಪ ಯೋಚನೆ ಮಾಡು" ಎಂದು ಪತಿರಾಯ ಎಬ್ಬಿಸಿದಾಗ ನಾನು ಅಷ್ಟೊಂದು ಮಾತಾಡಿದ್ದು ಕನಸಲ್ಲಿ ಅನ್ನಿಸಿ ಗಡಬಡಿಸಿ ಮೇಲೆ ಎದ್ದೆ. ಗುಂಡಿ ಬಗ್ಗೆ ಮಾತಾಡಲು ಗುಂಡಿಗೆ ಇದೆಯಾ ನಿನಗೆ ಅಂತ ಕೇಳಿದ್ರೆ ಇರಲಿ ಅಂತ ರಾತ್ರಿಯ ಕನಸಿನ ಸಂಭಾಷಣೆಯನ್ನೆಲ್ಲ ಈಗ ನಿಮ್ಮೆದುರು ವದರಿದ್ದೇನೆ ಅಷ್ಟೇ.

***

ಓ ಹೆನ್ರಿ ಚಿಕ್ಕ ಕತೆ

'ಕೊನೆ ಎಲೆ' (ಲಾಸ್ಟ್ ಲೀಫ್)

– ವಿಠ್ಠಲ ಇಜೇರಿ

'ಹೆನ್ರಿ' ಎಂಬುದು ಸಿಡ್ನಿ ಪೋರ್ಟರ್ ಅವರ ಕಾವ್ಯನಾಮ. ಇವರು ಅಮೇರಿಕಾದ ಸುಪ್ರಸಿದ್ಧ ಕತೆಗಾರರಾಗಿದ್ದು ಸಾಮಾನ್ಯ ಜನರ ಜೀವನ ಕುರಿತು ಕತೆಗಳನ್ನು ರಚಿಸಿದ್ದಾರೆ. ಅವರ ಕತೆಗಳಲ್ಲಿ ಹಾಸ್ಯ ಮತ್ತು ವ್ಯಂಗ್ಯ ಇದ್ದು ಪಾತ್ರಗಳು ಪರಿಣಾಮಕಾರಿಯಾಗಿ ಚಿತ್ರಿತವಾಗಿರುತ್ತವೆ. ಕತೆಯ ಅಂತ್ಯದಲ್ಲಿ ಅನಿರೀಕ್ಷಿತ ತಿರುವು ಪಡೆದುಕೊಳ್ಳುತ್ತವೆ. 1907ರಲ್ಲಿ ಬರೆದ ಈ 'ಲಾಸ್ಟ ಲೀಫ್' ಕಥೆಯು ಓ ಹೆನ್ರಿಯ ಪ್ರಸಿದ್ಧ ಕತೆಗಳಲ್ಲಿ ಒಂದಾಗಿದೆ.

ವಿಲಿಯಂಸ್ ಸಿಡ್ನಿ ಪೋರ್ಟರ್ (ಹೆನ್ರಿ) 11ನೇ ಸೆಪ್ಟೆಂಬರ್, 1862ರಂದು ನಾರ್ತ್ ಕಾರೋಲಿನಾದ ಗ್ರೀನ್ಸಬರೋ ಎಂಬಲ್ಲಿ ಜನಿಸಿದರು. ತಾಯಿಯನ್ನು ಬಾಲ್ಯದಲ್ಲಿಯೇ ಕಳೆದುಕೊಂಡ ಪಾಟರ್ ತಂದೆಯ ಕಾಳಜಿಯಲ್ಲಿ ಬೆಳೆದರು. 15ನೇ ವಯಸ್ಸಿನಲ್ಲಿ ಅವರು ಔಷಧ ಅಂಗಡಿಯಲ್ಲಿ ದುಡಿದರು. ಅಲ್ಲಿಯ ಅನುಭದಿಂದ ಅವರೊಬ್ಬ ಫಾರ್ಮಸಿಸ್ಟ್ ಆದರು. ಪ್ರಸ್ತುತ 'ಕೊನೆಯ ಎಲೆ' (ಲಾಸ್ಟ ಲೀಫ್) ಕತೆ ಹೆನ್ರಿ ಅವರ 'ದಿ ಟ್ರಿಮ್ಡ್ ಲ್ಯಾಂಪ್ ಅಂಡ್ ಅದರ್ ಸ್ಟೋರೀಸ್' ಸಂಗ್ರಹದಲ್ಲಿದೆ.

ಕೊನೆಯ ಎಲೆ (ಲಾಸ್ಟ ಲೀಫ್) ಕಥೆಯು ಇಬ್ಬರು ಮಹಿಳಾ ಕಲಾವಿದರು ಮತ್ತು ಅವರ ಇಬ್ಬರು ಪುರುಷ ಸ್ನೇಹಿತರ ಕುರಿತಾಗಿದೆ. ಜಾನ್ಸಿ ಎಂಬ ಮಹಿಳೆ ನ್ಯುಮೋನಿಯಾದಿಂದ ಬಳಲುತ್ತಿರುತ್ತಾಳೆ. ಆಕೆ ಸಾಯುವ ಸ್ಥಿತಿಯಲ್ಲಿರುತ್ತಾಳೆ. ಆಕೆ ತನ್ನ ಮನೆಯ ಕಿಟಕಿಯ ಹೊರಗಿನ ಗೋಡೆಯ ಮೇಲಿನ ಐವಿ ಎಂಬ ಬಳ್ಳಿಯ ಕೊನೆಯ ಎಲೆ ಉದುರಿದಾಗ ತನ್ನ ಮರಣ ಎಂದು ನಂಬಿರುತ್ತಾಳೆ. ಹಾಗೆಂದುಕೊಂಡ ಜಾನ್ಸಿ ಗೋಡೆಯ ಮೇಲಿನ ಗಿಡವನ್ನು ಆಗಾಗ ಗಮನಿಸುತ್ತಿರುತ್ತಾಳೆ. ಆಕೆಯ ಗೆಳತಿ ಆಕೆಯ ಮನೆಯ ಕೆಳಗೆ ವಾಸವಿದ್ದ ಬರ್ಮನ್ ಎಂಬ ಚಿತ್ರ ಕಲಾವಿದನಗೆ ಜಾನ್ಸಿಯ ವಿಷಯ ತಿಳಿಸುತ್ತಾಳೆ. ಜಾನ್ಸಿಯ ನಂಬಿಕೆಯನ್ನು ಹುಸಿಗೊಳಿಸುತ್ತೇನೆ ಎಂದು ಬರ್ಮನ್, ಗೋಡೆಯ ಮೇಲಿನ ಐವಿ ಬಳ್ಳಿಯನ್ನು ತೆಗೆದು ಅಲ್ಲೊಂದು ಆ ಬಳ್ಳಿಯ ಚಿತ್ರ ಬಿಡಿಸುತ್ತಾನೆ. ಜಾನ್ಸಿ ಗೋಡೆಯ ಮೇಲೆ ಐವಿ ಬಳ್ಳಿಯ ಚಿತ್ರವನ್ನೇ ಕಿಟಕಿಯ ಮೂಲಕ ನೋಡುತ್ತಿರುತ್ತಾಳೆ. ಬರ್ಮನ್ ಚಿತ್ರ ಬಿಡಿಸಿ ಅದರಲ್ಲಿಯ ಎಲೆಗಳು ಒಂದೊಂದೇ ಉದುರಿದಂತೆ ತೋರಿಸುತ್ತ ಇರುತ್ತಾನೆ. ವಿಧಿಯ ಆಟ ಬಲ್ಲವರಾರು, ಒಂದೊಂದೇ ಎಲೆ ಉದುರಿದಂತೆ ಬರ್ಮನ್ ತೋರಿಸುತ್ತ ಹೋದಂತೆ ಜಾನ್ಸಿ ಆರೋಗ್ಯ ಸುಧಾರಣೆ ಕಾಣುತ್ತದೆ. ಇತ್ತ ಬರ್ಮನ್ ಗೋಡೆಯ ಮೇಲೆ ಚಿತ್ರ ಬಿಡಿಸಲು ತಣ್ಣಗಿನ ರಾತ್ರಿ, ಐಸ್ ತುಂಬಿದ ರಸ್ತೆಯಲ್ಲಿ ನಡೆದಾಡಿರುತ್ತಾನೆ. ಎರಡು ರಾತ್ರಿ ಹೀಗೆ ತಂಪಿನಲ್ಲಿ ಹೋದ ಕಾರಣ ಅನಾರೋಗ್ಯಕ್ಕೆ ತುತ್ತಾಗಿ ನ್ಯೂಮೋನಿಯಾದಿಂದ ಬಳಲಿ ಕೊನೆಗೆ ಕೊನೆಯ ಎಲೆ ಉದುರಿದುದನ್ನು ಚಿತ್ರಿಸಿದಾಗ ಅವನೇ (ಬರ್ಮನ್) ಸಾಯುತ್ತಾನೆ. ಜಾನ್ಸಿ ಆರೋಗ್ಯ ತಪಾಸಣೆ ಮಾಡಿದ ಡಾಕ್ಟರ್, "ಜಾನ್ಸಿಯ ಆರೋಗ್ಯದಲ್ಲಿ ಸುಧಾರಣೆಯಾಗಿದೆ, ಇನ್ನು ಆಕೆ ಸಾಯುವ ಭಯವಿಲ್ಲ" ಎಂದು ತಿಳಿಸುತ್ತಾರೆ.

ನಮ್ಮ ನಾಡಿನ ಜಾನಪದ ಕತೆಯಂತೆ ಸಾಗುವ ಈ ಕತೆ, "ನಾವೊಂದು ಬಗೆದರೆ ದೈವವೊಂದು ಬಗೆಯಿತು" ಅಥವಾ "ನೆರೆಮನೆ ತಿಮ್ಮ ಸಾಯುವ ಅಂದರೆ ನಮ್ಮ ಮನೆ ತಮ್ಮ ಸತ್ತ" ಎಂಬ ನಾಣ್ನುಡಿಯಂತಿದೆ.

***

ಕಥೆ

ನನ್ನ ಸೊಸಿ ಹಾಂಗ ಇರಬೇಕು

– ಕಮಲಾಕ್ಷಿ ಸಿ.ಆರ್.

"ಇಷ್ಟು ಚೆಂದ್ ಸೊಸಿ ನಮಗ ಸಿಕ್ತಾಳ ಅಂತ ಅಂದ್ಕೊಂಡಿರಲಿಲ್ರಿ.. ಹುಚ್ಚು ಕೋಡಿ ಎಂಥ ಕನ್ಯೆ ಮೆಚ್ಯಾನೋ ಅಂತ ದಿಗಿಲು ಬಿದ್ದಿದ್ದೆ. ತುಂಬಿದ ಮನಿಗೆ ನಮ್ ಸೂರಿ ಆಚಾರ ವಿಚಾರ ಗೊತ್ತಿರೋಳನ್ನ ಆರಿಸಾನ. ಛಲೋ ಆತು ಅದಿಲ್ಲೋ.. ಇದೇನು? ನಾನು ಆಗಿಂದ ವದರುತಾನೆ ಇದ್ದೀನಿ..ಹಿಂಗ್ಯಾಕ್ ಸುಮ್ಮನೆ ಕೂತಿದ್ದೀರಿ?" ಅಂತ ಸೊಸೆ ಗುಣಗಾನ ಮಾಡ್ತಾ ಇದ್ದ ಸುಶೀಲ ಮೌನವಾಗಿ ಕುಳಿತು ಮಾತು ಕೇಳುತ್ತಿದ್ದ ಪತಿ ಗಂಗಪ್ಪನನ್ನು ಆಕ್ಷೇಪಿಸಿದಳು.

ಮಗನ ಆಯ್ಕೆ ಬಗ್ಗೆ ಖುಷಿಯಿಂದ ಪಟಪಟನೆ ಒಂದು ಗಂಟೆಯಿಂದ ಹೇಳ್ತಾನೆ ಇದ್ರೂ ಸುಶೀಲ ಮಾತು ಮುಗಿಸಿರಲಿಲ್ಲ. ಮಾತು ಕೇಳಿ ಕೇಳಿ ಸಾಕಾದ ಗಂಗಪ್ಪ ಒಳಹೋಗಿ ಒಂದು ಲೋಟ ನೀರು ತಂದು ಕೈಗೆ ಕೊಟ್ಟು, "ಮೊದಲು ನೀರು ಕುಡಿದು ದಣಿವಾರಿಸ್ಕೋ ಮಹರಾಯ್ತಿ, ಸ್ವಾತಿ ನಿನಗೂ ನಿನ್ ಮಗನಿಗೂ ಇಷ್ಟ ಆದಲಿಲ್ಲೋ. ಅಷ್ಟು ಸಾಕು ಬಿಡು ಮತ್ತೆ" ಎಂದರು ನಗುತ್ತ.

ಸುಶೀಲಾಗೆ ಮಗ ಸುರೇಶ "ಸ್ವಾತಿ ಅನ್ನೋ ಹುಡುಗೀನ ಮೆಚ್ಚೀನಿ... ಆಕಿ ಜೊತೆ ಲಗ್ನ ಪಕ್ಕಾ ಮಾಡಬರ್ೀ" ಎಂದು ಫೋಟೋ ತಂದು ಮುಖದ ಮುಂದ ಹಿಡಿದಿದ್ದ. ಸುಂದರವಾಗಿದ್ದ ಸ್ವಾತಿಯನ್ನು ನೋಡಿ ಇಷ್ಟವಾದ್ರೂ "ನೋಡಕ್ಕೆ ಚೆನ್ನಾಗಿದಾಳೆ. ಮನಿ ಕಡಿ ಹೇಗೋ.. ಮೊದಲೇ ಸಂಪ್ರದಾಯಸ್ಥ ಮನಿ ನಮ್ದು.." ಎಂದು ಮಗನ ಮುಂದೆ ಅನುಮಾನ ವ್ಯಕ್ತಪಡಿಸಿದ್ದಳು ಸುಶೀಲ.

ಫೇಸ್‌ಬುಕ್‌ನಲ್ಲಿದ್ದ ಸ್ವಾತಿಯ ಫೋಟೋ ವಿವರಗಳನ್ನು ಅಮ್ಮನಿಗೆ ತೋರಿಸಿದ್ದ ಸುರೇಶ. ಸ್ವಾತಿ ತನ್ನ ಮನೆಯ ಹಬ್ಬ ಹರಿದಿನಗಳ ಆಚರಣೆ ಫೋಟೋ ಹಾಕಿದ್ದನ್ನು ನೋಡಿ ಸುಶೀಲಾಗೆ ಸಮಾಧಾನವಾಯ್ತು. ರೇಷ್ಮೆ ಸೀರೆ, ಕೈತುಂಬ ಬಳೆ, ಬಂಗಾರದ ಒಡವೆ, ಮನೆಯಲ್ಲಿ ಅಚ್ಚುಕಟ್ಟಾದ ಪೂಜಾ ವ್ಯವಸ್ಥೆ ನೋಡಿ ಸಂತಸದಿಂದ ಒಪ್ಪಿಗೆ ಕೊಟ್ಟಿದ್ದರು.

ಮದುವೆ ದಿನಾಂಕ ಗೊತ್ತಾದ ಮೇಲಂತೂ ಸುಶೀಲಾಗೆ ಸ್ವರ್ಗ ಕೈಗೆ ಸಿಕ್ಕಂತಾಗಿತ್ತು. ಇಂತಹ ಸೊಸೆ ಅಪರೂಪದ ಎಲ್ಲರಿಗೂ ಸಿಕ್ಕಲ್ಲ.. ತಮ್ಮ ಅದೃಷ್ಟವೇ ಸರಿ ಎಂದು ಸಿಕ್ಕಿದವರೊಡನೆ ಜಂಭದಿಂದ ಹೇಳಿಕೊಂಡು ತಿರುಗಾಡ್ತಾ ಇದ್ಲು. ಸೊಸೆಗಾಗಿ ರೇಷ್ಮೆ ಸೀರೆ, ಚಿನ್ನವನ್ನು ಕೈ ಬಿಗಿ ಮಾಡದೆ ಕೊಂಡಳು. ಸುಶೀಲಾರನ್ನು ಸ್ವಾತಿ ಅತ್ತೆ ಎನ್ನದೆ ಅಮ್ಮ ಎಂದಾಗ ಇನ್ನಷ್ಟು ಹಿಗ್ಗಿದರು. ಮದುವೆ ಸಮಯದಲ್ಲಿ ಪಾರ್ಲರಿನವರನ್ನು ಗೊತ್ತುಮಾಡಿ ಸೊಸೆಗೆ ಹೇಗೆಲ್ಲ ಹೇರ್ ಸ್ಟೈಲ್ ಮಾಡಬೇಕು, ಸೀರೆ ಹೇಗೆ ಉಡಿಸಬೇಕು ಅಂತ ಖುದ್ದಾಗಿ ನಿಂತು ಅಲಂಕಾರ ಮಾಡಿಸಿದರು. ಪ್ರತಿ ಶಾಸ್ತ್ರದಲ್ಲೂ ಮಗ ಸೊಸೆಯನ್ನು ಕಣ್ತುಂಬಿಕೊಂಡು ಸಂಭ್ರಮಿಸಿದಳು. ಸೊಸೆಯನ್ನು ಮನಸಾರೆ ಮನೆತುಂಬಿಸಿಕೊಂಡಳು.

ಮದುವೆಯ ಮಾರನೆ ದಿನ ಮನೆಯಲ್ಲಿ ಸತ್ಯನಾರಾಯಣ ಪೂಜೆ ಕಾರ್ಯಕ್ರಮವಿತ್ತು. ಸುರೇಶ ಪೂಜೆಗೆ ಸಿದ್ಧವಾಗಿ ಸುಶೀಲಾರತ್ತ ಮೆಲ್ಲನೆ ಬಂದು, "ಅಮ್ಮ, ಸ್ವಾತಿಗೆ ಸೀರೆ ಉಡಿಸಬೇಕಂತೆ, ಕರೆಯಕ್ಕತ್ತಾಳ" ಎಂದ.

ಸುಶೀಲಾ ಮಗನತ್ತ ವಿಚಿತ್ರವಾಗಿ ನೋಡಿ, "ಆಕಿ ಸೀರೆ ಚೆಂದ್ ಉಡ್ತಾಳಲ್ಲ. .ನಾನೇನಕಂತೆ" ಎಂದರು. "ಅದೆನೋಮ್ಮ.. ನೀ ಹೋಗಲಿಕ್ಕ ಬೇಕು.. ಭಾಳ ಒದ್ದಾಡಕ್ಕತ್ತಾಳ" ಎಂದ.

ಸುಶೀಲಾ ಸ್ವಾತಿಯತ್ತ ಹೋಗಿ ನೋಡಿದ್ರೆ ರವಿಕೆ ತೊಟ್ಟು, ಸೀರೆ ಒಂದು ಸುತ್ತು ಸುತ್ತಿಕೊಂಡು ಉಳಿದ ಭಾಗ ಕೈಲಿ ಹಿಡಿದು ನಿಂತಿದ್ದಳು.

"ಹಿಂಗ್ಯಾಕ ನಿಂತೀಯವ್ವ? ಹೊಸ ಸೀರಿ ಬೇರೆ.. ನೆರಿಗೆ ಹಿಡಿಬೇಕೇನು?" ಅಂತ ನೋಡಿದ್ರೆ ಸೀರೆ ನೆರಿಗೆ ಮಾಡಿರಲಿಲ್ಲ. ಪೂಜೆಗೆ ತಡವಾಗುತ್ತೆ ಅಂತ ಸುಶೀಲಾನೆ ಸರಸರನೆ ಸೀರೆ ಉಡಿಸಿ, ಅವಳನ್ನು ಸಿದ್ದಪಡಿಸಿ ಹೊರಗೆ ಕರೆತಂದು ಪೂಜೆಗೆ ಸಿದ್ಧಪಡಿಸಿದರು. ಸ್ವಾತಿ ಸೀರೆಯನ್ನು ಮುದ್ದೆ ಮಾಡಿ ಕೊಸರಿಕೊಂಡು ಮಣೆ ಮೇಲೆ ಕುಳಿತಳು. ಪೂಜೆ ಮಾಡುವಾಗ ಸ್ವಾತಿ ಅರ್ಚಕರು ಹೇಳಿದಂತೆ ಅನುಸರಿಸಲು ಒದ್ದಾಡಿದ್ದನ್ನು ಸುಶೀಲಳ ಸೂಕ್ಷ್ಮ ಕಣ್ಣುಗಳು ಗ್ರಹಿಸಿದ್ದವು.

ಪೂಜೆ ಮುಗಿಯುತ್ತಲೇ ಸ್ವಾತಿಯ ಜೊತೆಗೆ ಅವಳ ಅಕ್ಕ ರೂಮಿಗೆ ಹೋಗುವಾಗ ಸುಶೀಲಾ ಹಿಂಬಾಲಿಸಿದರು.

"ನಿಮ್ಮನೇಲಿ ನೀ ಪೂಜೆ ಮಾಡುವಾಗ ನೀನು ಇರ್ತಿರಲಿಲ್ಲೆನು? ಅದ್ಯಾಕೆ ಒದ್ದಾಡ್ತಾ ಇದ್ದಿ? ಸೀರಿ ಉಡಕ್ಕೂ ಬರಲ್ಲೇನು? ಫೇಸ್ ಬುಕ್ಕಿನಾಗ ನೀ ಎಂಥ ಚೆಂದ ಸೀರೆ ಉಟ್ಟಿದ್ ನೋಡಿದ್ದೆ.., ಪೂಜೆ ಮಾಡಿದ್ ನೋಡ್ದೆ" ಎಂದರು ಕುತೂಹಲದಿಂದ.

ಆಗ ಸ್ವಾತಿಯ ಅಕ್ಕ ಮೆಲ್ಲನೆ ನಕ್ಕು, "ಅಯ್ಯೊ ಅತ್ತೆ, ಇವಳು ಓದೋದು, ತಿನ್ನೋದು, ತಿರುಗೋದು ಬಿಟ್ಟು ಬೇರೆ ಏನು ಗೊತ್ತಿಲ್ಲ. ಪೂಜೆ ಇರಲಿ, ದೀಪ ರೆಡಿ ಮಾಡಕ್ಕೂ ಬರಲ್ಲ. ಫೇಸ್ಬುಕ್ಕಿಗೆ ಅಂತ ಅಮ್ಮನ ಹತ್ರನೋ ನನ್ನ ಹತ್ರಾನೋ ಸೀರೆ ಉಡಿಸಿಕೊಂಡು ಪೋಸು ಕೊಡೋದಷ್ಟೇ. ಇನ್ಮೇಲೆ ನೀವೇ ಎಲ್ಲಾ ಕಲಿಸಬೇಕು. ಅಪ್ಪ ಅಮ್ಮ ಬೈತಾರೆ ಅಂತ ಮಾಡ್ ಡ್ರೆಸ್ ಫೋಟೋ ಅಲ್ಲಿ ಹಾಕಲ್ಲ" ಎಂದಳು.

ಸುಶೀಲಾ ನಿಟ್ಟುಸಿರಿಟ್ಟು ''ಸಧ್ಯ ಯಾರು ಇಲ್ಲಿಲ್ಲ. ನನ್ನ ಸೊಸೆ ಹಾಗೆ ಹೀಗೆ ಎಂದಿದ್ದೆ. ಫೇಸ್ಬುಕ್ ಫೋಟೋ ನೋಡಿ ಮರುಳಾದೆ. ಪಾಪ ನನ್ಮಗನ ಪಾಡೇನು? ಹೇಗಾದ್ರೂ ಮಾಡಿ ಇವಳನ್ನು ದಾರಿಗೆ ತಂದುಕೋಬೇಕು'' ಎನ್ನುವಾಗಲೇ, "ಏನ್ ಸುಶೀಲಾ.. ಭಾಳ ಛಲೋ ಸೊಸಿ ಸಿಕ್ಕಾಳ ಬಿಡವ್ವಾ.. ಹಿಂಗಾ ಇರಬೇಕು ನೋಡು!" ಎಂದು ಸುಶೀಲಾ ಮಾವನ ಮಗಳು ಕುಚೋದ್ಯವಾಗಿ ಹೇಳಿದಾಗ ಸುಶೀಲ ಬೇಸ್ತು ಬಿದ್ದಳು.


***

ಕೃತಿಯ ಬಗ್ಗೆ

'ಯಾನ'

ಎಸ್.ಎಲ್. ಭೈರಪ್ಪನವರ ಕಾದಂಬರಿ

– ಕೆ.ಎನ್. ಭಗವಾನ್



ವಸ್ತು, ಉದ್ದೇಶ, ವ್ಯಾಪ್ತಿ, ನೈತಿಕತೆ ಮುಂತಾದ ಸಂಕೀರ್ಣ ವಿಷಯಗಳನ್ನೊಳಗೊಂಡ 'ಯಾನ' ಕಾದಂಬರಿಯು ಒಂದೇ ಓದಿಗೆ ದಕ್ಕುವಂಥದ್ದಲ್ಲ.

ಭೌತ-ರಸಾಯನ-ಜೀವ ಶಾಸ್ತ್ರಗಳು, ಖಗೋಳ ವಿಜ್ಞಾನ ವಿಷಯಗಳು ಸ್ವಲ್ಪ ಮಟ್ಟಿಗಾದರೂ ತಿಳಿದಿರದಿದ್ದಲ್ಲಿ ಈ ಅಂತರಿಕ್ಷ ಯಾನವು ಸತಾಯಿಸುವುದು ಖಚಿತ. ಇಂಥದ್ದೊಂದು ಅನಾದೃಶ ಕಾದಂಬರಿಯ ಮೂಲಕ ಡಾ.ಎಸ್.ಎಲ್.ಭೈರಪ್ಪನವರು ಭೂಮಿಯಿಂದ ಬಹು ಎತ್ತರಕ್ಕೆ ಜಿಗಿದು ಅಂತರಿಕ್ಷದ ಅನಂತತೆಗೆ ಲಗ್ಗೆಯಿಟ್ಟಿದ್ದಾರೆ. ಮೂಲ ವಿಜ್ಞಾನ ಸಿದ್ಧಾಂತಗಳಿಗೆ ಸ್ವಲ್ಪವೂ ಚ್ಯುತಿ ಬಾರದಂತೆ ಮೆಗಾ ಕಂಪ್ಯೂಟರಿನ ಮೂಲಕ ಭೂವ್ಯೋಮಗಳ ಕಥನವೊಂದನ್ನು ಹಂತ ಹಂತವಾಗಿ ಅನಾವರಣ ಗೊಳಿಸುತ್ತಾರೆ. ಸೌರ ಮಂಡಲದಲ್ಲಿನ ಗ್ರಹಗಳ ಪರಸ್ಪರ ದೂರ, ನೌಕೆಯಲ್ಲಿ ಕಾಪಿಡಬೇಕಾದ ಗುರುತ್ವ, ಒತ್ತಡ, ಉಷ್ಣತೆ, ನೀರು ಗಾಳಿ ಬಗೆಗಿನ ಎಚ್ಚರ, ಗ್ರಹವೊಂದರ ಗುರುತ್ವ ಪರಿಧಿಯನ್ನು ಮೀರಿ ಮತ್ತೊಂದು ಗ್ರಹದತ್ತ ಜಿಗಿಯಲು ಅಗತ್ಯವಾದ ರಾಕೆಟ್ ಬಳಕೆ- ಇಂಥ ಎಲ್ಲ ವೈಜ್ಞಾನಿಕ ಅಂಶಗಳೂ ಇಲ್ಲಿ ದಾಖಲಾಗಿವೆ. ಹಾಗಾಗಿ ಇದೊಂದು ವೈಜ್ಞಾನಿಕ ಕಾದಂಬರಿ ಎನ್ನಲೂ ಅಡ್ಡಿಯಿಲ್ಲ. ಹಾಗಿದ್ದೂ ಒಬ್ಬ ಕಾದಂಬರಿಕಾರನಿಗೆ ಇರಬೇಕಾದ ಕಲ್ಪನಾ ಸಾಮರ್ಥ್ಯ, ಸ್ವಾತಂತ್ರ್ಯಗಳನ್ನು ಲೇಖಕರು ದುರುಪಯೋಗ ಮಾಡಿಕೊಂಡಿಲ್ಲ ಎಂಬುದು ಗಮನಿಸಬೇಕಾದ ಸಂಗತಿ.

ಯಾನದ ಕಥನವು ಆರಂಭವಾಗುವ ಹೊತ್ತಿಗಾಗಲೇ ಈ ನಕ್ಷತ್ರ ನೌಕೆಯು ೩೭ ವರ್ಷಗಳನ್ನು ಪೂರೈಸಿರುತ್ತದೆ. ಸೌರಮಂಡಲದ ಪರಿಧಿಯನ್ನೂ ಮೀರಿ ಗಂಟೆಯೊಂದಕ್ಕೆ ಒಂದು ಲಕ್ಷ ಕಿ.ಮೀ. ವೇಗದಲ್ಲಿ ಚಲಿಸುತ್ತ, ಭೂಮಿಗೆ ೪೬ ಜ್ಯೋತಿರ್ವರ್ಷಗಳಷ್ಟು ದೂರವಿರುವ ಪ್ರಾಕ್ಸಿಮಾ ಸೆಂಟಾರಿಸ್ ನಕ್ಷತ್ರ ಮಂಡಲದತ್ತ ಸಾಗುತ್ತಿದೆ. (ಒಂದು ಜ್ಯೋತಿರ್ವರ್ಷ = ಒಂದು ಸೆಕೆಂಡಿಗೆ ೩ ಲಕ್ಷ ಕಿ.ಮೀ. ವೇಗದಲ್ಲಿ ಚಲಿಸುತ್ತ ಒಂದು ವರ್ಷದಲ್ಲಿ ಸಾಗುವ ದೂರ).

ನೌಕೆಯು ಭೂಮಿಯನ್ನು ಬಿಟ್ಟಾಗ ಅದರಲ್ಲಿದ್ದ ಇಬ್ಬರೆಂದರೆ- ನೌಕಾ ಚಾಲಕಿ ಉತ್ತರಾ ಹಾಗೂ ತಂತ್ರಜ್ಞಾನಿ ಡಾ.ಸುದರ್ಶನ್. ೩೭ ವರ್ಷಗಳ ನಂತರ ಅವರ ಉತ್ತರದಾಯಿಗಳಾಗಿ ಜೊತೆಗೂಡಿದವರು- ೨೫ ವರ್ಷದ ಮೇಧಿನಿ ಮತ್ತು ೨೨ ವರ್ಷದ ಆಕಾಶ್. ಈ ಉತ್ತರದಾಯಿಗಳನ್ನು ಬಹಳ ವರ್ಷ ಕಾಡುವ ವಿಷಯ ತಮ್ಮ ನಿಜವಾದ ಅಪ್ಪ ಅಮ್ಮ ಯಾರೆಂಬುದು.

ಯಾನದಲ್ಲಿ ಕಾರ್ಯೋನ್ಮುಖಿಯಾಗಿರುವ ನಕ್ಷತ್ರ ನೌಕೆಯ ವಿನ್ಯಾಸವಾದರೂ ಎಂಥದ್ದು? ೩೦೦ ಅಡಿ ಉದ್ದ, ೧೫೦ ಅಡಿ ಅಗಲವಿರುವ ಇದರಲ್ಲಿ ೩ ಅಂತಸ್ತುಗಳು. ಕೆಳಗಿನದು- ಯಾನಿಗಳು ಮತ್ತು ಯಂತ್ರಗಳ ಚಟುವಟಿಕೆಗಳಿಗೆ ಮೀಸಲು. ಅದರ ಮೇಲಿನದು ಆಹಾರ ಪದಾರ್ಥಗಳನ್ನು ಬೆಳೆಸುವ ಕೃಷಿ ಭೂಮಿ. ಇವೆರಡಕ್ಕಿಂತ ಮೇಲಿನದು ಕೆಳ ಅಂತಸ್ತುಗಳಿಂದ ಉತ್ಪತ್ತಿಯಾಗುವ ತೇವ ಮತ್ತು ಅನಿಲಗಳಿಂದ ಹೆಪ್ಪುಗಟ್ಟಿ ನೀರಾಗಿ ಶೇಖರಣೆಯಾಗುವ ಕಕ್ಷಿ. ಎಲ್ಲ ಯಂತ್ರಗಳಿಗೂ ಶಕ್ತಿಪೂರಕ

ಅಣು ವಿದ್ಯುತ್ತು. ಈ ಶಕ್ತಿ ಪೂರೈಕೆ ಒಂದು ಲಕ್ಷ ವರ್ಷಕ್ಕೆ ಲಭ್ಯವಂತೆ! ಆಹಾರ ಧಾನ್ಯ, ತರಕಾರಿ ಬೆಳೆಗಳಿಗೆ ಗೊಬ್ಬರ ಯಾವುದು ಗೊತ್ತೇ? ಯಾನಿಗಳು ವಿಸರ್ಜಿಸುವ ಸಾರಜನಕ ವಸ್ತುಗಳು!

ನೌಕಾ ಯಂತ್ರಗಳ ಚಟುವಟಿಕೆಯನ್ನು ಸುಸ್ಥಿತಿಯಲ್ಲಿಡಲು ನೌಕೆಯಿಂದ ಭೂ ನಿಯಂತ್ರಣ ಕೇಂದ್ರಕ್ಕೆ, ಭೂ ನಿಯಂತ್ರಣ ಕೇಂದ್ರದಿಂದ ನೌಕೆಗೆ ಸುದ್ದಿ ಸಂದೇಶ ರವಾನಿಸಲು, ಸಾಹಿತ್ಯ ವಾಚಿಸಲು ಮೆಗಾ ಕಂಪ್ಯೂಟರಿನ ಸೌಲಭ್ಯವಿದೆ.

ಇಲ್ಲಿನ ಒಂದು ಶೀತಲ ಪೆಟ್ಟಿಗೆಯಲ್ಲಿ ಅಂಡಾಣು-ವೀರ್ಯಾಣುಗಳ 'ಜೋಡಿ ಯುಗ್ಮ'(ಝೈಗೋಟ್) ಗಳನ್ನು ಆರೋಗ್ಯವಂತ ಹೆಣ್ಣು ಗಂಡುಗಳ ದೇಹದಿಂದ ತೆಗೆದು ಸಂಗ್ರಹಿಸಿ ಇಡಲಾಗಿದೆ. ಹೆಣ್ಣು ತನ್ನ ಗರ್ಭ ಕೋಶದೊಳಕ್ಕೆ ಯಾವೊಂದು ಯುಗ್ಮವನ್ನಾಗಲೀ, ಬೀಜಾಂಕುರವನ್ನಾಗಲೀ ರೋಬೋ ಮೂಲಕ ಇಂಜೆಕ್ಟ್ ಮಾಡಿಕೊಂಡು ಗರ್ಭ ಧರಿಸಬಹುದು. ಆದಕಾರಣ ನೌಕಾಯಾನಿಗಳಿಗೆ ದೈಹಿಕ ಸಂಬಂಧದ ಅವಶ್ಯಕತೆಯೇ ಇರುವುದಿಲ್ಲ. ಹಾಗಿದ್ದೂ ಡಾ.ಸುದರ್ಶನ್‌ಗೆ ಉತ್ತರಾಳನ್ನು ಸಂಭೋಗಿಸುವ ಹಪಾಹಪಿ. ಇದಕ್ಕೆ ಅವಳು ಒಪ್ಪದೇ ಹೋದದ್ದರಿಂದಾಗಿ ಇಬ್ಬರ ನಡುವೆ ಏರ್ಪಡುವ ತಾರ್ಕಿಕ, ನೈತಿಕ ವಾಗ್ವಾದ ಹೀಗಿದೆ–

"ನಾವು ಭೂಮಿಯ ಮೇಲೆ ಮಾಡಿಕೊಂಡ ಪ್ರಮಾಣ, ವಚನ ಎಂಬ ಕಲ್ಪನೆ ಸೂರ್ಯನ ಗುರುತ್ವಾಕರ್ಷಣೆಯನ್ನೇ ದಾಟಿ ಬಂದ ಮೇಲೂ ಇರಬೇಕೆ?" ಎಂದು ಉತ್ತರಾ ಪ್ರಶ್ನಿಸಿದರೆ, ಅದಕ್ಕೆ ಡಾ.ಸುದರ್ಶನ್ "ನಾವು ಭೂಮಿಯಲ್ಲಿ ಕೂತು ಪರಿಕಲ್ಪಿಸಿದ ಗುರುತ್ವ, ಸಾಪೇಕ್ಷ, ಶಾಖ, ವಿದ್ಯುತ್ ಮುಂತಾದ ವೈಜ್ಞಾನಿಕ ಅಂಶಗಳು ಇಡೀ ಜ್ಞಾತ ವಿಶ್ವಕ್ಕೇ ಅನ್ವಯಿಸುವವಲ್ಲವೇ?"ಎಂಬುದಾಗಿ ಮರು ಪ್ರಶ್ನಿಸುತ್ತಾನೆ.

ಯಾನವು ಪ್ರಾರಂಭವಾಗಿ ಹತ್ತು ವರ್ಷಗಳ ಮೇಲಾದರೂ ಗರ್ಭ ಧರಿಸಲು ಒಪ್ಪದಿದ್ದ ಉತ್ತರಾಳ ಮೊಂಡುತನದಿಂದಾಗಿ ಯಾನವು ಹತ್ತಾರು ತಲೆಮಾರುಗಳ ಕಾಲ ಅನೂಚಾನವಾಗಿ ಮುಂದುವರಿಯುವುದು ಹೇಗೆಂಬ ಸಮಸ್ಯೆ ಡಾ.ವೆಂಕಟ್ ಅವರನ್ನು ಕಾಡುತ್ತದೆ. ಅವಳನ್ನು ಒಪ್ಪಿಸುವುದಕ್ಕಾಗಿ ಅವಳ ಅಂಟಾರ್ಟಿಕಾ ಸಹಯಾನಿ – ಮಾಜಿ ಪ್ರಿಯಕರ ಸ್ಕ್ವಾಡ್ರನ್ ಲೀಡರ್ ಯಾದವ್ ಮೂಲಕ ಸಂದೇಶ ಕಳಿಸಲಾಗುತ್ತದೆ. ಆಗಷ್ಟೆ ಅವಳು ಬಾಡಿಗೆ ತಾಯಾಗಲು ಒಪ್ಪಿಕೊಳ್ಳುವುದು.

ಯಾನ ನೌಕೆಯನ್ನು ರೂಪಿಸಲು ೩೦೦ ತಂತ್ರಜ್ಞರು ೩ ವರ್ಷಗಳ ಕಾಲ ಶ್ರಮಿಸಿದ್ದರು. ಅದರ ಯಶಸ್ಸಿಗಾಗಿ ಡಾ.ವೆಂಕಟ್ ಬೆಳ್ಳಿಯಲ್ಲಿ ಎರಕ ಹೊಯ್ದ ನೌಕೆಯ ಮಾದರಿಯೊಂದನ್ನು ಅವರ ಮನೆದೇವರಾದ ತಿರುಪತಿ ತಿಮ್ಮಪ್ಪನಿಗೆ ಒಪ್ಪಿಸಿ ಬರುವುದು ಅವರ ತಾಯಿಯ ಸಲಹೆಯಂತೆ! ಯೋಜನೆಯು ಕೇಂದ್ರ ಸರ್ಕಾರದ ಇಲಾಖೆಗೆ ಒಳಪಡುವುದರಿಂದ ಈ ಪ್ರಕ್ರಿಯೆಗೆ ಕೇಂದ್ರ ಸರ್ಕಾರದಿಂದ ದಂಡನೆಯ ಎಚ್ಚರಿಕೆ ಪತ್ರ ಬರುತ್ತದೆ. ಇದಕ್ಕೆ ಸ್ಕ್ವಾಡ್ರನ್ ಲೀಡರ್ ಯಾದವ್ ಆಕ್ಷೇಪ ವ್ಯಕ್ತಪಡಿಸುತ್ತ, "ಭಾರತೀಯ ಸೈನಿಕರಿಗೆ ಶತ್ರು ಸೈನ್ಯದ ಮೇಲೆ ಮುನ್ನುಗ್ಗಿ ಹೋರಾಡಲು ಆವೇಶ ತುಂಬುವುದೇ ಹರ ಹರ ಮಹಾದೇವ್ ಎಂಬ ಸಮರ ಘೋಷ" ಎಂದು ಡಾ.ವೆಂಕಟ್‌ರನ್ನು ಸಮರ್ಥಿಸುತ್ತಾನೆ. ಭಾರತೀಯ ಬಾಹ್ಯಾಕಾಶ ಸಂಸ್ಥೆ (ಐ.ಎಸ್.ಆರ್.ಒ) ಯ ಯೋಜನಾ ತಂಡವು ಚಂದ್ರಯಾನ–೨ರ ಯಶಸ್ಸಿಗಾಗಿ ಹೀಗೆಯೇ ತಿರುಪತಿ ದೇವರ ಕೃಪೆ ಬೇಡಿದ್ದನ್ನು ಇಲ್ಲಿ ಸ್ಮರಿಸಬಹುದಾಗಿದೆ.

ಡಾ.ಎಸ್.ಎಲ್.ಭೈರಪ್ಪನವರು ಓದುಗರನ್ನು ಬಾಹ್ಯಾಂತರಿಕ್ಷದಲ್ಲಿ ಯಾನ ಮಾಡಿಸುತ್ತಲೇ ಬಾರತ ಭೂಮಿಯ ಮೇಲಿನ ಕೌತುಕ ವಿದ್ಯಮಾನಗಳ ಪ್ರಾತ್ಯಕ್ಷಿಕೆ ನೀಡುತ್ತಾರೆ.

ಕಾದಂಬರಿಯಲ್ಲಿ ಹತ್ತಾರು ಪಾತ್ರಗಳಿದ್ದರೂ ನಮ್ಮನ್ನು ಹೆಚ್ಚು ಕಾಡುವುದು ನಾಲ್ಕು ಮಾತ್ರ– ಉತ್ತರಾ, ಡಾ.ಸುದರ್ಶನ್, ಸ್ಕ್ವಾಡ್ರನ್ ಲೀಡರ್ ಯಾದವ್ ಮತ್ತು ಯೋಜನೆಯ ಮುಖ್ಯಸ್ಥ ಡಾ.ವೆಂಕಟ್. ಈ ಕಾದಂಬರಿ ರಚನೆಗೆ ಪ್ರೇರಣೆ ನೀಡಿದ್ದು ಅಮೆರಿಕಾ

೧೯೭೭ರಲ್ಲಿ ಅಂತರಿಕ್ಷಕ್ಕೆ ಉಡಾಯಿಸಿದ ವಾಯೇಜರ್ ನೌಕೆಯೆಂದೂ, ಅದು ಮಾನವ ರಹಿತವಷ್ಟೆ ಎಂದೂ ವಿಜ್ಞಾನಿಗಳು ಅಭಿಪ್ರಾಯ ಪಟ್ಟಿದ್ದಾರೆ. ಇಲ್ಲಿಯ ಯಾನ ನೌಕೆಯಾದರೋ ಮಾನವ ಸಹಿತವಾದುದು.

ಇತ್ತೀಚೆಗೆ ಕಾನೂನು ಚೌಕಟ್ಟಿಗೆ ಸೇರಿಹೋದ ಸಹಕೂಟ (ಲಿವಿಂಗ್ ಟುಗೆದರ್), ಬಾಡಿಗೆ ತಾಯಿತ್ವ (ಸೆರೋಗೇಟ್ ಮದರ್ ಹುಡ್), ಪ್ರಣಾಳ ಶಿಶು (ಟೆಸ್ಟ್ ಟ್ಯೂಬ್ ಬೇಬಿ) ಇತ್ಯಾದಿ ಸಂಗತಿಗಳನ್ನು ಡಾ.ಭೈರಪ್ಪನವರು ಸಾಕಷ್ಟು ಸಮರ್ಥನೆಯಿಂದಲೂ, ವಿವೇಚನೆಯಿಂದಲೂ ಬಳಸಿಕೊಂಡಿದ್ದಾರೆ. ಸೌರ ಮಂಡಲದಾಚೆಗಿನ ಅಂತರಿಕ್ಷದಲ್ಲಿ ಸೂರ್ಯ ಮತ್ತು ಮಾನವ ಸಂಬಂಧಗಳ ಚರ್ಚೆ ನಡೆಸಿದ್ದಾರೆ. ಅಂತಿಮವಾಗಿ ಸತ್ಯವೆಂಬುದು ಭಾವನಾತ್ಮಕ ಅಂಶವೇ? ಅದರ ಆನ್ವೇಷಣೆಗೆ ವಿಜ್ಞಾನದ ಪರಿಮಿತಿಗಳೇನು? ಎಂದು ಪ್ರಶ್ನಿಸುತ್ತ ಅದರ ವ್ಯಾಪ್ತಿಗೂ ಒಂದು ಮಿತಿಯಿದೆಯೆಂದು ಒಪ್ಪಿಸುತ್ತಾರೆ. ಹೆಣ್ಣಿನ ನಗ್ನತೆಯನ್ನು ಕೃಷ್ಣ ಗುಹ್ವರ ಸಿದ್ಧಾಂತಕ್ಕೆ (ಬ್ಲಾಕ್ ಹೋಲ್ ಥಿಯರಿ) ಸಮೀಕರಿಸಿ ತರ್ಕದಲ್ಲಿ ಸೌಂದರ್ಯ ಬಿಂಬಿಸುತ್ತಾರೆ.

ಒಟ್ಟಾರೆಯಾಗಿ 'ಯಾನ' ಕಾದಂಬರಿಯು ಬಾನ ಯಾನದಲ್ಲಿ ಬದ್ಧತೆ–ಗೌಪ್ಯತೆ–ನೈತಿಕತೆಗಳನ್ನು ಮುಖಾಮುಖಿಯಾಗಿಸುತ್ತ, ಬ್ರಹ್ಮಾಂಡ ಪಿಂಡಾಂಡಗಳ ಸಮೀಕ್ಷೆ ನಡೆಸುತ್ತ ಓದುಗರನ್ನು ಒಂದು ನಿಗೂಢ, ಅನೂಹ್ಯ ಹಾಗೆಯೇ ಅದ್ಭುತ ಜಗತ್ತಿಗೆ ಕೊಂಡೊಯ್ಯುತ್ತದೆ ಎಂದು ಹೇಳಬಹುದು.

***

ಅಸಾಧ್ಯ ಆದರೂ ನಿಜ!!

– ಮಾಧುರಿ ಕೃಷ್ಣ

ನಿಶ್ಚಿತ ಉದ್ದೇಶವೇನೂ ಇಲ್ಲದೆ ಸುಮ್ಮನೆ ಟಿ.ವಿ. ಮುಂದೆ ಕುಳಿತು ಪ್ರಸಾರವಾಗುತಿದ್ದ ವಾರ್ತಾಲಾಪವನ್ನು ನೋಡುತ್ತಿದ್ದ ಪದ್ಮಾವತಿ ದಿಗ್ಗನೆ ಎದ್ದು ನೆಟ್ಟಗೆ ಕುಳಿತು ಟಿ.ವಿ.ಯತ್ತ ಗಮನಹರಿಸಿದರು. ಬೆಟ್ಟಗುಡ್ಡದ ಕಡಿದಾದ ಏರಿನಲ್ಲಿ ಬಟ್ಟೆ ತುಂಡೊಂದರ ಮೇಲೆ ನವಜಾತ ಹೆಣ್ಣು ಶಿಶುವೊಂದು ಅಕಸ್ಮಾತ್ ಪತ್ತೆಯಾಗಿತ್ತು. ಇನ್ನೂ ಜೀವಂತವಾಗಿದ್ದ ಮಗುವನ್ನು ಎತ್ತಿಕೊಂಡವರು ಊರೊಳಕ್ಕೆ ಓಡೋಡಿ ಹೋಗಿದ್ದರು. ಕೂಡಲೇ ಜನ ಸೇರಿ ಸಮೀಪದ ಪೋಲೀಸ್ ಸ್ಟೇಶನ್ನಿಗೆ ಸುದ್ದಿ ಮುಟ್ಟಿಸಿ ಆ ಮಗುವನ್ನು ರಕ್ಷಿಸಿದ್ದರು.

ಅಂದೇಕೋ ಸೂರ್ಯದೇವ ಮೋಡಗಳ ಮರೆಯಿಂದ ಹೊರಬರಲು ಉದಾಸೀನನಾಗಿಯೇ ಇದ್ದು ತನ್ನ ತೀಕ್ಷ್ಣ ಕಿರಣಗಳನ್ನು ಹೊರಹಾಕಲು ನಿರುತ್ಸಾಹನಾಗಿದ್ದುದರಿಂದ ಮಗು ಬದುಕುಳಿದಿರಬಹುದು ಎನ್ನಲಾಗಿತ್ತು. ಬಾಣಂತಿಯೊಬ್ಬಳು ಮಗುವಿಗೆ ಕರುಣೆಯಿಂದ ಹಾಲೂಡಿಸಿ ಕಾಪಾಡಿದ್ದಳು. ಮೇಲಿಂದ ಮೇಲೆ ಎರಡುಮೂರು ಚಾನೆಲ್ಲುಗಳಲ್ಲಿ ಅದದೇ ಪ್ರಸಾರ ವಾಗುತ್ತಿದ್ದುದನ್ನು ನೋಡುತ್ತಿದ್ದ ಪದ್ಮಾವತಿ ಸೋಫಾದ ಮೇಲೆ ಕುಸಿದು ಕುಳಿತರು. ಮನಸ್ಸು ಐದಾರು ದಶಕಗಳ ಹಿಂದಿನ ಕಾಲಕ್ಕೋಡಿತು.

ಅಂದು ಆಗಿದ್ದೂ ಅದೇ! ತನ್ನ ನಾಲ್ಕನೇ ಹೆರಿಗೆಯಲ್ಲಿ ಅದೇತಾನೇ ಹುಟ್ಟಿದ ಹೆಣ್ಣುಮಗುವನ್ನು ತಾಯೊಬ್ಬಳು ನಿಷ್ಕರುಣೆಯಿಂದ ಬಟ್ಟೆಯಲ್ಲಿ ಸುತ್ತಿ ಹಿತ್ತಲಿನಲ್ಲಿ ಎಸೆದು ಬಂದು ಏದುಸಿರು ಬಿಡುತ್ತ ಮಲಗಿದ್ದಳು. ಪ್ರಸವಕ್ಕೆ ಸಹಾಯಮಾಡಿದ ಹೆಂಗಸು ಒಳಬಂದಳು. ಮಗುವನ್ನು ಕಾಣದೇ ಹೆತ್ತ ತಾಯಿಯ ಹೆಗಲನ್ನು ಗಲಗಲನೆ ಅಲುಗಾಡಿಸಿ ಕಿರುಚಿ ಕೇಳಿದಳು, "ಮಗು ಎಲ್ಲಿ?"

ಮಲಗಿದ್ದ ಬಾಣಂತಿ ಉತ್ತರಿಸಲಿಲ್ಲ. ಎದೆ ಮಾತ್ರ ಜೋರಾಗಿ ಏರಿಳಿಯುತಿತ್ತಷ್ಟೆ!

ಗಾಬರಿಗೊಂಡ ಸಹಾಯಕಿ ಮತ್ತಷ್ಟು ಜೋರಾಗಿ ಕುಲುಕಿದಳು. "ಬೇಗ.. ಬೇಗ ಹೇಳಿ"

ತುಂಡು ತುಂಡು ಶಬ್ದ ಹೊರಬಿತ್ತು. "ಹಿತ್ತಲಿನ... ಗೊಬ್ಬರ ಗುಂಡಿ..." ನಿಶ್ಶಕ್ತಿ ಆವರಿಸಿತು. ಪ್ರಜ್ಞೆ ತಪ್ಪಿತು. ಮತ್ತವಳಿಗೆ ಪ್ರಜ್ಞೆ ಬಂದದ್ದು ಆ ಸಹಾಯಕಿ ಹೆಂಗಸು ಮಗುವನ್ನು ಅವಳೆದೆಗೆ ಹಿಡಿದು ಹಾಲೂಡಿಸಲು ಯತ್ನಿಸುವಾಗಲೇ!

"ಹೆಣ್ಣು.. ಹೆಣ್ಣು.... ಹೆಣ್ಣು.."

ಆ ಪ್ರಸವ ಸಹಾಯಕಿಗೆ ಎಲ್ಲ ಅರ್ಥವಾಗಿತ್ತು. ಸಶಬ್ದವಾಗಿ ನಿಟ್ಟುಸಿರಿಟ್ಟಳು. ಆ ಅಮ್ಮನವರ ಎಲ್ಲ ಹೆರಿಗೆಯನ್ನು ಅವಳೇ ಮಾಡಿಸಿದ್ದಳು. ಮೊದಲಿನೆರಡು ಹೆಣ್ಣುಮಕ್ಕಳು, ಮೂರನೇದು ಮೊದಲ ಮಗುವೊಂದರ ಚೇಷ್ಟೆಯ ಕಾಲ್ತುಳಿತಕ್ಕೆ ಸಿಕ್ಕಿ ಅವಧಿಗೂ ಮುಂಚೆ ಸತ್ತು (still born) ಹುಟ್ಟಿ ಬಂತು. ಆ ಮನೆಯವರಿಗೆ, ತಾಯಿಯಾದವಳಿಗೆ ಗಂಡು ಮಗುವೇ ಬೇಕಿತ್ತು.

ಅದರ ಬೆನ್ನಿಗೇ ತಾಯಿ ಇನ್ನೊಂದು ಬಸುರಾದಳು. ಮತ್ತೊಂದು ಹೆಣ್ಣು ಮಗುವಿನ ಜನನ! ಬೇಸತ್ತ ತಾಯಿ ನೊಂದು ಮಗುವನ್ನು ಎಸೆದು ಬಂದಳು. ಆದರೆ ಜಾಗರೂಕಳಾದ ಸಹಾಯಕಿಯಿಂದಾಗಿ ಅಸಹಾಯಕವಾದ ಹೆಣ್ಣುಮಗು ಬದುಕುಳಿಯಿತು. ಎದೆಯಲ್ಲಿ ಕಟ್ಟಿನಿಂತ ಹಾಲಿನ ತೀವ್ರ ನೋವಿನಿಂದಾಗಿ ತಾಯಿ ದಾರಿಕಾಣಿಸದೆ ಹಾಲೂಡತೊಡಗಿದಳು. .ಮಗು ಬೆಳೆಯತೊಡಗಿತು.

ಪುನಃ ಪುನಃ ಪ್ರಸಾರವಾಗುತಿದ್ದ ಅದದೇ ವಾರ್ತೆಯನ್ನು ಪದ್ಮಾವತಿ ಮತ್ತೆ ಮತ್ತೆ ನೋಡಿದರು. ಗಂಡು ಮಗುವನ್ನು ನುಂಗಿ ಬಂದ ಹೆಣ್ಣು ಮಗು, ತನ್ನ ನಂತರ ಸಾಲು ಸಾಲು ಗಂಡುಮಕ್ಕಳ ಜನನಕ್ಕೆ ನಾಂದಿ ಹಾಕಿ, ಬದುಕಿನ ಅಲ್ಲಸಲ್ಲದ ಬವಣೆಗಳನ್ನೆಲ್ಲ ತಾನೇ ಅನುಭವಿಸಿಕೊಂಡು ಬಂದರೂ, ಅಸಾಧ್ಯ ಬುದ್ಧಿವಂತಳಾಗಿ, ಇಂಗ್ಲೀಷ್ ವೈದ್ಯ ವಿದ್ಯೆಯನ್ನು ಓದಿ, "ಪ್ರಸೂತಿ ತಜ್ಞೆ"ಯಾಗಿ ಕೊನೆಗೊಳ್ಳುತ್ತಿರುವ ಸಹಸ್ರಮಾನಕ್ಕೇ ಒಂದು ಹೊಸ ಶೋಭೆಯಾದರು. ನಾಡಿಗೆ ನಾಡೇ ಆಕೆಯ ಗುಣಗಾನಗೈಯುತಿತ್ತು.

ವಯಸ್ಸಾದ 'ಗೈನೆಕಾಲಜಿಸ್ಟ್ ಪದ್ಮಾವತಿ' ತಾನು ಕುಳಿತ ಸೋಫಾದಲ್ಲಿಯೇ ಬಹುಹೊತ್ತಿನ ತನಕ ಹಾಗೇ ಕುಳಿತು ಆ ವಾರ್ತಾಲಾಪವನ್ನೇ ಮರಳಿ ಮರಳಿ ನೋಡುತ್ತಲೇ ಇದ್ದರು. ಪೂರ್ವಗ್ರಹಗಳಿಂದ ಪೀಡಿತವಾಗುವ ಮಾನವ ಮನೋಪಥ ಆದೆಷ್ಟು ವಿಚಿತ್ರವಲ್ಲವೇ?

***



ಮಾಧುರಿ ಕೃಷ್ಣ – ಕೊನೆಯ ಬರಹ

ಶ್ರೀಮತಿ ಮಾಧುರಿ ಕೃಷ್ಣ ನಮ್ಮ ವೇದಿಕೆಯ ಸಕ್ರಿಯ ಸದಸ್ಯರು. ಪ್ರತಿ ದಾಸೋಹದಲ್ಲೂ ತಪ್ಪದೇ ಭಾಗವಹಿಸಿ ತಮ್ಮ ಕುತೂಹಲಭರಿತ ಪ್ರಸ್ತುತಿಗಳನ್ನು ವಾಚಿಸುತ್ತಿದ್ದರು. "ಅಸಾಧ್ಯ ಆದರೂ ನಿಜ"– ಇದು ದಾಸೋಹದಲ್ಲಿ ಅವರ ಕೊನೆಯ ಪ್ರಸ್ತುತಿ, ಅಕ್ಟೋಬರ್ 11ರಂದು ನಡೆದ ದಾಸೋಹದಲ್ಲಿ ಭಾಗವಹಿಸಿದ್ದ ಮಾಧುರಿಯವರು 03, ನವೆಂಬರ್ 2025ರಂದು ಇಹಲೋಕವನ್ನು ತ್ಯಜಿಸಿದರು.

ನಮ್ಮ ಪ್ರೀತಿಯ ಮಾಧುರಿ ಕೃಷ್ಣ ಅವರು ಇಲ್ಲವೆನ್ನುವ ಸುದ್ದಿ ಕೇಳಿದಾಗಿನಿಂದ ಬಹಳ ತಳಮಳವಾಗುತ್ತಿದೆ.

ಆತ್ಮೀಯತೆ, ಮೆಲು ಮಾತು, ಅವರದೇ ಛಾಪನ್ನು ಹೊತ್ತ ವಿಶಿಷ್ಟವಾದ ಬರೆಹಗಳು ಇನ್ನಿಲ್ಲವಾಗಿವೆ. ವೇದಿಕೆಯಲ್ಲಿ ಸತತ ಕ್ರಿಯಾಶೀಲತೆಯಿಂದಿದ್ದ ಮಾಧುರಿಯವರು ನಮ್ಮ ವೇದಿಕೆಗೆ ಹೆಚ್ಚಿನ ಸಾಹಿತ್ಯಿಕ ಮೌಲ್ಯವನ್ನು ಒದಗಿಸಿದವರು. ಹಲವು ಕಾದಂಬರಿಗಳನ್ನು, ಕಥೆಗಳನ್ನು ರಚಿಸಿರುವ ಅವರದು ಮರೆಯಲಾಗದ ವ್ಯಕ್ತಿತ್ವ.

ನೋಡಿಯೋ ವೇದಿಕೆಯಲ್ಲಿ ಅವರು ಓದಿದ ಧಾರಾವಾಹಿ ಬರೆಹಗಳು ಆಶ್ಚರ್ಯವನ್ನುಂಟು ಮಾಡುತ್ತಿದ್ದವು. ನನಗೆ ಯಾವಾಗಲೂ ಅನ್ನಿಸುತ್ತಿತ್ತು; ಇವರೇಕೆ ಧಾರಾವಾ ಬರೆಹಗಳನ್ನು ತಿಂಗಳ ದಾಸೋಹದಲ್ಲಿ ಓದುತ್ತಾರೆ. ಒಂದು ತಿಂಗಳು ಜ್ಞಾಪಕ ಇಟ್ಟುಕೊಳ್ಳಲು ಸಾಧ್ಯವೇ ಅಂತ. ಇಂದು ಅವರು ತಮ್ಮ ಧಾರಾವಾಹಿಗಳನ್ನು ಅರ್ಧಕ್ಕೇ ಬಿಟ್ಟು ನಡೆದೇಬಿಟ್ಟರು. ಮುಂದುವರೆಸಬೇಕಾದ ಜವಾಬ್ದಾರಿ ನಮ್ಮೆಲ್ಲರದು.

ಮಾಧುರಿಯವರಿಗೆ ಅಂತಿಮ ನಮನ.

ಸಮನ್ವಯ ಸಮಿತಿ ಕನ್ನಡವೇ ಸತ್ಯ ವೇದಿಕೆಯ ಪರವಾಗಿ

ಬೆಂ.ಶ್ರೀ. ರವೀಂದ್ರ

ಸಮನ್ವಯ ಸಮಿತಿ ಕನ್ನಡವೇ ಸತ್ಯ ಪ್ರತಿಷ್ಠಾನ
ನೋಡಿಯೋ ಸಾಹಿತ್ಯ ದಾಸೋಹ ವೇದಿಕೆ

ಸಾಹಿತ್ಯ ದಾಸೋಹ – 242

ಅಧ್ಯಕ್ಷರ ಅನಿಸಿಕೆಗಳು



ಕೆ.ಎನ್.ಭಗವಾನ್

'ಸಮನ್ವಯ ಸಮಿತಿ– ಕನ್ನಡವೇ ಸತ್ಯ' ನೋಡಿಯೋ ಸಾಹಿತ್ಯ ವೇದಿಕೆಯ ಎಲ್ಲ ನುಡಿಬಂಧುಗಳಿಗೂ ಸಪ್ರೇಮ ಪ್ರಣಾಮಗಳು. ಹಾಗೆಯೇ ೨೪೨ನೇ ಸಂಚಿಕೆಗೆ ನನ್ನನ್ನು ಅಧ್ಯಕ್ಷನನ್ನಾಗಿ ಆಹ್ವಾನಿಸಿದ ಶ್ರೀ ಕೆ.ಎನ್.ಮಹಾಬಲ ಅವರಿಗೆ ನನ್ನ ಕೃತಜ್ಞತಾಪೂರ್ವಕ ವಂದನೆಗಳು. ಕಳೆದ ಶುಕ್ರವಾರ ಸಂಜೆಯವರೆಗೆ ನನಗೆ ಬಂದು ಸೇರಿದ ಲೇಖನಗಳನ್ನು ನನ್ನ ಪರಿಜ್ಞಾನದ ಮಿತಿಯಲ್ಲಿ ಅವಲೋಕಿಸಿ ಸಂಕ್ಷಿಪ್ತ ಅಭಿಪ್ರಾಯವನ್ನು ತಿಳಿಸಬಯಸುತ್ತೇನೆ. ಅನಿಸಿಕೆಗಳ ಅನುಕ್ರಮಣಿಕೆ ನನಗೆ ಲೇಖನಗಳು ಬಂದು ಸೇರಿದ ರೀತಿಯಲ್ಲಿವೆ.

೧. ಎಸ್, ಮಂಜುನಾಥ (ಹಿಮನಾಥ) – 'ನೀರಹನಿ', 'ಚಿನ್ನದ ಪದಕ' (ಎರಡು ಕವನಗಳು)

ಮೊದಲಿಗೆ ಶ್ರೀ ಎಸ್.ಮಂಜುನಾಥ್ ಅವರು ತಮ್ಮ 'ನೀರಹನಿ' ಮತ್ತು 'ಚಿನ್ನದ ಚಂಪಕ' – ಎಂಬೆರಡು ಕವನಗಳನ್ನು ಕಳಿಸಿ ವಾಚಿಸಿದ್ದಾರೆ. ಇವು ನಾಲ್ಕು ಸಾಲುಗಳ– ಅಂತ್ಯ ಪ್ರಾಸದ ಮಾದರಿಯವು. 'ಒಂದು ಮೇಘದಲೆಯಷ್ಟು ಬಿಂದುಗಳು, ಯಾವ ಬಿಂದು ಎಲ್ಲಿ ಬೀಳುವುದೆಂದು ಹೇಳಲಾದೀತೇ?' ಎಂದು ತೃಪ್ತಿಯ ಭಾವ ಸೂಚಿಸುತ್ತಲೇ, 'ದಾಹ ತಣಿದವರು ಹನಿಯ ನೆನಸುವರೇನು?' ಎಂದು ವಿಷಾದಿಸುತ್ತಾರೆ. 'ಸಂಪಿಗೆ ಹೂವಿನ ಪರಿಮಳಕ್ಕೆ ಭೃಂಗವು ಬಾರದಿದ್ದರೇನೇನು, ಗಾಳಿಗೆ ಗಂಧ ಹರಡುತ್ತದೆ; ಅದೇ ಚಂಪಕ ಚಿನ್ನದ ಹೂವಿನ ಪದಕವಾಗಿ ಅಂಗನೆಯ ಕೊರಳನ್ನು ಶೋಭಿಸುವುದಲ್ಲವೇ' ಎನ್ನುತ್ತಾರೆ ಇನ್ನೊಂದು ಸರಳ ಕವನದಲ್ಲಿ.

೨. ವಿಠ್ಠಲ ಇಜೇರಿ – 'ಕೊನೆ ಎಲೆ'

ಆಂಗ್ಲ ಲೇಖಕ ಒ.ಹೆನ್ರಿ ಅವರ 'ಲಾಸ್ಟ್ ಲೀಫ್' ಕಥೆಯನ್ನು ಸರಳಗೊಳಿಸಿ 'ಕೊನೆ ಎಲೆ' ಯಾಗಿ ಅನುವಾದಿಸಿದ್ದಾರೆ ಶ್ರೀ ವಿಠ್ಠಲ್ ಇಜೇರಿಯವರು. ನಿಮೋನಿಯಾದಿಂದ ಜೀವದಾಸೆಯನ್ನೇ ತೊರೆದಿದ್ದಳು ಕಲಾವಿದೆ ಜಾನ್ಸಿ. ಅವಳಲ್ಲಿ ಆತ್ಮವಿಶ್ವಾಸ ತುಂಬಿ ಬದುಕುಳಿಯುವ ಆಶಯದಿಂದ, ಆಕೆಯ ಕೋಣೆಯ ಹೊರಗಿನ ಗೋಡೆಯ ದಿನಕ್ಕೊಂದು ಎಲೆ ಉದುರುತ್ತಿರುವಂತೆ ಚಿತ್ರಿಸುತ್ತ ಹೋಗುತ್ತಾನೆ. ಹಾಗೆ ಅವನು ಚಿತ್ರ ಬರೆಯುತ್ತಿದ್ದುದು ಮಂಜು ತುಂಬಿರುತ್ತಿದ್ದ ಓಣಿಯ ಗೋಡೆಯ ಮೇಲೆ. ಹಾಗೆ ಬರೆಯುತ್ತ ಹೋದಂತೆ ಒಂದು ದಿನ ವಿಷಮಶೀತ ಬಾಧೆಯಿಂದ ಅವನೇ ಸಾಯುತ್ತಾನೆ. ಜಾನ್ಸಿಯು ಚಿತ್ರ ಮುಂದುವರೆಯುತ್ತದೆಂಬ ಹಂಬಲದಿಂದ ದಿನ ಕಳೆಯುತ್ತ ಕಳೆಯುತ್ತ ಆರೋಗ್ಯ ಸುಧಾರಿಸುತ್ತದೆ. ಸಾವಿನಿಂದ ಪಾರಾಗುತ್ತಾಳೆ. ವಿಪರ್ಯಾಸವೆಂದರೆ ಇದೇನೇ. ದೀಪದಂತೆ ತಾನುರಿದು ಉಳಿದವರಿಗೆ ಬೆಳಕು ಕೊಡುವ ನೀತಿ ಕಥೆ.

೩. ಮನೋಹರ ಗೋಖಲೆ – 'ಸಾಧಕ ಏಕನಾಥ ರಾನಡೆ'

ಭಾರತದ ಪಾದಪದ್ಮದಂತಿರುವ ಕನ್ಯಾಕುಮಾರಿಯ ನಡುಬಂಡೆಯ ಮೇಲೆ ಭವ್ಯವಾಗಿ ಎದ್ದು ನಿಂತಿರುವ ವೀರ ಸಂನ್ಯಾಸಿ ವಿವೇಕಾನಂದರ ಪ್ರತಿಮೆ ಹಾಗೂ ಸ್ಮಾರಕವನ್ನು ನಾವು ನೋಡಿಯೇ ಇರುತ್ತೇವೆ. ಆ ಸ್ಮಾರಕ ಕಟ್ಟಡದ ಹಿಂದೆ ೧೦ ವರ್ಷಗಳ

ಕಾಲ ಧಾರ್ಮಿಕ–ಸಾಮಾಜಿಕ–ರಾಜಕೀಯವಾಗಿ ಸಮನ್ವಯತೆಯ ಮೂಲಕವೇ ಶ್ರಮಿಸಿ ಗುರಿ ಸಾಧಿಸಿದ– ಏಕ ರಾಷ್ಟ್ರ, ಏಕನಿಷ್ಠೆಯ ಏಕನಾಥ ರಾನಡೆಯವರ ಸ್ಥೂಲ ಪರಿಚಯ ಮಾಡಿಸಿದ್ದಾರೆ ಶ್ರೀ ಮನೋಹರ ಎಂ. ಗೋಖಲೆಯವರು.

೪. ಗಣಪತಿ ಹೆಗಡೆ – ಶಿಥಿಲ ದ್ವಿತ್ವ

ಕನ್ನಡ ಭಾಷಾಧ್ಯಾಯಿಗಳಿಗೆ ಕೇಶಿರಾಜನ ಶಬ್ದಮಣಿ ದರ್ಪಣ ಒಂದು ಶ್ರೇಷ್ಠ ವ್ಯಾಕರಣ ಗ್ರಂಥ. ಅದರಲ್ಲಿನ ಒಂದು ಅಧ್ಯಾಯ 'ಶಿಥಿಲ ದ್ವಿತ್ವ'. ಹಾಗೆಂದರೇನು? ಕೆಲವೊಮ್ಮೆ ಶಬ್ದದಲ್ಲಿ ಒತ್ತಕ್ಷರ ಬಂದರೂ, ಪೂರ್ವಾಕ್ಷರ ಹೇಗೆ ಲಘುವಾಗಿರುತ್ತದೆ ಎಂಬುದನ್ನು – ಹಾಗೆಯೇ ಶಿಥಿಲ ದ್ವಿತ್ವದ ನಾಲ್ಕು ಬಗೆಯಾದ ನಾಮ, ಸಮಾಸ, ಕ್ರಿಯಾ ಮತ್ತು ಸಹಜ ಎಂಬ ನಾಲ್ಕು ಬಗೆಯ 'ಶಿಥಿಲ ದ್ವಿತ್ವ' ಗಳನ್ನು ಉದಾಹರಣೆಗಳ ಮೂಲಕ ಸಾದರಪಡಿಸಿದ್ದಾರೆ ಶ್ರೀ ಗಣಪತಿ ಹೆಗಡೆ.

೫. ಸ್ನೇಹಾ ಶಶಿಧರ – 'ನಮ್ಮೂರೇ ಚಂದ'

ಶ್ರೀಮತಿ ಸ್ನೇಹಾ ಶಶಿಧರ ಅವರಿಗೆ ಮಾತ್ರವಲ್ಲ, ಮೈಸೂರೆಂಬ ಸಾಂಸ್ಕೃತಿಕ ನಗರ ನಮಗೂ ಚೆಂದ. ಅದರಲ್ಲೂ ಬಾಳ ನಲ್ಲೆಯನ್ನು ಕಾಣಲು ಬೆಂಗಳೂರಿನಿಂದ ಅಲ್ಲಿಗೆ ಹೋಗುವ ಪತಿರಾಯ ಮಲ್ಲಿಗೆ ದಂಡೆ, ಮೈಸೂರು ಪಾಕ್‌ಗಳನ್ನು ಕೊಂಡೊಯ್ದರೆ ಇನ್ನೂ ಚೆಂದ ಅಲ್ಲವೇ! ಪ್ರಾಯಶಃ ತಾಂಬೂಲದ ಅಭ್ಯಾಸ ಇಲ್ಲದ್ದರಿಂದಲೋ ಏನೋ, ಮೈಸೂರು ವೀಳ್ಯದೆಲೆಯ ರುಚಿಯನ್ನು ಕೈಬಿಡಲಾಗಿದೆ!

ಶ್ರೀ ಕೆ.ಎನ್. ಭಗವಾನ್

ಶ್ರೀ ಕೆ.ಎನ್.ಭಗವಾನ್ ಅವರು ಮೂಲತಃ ತುಮಕೂರು ಜಿಲ್ಲೆ, ಕೊರಟಗೆರೆ ತಾಲ್ಲೂಕಿನ ಕ್ಯಾಶವಾರದವರು. ಪ್ರಸ್ತುತ ಬೆಂಗಳೂರಿನ ಜಯನಗರದಲ್ಲಿ ವಾಸ.

ಇವರ ಆರಂಭಿಕ ವಿದ್ಯಾಭ್ಯಾಸ ಕ್ಯಾಶವಾರ, ಅಕ್ಕಿರಾಂಪುರ, ಮಧುಗಿರಿ ಮತ್ತು ತುಮಕೂರಿನಲ್ಲಿ. ನಂತರ ಮೈಸೂರು ವಿಶ್ವವಿದ್ಯಾನಿಲಯದಿಂದ ಕನ್ನಡ ಎಂ.ಎ. ಸ್ನಾತಕೋತ್ತರ ಪದವಿ, ಎಲೆಕ್ಟ್ರಿಕಲ್ ಇಂಜಿನಿಯರಿಂಗ್‌ನಲ್ಲಿ ಡಿಪ್ಲೋಮಾ, ಏರೋನಾಟಿಕಲ್ ಸೊಸೈಟಿ ಇಂಡಿಯಾದಿಂದ ಎ.ಎಂ.ಎ.ಇ.ಎಸ್.ಐ. ಪದವಿ, ದಕ್ಷಿಣ ಭಾರತೀಯ ಹಿಂದಿ ಪ್ರಚಾರ ಸಭಾದಿಂದ ಹಿಂದಿ ರಾಷ್ಟ್ರಭಾಷಾ ಪದವಿ ಪಡೆದಿದ್ದಾರೆ.

ಮೊದಲಿಗೆ ಭದ್ರಾವತಿಯ ಕರ್ನಾಟಕ ರಾಜ್ಯ ವಿದ್ಯುಚ್ಛಕ್ತಿ ಮಂಡಳಿಯಲ್ಲಿ ಎರಡು ವರ್ಷ ಕಾಲ ಸೂಪರ್‌ವೈಸರ್, ನಂತರ ಎಚ್.ಎ.ಎಲ್. ಸಂಸ್ಥೆಯಲ್ಲಿ 36 ವರ್ಷ ಸೇವೆ ಸಲ್ಲಿಸಿ ಹಿರಿಯ ವ್ಯವಸ್ಥಾಪಕರಾಗಿ ನಿವೃತ್ತಿ. ಪ್ರಸಕ್ತ ಕೇಂದ್ರೋದ್ಯಮಗಳ ಕನ್ನಡೇತರ ಉದ್ಯೋಗಿಗಳಿಗೆ ಕನ್ನಡ ಕಲಿಕೆ ತರಬೇತಿ ನೀಡುವುದರಲ್ಲಿ ನಿರತರಾಗಿದ್ದಾರೆ ಶ್ರೀ ಭಗವಾನ್.

ಕನ್ನಡ ಸಾಹಿತ್ಯಿಕ, ಸಾಂಸ್ಕೃತಿಕ ಲೋಕಕ್ಕೆ ಶ್ರೀ ಕೆ.ಎನ್. ಭಗವಾನ್ ಅವರ ಕೊಡುಗೆ ಅಪಾರ. ಈವರೆಗೆ 'ಕಥಾಚೈತ್ರ', 'ಆಷಾಢದ ಮಳೆ' ಮುಂತಾದ ಆರು ಕಥಾ ಸಂಕಲನಗಳು, 'ಕಾರ್ಖಾನೆ ಚಿತ್ರಗಳು', 'ಸ್ವಲ್ಪ ಪೆನ್ ಕೊಡ್ತೀರಾ?', 'ನಾಳೆಗಳನ್ನು ನಂಬಬಹುದೇ?' ಇನ್ನಿತರ ಐದು ಪ್ರಬಂಧ ಸಂಕಲನಗಳು, ಏಳು ವ್ಯಕ್ತಿಚಿತ್ರಗಳ ಕೃತಿಗಳು, 'ಮನದಿಂದ ಮುಗಿಲಿಗೆ' ಕವನ ಸಂಕಲನ, 'ಸಂಪಾಜೆ ಮೆಸ್' ಎಂಬ ಕಾದಂಬರಿ, ವಿಜ್ಞಾನ ಮತ್ತು ತಂತ್ರಜ್ಞಾನಕ್ಕೆ ಸಂಬಂಧಿಸಿದಂತೆ 'ಕಂಪನ ಮತ್ತು ಶಬ್ದಮಾಪನ' ಎಂಬ ಕೃತಿ ಹಾಗೂ ಮೂರು ಅನುವಾದಿತ ಕೃತಿಗಳು, ಡಾ.ಎಂ.ಚಿದಾನಂದ ಮೂರ್ತಿಯವರ 'ಕನ್ನಡದ ಸಂಸ್ಕೃತಿಯ ಹಿರಿಮೆ ಗರಿಮೆ' ಎಂಬ ಕನ್ನಡದಿಂದ ಹಿಂದಿಗೆ ಅನುವಾದಿತ ಪುಸ್ತಕ, ಇವಿಷ್ಟೇ ಅಲ್ಲದೆ ಚಲನಚಿತ್ರ, ನಾಟಕ, ಮಕ್ಕಳ ಕಥೆ, ಸಾಮಾನ್ಯ ಜ್ಞಾನ, ಪ್ರವಾಸ ಕಥನ, ಪುಸ್ತಕ ವಿಮರ್ಶೆಯೂ ಸೇರಿದಂತೆ ಒಟ್ಟು ನಲವತ್ತಕ್ಕೂ ಹೆಚ್ಚು ಕೃತಿಗಳನ್ನು ರಚಿಸಿದ್ದಾರೆ. ಇನ್ನೂ ನಾಲ್ಕು ಕೃತಿಗಳು ಪ್ರಕಟಣೆಗೆ ಸಿದ್ಧವಾಗಿವೆ. ಅನೇಕ ನಾಟಕಗಳಲ್ಲೂ ಪಾತ್ರವಹಿಸಿರುವ ಭಗವಾನ್ ಅವರು ಹಲವು ಬಹುಮಾನ, ಪ್ರಶಸ್ತಿ ಮತ್ತು ಗೌರವಗಳಿಗೂ ಭಾಜನರಾಗಿರುದ್ದಾರೆ.

***

೬, ಹೆಚ್.ವಿ. ಗೋಪಿನಾಥ್ – 'ಸಫಲವಾಗದ ಕೋದಂಡನ ರಜೆ

ಹನಿಗವನ, ಚುಟುಕು ಮೊಟಕುಗಳಿಗೆ ಹೆಸರಾದ ಶ್ರೀ ಹೆಚ್.ವಿ.ಗೋಪಿನಾಥ್, ದಾಂಪತ್ಯದ ರಸಪ್ರಸಂಗವನ್ನು ವಿಡಂಬನೆಯ ರೂಪದಲ್ಲಿ 'ಸಫಲವಾಗದ ಕೋದಂಡನ ರಜೆ' ಎಂಬ ಲೇಖನದ ಮೂಲಕ ಉಣಬಡಿಸಿದ್ದಾರೆ. ಹೆಂಡತಿ ಸತ್ಯಭಾಮೆಯ ಅಪ್ಪುಗೆಯಲ್ಲಿ ಮೈಮರೆಯಲು ಆಫೀಸಿಗೆ ರಜೆ ಹಾಕಿಬಂದ ಕೋದಂಡ ಆಕೆ ಹೇಳಿದ ಕೆಲಸಗಳಿಗೆಲ್ಲ ಜೀ ಹುಜೂರ್ ಆಗಿ ಕೊನೆಗೆ ದಕ್ಕಿದ್ದು ಮಾತ್ರ ಸಣ್ಣ ಆಘಾತ! ಅದರಿಂದ ದೊರೆತಿದ್ದು ಶುಶ್ರೂಶೆಯ ಸುಖ ಮಾತ್ರ.. 'ಆತುರದಿಂದ ಅನಾಹುತ'– ಇಲ್ಲಿಯ ಎಚ್ಚರಿಕೆ.

೭. ನಾಗರತ್ನ ಚಂದ್ರಶೇಖರ್ – 'ಗುಂಡಿಗಳು ಸಾರ್, ಗುಂಡಿಗಳು'

ಶ್ರೀಮತಿ ನಾಗರತ್ನ ಚಂದ್ರಶೇಖರ್ ಸಮಕಾಲೀನ ವೈವಿಧ್ಯ ಸಂಗತಿಗಳನ್ನು ಸ್ವಾರಸ್ಯಕರ ಲಘು ಪ್ರಬಂಧಗಳಾಗಿಸುವಲ್ಲಿ ಸಿದ್ಧಹಸ್ತರು. ಈ ಸಾರಿ ಅವರ ಲೇಖನಿಗೆ ಸಿಕ್ಕಿರುವುದು ಬೆಂಗಳೂರಿನ ರಸ್ತೆ ಗುಂಡಿಗಳು! ಮಗನ ಅಂಗಿ ಗುಂಡಿಯಿಂದ ಆರಂಭವಾಗಿ ಗುಂಡಿಯಲ್ಲಿ ವಾಹನ ಚಲಿಸುವಂಥ ಭಂಡ ಧೈರ್ಯದವರೆಗೆ ವಿಚಾರ ಲಹರಿ ಹರಿದಿದೆ. ರಸ್ತೆ ಗುಂಡಿಗಳನ್ನು ಸದಾ ಸಕ್ರಿಯವಾಗಿಡುವುದನ್ನು ಆಡಳಿತಶಾಹಿಗಳ 'ವಾರ್ಷಿಕ ಉದ್ಯೋಗ ಸೃಷ್ಟಿ' ಎಂದು ವಿಡಂಬಿಸಿದ್ದಾರೆ. ಹಾಗೆಯೇ 'ಮುಚ್ಚಲಾಗದಿರುವ ಗುಂಡಿಗಳಲ್ಲಿ ಗಿಡ ನೆಡಿ' ಎಂಬಂಥ ವನಮಹೋತ್ಸವ ಸಂದೇಶವನ್ನೂ ನೀಡುತ್ತಾರೆ. ನಕ್ಕು ಮನಸ್ಸನ್ನು ಹಗುರ ಮಾಡಿಕೊಳ್ಳಬಹುದು.

೮. ಟಿ.ಆರ್. ಉಷಾರಾಣಿ – 'ಕಾಡುಬೆಕ್ಕು'

ನಗರದ ಹೊರವಲಯದಲ್ಲಿರುವ ಅಪಾರ್ಟ್‌ಮೆಂಟಿಗೆ ಬಂದು ವಾಸಿಸುವ ಯುವ ದಂಪತಿ, ಸಾಫ್ಟ್‌ವೇರ್ ಇಂಜಿನಿಯರ್ ಆದ ಪತಿ ಕೆಲಸಕ್ಕೆ ಹೋಗಿರುವಾಗ ಮನೆಯಲ್ಲಿ ಒಂಟಿ ಹೆಣ್ಣು ರಮ್ಯ, ಎದುರಿಗೆ ಕಟ್ಟಡ ಕಾರ್ಮಿಕರ ತಾತ್ಕಾಲಿಕ ವಸತಿಗಳು– ಹೀಗೊಂದು ಹಿನ್ನೆಲೆ ನೀಡುತ್ತ 'ಕಾಡು ಬೆಕ್ಕು' ಎಂಬ ರೂಪಕ ಚಿತ್ರಣವನ್ನು ರೂಪಿಸಿದ್ದಾರೆ ಶ್ರೀಮತಿ ಉಷಾರಾಣಿ. ಇಲ್ಲಿ ಕಾಡು ಬೆಕ್ಕುಗಳ ಕಾಟವೆಂದೂ, ತನ್ನ ಹಾಲುಗೂಸಿಗೆ ಹೊದಿಸಲು ಚಾದರ ಬೇಕೆಂದು ರಮ್ಯಳನ್ನು ಬೇಡುವ ಬಡಪಾಯಿ ದೇವೀರಿ, ಒಂಟಿ ಹೆಣ್ಣಿನ ಒಂಟಿತನ ನೀಗಿಸಲು ಸ್ನೇಹ ಹಸ್ತ ಚಾಚಿ ಬರುವ ರಾಮ ಮೋಹನ್ ಎಂಬ ಇನ್ನೊಬ್ಬ ಟೆಕ್ಕಿ ಕ್ರಮೇಣ ಕಾಡುವ ಕಾಡು ಬೆಕ್ಕೆಂದು ರಮ್ಯ ತಿಳಿಯುವುದು, ದೇವೀರಿಯ ಎಚ್ಚರಿಕೆಯ ಮಾತನ್ನು ಗಂಭೀರವಾಗಿ ಪರಿಗಣಿಸಿದ ರಮ್ಯ ನೆಮ್ಮದಿ ಕಾಣುವುದು– ಇದು ಕಥಾ ಸಾರ. ನಿರೂಪಣೆ ಸೊಗಸಾಗಿದೆ.

೯. ಮಾಧುರಿ ಕೃಷ್ಣ – 'ಅಸಾಧ್ಯ, ಆದರೂ ನಿಜ'

'ಹೆಣ್ಣು ಮಗುವೆಂಬ ಉಪೇಕ್ಷೆ ಸಲ್ಲದು; ಹೆಣ್ಣು ಪೊರೆವ ತಾಯಿ ಸಮಾಜದ ಕಣ್ಣೂ ಆಗಬಹುದು ಎಂಬ ಆದರ್ಶವನ್ನು ಹೊತ್ತಿರುವ ಕಥೆ– 'ಅಸಾಧ್ಯ, ಆದರೂ ನಿಜ'. ರಚನೆ– ಶ್ರೀಮತಿ ಮಾಧುರಿ ಕೃಷ್ಣ. ತಾನೇ ಹೆತ್ತ ಮಗುವನ್ನು ಬೇಸರದಿಂದ ಹೊರಗೆಸೆದಿದ್ದಳು ಓರ್ವ ತಾಯಿ, ಆ ಮಗುವನ್ನು ಮತ್ತೆ ತಂದು ತಾಯಿ ಹಾಲುಣಿಸುವಂತೆ ಮಾಡಿದವಳು ಒಬ್ಬಳು ಸಹಾಯಕಿ. ಆ ಹೆಣ್ಣು ಮಗುವೇ ಮುಂದೆ ಪದ್ಮಾವತಿ ಎಂಬ ಹೆಸರಿನ 'ಸ್ತ್ರೀರೋಗ ತಜ್ಞೆ'ಯಾಗಿ ಬೆಳೆದಿದ್ದು, ತನ್ನದೇ ಆದ ಅದನ್ನು ಡಾ. ಪದ್ಮಾವತಿ ಟೀವಿ ಕಾರ್ಯಕ್ರಮದಲ್ಲಿ ನೋಡಿ ನಿಟ್ಟುಸಿರುಬಿಟ್ಟದ್ದು ಕಥೆಯ ಸಾರಾಂಶ. ಕುತೂಹಲಕಾರಿ ನಿರೂಪಣೆ.

೧೦. ಕಮಲಾಕ್ಷಿ ಸಿ.ಆರ್. – 'ನನ್ನ ಸೊಸಿಹಾಂಗ ಇರಬೇಕು'

'ಇದ್ದರ ನನ್ನ ಸೊಸಿ ಹಾಗ ಇರಬೇಕು' ಎಂಬುದಾಗಿ ಎಲ್ಲರೆದುರು ಬಡಾಯಿ ಕೊಚ್ಚುತ್ತಿದ್ದ ಸುಶೀಲಮ್ಮನಿಗೆ, ಆ ಸೊಸೆಯ ಕುರಿತೇ ಭ್ರಮನಿರಸನವಾಗುವ ಸ್ವಾರಸ್ಯ ಶ್ರೀಮತಿ ಕಮಲಾಕ್ಷಿ ಅವರ ಕಥೆಯಲ್ಲಿದೆ. ಫೇಸ್‌ಬುಕ್ಕಿನಲ್ಲಿ ಕಂಡವಳ ಫೇಸ್ (ಮುಖ) ನಲ್ಲಿ ಸಾದೃಶವಿದ್ದರೂ ಗುಣ, ನಡತೆ, ವರ್ತನೆಗಳು ಭಿನ್ನವಾಗಿದ್ದಲ್ಲಿ ಮೆಚ್ಚಿಕೊಂಡಿದ್ದವರು ತಲೆ ಚಚ್ಚಿಕೊಳ್ಳುವುದು ಖಂಡಿತ. ಆದರೂ ಸಂಭಾಳಿಸುವುದು ವಿವೇಕ. ಅಂತೆಯೇ ಇಲ್ಲಿಯ ಸುಶೀಲಮ್ಮನ ಸ್ಥಿತಿ. ನಿರೂಪಣೆ ಸರಳ, ಆದರೆ ನೀತಿ ಬೋಧಕ.

೧೧. ಸಿಂಧು ಹರಿತಸ್ – 'ಹರಿಣಿಯ ಹಳ್ಳಿ ಕತೆ'

ಶ್ರೀಮತಿ ಸಿಂಧು ಹರಿತಸ್ ಅವರು 'ಹರಿಣಿಯ ಹಳ್ಳಿಕತೆ'ಯ ಮೂಲಕ ಕಿರಣ್ ಎಂಬಾತ ಕನ್ನಂಬಾಡಿ ಸಮೀಪದ ತನ್ನೂರಿಗೆ ಹೆಂಡತಿ ಹರಿಣಿಯನ್ನು ಕರೆದುಕೊಂಡು ಹೋದಾಗ ಅನುಭವಿಸಬೇಕಾದ ಫಜೀತಿಗಳನ್ನು ತೆರೆದಿಟ್ಟಿದ್ದಾರೆ. ಆತ ಕುಲದೇವತೆಯ ದರ್ಶನದ ಜೊತೆಗೆ ಅಲ್ಲಿನ ತೋಟ ತುಡಿಕೆಗಳನ್ನು ತೋರಿಸುತ್ತಾನೆ. ಹರಿಣಿಗೆ ಇವೆಲ್ಲವೂ ಹೊಸತು. ಮುಗ್ಧೆ ಲಕ್ಕಜ್ಜಿಗೆ ಮೊಮ್ಮಗ ಹಿಂದೆಯೇ ದಂಪತಿಗಳ ವಿವಾಹಪೂರ್ವ ಫೋಟೋವನ್ನು ತೋರಿಸಿದ್ದ. ಅದು ಮದುವೆಯ ಫೋಟೋ ಎಂದೇ ಭಾವಿಸಿದ್ದ ಅಜ್ಜಿ, ಹರಿಣಿಯನ್ನು ಕುರಿತು 'ಈಗ ಎಷ್ಟು ತಿಂಗಳು' ಎಂದು ಕೇಳಿದ್ದು ಸಹಜವೇ ಆದರೂ ಮುಜುಗರ ತಂದಿತ್ತು. ಇನ್ನು ಮಧುಚಂದ್ರಕ್ಕೆ ಅಂಡಮಾನಿಗೆ ಹೋಗಿದ್ದ ವಿಷಯ ತಿಳಿಸಿದಾಗ ಅಜ್ಜಿ ಪ್ರತಿಕ್ರಿಯಿಸಿದ್ದು ಇನ್ನೂ ಸ್ವಾರಸ್ಯಕರ. 'ಆ ಸಮುದ್ರಕ್ಕಿಂತ ನಮ್ಮ ಕನ್ನಂಬಾಡಿಯೇ ದೊಡ್ಡದು ಬಿಡಿ' ಎಂದಿದ್ದು ಮೂಢಮತವೇ ಆದರೂ ಅದರಲ್ಲಿ ಸ್ವಾಭಿಮಾನದ ಧ್ವನಿಯಿರುವುದನ್ನು ಗುರುತಿಸಬಹುದು. ನಮ್ಮದು ನಮಗೆ ಹೆಚ್ಚಲ್ಲವೇ!

೧೨. ಶೀಲಾ ಅರಕಲಗೂಡು – 'ಕೇಶವಂಗೆ ಕೊನೆಯಿಲ್ಲ' (ಕವನ)

ಯುವಜನತೆಯಲ್ಲಿ ರಾಷ್ಟ್ರಪ್ರೇಮ, ಸೇವೆ ಮತ್ತು ಸಮರ್ಪಣಾ ಧರ್ಮ, ಸುಸಂಸ್ಕೃತಿಗಳನ್ನು ಬೆಳೆಸುವ ರಾಷ್ಟ್ರೀಯ ಸ್ವಯಂಸೇವಕ ಸಂಘಕ್ಕೆ ಈಗ ಶತಮಾನದ ಸಂಭ್ರಮ. ಈ ಶಿಸ್ತಿನ ಸಂಘಟನೆಯ ಸ್ಥಾಪಕ ಡಾ. ಕೇಶವ್ ಬಲಿರಾಮ್ ಹೆಡಗೆವಾರ್. ಅವರ ಚಿಂತನೆ ಮತ್ತು ಕಾರ್ಯನಿಷ್ಠತೆ ಕುರಿತು ಶ್ರೀಮತಿ ಶೀಲಾ ಅರಕಲಗೂಡು ಅವರು ತಮ್ಮ ಲೇಖನಕ್ಕೆ 'ಕೇಶವಂಗೆ ಕೊನೆಯಿಲ್ಲ' ಎಂಬ ಸೂಕ್ತ ಶೀರ್ಷಿಕೆ ನೀಡಿದ್ದಾರೆ. ನಾಲ್ಕು ನಾಲ್ಕು ಸಾಲುಗಳ ಈ ಕವಿತೆ ಡಾ. ಹೆಡಗೆವಾರ್ ಅವರ ಸಾಧನೆಗಳನ್ನು ಒಳಗೊಂಡಿದೆ.

೧೩. ಹೆಚ್. ಶ್ರೀಧರ ರಾವ್ – 'ಕೀಳರಿಮೆಯ ಸಂಕೀರ್ಣತೆಯನ್ನು ಮೀರುವುದು ಹೇಗೆ?'

ಆರು ನಿಮಿಷಗಳ ವಾಚನ ವ್ಯಾಪ್ತಿಯನ್ನು ಮೀರುವ – ಅದನ್ನು ಪ್ರತಿನಿಧಿಸುವಂತೆ 'ಕೀಳರಿಮೆಯ ಸಂಕೀರ್ಣತೆಯನ್ನು ಮೀರುವುದು ಹೇಗೆ?' ಎಂಬ ಉದ್ದದ ಶೀರ್ಷಿಕೆ ಹೊತ್ತಿದೆ ಶ್ರೀ ಹೆಚ್. ಶ್ರೀಧರ ರಾವ್ ಅವರ ಕೌನ್ಸೆಲ್ಲಿಂಗ್ ಲೇಖನ. ಮನೋಬಲವಿದ್ದಲ್ಲಿ ಮಾತ್ರ ದೇಹಬಲ ಸಾರ್ಥಕ ಎಂಬ ಅಂಶವನ್ನು ರಾಮಾಯಣ, ಮಹಾಭಾರತಗಳಿಂದ ಕೆಲವೊಂದು ಪಾತ್ರಗಳ ಮೂಲಕ ಉದಾಹರಿಸುತ್ತಾರೆ.

೧೪. ಶಾಂತಿ ವಾಸು – 'ಕುಂಚಕಲಾ ಪ್ರದರ್ಶನ, ಭಾರತೀಯ ಮಹಿಳೆಯ ಹೆಜ್ಜೆಗುರುತು'

ಶ್ರೀಮತಿ ಶಾಂತಿ ವಾಸು ಸಾದರಪಡಿಸಿರುವ 'ಕುಂಚ ಕಲಾ ಪ್ರದರ್ಶನದಲ್ಲಿ ಭಾರತ ಮಹಿಳೆಯ ಹೆಜ್ಜೆ ಗುರುತು' ಎಂಬ ಲೇಖನ ಹತ್ತು ಸಾವಿರ ವರ್ಷಗಳಷ್ಟು ಹಿಂದಿನ (ಶಿಲಾಯುಗದ) ಭೀಮ್ ಬೆಟ್ಕಾ ವರ್ಣಚಿತ್ರಗಳಿಂದ ಮೊದಲಾಗುತ್ತದೆ. ಮುಂದುವರೆದಂತೆ ಅಜಂತಾದ ಭಿತ್ತಿ, ಛಾವಣಿಯ ವರ್ಣಚಿತ್ರಗಳು, ಬಟ್ಟೆ ಹಾಗೂ ಒಣ ತಾಳೆ ಎಲೆಯ ಮೇಲಿನ ಚಿಗಣಿ ಚಿತ್ರಗಳು, ಕಲಂಕಾರಿ ಮಧುಬನಿ ಮುಂತಾದ ನಮೂನೆಗಳು ಇಲ್ಲಿ ಉಲ್ಲೇಖಿಸಲ್ಪಟ್ಟಿವೆ. ಗಮನ ಸೆಳೆಯುವ ಒಂದು ಅಂಶವೆಂದರೆ– ವೇದಿಕೆಯಲ್ಲಿ ಹಾಡಿಗೆ ಚಿತ್ರ ಬಿಡಿಸುವ ಕಲೆಗಾರಿಕೆ. ಈವೊಂದು ಸುದೀರ್ಘ ಲೇಖನದಲ್ಲಿ ಹಲವು ತಲೆಮಾರುಗಳ ವರ್ಣಚಿತ್ರ ಕಲೆಯ ವಿವರಗಳಿದ್ದರೂ, ಶೀರ್ಷಿಕೆಗೆ ಅನುಗುಣವಾಗಿ ಅವುಗಳಲ್ಲಿ ಮಹಿಳೆಯರ ಪಾತ್ರವು ಪ್ರಧಾನವಾಗಿಯೇನೂ ಕಾಣಿಸುವುದಿಲ್ಲ.

೧೫. ಬೆಂ.ಶ್ರೀ. ರವೀಂದ್ರ – 'ಹೆಗಲು' ಕೃತಿ ಪರಿಚಯ

ಶ್ರೀಮತಿ ಭಾರತಿ ಹೆಗಡೆ ಅವರ ರಚನೆಯ 'ಹೆಗಲು' ಎಂಬ ಜೀವನಗಾಥೆ ಕೃತಿಯ ಕುರಿತು ಶ್ರೀ ಬೆಂ.ಶ್ರೀ. ರವೀಂದ್ರ ಅವರು ಪರಾಮರ್ಶಿಸಿದ್ದಾರೆ. 'ಬದುಕು ಹಲವು ಸಾಧನೆಗಳಿಗೆ ಅವಕಾಶ ಮಾಡಿಕೊಡುವ ರಂಗಮಂಚ' ಎಂಬ ಅವರ ಆರಂಭಿಕ ವಾಕ್ಯವೇ ಕೃತಿಯಲ್ಲಿ ಇರಬಹುದಾದ ಒಬ್ಬ ವ್ಯಕ್ತಿಯ ಸಾಧನೆಯ ವೈವಿಧ್ಯ, ವೈಶಿಷ್ಟ್ಯಗಳ ಸುಳಿವು ನೀಡುತ್ತದೆ. ಇಲ್ಲಿರುವ ಜೀವನಗಾಥೆ

ಜನಮುಖಿಯಾಗಿ ದುಡಿದು, ಹಲವಾರು ಸಾಧನೆಗಳನ್ನು ಮಾಡಿರುವ ಡಾ.ಎಂ.ಕೆ.ಶ್ರೀಧರ್ ಅವರಿಗೆ ಸಹವರ್ತಿಯಾಗಿ ಹೆಗಲು ಕೊಟ್ಟ ಶ್ರೀ ನರಸಿಂಹ ಅವರದ್ದಾಗಿದೆ. ಡಾ.ಎಂ.ಕೆ.ಶ್ರೀಧರ್ ಅವರ ಪತ್ನಿ ಶ್ರೀಮತಿ ಸುಧಾ ಅವರೂ ಸೇರಿದಂತೆ ೧೭ ಜನರಿಂದ ವಿಷಯ ಸಂಗ್ರಹಿಸಿರುವುದನ್ನು ಲೇಖಕರು ತಿಳಿಸುತ್ತಾರೆ. ನೇರ,ಸರಳ ನಿರೂಪಣೆ ಓದಿಗೆ ಆಪ್ತವೆನಿಸುತ್ತದೆ.

ಇಷ್ಟು ನನ್ನ ಅನಿಸಿಕೆಗಳು.ಎಲ್ಲರಿಗೂ ಶುಭವಾಗಲಿ.

***

ಸಮನ್ವಯ ಸಮಿತಿ, ಕನ್ನಡವೇ ಸತ್ಯ, ಸಾಹಿತ್ಯ ದಾಸೋಹ ವೇದಿಕೆ

ಸಂಪರ್ಕ ವಿಳಾಸ: ಶ್ರೀ ಬೆಂ.ಶ್ರೀ. ರವೀಂದ್ರ, 'ತವರು', 288, 3ನೆಯ ಮುಖ್ಯ ರಸ್ತೆ, 11ನೆಯ ಅಡ್ಡ ರಸ್ತೆ, 1ನೆಯ ಹಂತ, ವಸಂತ ವಲ್ಲಭ ನಗರ, ವಸಂತಪುರ, ಬೆಂಗಳೂರು – 560 061
ಚರವಾಣಿ: 9448994199 – ಇಮೇಲ್ ವಿಳಾಸ: bsrsbi1954@gmail.com


ಈ ಸಂಚಿಕೆಯ ಸಂಕಲನ, ವಿನ್ಯಾಸ : ಎಸ್. ಶೃಂಗೇಶ್ವರ ಶರ್ಮ
ಚರವಾಣಿ: 9448291329 – ಇಮೇಲ್ ವಿಳಾಸ: sringeswar.sharma@gmail.com

ಸಾಹಿತ್ಯ ದಾಸೋಹ 242 ನಡೆದ ದಿನಾಂಕ: 11 ಅಕ್ಟೋಬರ್ 2025
ಸಂಚಿಕೆಯ ಬಿಡುಗಡೆ ದಿನಾಂಕ: 25 ನವೆಂಬರ್ 2025

(ವಿವಿಧ ಲೇಖನಗಳಲ್ಲಿ ಬಳಸಿರುವ ಚಿತ್ರಗಳು – ಕೃಪೆ ಆಯಾ ಲೇಖಕರು ಮತ್ತು ಅಂತರ್ಜಾಲ)

ಭೈರಪ್ಪ ನಮನ ~ ವಿಶೇಷ ಪುರವಣಿ

ಸಮನ್ವಯ ಸಮಿತಿ ಕನ್ನಡವೇ ಸತ್ಯ
ನೋಡಿಯೋ ಸಾಹಿತ್ಯ ದಾಸೋಹ ವೇದಿಕೆ



ಕನ್ನಡದ ಮೇರು ಕಾದಂಬರಿಕಾರ ಡಾ. ಎಸ್.ಎಲ್. ಭೈರಪ್ಪನವರು ತುಂಬು ಜೀವನ ನಡೆಸಿ, ನಿನ್ನೆ (೨೪.೦೯.೨೦೨೫) ದೈವಾಧೀನರಾದರು. ಕನ್ನಡ ಸಾಹಿತ್ಯ ಪರಂಪರೆಗೆ ಭೈರಪ್ಪನವರ ಕೊಡುಗೆ ಅಪಾರ. ಸಸಕಸ ವೇದಿಕೆಯು ಶ್ರೀ ಭೈರಪ್ಪನವರ ನಿಧನಕ್ಕೆ ದುಃಖವನ್ನು ವ್ಯಕ್ತಪಡಿಸುತ್ತದೆ ಮತ್ತು ಶ್ರದ್ಧಾಂಜಲಿಗಳನ್ನು ಅರ್ಪಿಸುತ್ತದೆ

ವೇದಿಕೆಯಿಂದ ಭೈರಪ್ಪನವರಿಗೆ ನಮನ – ೨೮-೦೯-೨೦೨೫ – ಭಾನುವಾರ

ನಮ್ಮ ವಾಟ್ಸಾಪ್ ವೇದಿಕೆಯಲ್ಲಿ ದಿನಾಂಕ ೨೮/೦೯/೨೦೨೫ರಂದು ಭಾನುವಾರದ ಪ್ರಸ್ತುತಿಗಳು ಭೈರಪ್ಪನವರ ಬರಹಗಳನ್ನು ಕುರಿತಾಗಿ ಮಾತ್ರವೇ ಇರುತ್ತದೆ. ಬೆಳಗ್ಗೆ ೦೬.೦೦ ಗಂಟೆಯಿಂದ ಸಂಜೆ ೧೦.೦೦ ಗಂಟೆಯವರೆಗೆ ಇತರ ಬರಹಗಳು ಬೇಡ.

'ಭೈರಪ್ಪನವರಿಗೆ ನಮನ'ದಲ್ಲಿ ಮೂಡಿಬರುವ ಎಲ್ಲಾ ಲೇಖನಗಳನ್ನು ಕಾಪಿಡುವ ದೃಷ್ಟಿಯಿಂದ, ಅವುಗಳನ್ನು ಪಿಡಿಎಫ್ ರೂಪದಲ್ಲಿ ಪ್ರಕಟಿಸಲಾಗುವುದು.

ಸಸಕಸ ವೇದಿಕೆಯ ಪರವಾಗಿ


ಬೆಂ ಶ್ರೀ ರವೀಂದ್ರ

25.09.2025

ಎಸ್.ಎಲ್.ಭೈರಪ್ಪನವರ `ಉತ್ತರಕಾಂಡ'

ಮೂಲ ವಾಲ್ಮೀಕಿ ರಾಮಾಯಣದೊಂದಿಗೆ ಒಂದು ಅವಲೋಕನ

ಡಾ.ಜಯಂತಿ ಮನೋಹರ್



ಮೂಲ ವಾಲ್ಮೀಕಿ ರಾಮಾಯಣದ ಹಿನ್ನೆಲೆಯಲ್ಲಿ ಭೈರಪ್ಪನವರ 'ಉತ್ತರಕಾಂಡ'ವನ್ನು ನೋಡುವ ಪ್ರಯತ್ನ ಇಲ್ಲಿದೆ. ರಾಮಾಯಣದ ಮೊದಲ ಕಾಂಡಗಳಲ್ಲಿ (ಅರಣ್ಯ, ಕಿಷ್ಕಿಂಧ, ಸುಂದರ) ರಾಮ–ಸೀತೆಯರನ್ನು ಆದರ್ಶ ದಂಪತಿಗಳನ್ನಾಗಿ ಕಡೆದು ನಿಲ್ಲಿಸಿರುವ ವಾಲ್ಮೀಕಿಗಳು, ರಾಮ ಪಟ್ಟಾಭಿಷೇಕದೊಂದಿಗೆ ಸುಖಾಂತವಾದ ತಮ್ಮ ರಾಮಾಯಣವನ್ನು ಮತ್ತೆ ಮುಂದುವರೆಸಿ, ಉತ್ತರಕಾಂಡ ದಲ್ಲಿ ದುಃಖಾಂತವಾಗಿಸುವುದು ಅವರ ಆಶಯವಾಗಿತ್ತೇ ಎನ್ನುವ ಪ್ರಶ್ನೆ ಕಾಡುತ್ತದೆ. ಹಾಗಾಗಿಯೇ, ಲಂಕೆಯಲ್ಲಿ ರಾವಣ ವಧೆಯಾಗಿ ರಾಮ ಸೀತೆಯರು ಲಕ್ಷ್ಮಣನೊಂದಿಗೆ ಮರಳಿ ಬಂದು ರಾಮ ಪಟ್ಟಾಭಿಷೇಕವಾಗುವುದರೊಂದಿಗೆ ವಾಲ್ಮೀಕಿ ರಾಮಾಯಣ ಶುಭಕರವಾಗಿ ಸಂಪೂರ್ಣ ಗೊಂಡಿದೆ ಎಂಬ ನಂಬಿಕೆ ನಮ್ಮಲ್ಲಿರುವುದು ಅನೇಕ ವಿಚಾರಗಳಿಂದ ಸ್ಪಷ್ಟವಾಗಿಯೇ ಕಂಡುಬರುತ್ತದೆ. ಈ ಪಾರಂಪರಿಕ ನಂಬಿಕೆಯಿಂದಾಗಿಯೇ ನೂರಾರು ವರ್ಷ ಗಳಿಂದಲೂ ನಮ್ಮ ಎಲ್ಲಾ ದೇವಾಲಯಗಳಲ್ಲಿಯೂ ಸೀತಾ ದೇವಿಯೊಂದಿಗೇ ರಾಮ ಪೂಜೆಗೊಳ್ಳುತ್ತಾನೆ. ಸೀತೆಯಿಲ್ಲದೆ ರಾಮನಿಲ್ಲ.

ಭೈರಪ್ಪನವರು ತಮ್ಮ ಕೃತಿಗೆ 'ಉತ್ತರಕಾಂಡ' ಎಂದು ಹೆಸರಿಸಿ, ಅಲ್ಲಿ ಕಾಣುವ ಕಥಾನಕದಿಂದಲೇ ತಮ್ಮ ಕಾದಂಬರಿಯನ್ನು ಪ್ರಾರಂಭಮಾಡಿದ್ದರೂ, ಇದರಲ್ಲಿ ರಾಮಾಯಣದ ಏಳೂ ಕಾಂಡಗಳ ಪಕ್ಷಿನೋಟವನ್ನು ಗುರುತಿಸಬಹುದು. ಹಾಗಾಗಿ, ಇದು ರಾಮಾಯಣದ ಮರುಕಥನಗಳ ದೀರ್ಘ ಪಟ್ಟಿಗೆ ಸೇರುತ್ತದೆ. ರಾಮಾಯಣದ ಹಲವಾರು ಮರುಕಥನಗಳಲ್ಲಿ ನಡೆದಿರುವಂತೆಯೇ ಇಲ್ಲಿಯೂ ಕಾಣುವ ಸೇರ್ಪಡೆಗಳು ಹಾಗೂ ಮಾರ್ಪಾಡುಗಳು ಕೆಲವೊಮ್ಮೆ ಮೆಚ್ಚುಗೆ ಗಳಿಸಿದರೆ ಇನ್ನು ಕೆಲವೆಡೆ ಅದರ ಔಚಿತ್ಯವೇನು ಎನ್ನುವ ಪ್ರಶ್ನೆ ಎಬ್ಬಿಸುತ್ತದೆ.

ಭೈರಪ್ಪನವರ ಹಿಂದಿನ ಕೃತಿಗಳನ್ನು ಓದಿ ಮೆಚ್ಚಿರುವವರು ಕಾಣಬಯಸುವ ಕಾವ್ಯಗುಣ ಎಂದರೆ, 'ರಸಾಸ್ವಾದ' ಇಲ್ಲಿಯೂ ಕಂಡು ಇದನ್ನು ಉತ್ತಮ ಕಾದಂಬರಿಗಳಲ್ಲಿ ಸುಲಭವಾಗಿ ಸೇರಿಸುವುದರಲ್ಲಿ ಅನುಮಾನವಿಲ್ಲ. ಆದರೆ, ಭಾರತೀಯ ಜನಮಾನಸದಲ್ಲಿ ಹಾಸುಹೊಕ್ಕಾಗಿ ಬೆರೆತಿರುವ ವಸ್ತುವನ್ನು ತೆಗೆದುಕೊಂಡು, ಅದರಲ್ಲಿಯೂ ಅದಕ್ಕೆ ವಾಲ್ಮೀಕಿಗಳ ಕೃತಿಯೇ ಆಧಾರವೆಂದು ಭೈರಪ್ಪನವರು ಹೇಳಿರುವುದು ಒಂದಷ್ಟು ಜಿಜ್ಞಾಸೆಗಳಿಗೆ ದಾರಿ ಮಾಡಿಕೊಡುತ್ತದೆ. ಅದು ಅವರ ದೃಷ್ಟಿಯನ್ನು ಅವಲಂಬಿಸಿರುವುದರೊಂದಿಗೆ, ಈ ಕಾಲಘಟ್ಟದ ಜನಮಾನಸದ ಅಭಿಲಾಶೆಗೆ ನೀಡಿರುವ ಕವಿ–ಸ್ಪಂದನೆ ಎಂದೂ ಹೇಳಬಹುದು. ಈ ದಿಸೆಯಲ್ಲಿ ಭೈರಪ್ಪನವರ 'ಉತ್ತರ ಕಾಂಡ' ಸಫಲವಾಗುತ್ತದೆ. ಆದರೆ, ಹಲವು ಶತಮಾನಗಳ ಹಿಂದಿನ ಕಾಲಘಟ್ಟದ ಕಥಾನಕದಲ್ಲಿರುವ ಅಲೌಕಿಕತೆಯನ್ನು ಒಡೆದು ಇಂದಿನ ಕಾಲಘಟ್ಟಕ್ಕೆ ತರುವಲ್ಲಿ ಭೈರಪ್ಪನವರ 'ಪರ್ವ'ದಲ್ಲಿ ಕಾಣುವ ಸಹಜತೆ ಇಲ್ಲಿ ಹಲವಾರು ಪ್ರಸಂಗಗಳಲ್ಲಿ ಮರೆಯಾಗಿದೆ ಎಂದೇ ಹೇಳಬೇಕಾಗುತ್ತದೆ. ಉದಾಹರಣೆಗೆ, ರಾವಣನ

ಬಂಟರು ಸೀತೆಯನ್ನು ಚಟ್ಟದ ಮೇಲೆ ಕಟ್ಟಿ ಲಂಕೆಗೆ ನಡೆದು ಹೋಗುವುದು, ಸಾಗರವನ್ನು ದೋಣಿಯಲ್ಲಿ ದಾಟುವುದು, ದಿನಗಣನೆ, ಕಾಲಗಣನೆ ಮುಂತಾದ ಸಂಗತಿಗಳು ಸಹಜತೆಗೆ ದೂರವಾಗಿವೆ. ಮೇಲುನೋಟದಲ್ಲಿಯೇ ಕಾಣುವ ಪ್ರಮುಖ ವಿಚಾರವೆಂದರೆ, 'ರಾಮ–ಲಕ್ಷ್ಮಣರ ಸ್ವಭಾವ ಹಾಗೂ ನಡವಳಿಕೆಗಳನ್ನು ಇಲ್ಲಿ ಸೀತೆ ನೋಡುವ ದೃಷ್ಟಿ ವಾಲ್ಮೀಕಿಗಳ ಸೀತೆಯಿಂದ ಬಲು ದೂರ.

ಮೂಲ ಕೃತಿಯೊಂದಿಗೆ ಭೈರಪ್ಪನವರ `ಉತ್ತರ ಕಾಂಡ'

ಇದು, ವಾಲ್ಮೀಕಿಗಳೇ ರಚಿಸಿದರೆಂದು ಹೇಳುವ 'ಉತ್ತರ ಕಾಂಡ'ದಲ್ಲಿ ಕಾಣುವ ಸೀತೆಯ ದೃಷ್ಟಿಯಲ್ಲಿ ನಡೆದಿರುವ ರಾಮಾಯಣದ ಹಿನ್ನೋಟವಷ್ಟೇ ಅಲ್ಲದೆ, ಅದನ್ನು ಸಮಕಾಲೀನ ದೃಷ್ಟಿಯಲ್ಲಿ ನೋಡಿರುವ ಮರುಕಥನ. ಹಾಗಾಗಿ, ಇದು ಮಹಿಳೆಯರ ಆಶೋತ್ತರಗಳಂತೆ ಸೀತೆ ಕಟ್ಟಿಕೊಳ್ಳುವ ಹೊಸ ಬದುಕನ್ನೂ ತೆರೆದಿಡುತ್ತದೆ. ಸೀತಾ ಎಂದರೆ, ಹೊಲದಲ್ಲಿ ಉಳುವಾಗ ನೇಗಿಲು ಸೃಷ್ಟಿಸುವ ಗೆರೆ. ಜನಕ ಮಹಾರಾಜನು ಯಜ್ಞಕ್ಕಾಗಿ ಹೊಲ ಉಳುವಾಗ ದೊರೆತ ಮಗುವಾದ್ದರಿಂದ ಅವಳ ಹೆಸರು ಸೀತಾ ಎಂದಾಯಿತು. ಇದನ್ನೇ ಮೂಲವಾಗಿ ಹಿಡಿದುಕೊಂಡು ಹಲವು ಬಾರಿ ಪ್ರಸ್ತಾಪಿಸುವ ಭೈರಪ್ಪನವರು, ಅವಳ ಜನನಕ್ಕೂ ಮರಣಕ್ಕೂ 'ಕೃಷಿ'ಯ ಸಂಬಂಧವನ್ನು ಕಲ್ಪಿಸುತ್ತಾರೆ. ವಾಲ್ಮೀಕಿಗಳು ಎಲ್ಲಿಯೂ ಊಹೆಗೂ ಆಸ್ಪದ ಕೊಡದಿರುವ ಸೀತೆಯ ಜನ್ಮದ ಪ್ರಶ್ನೆಯನ್ನು ದೊಡ್ಡದಾಗಿಸಿ, ಆ ಕಾರಣದಿಂದಾಗಿಯೇ ರಾಮ–ಸೀತೆಯರ ವಿವಾಹದ ಸಮಯದಲ್ಲಿ ದಶರಥ ಸಂಶಯ ತಾಳಿದ ಎಂದಿರುವುದು ಸರಿ ಎನಿಸುವುದಿಲ್ಲ.

ವಾಲ್ಮೀಕಿಗಳ ಕಥಾನಕದಲ್ಲಿ, ಮೊದಲ ಬಾರಿ ಸೀತೆಯ ಪ್ರಸ್ತಾಪ ಬರುವ ಬಾಲ ಕಾಂಡದಲ್ಲಿ, ರಾಮಲಕ್ಷ್ಮಣರೊಡನೆ ಮಿಥಿಲೆಗೆ ಬಂದ ವಿಶ್ವಾಮಿತ್ರರಿಗೆ, ಜನಕ ಮಹಾರಾಜ ತಾನು ಯಜ್ಞಕ್ಕಾಗಿ ಭೂಮಿಯನ್ನು ಶೋಧಿಸುತ್ತಿರುವಾಗ ಅಲ್ಲಿ ಭೂತಳದಿಂದ ಎದ್ದುಬಂದ ಕುಮಾರಿಯೇ ಸೀತೆ ಎಂದು ಹೇಳುತ್ತಾ ಅಯೋನಿಜೆಯಾದ ಅವಳು ಶಿವಧನಸ್ಸನ್ನು ಹೆದೆಯೇರಿಸಬಲ್ಲವರನ್ನು ವರಿಸುವ ವೀರ್ಯಶುಲ್ಕಳೆಂದು ತಿಳಿಸುತ್ತಾನೆ. ರಾಮ ಆ ಧನಸ್ಸನ್ನು ಹೆದೆಯೇರಿಸಿದ ನಂತರ, ಜನಕ ಮಹಾರಾಜನು ಅಯೋಧ್ಯೆಗೆ ಕಳುಹಿಸಿದ್ದ ದೂತರು ದಶರಥನಿಗೆ ಹೇಳುವ ಮಾತಿನಲ್ಲಿಯೇ ಅವರಿಬ್ಬರ (ಜನಕ–ದಶರಥರ) ಸ್ನೇಹ ವ್ಯಕ್ತವಾಗಿ, ಸೀತೆ ವೀರ್ಯಶುಲ್ಕವಾಗಿರುವ ಸಂಗತಿ ದಶರಥನಿಗೆ ಮೊದಲೇ ತಿಳಿದಿದ್ದ ವಿಚಾರ ಸ್ಪಷ್ಟವಾಗುತ್ತದೆ. ವಿಷಯ ತಿಳಿದ ಕೂಡಲೇ ಸಂತಸದಿಂದ ಹೊರಟು ನಾಲಕ್ಕು ದಿನಗಳ ಪ್ರಯಾಣ ಮಾಡಿ, ಮಿಥಿಲೆ ಸೇರಿದ ದಶರಥನೊಂದಿಗೆ, ಜನಕ ವಿವಾಹ ಪ್ರಸ್ತಾಪ ಮಾಡುತ್ತಾನೆ. ಅದಕ್ಕೆ ಉತ್ತರವಾಗಿ ದಶರಥ, "ಧರ್ಮಜ್ಞನಾದ ನೀನು ಹೇಗೆ ಹೇಳುವೆಯೋ ಹಾಗೆ ನಾವು ಮಾಡುತ್ತೇವೆ'' (ಯಥಾ ವಕ್ಷ್ಯಸಿ ಧರ್ಮಜ್ಞ ತತ್ ಕರಿಷ್ಯಾಮಹೇ ವಯಮ್ ಬಾಲಕಾಂಡ:ಸರ್ಗ ೬೯:೧೫) ಎನ್ನುವ ಸಂದರ್ಭದಲ್ಲಿ ಭೈರಪ್ಪನವರು ಹೇಗೆ ಸೀತೆಯ ಜನ್ಮದ ಪ್ರಶ್ನೆ ಎತ್ತುತ್ತಾರೆ ಎನ್ನುವುದು ಅಚ್ಚರಿ ಎನಿಸುತ್ತದೆ. ಅಲ್ಲಷ್ಟೇ ಅಲ್ಲದೆ, ಇಡೀ ರಾಮಾಯಣದಲ್ಲಿ ಎಲ್ಲಿಯೂ ಅಂತಹ ಜಿಜ್ಞಾಸೆ ಯಾರಲ್ಲಿಯೂ ಕಾಣುವುದಿಲ್ಲ. ಸೀತೆಗೆ ಕೃಷಿಯಲ್ಲಿ ಆಸಕ್ತಿಯಿತ್ತು ಎನ್ನುವುದನ್ನು ವನವಾಸದಲ್ಲಿ ಲಕ್ಷ್ಮಣ ಮಾಡುವ ಕೆಲಸದಲ್ಲಿ ತೋರಿಸುವುದು, ಆನಂತರ ತನ್ನ ಜೀವನಕ್ಕಾಗಿ ಕೃಷಿಯನ್ನೇ ಅವಲಂಬಿಸುವುದು ಕೊನೆಗೆ ಅವಳು ನೇಗಿಲು ಸೃಷ್ಟಿಸುವ ಗೆರೆಯಲ್ಲಿಯೇ ಮರಣ ಹೊಂದುವವರೆಗೂ ಎಳೆದುಕೊಂಡು ಹೋಗಿರುವುದು ಭೈರಪ್ಪನವರಿಗೆ ವಂಶವೃಕ್ಷದಲ್ಲಿರುವ ಅತೀವ ಆಸಕ್ತಿಯಿಂದಾಗಿಯೇ ಎನಿಸುವುದು. ತಮ್ಮ ಈ ದೃಷ್ಟಿಗೆ ಸರಿಹೊಂದಿಸಲು ವನವಾಸದಲ್ಲಿ ರಾಮ–ಸೀತಾ–ಲಕ್ಷ್ಮಣರನ್ನು ಶಾಖಾಹಾರಿಗಳಾಗಿಸಿರುವುದು ಮತ್ತೂ ಅಚ್ಚರಿಯ ವಿಚಾರ. ವಾಲ್ಮೀಕಿಗಳು ಹಲವಾರು ಬಾರಿ ಸ್ಪಷ್ಟವಾಗಿಯೇ ಅವರು ಕಾನನದಲ್ಲಿ ಬೇಟೆಯಾಡಿ ಜೀವಿಸಿದ್ದರು ಎಂದು ಉಲ್ಲೇಖಿಸಿದ್ದಾರೆ. ಕ್ಷತ್ರಿಯರಿಗೆ ಅದು ಸಹಜವಾದ ನಡೆವಳಿಕೆ.

ಮುಂದೆ ಲಕ್ಷ್ಮಣ ರಾಮರಾಜ್ಯವನ್ನು ತೊರೆದು ಹೋಗುವುದು ಹಾಗೂ ವನವಾಸದಲ್ಲಿ ರಾಮ–ಲಕ್ಷ್ಮಣರ ಸ್ವಭಾವ ಹಾಗೂ ನಡವಳಿಕೆಗಳನ್ನು ಸೀತೆ ವಿಮರ್ಶಿಸುವ ರೀತಿ ವಾಲ್ಮೀಕಿಗಳ ದೃಷ್ಟಿಯಿಂದ ಬಹುದೂರ. ಅಹಲ್ಯೆಯ ಪ್ರಸಂಗವಂತೂ ನಾಟಕೀಯತೆಯಿಂದ ಕೂಡಿ ಅಸಹಜವೆನಿಸುತ್ತದೆ. ವಾಲ್ಮೀಕಿಗಳು ಚಿತ್ರಿಸಿರುವಂತೆ, ರಾಮ–ಲಕ್ಷ್ಮಣರು ಮಹರ್ಷಿ ವಿಶ್ವಾಮಿತ್ರರೊಂದಿಗೆ ಗೌತಮರ ಆಶ್ರಮ ಪ್ರವೇಶಿಸಿದಾಗ, ಅಲ್ಲಿ, ತನ್ನ ತಪಸ್ಸಿನಿಂದ ಸುತ್ತಲೂ ದೈವೀ ಪ್ರಭೆ ಹರಡಿದ್ದ, ಅಹಲ್ಯೆಯನ್ನು

ಕಾಣುತ್ತಾರೆ. ಕೂಡಲೇ ರಾಮ-ಲಕ್ಷ್ಮಣರಿಬ್ಬರೂ ಅವಳ ಪಾದಗಳನ್ನು ಮುಟ್ಟಿ ವಂದಿಸಿ, ಅಹಲ್ಯೆ ಇವರಿಗೆ ಆತಿಥ್ಯ ನೀಡುತ್ತಿರುವಾಗಲೇ, ಮಹಾತೇಜಸ್ವಿಯಾದ ಗೌತಮರೂ ಅಲ್ಲಿಗೆ ಬಂದು ಸೇರಿದರು ಎಂದು ವಾಲ್ಮೀಕಿಗಳು ಹೇಳುವಾಗ, ಅಲ್ಲಿ ಅವಳು ಯಾರಿಗೂ ಕಾಣದಿರುವಂತೆ ತಪೋನಿರತಳಾಗಿದ್ದಳು ಎನ್ನುವುದು ತಿಳಿಯುತ್ತದೆ. ಆ ಕಾಲದಲ್ಲಷ್ಟೇ ಅಲ್ಲದೆ, ಇಂದೂ ಕೂಡ ಸಾಮಾನ್ಯರಂತೆ ಆಹಾರಾದಿಗಳನ್ನು ಅವಲಂಬಿಸಿಲ್ಲದಿರುವ ಯತಿಗಳು ಇರುವ ವಿಚಾರ ತಿಳಿದಿರುವಂತಹುದೇ.

ವಾಲ್ಮೀಕಿಗಳು ರಾಮ ಸೀತೆಯರ ಅನ್ಯೋನ್ಯ ದಾಂಪತ್ಯವನ್ನು ಅರಣ್ಯಕಾಂಡದಲ್ಲಿ ಚಿತ್ರಿಸಿದ್ದಾರೆ. ದೂರದಲ್ಲಿ ಕಾಣಿಸುವ ರಮಣೀಯ ಪರ್ವತಶ್ರೇಣಿ, ಹತ್ತಿರದಲ್ಲಿಯೇ ಇದ್ದ ತಾವರೆ ಕೊಳ, ಮಂದಾಕಿನೀ ನದಿ, ಸುತ್ತಲೂ ಕಾಣುವ ಹೂ ಬಿಡುವ ಮರಗಳು, ಸ್ವೇಚ್ಛೆಯಾಗಿ ಸಂಚರಿಸುತ್ತಾ ಕಲರವ ಮಾಡುತ್ತಿರುವ ಪಶು-ಪಕ್ಷಿ ಸಂಕುಲಗಳನ್ನು ತೋರಿಸುತ್ತಾ ರಾಮ ಜಾನಕಿಯ ಮನವನ್ನು ಮುದಗೊಳಿಸುತ್ತಾನೆ. 'ಗೆಳತಿ, ನನ್ನೊಂದಿಗೆ ಈ ಮಂದಾಕಿನೀ ನದಿಯಲ್ಲಿ ಜಲಕ್ರೀಡೆಯಾಡು' (ಅ:೯೫:೧೨-೧೪) ಎನ್ನುತ್ತಾ ತಾನೇ ಸ್ವತಃ ಗಿಡದಿಂದ ಕಿತ್ತು ತಂದ ಹೂವುಗಳನ್ನು ಪೋಣಿಸಿ ಸೀತೆಯ ಮುಡಿಯಲ್ಲಿ ಮುಡಿಸುತ್ತಿದ್ದ ಎನ್ನುತ್ತಾರೆ ವಾಲ್ಮೀಕಿಗಳು. ಆದರೆ, ಹಲವಾರು ಕೆಲಸಗಳಲ್ಲಿ ನಿರತನಾಗಿರುತ್ತಿದ್ದ ಲಕ್ಷ್ಮಣನ ಬಗ್ಗೆ ಮೆಚ್ಚುಗೆ ಸೂಚಿಸುತ್ತಾ, ಅವನಿಗೆ ಸಹಾಯ ಮಾಡದ ರಾಮನಿಗೆ ನಿಸರ್ಗೋಪಾಸಕನೆಂಬ ಬಿರುದು ಕೊಡುತ್ತಾಳೆ ಭೈರಪ್ಪನವರ ಸೀತೆ! ಇಲ್ಲಿ, ಭೈರಪ್ಪನವರು ಸ್ತ್ರೀವಾದವನ್ನು ಎತ್ತಿಹಿಡಿದಿದ್ದಾರೆ ಎನ್ನುವ ಮಾತು ಕೇಳಿಬರುತ್ತಿದೆ. ಆದಕ್ಕೆ ಪೂರಕವಾಗಿ, ಅವರ ಉತ್ತರ ಕಾಂಡದಲ್ಲಿನ ಸೀತೆ ರಾಮನ ನಡೆಯನ್ನು ಹಲವು ಘಟ್ಟಗಳಲ್ಲಿ ಟೀಕಿಸುವುದು ಕಾಣಿಸುತ್ತದೆ. ರಾಮನ ಏಕಪತ್ನೀವ್ರತವನ್ನೂ ಇಲ್ಲಿ ಸೀತೆ ಟೀಕಿಸುವುದು ಕಾಣುತ್ತದೆ (ಪು:೨೮೨).

ಅಯೋಧ್ಯೆಯಲ್ಲಿ ಸೀತೆಯಿಲ್ಲದೆ ರಾಮಚಂದ್ರನ ಬದುಕು

ಮಹರ್ಷಿ ವಾಲ್ಮೀಕಿಗಳು ರಚಿಸಿರುವ ಆದಿಕಾವ್ಯ, ರಾಮಕಥನದೊಂದಿಗೆ ಸೀತೆಯ ಮಹೋನ್ನತ ಚರಿತೆಯೂ ಆಗಿದೆ ಎನ್ನುವ ಉಲ್ಲೇಖ ಬಾಲಕಾಂಡದಲ್ಲಿ ಕಾಣುತ್ತದೆ (ಕಾವ್ಯಂ ರಾಮಾಯಣಂ ಕೃತ್ಸ್ನಂ ಸೀತಾಯಾಶ್ಚರಿತಂ ಮಹತ್ .. ಚಕಾರ ಚರಿತವ್ರತಃ) ರಾಮಾಯಣದಲ್ಲಿ ತುಂಬಿರುವುದು ಕರುಣ ರಸವೇ. ಅದರಲ್ಲಿಯೂ ಸೀತಾದೇವಿ ಪಟ್ಟ ಪಾಡು ಕರುಳು ಹಿಂಡುವಂತಹುದು. ಆದರೆ, ಅದಕ್ಕಾಗಿ ಭೈರಪ್ಪನವರು ರಾಮನ ಪಾತ್ರವನ್ನು ಗೌಣವಾಗಿಸಬೇಕಿತ್ತೇ ಎನ್ನುವ ಪ್ರಶ್ನೆ ಗಾಢವಾಗಿ ಕಾಡುತ್ತದೆ. ಅಂದಿನ ಕಾಲಘಟ್ಟದಲ್ಲಿ, ಸಾಮಾನ್ಯ ಸಂಗತಿಯಾಗಿದ್ದ ಬಹುಪತ್ನಿತ್ವವನ್ನು ನಿರಾಕರಿಸಿದ ರಾಮ ಸೀತೆಯನ್ನು ಕಾಡಿಗೆ ಕಳುಹಿಸಿದ ನಂತರ, ತನ್ನ ಅರಮನೆಯಲ್ಲಿ ಹೇಗಿದ್ದ ಎನ್ನುವುದೂ ಇಲ್ಲಿ ಮುಖ್ಯವಾಗುತ್ತದೆ. ಅಂದಿನಿಂದ ಇಂದಿನವರೆಗೂ ಬಂದಿರುವ ಸಾವಿರಾರು ರಾಮ ಕಥೆಗಳಲ್ಲಿ ರಾಜಾರಾಮ, ಸೀತೆಯನ್ನೇ ನೆನೆದು ತಾನೂ ತಪಸ್ವಿಯಂತೆಯೇ ಬದುಕಿದ ಎನ್ನುವ ಸಾಮಾನ್ಯ ಎಳೆ ಕಾಣಸಿಗುತ್ತದೆ. ಮೂಲಕೃತಿಯಲ್ಲಿ ಅಗಸನ ಪ್ರಸ್ತಾಪವಿಲ್ಲ. ಅಲ್ಲಿ, ನಗರದ ಹಾಗೂ ಗ್ರಾಮಗಳೆಲ್ಲೆಡೆ ಜನರು ಸೀತೆಯನ್ನು ಸಂದೇಹಿಸುತ್ತಿದ್ದಾರೆ ಎಂದು ಹೇಳಿದವನು ರಾಮನ ಬೇಹುಗಾರ. ಹಾಗಾದಲ್ಲಿ, ಅಯೋಧ್ಯೆಯ ಜನರಿಗೆ ಲಂಕೆಯಲ್ಲಿ ನಡೆದ ಅಗ್ನಿ ಪರೀಕ್ಷೆ ತಿಳಿದಿರಲಿಲ್ಲವೇ ಎನ್ನುವ ಸಂದೇಹ ಸಹಜ. ಹಾಗಾಗಿಯೇ ಹಲವಾರು ವಿದ್ವಾಂಸರು, ಅಗ್ನಿ ಪರೀಕ್ಷೆಯ ಪ್ರಸಂಗ ಆಮೇಲಿನ ಸೇರ್ಪಡೆ ಎನ್ನುತ್ತಾರೆ.

ಸ್ತ್ರೀವಾದ - ಸೀತಾದೇವಿ

ಮೂಲಕೃತಿಯಲ್ಲಿ ಚಿತ್ರಿಸಿರುವಂತೆ, ಯಾವುದೇ ಮಹಿಳೆಗೆ ಸಾವಿರಾರು ಜನರ ಮುಂದೆ ನಿಂತು ತನ್ನ ಪಾವಿತ್ರ್ಯದ ಸಿದ್ಧ ಮಾಡಬೇಕಾಗುವ ಸನ್ನಿವೇಶ ಅತ್ಯಂತ ಖೇದಕರ. ಅವಳಿಗೆ ಇಂತಹ ಬದುಕೇ ಬೇಡ ಎನಿಸುವುದು ಅತ್ಯಂತ ಸಹಜವಾದ ಪ್ರಕ್ರಿಯೆ. ಹಾಗಾಗಿಯೇ, ರಾಮನ ಅಶ್ವಮೇಧಯಾಗದ ಸಂದರ್ಭದಲ್ಲಿ ಸೀತೆ, "ರಾಘವನನ್ನಲ್ಲದೆ ನಾನು ಬೇರಾರನ್ನೂ ಮನಸ್ಸಿನಲ್ಲೂ ಚಿಂತಿಸದಿರುವುದು ಸತ್ಯವಾದಲ್ಲಿ, ಭೂದೇವಿ ನನಗೆ (ತನ್ನಲ್ಲಿ) ಅವಕಾಶ ಕೊಡಲಿ" ಎಂದು ಕರೆದಕೂಡಲೇ ಭೂತಲದಿಂದ ಎದ್ದು ಬರುವ ಭೂಮಿತಾಯಿ ಮಗಳನ್ನು ತನ್ನೊಡನೆ ಕರೆದುಕೊಂಡು ಹೋಗುತ್ತಾಳೆ. ಆದರೆ, ಅವಳು ಹೋಗಿದ್ದೆಲ್ಲಿಗೆ? ಇದು ಆ ಸೀತೆ ಆಯ್ಕೆ ಮಾಡಿಕೊಂಡ ಅವಸಾನವಷ್ಟೆ. ವೈಚಿತ್ರ್ಯವೆಂದರೆ, ಈ ಸಂಗತಿಯನ್ನು ನಮ್ಮ

ಸಮಕಾಲೀನ ಭಾವನೆಗೆ ಸರಿಹೊಂದಿಸಿ, ಈ ಜಗತ್ತಿನಲ್ಲಿ ಪ್ರಪ್ರಥಮವಾಗಿ ಒಬ್ಬ ಹೆಣ್ಣು ತೋರಿಸಿದ ಪ್ರತಿಭಟನೆ' ಎಂದು ವಿಶ್ಲೇಷಿಸುವುದು ಮೂಲ ಸ್ರೋತಕ್ಕೆ ಸರಿಎನಿಸುವುದಿಲ್ಲ.

ಹೀಗೆ ಅವಳ ಬದುಕು ದುರಂತವಾಗಿಬಿಡುವುದನ್ನು ಒಪ್ಪದ ಹಿಂದಿನ ಕಾಲಘಟ್ಟದ ಅನೇಕ ಕವಿಗಳು ಉತ್ತರಕಾಂಡವನ್ನೇ ಕೈಬಿಟ್ಟಿದ್ದಾರೆ. ಹಲವು ನೂರು ವರ್ಷಗಳ ನಂತರ, ವಾಲ್ಮೀಕಿಯಲ್ಲದೆ, ಮತ್ಯಾವುದೋ ಕವಿ ಉತ್ತರ ಕಾಂಡವನ್ನು ರಚಿಸಿರಬಹುದು ಎನ್ನುವ ಅಭಿಪ್ರಾಯವಿದೆ. ಅದರೊಂದಿಗೆ, 'ಉತ್ತರಕಾಂಡ'ಕ್ಕಿಂತ ಭಿನ್ನವಾದ ನಿಲುವನ್ನು ಹೊಂದಿರುವ ಪದ್ಮಪುರಾಣದ ಪಾತಾಲಖಂಡದ ಪ್ರೇರಣೆಯೊಂದಿಗೆ ಸಾಗಿದ ಪ್ರಾಚೀನ ಸಂಸ್ಕೃತ ಕವಿಗಳಲ್ಲಿ ದಿಜನಾಗ ಹಾಗೂ ಭವಭೂತಿಗಳು ಸೀತೆ ರಾಮನೊಂದಿಗೆ ಅಯೋಧ್ಯೆಗೆ ಮರಳಿ ಹೋಗಿ ಮಕ್ಕಳೊಂದಿಗೆ ಸುಖವಾಗಿ ಬಾಳುವಂತೆ ಚಿತ್ರಿಸಿದ್ದಾರೆ. ಇದೇ ಆಶಯವನ್ನು ಕನ್ನಡದ ಲಕ್ಷ್ಮೀಶರಾದಿಯಾಗಿ ಪೂರ್ವಕವಿಗಳೊಂದಿಗೆ, ಕುವೆಂಪುರವರ ರಾಮಾಯಣ ದರ್ಶನದಲ್ಲಿ ಹಾಗೂ ಇತ್ತೀಚಿನ ಕಾದಂಬರಿ ಸೀತಾಂತರಂಗದಲ್ಲಿಯೂ ಕಾಣಬಹುದು.

ಆದರೆ, ಭೈರಪ್ಪನವರ 'ಉತ್ತರ ಕಾಂಡ'ದಲ್ಲಿ ರಾಮನ ಅವಸಾನವಾಯಿತೆಂದು ತಿಳಿದು ಸೀತೆ ಆತ್ಮಹತ್ಯೆ ಮಾಡಿಕೊಂಡಳು ಎಂದಿರುವುದು ಅವರು ಸೃಷ್ಟಿಸಿರುವ 'ದೃಢವಾಗಿ ನಿಂತ ಸೀತೆ'ಯ ಪಾತ್ರಕ್ಕೆ ಸರಿಹೊಂದುವುದಿಲ್ಲ. ಇಂತಹ ಹಲವಾರು ಪ್ರಶ್ನೆಗಳನ್ನು ಹುಟ್ಟುಹಾಕುವ ಭೈರಪ್ಪನವರ 'ಉತ್ತರ ಕಾಂಡ' ಭೈರಪ್ಪನವರ ಕಥೆ ಹೇಳುವ ಆಕರ್ಷಕ ಶೈಲಿಯಿಂದ ಎಡೆಬಿಡದೆ ಓದಿಸಿಕೊಂಡು ಹೋಗುತ್ತದೆ. ಮತ್ತೆ ಮತ್ತೆ ಓದಬೇಕೆನಿಸುವ ಈ ಕೃತಿಯಲ್ಲಿ ಹಲವಾರು ಮನಕರಗಿಸುವಂತಹ ರಸಘಟ್ಟಗಳಿವೆ. ತಪಸ್ವಿನಿ ಶಬರಿಯ ಚಿತ್ರಣ, ಸೀತೆಯ ಬಾಲ್ಯ, ವಿದ್ಯಾಭ್ಯಾಸ, ಮುಂದೆ ಊರ್ಮಿಳೆ ಸೀತೆಯನ್ನು ವಾಲ್ಮೀಕಿಗಳ ಆಶ್ರಮದಲ್ಲಿ ಕಾಣಲು ಬರುವುದು, ಲಂಕೆಯಲ್ಲಿ ವಿಭೀಷಣನ ಪತ್ನಿಯ ಸಹಯೋಗ ಮುಂತಾದ ವಿಚಾರಗಳು ಭೈರಪ್ಪನವರಿಗೆ ಸಿದ್ಧಿಸಿರುವ ಸ್ವಾಭಾವಿಕ ರಸಸ್ಪರ್ಶದಿಂದ ಬೆಳಗುತ್ತವೆ.

***



ರಾಷ್ಟ್ರಪತಿ ದ್ರೌಪದಿ ಮುರ್ಮು ಅವರಿಂದ ಡಾ. ಎಸ್.ಎಲ್.ಭೈರಪ್ಪನವರಿಗೆ ಪದ್ಮಭೂಷಣ ಪ್ರಶಸ್ತಿ ಪ್ರದಾನ

ಓಡಾಡುತ್ತಿದ್ದ ದಂತಕತೆ

– ಟಿ. ಎಸ್. ಶ್ರವಣ ಕುಮಾರಿ

ನಾವು ಹೈಸ್ಕೂಲು ಕಾಲೇಜಿನಲ್ಲಿ ಓದುತ್ತಿದ್ದ ಕಾಲದಲ್ಲಿ ಡಾ. ಎಸ್.ಎಲ್. ಭೈರಪ್ಪನವರ ಕಾದಂಬರಿಗಳನ್ನು ಓದದ ಸಾಹಿತ್ಯಾಭ್ಯಾಸಿ ಇರಲೇ ಇಲ್ಲ ಎಂದರೆ ಅದು ಅತಿಶಯೋಕ್ತಿಯೇ ಅಲ್ಲ. ಕಾರಂತರು, ಅಡಿಗರಂತೆಯೇ ಭೈರಪ್ಪನವರು ಎಲ್ಲರನ್ನೂ ಆವರಿಸಿಕೊಂಡುಬಿಟ್ಟಿದ್ದರು. ಪುಸ್ತಕವೊಂದನ್ನು ಬಿಟ್ಟರೆ ಇನ್ನಾವ ದುರ್ಬಲತೆಯೂ ಇದ್ದಿರದ, ಎಲ್ಲಾ ರೀತಿಯ ಸಾಹಿತ್ಯವನ್ನೂ ಓದುತ್ತಿದ್ದ ನನಗಂತೂ ಭೈರಪ್ಪನವರ ಕೃತಿಗಳು ಅಚ್ಚುಮೆಚ್ಚಾಗಿದ್ದವು. ವಂಶವೃಕ್ಷ, ದೂರ ಸರಿದರು, ದಾಟು... ಹೀಗೆ ಒಂದೊಂದನ್ನೂ ಎರಡು ಮೂರು ಸಲ ಪಠ್ಯ ಪುಸ್ತಕಕ್ಕಿಂತ ಹೆಚ್ಚು ಅಕ್ಕರಾಸ್ತೆಯಿಂದ ಓದುತ್ತಿದ್ದ ದಿನಗಳವು. ಬೃಹತ್ ಕಾದಂಬರಿ 'ಪರ್ವ'ವನ್ನಂತೂ, ನಿಂತು, ಕೂತು, ಓಡಾಡುತ್ತಾ, ತಿನ್ನುತ್ತಾ, ಮಲಗಿ... ಹೀಗೆ ಎಲ್ಲಾ ಭಂಗಿಗಳಲ್ಲಿಯೂ ಓದುತ್ತಾ ಎರಡು ದಿನದಲ್ಲಿ ಮುಗಿಸಿ ಎಷ್ಟೋ ದಿನಗಳು ಒಂದು ರೀತಿಯ ವಶೀಕರಣಕ್ಕೆ ಒಳಗಾಗಿದ್ದದ್ದು ಇನ್ನೂ ನಿನ್ನೆ ಮೊನ್ನೆಯಂತಿದೆ. ಈ ನನ್ನ ಆರಾಧ್ಯ ದೈವವನ್ನು ಶಿವಮೊಗ್ಗೆಯ ಸಾಹಿತ್ಯ ಸಮ್ಮೇಳನದ "ನಾನೇಕೆ ಬರೆಯುತ್ತೇನೆ" ಎನ್ನುವ ವಿಚಾರ ಸಂಕಿರಣದಲ್ಲಿ ದೂರದಿಂದಲೇ ನೋಡಿ ಪುಳಕಗೊಂಡಿದ್ದೆ. ಹತ್ತಿರ ಹೋಗಿ ಮಾತನಾಡಿಸುವಷ್ಟು ದಾಷ್ಟ್ಯವಂತೂ ಇರಲಿಲ್ಲ. ಮುಂದೊಂದು ದಿನ ಅವರನ್ನು ಮುಖತಃ ಭೇಟಿಯಾಗುತ್ತೇನೆಂಬ ಕಲ್ಪನೆಯೂ ಅಂದು ಇರಲಿಲ್ಲ.

ಸುಮಾರು 1996–97ರಲ್ಲಿರಬೇಕು. ಅಂದು ನಾನು ಸಭಾಂಗಣದ ಕಡೆಯ ಸಾಲಿನಲ್ಲಿ ನಿರ್ಗಮಿಸುವ ದ್ವಾರದ ಪಕ್ಕದ ಕುರ್ಚಿಯಲ್ಲಿ ಕುಳಿತಿದ್ದೆ. ಶ್ರೀಯುತ ಎಸ್.ಎಲ್.ಭೈರಪ್ಪನವರ 'ಸಾಕ್ಷಿ' ಕಾದಂಬರಿಯ (ಅದೇ ಕಾದಂಬರಿ ಎಂದುಕೊಳ್ಳುತ್ತೇನೆ) ಬಗ್ಗೆ ಲೇಖಕರೊಂದಿಗೆ ಜಯನಗರ ಏಳನೇ ಬ್ಲಾಕ್‌ನಲ್ಲಿ ಆಗಿದ್ದ ನೆಹರು ಸ್ಮಾರಕ ವಿದ್ಯಾ ಕೇಂದ್ರದ ಪಕ್ಕದಲ್ಲಿ ಒಂದು ದೊಡ್ಡ ಶಾಮಿಯಾನಾದಲ್ಲಿ ಪ್ರಶ್ನೋತ್ತರ ಕಾರ್ಯಕ್ರಮದ ಏರ್ಪಾಟಾಗಿತ್ತು. ನನ್ನ ಕಾಲು ನೋವು ಉತ್ತುಂಗದಲ್ಲಿದ್ದ ದಿನಗಳವು. ನನ್ನ ಆತ್ಮೀಯರೊಬ್ಬರಿಂದ ಅಂದಿನ ಕಾರ್ಯಕ್ರಮದ ಬಗ್ಗೆ ತಿಳಿದು ಅದಕ್ಕೆ ಹೋಗಲೇಬೇಕೆಂಬ ಆಸೆ. ದೂರದಿಂದಲೇ ಆದರೂ ನನ್ನ ಆರಾಧ್ಯ ಲೇಖಕರನ್ನು ನೋಡಿ ಕಣ್ತುಂಬಿಕೊಳ್ಳಬೇಕೆಂಬ, ಮಾತುಗಳನ್ನು ಆಲಿಸಬೇಕೆಂಬ ಆಸೆಯಿಂದ ಅಂತೂ ಹೋಗಿದ್ದೆ. ದೂರದಿಂದ ಅಷ್ಟೊಂದು ಸ್ಪಷ್ಟವಾಗಿ ಕಾಣುತ್ತಿರಲಿಲ್ಲವಾದರೂ, ಜನರ ಗದ್ದಲದಿಂದಾಗಿ ಸ್ಪಷ್ಟವಾಗಿ ಕೇಳುತ್ತಿರಲಿಲ್ಲವಾದರೂ ದಕ್ಕಿದಷ್ಟೇ ಪುಣ್ಯವಲ್ಲವೇ!

ಕಾರ್ಯಕ್ರಮ ಮುಗಿಯಿತು. ನಾನು ನನ್ನನ್ನು ಕರೆದೊಯ್ಯಲು ಬರುವ ನನ್ನವರಿಗಾಗಿ ಕಾಯುತ್ತಾ ಅಲ್ಲೇ ಕುಳಿತಿದ್ದೆ. ಸಭಾಂಗಣ ಖಾಲಿಯಾಗತೊಡಗಿತು. ಭೈರಪ್ಪನವರೂ ತಮ್ಮ ಜೊತೆಯವರೊಂದಿಗೆ ವೇದಿಕೆಯಿಂದ ಇಳಿದು ಹೊರಬರತೊಡಗಿದರು... ಕೆಲವೇ ಅಡಿಗಳ ದೂರದಲ್ಲಿ ಅವರು. ಮಾತನಾಡಿಸಲೇ... ಕೈಮುಗಿಯಲೇ... ತಿಳಿಯುತ್ತಿಲ್ಲ... ಹೇಗೋ ಕಷ್ಟಪಟ್ಟು ಏಳುವ ಸನ್ನಾಹ ಮಾಡುತ್ತಿರುವಾಗ ಅವರೇ... ಸಾಕ್ಷಾತ್ ಭೈರಪ್ಪನವರೇ ನನ್ನನ್ನು ಮಾತನಾಡಿಸುವ ಸಲುವಾಗೇ ಬಂದರೇನೋ ಎನ್ನುವಂತೆ ನನ್ನ ಬಳಿ ಬಂದು, ಮುಂದೆ ನಿಂತು ಎಷ್ಟೋ ಪರಿಚಯವಿದ್ದವರಂತೆ "ಏನಮ್ಮಾ ಹೇಗಿದೀರಿ" ಎನ್ನುವುದೇ! ಕನಸೋ... ನನಸೋ... ಅಚ್ಚರಿಯಿಂದ ಮಾತೇ ಹೊರ ಬರುತ್ತಿಲ್ಲ. ಕಷ್ಟಪಟ್ಟು ತೊದಲುತ್ತಾ "ಸರ್... ಸರ್... ನಾನು ನಿಮ್ಮ ಅಭಿಮಾನಿ. ಇದುವರೆಗೆ ಬಂದಿರುವ ನಿಮ್ಮ ಎಲ್ಲಾ ಪುಸ್ತಕಗಳನ್ನೂ ಕೊಂಡು ಓದಿದ್ದೇನೆ..." ಎಂದೆ, ಹೇಗೋ ಅಂತೂ ನಿಂತುಕೊಂಡು ಕೈಮುಗಿಯುತ್ತಾ. ಅವರ ಸುತ್ತಲೂ ತುಂಬಿಕೊಂಡ ಅಷ್ಟೊಂದು ಜನರ ನಡುವೆ ನನಗೆ 'ಅವರೊಡನೆ ಮಾತನಾಡಿಸಲು ಅವಕಾಶ ಸಿಗಲಿ' ಎಂಬ ಆಸೆಯಿದ್ದರೂ, ಸಿಗಬಹುದೆಂಬ ಎಣಿಕೆ ಖಂಡಿತವಾಗಿಯೂ ಇರಲಿಲ್ಲ.

ಅಂತೂ ಅದಾವ ದೈವದ ಕೃಪೆಯೋ, ಅವರ ಕಾದಂಬರಿಗಳನ್ನು ತಪಸ್ಸಿನಂತೆ ಓದಿದ್ದರ ಫಲವೋ, ನನ್ನಾಸೆ ಕೈಗೂಡಿತ್ತು. ಮಾತು ಮುಂದುವರೆಸಿ ನಗುತ್ತಾ "ಕಾಲಿಗೇನಾಗಿದೆ. ತುಂಬಾ ನೋವಿರುವಂತೆ ಕಾಣುತ್ತೆ" ಎಂದರು. ಆತ್ಮೀಯವಾದ ಸಂಭಾಷಣೆಯಿಂದ ಅಕ್ಷರಶಃ ನನ್ನ ಕಣ್ಣಲ್ಲಿ ನೀರು ತುಂಬಿತು. "ಹೌದು, ನಾಲ್ಕು ವರ್ಷದಿಂದ ಹೀಗಿದೆ. ರುಮಟಾಯ್ಡ್ ಆರ್ಥ್ರೈಟಿಸ್" ಎಂದೆ. "ಮೈಸೂರಿನಲ್ಲಿ, ಅಲ್ಲೇ ದಟ್ಟಗಳ್ಳಿ ಆಂದೋಳನ ಸರ್ಕಲ್ ಹತ್ರ ನನ್ನ ಪರಿಚಯವಿರೋ ಒಬ್ಬರು ಝುಗ್ ಥೆರಪಿ ಅಂತ ಮಾಡ್ತಾರೆ. ನನಗೆ ಅದರಿಂದ ತುಂಬಾ ಅನುಕೂಲವಾಯಿತು. ನೀವು ಒಂದ್ಸಲ ಅವ್ರನ್ನ ಭೇಟಿಯಾಗಬಹುದೇನೋ... ಅವ್ರು ಸಿಗೋದು ಸ್ವಲ್ಪ

ಕಷ್ಟ. ಈ ದೇಶ, ಆ ದೇಶ ಅಂತ ಸುತ್ತುತಿರ್ತಾರೆ. ಅಪ್ರಿರೋದು ತಿಳ್ಕಂಡು ಬರ್ಬೇಕು ಅಷ್ಟೇಯ'' ಎಂದರು. ''ನಮ್ಮ ಮನೆಯವ್ರು ತಿರುಮಕೂಡಲಲ್ಲೇ ಕೆಲಸ ಮಾಡ್ತಿರೋದು. ಯಾವಾಗ್ಲಾದ್ರೂ ವಿಚಾರಿಸಿಕೊಂಡು ಬರಕ್ಕೆ ಹೇಳ್ತೀನಿ ಸರ್'' ಎಂದೆ. ''ಹಾಗಾದ್ರೆ ಒಳ್ಳೇದಾಯ್ತು'' ಎನ್ನುತ್ತಿರುವಾಗಲೇ ಅವರ ಮೊಮ್ಮಗ ಕರೆಯಕ್ಕೆ ಬಂದ. ''ನನ್ನ ಮಗನ ಮಗ ಇಲ್ಲೇ ಬೆಂಗ್ಳೂರಲ್ಲೇ ಇರೋದು'' ಅಂದರು. ''ಬೆಂಗ್ಳೂರಲ್ಲೆಲ್ಲಿ ಸರ್?'' ಎಂದೆ. ''ನಿಮ್ಮನೆ ಇರೋದು ಎಲ್ಲೋ?'' ಎಂದು ಅವನನ್ನೇ ಕೇಳಿದರು. ''ಜೆ ಪಿ ನಗರ'' ಎನ್ನುತ್ತಾ ಅವನು ತಾತನ ಕೈ ಹಿಡಿದು ಎಳೆಯತೊಡಗಿದ. ''ಇನ್ನೂ ಇರ್ತೀರಾ ಸರ್ ಎರಡು ದಿನ'' ಎಂದು ಕೇಳಿದೆ. ''ಇಲ್ಲ, ನಾಳೆ ಸಂಜೆ ಹೊರಟುಬಿಡ್ತೀನಿ. ಬನ್ನಿ ಮೈಸೂರಿಗೆ. ಆದಷ್ಟು ಬೇಗ ಥೆರಪಿ ತೊಗೊಂಡು ಕಾಲುನೋವು ವಾಸಿ ಮಾಡಿಕೊಳ್ಳಿ. ಕೈಕಾಲು ಯಾವಾಗ್ಲೂ ಬೆಚ್ಚಗೆ ಇಟ್ಕೊಂಡಿರಿ. ನೋವು ಕಮ್ಮಿಯಿರತ್ತೆ. ಬರ್ತೀನಿ'' ಎಂದು ಕಕ್ಕುಲತೆಯಿಂದ ನುಡಿದು ಮೊಮ್ಮಗನ ಕೈಹಿಡಿದು ಹೊರಟರು. ಹೋಗುತ್ತಿದ್ದವರನ್ನೇ ನೋಡುತ್ತಾ ನಿಂತೇ ಇದ್ದೆ, ನನ್ನವರು ಬಂದು ಕರೆಯುವವರೆಗೆ...

ಒಬ್ಬ ಸಾಹಿತಿ ಮತ್ತು ಸಾಹಿತ್ಯ ಪ್ರೇಮಿಯ ಭೇಟಿ, ಮಾತುಕತೆ, ಹೀಗೆ– ಪರಿಚಯದವರಂತೆ, ಹಿತೈಷಿಗಳಂತೆ, ಸಮೀಪದ ಬಂಧುಗಳಂತೆ ನಡೆದಿತ್ತು. ನಾನು ಅವರ ಕಾದಂಬರಿಗಳೆಲ್ಲವನ್ನೂ ಓದಿಕೊಂಡಿದ್ದರೂ, ಅದರ ಬಗ್ಗೆ ಅವರೊಂದಿಗೆ ಚರ್ಚಿಸುವಷ್ಟು ಪಾಂಡಿತ್ಯ ಖಂಡಿತವಾಗಿಯೂ ಇರಲಿಲ್ಲ; ಮತ್ತು ಅಂತಹ ಒಂದು ಸನ್ನಿವೇಶವೊಂದಕ್ಕೆ ಅಂದು ತಕ್ಕ ತಯಾರಿಯನ್ನೂ ಮಾಡಿಕೊಂಡಿರಲಿಲ್ಲ. ಅವರಿಗೂ ಅಷ್ಟು ಹೊತ್ತೂ ಸಾಹಿತ್ಯದ ಬಗ್ಗೆಯೇ ಮಾತನಾಡಿ, ಅದೇ ವಿಷಯ ಮುಂದುವರೆಸುವ ಇಚ್ಛೆಯಿರಲಿಲ್ಲವೇನೋ. ನನಗಂತೂ ಈ ಆಕಸ್ಮಿಕ ಭೇಟಿ, ಮಾತುಕತೆ ನನ್ನ ಜೀವನದ ಅವಿಸ್ಮರಣೀಯ ಘಟನೆಯಾಗಿ ಉಳಿದಿದೆ.

ಮುಂದೆ ಮೈಸೂರಿನಲ್ಲಿಯೇ ಕೆಲಸ ಮಾಡುತ್ತಿದ್ದಾಗ ನಮ್ಮ ಬ್ಯಾಂಕಿನ ಬೆಂಗಳೂರಿನ ಸ್ಥಳೀಯ ಪ್ರಧಾನ ಕಚೇರಿಯ ರಾಜ್ಯೋತ್ಸವಕ್ಕೆ ಮುಖ್ಯ ಅತಿಥಿಯಾಗಿ ಬರಲು ಅವರ ಸಮ್ಮತಿಯನ್ನು ಪಡೆಯಲು ಅವರ ಮನೆಗೆ ಹೋಗಿದ್ದೆ. ಅವರ ಶ್ರೀಮತಿಯವರು ಕಾಫಿ ಕೊಟ್ಟರು. ಮಾತು ಆರಂಭಿಸುವ ಸಲುವಾಗಿ ಅವರಿಗೆ ನಮ್ಮ ಹಳೆಯ ಭೇಟಿಯ ಬಗ್ಗೆ ಹೇಳಿದೆ. ಸುಮಾರು ಹತ್ತು ವರ್ಷಗಳ ಹಿಂದಿನ ಮಾತು. ಅವರಿಗೆ ನೆನಪಿಗೆ ಬಂದಂತೆ ತೋರಲಿಲ್ಲ. ನಾನು ನಿರೀಕ್ಷಿಸಿರಲೂ ಇಲ್ಲ. ಅವರಿಗೆ ನನ್ನಂತವರು ಅದೆಷ್ಟು ಜನರೋ! ಆದರೂ ಕಾಳಜಿಯಿಂದ 'ಈಗ ಹೇಗಿದೆ?' ಎಂದು ವಿಚಾರಿಸಿಕೊಂಡರು. ನಂತರ ನಾನು ನಮ್ಮ ಬ್ಯಾಂಕಿನ ರಾಜ್ಯೋತ್ಸವದ ಬಗ್ಗೆ, ಅವರು ಅತಿಥಿಗಳಾಗಿ ಬರಬೇಕೆನ್ನುವ ನಮ್ಮ ಆಶಯದ ಬಗ್ಗೆ ಹೇಳಿದೆ. ಅವರು ಹೇಳಿದ್ದೊಂದೇ ಮಾತು, ''ನಾನು ಯಾವುದೇ ಸಮಾರಂಭದ ಮುಖ್ಯ ಅತಿಥಿಯಾಗಿ, ಸನ್ಮಾನವನ್ನು ಸ್ವೀಕರಿಸಲು ಹೋಗೋದಿಲ್ಲ. ಅಂತಹ ಕಡೆಗಳಲ್ಲಿ ನನ್ನ ಮನಸ್ಸಿಗೆ ತುಂಬಾ ಹಿಂಸೆ ಅನ್ನಿಸಿಬಿಡುತ್ತೆ. ಅಲ್ಲಿರುವವರಲ್ಲಿ ಬಹಳಷ್ಟು ಜನ ನನ್ನ ಸಾಹಿತ್ಯವನ್ನು ಓದಿಕೊಂಡಿರುವುದಿಲ್ಲ. ನನ್ನ ಬಗ್ಗೆ ಇರೋದಕ್ಕೊಂದಿಷ್ಟು, ಮತ್ತಷ್ಟು ಸೇರಿಸಿ ಹೊಗಳಿಕೆಯ ಮಾತಾಡ್ತಿದ್ದರೆ, ಅವ್ರು ಹೇಳೋದು ನನ್ನ ಬಗ್ಗೇನೇ ಅಲ್ಲ; ಯಾರ ಬಗ್ಗೆಯೋ ಅನ್ನಿಸಿ, ಆ ಜಾಗದಲ್ಲಿ ನಾನೊಬ್ಬ ಪರಕೀಯ ಅನ್ನಿಸಿಬಿಡತ್ತೆ. ಹಾಗಾಗಿ ನಾನೆಲ್ಲಿಗೂ ಬರಲ್ಲ'' ಎಂದು ತಮ್ಮ ನಿಲುವನ್ನು ಸ್ಪಷ್ಟಪಡಿಸಿದ್ದರು. ನನಗೂ ಅವರು ಹೇಳಿದ್ದು ಮನದಟ್ಟಾಗಿತ್ತು. ಕೈ ಮುಗಿದು 'ಮತ್ತೊಮ್ಮೆ ಸಾಹಿತ್ಯದ ಬಗ್ಗೆಯೇ ಮಾತನಾಡಲು ಬರುವೆ' ಎಂದು ಹೇಳಿ ಬಂದಿದ್ದೆ. ಆದರೆ ಆ ಅವಕಾಶ ಬರಲೇ ಇಲ್ಲ.

ಮುಂದೆ ಅವರು ಸಿಕ್ಕಿದ್ದು ಬೆಂಗಳೂರಿನ ರಂಗಶಂಕರದಲ್ಲಿ ನಡೆದ ''ಮಂದ್ರ'' ರಂಗ ಪ್ರದರ್ಶನದಲ್ಲಿ. ಮಾತಿಗೇನೂ ಅವಕಾಶವಿರಲಿಲ್ಲ ಒಂದು ಫೋಟೋ ತೆಗೆದುಕೊಳ್ಳಲೇ? ಎಂದು ಕೇಳಿದೆ. ಒಪ್ಪಿಗೆಯಿತ್ತರು. ಸೆಲ್ಫಿ ತೆಗೆದುಕೊಳ್ಳಲು ಸಂಕೋಚ. ಮೊಬೈಲ್‌ನಲ್ಲಿ ಎರಡು ಫೋಟೋ ತೆಗೆದುಕೊಂಡೆ.

ನಡೆದಾಡುವ ದಂತಕತೆ ಎಂದೇ ಹೆಸರಾಗಿದ್ದ ಡಾ. ಎಸ್.ಎಲ್.ಭೈರಪ್ಪನವರು ಇಂದು ನಮ್ಮೊಂದಿಗಿಲ್ಲ. ಅವರಿದ್ದ ಕಾಲಮಾನದಲ್ಲಿ ನಾವೂ ಇದ್ದೆವು ಎಂದು ಹೇಳಿಕೊಳ್ಳುವ ಹೆಮ್ಮೆಯಂತೂ ನಮಗಿದೆ. ಅವರು ಕಾಲವಾದರು ಎಂದು ಹೇಳಲು ಸಾಧ್ಯವೇ? ಒಬ್ಬ ಒಳ್ಳೆಯ ಸಾಹಿತಿ, ಕವಿಗೆ ಸಾವೆಲ್ಲಿಯದು. ಸಾವನ್ನು ಮೀರಿದವರು ಅವರು. ಇಂದಿಗೂ ಪಂಪ, ರನ್ನ, ಕುಮಾರವ್ಯಾಸರು ನಮ್ಮೊಂದಿಗೇ ಇರುವಂತೆ ಓದುಗರಿರುವಷ್ಟು ಕಾಲವೂ ಭೈರಪ್ಪನವರು ನಮ್ಮೊಂದಿಗಿರುತ್ತಾರೆ.

ಇಂದು ನಾನು ಅವರ ಕೃತಿಗಳ ಬಗ್ಗೆ ಏನನ್ನೂ ಹೇಳಿಲ್ಲ. ಅದರ ಬಗ್ಗೆ ಬೇರೆಯೇ ಲೇಖನವನ್ನು ಬರೆಯುವುದಿದೆ. ***

ಸಂತೇಶಿವರದ ಸಾಧಕ

– ಬೆಂ.ಶ್ರೀ ರವೀಂದ್ರ

ಜಗದಸಂತೆಯಲಿ ವ್ಯಾಪಾರ ಮುಗಿಸಿ ಹೊರಟೇಬಿಟ್ಟ
ಸಂತೇಶಿವರದ ಸಾಹಿತ್ಯ ಸಾಧಕ
ಕಂನಾಡ ಕಾದಂಬರಿ ಶಕ್ತಿಭೂಪ
ದಿಕ್ಕುಗಳ ಮುರಿದು ದಿಗಂತಕೇರಿ
ಹಬ್ಬಿಸಿದ ಮಲ್ಲಿಗೆ ಶ್ರೀಗಂಧ ದೂಪ
ಸಾಹಿತ್ಯ ಸರಸ್ವತಿಯ ವಿರಾಟರೂಪ
ವಟಗುಟ್ಟುವ 'ಗೂಬಲ್' ಸಂತತಿಗೆ ತೋರಿ ಅನುತಾಪ
'ವಂಡರ್' ಗಣ್ಣಿನಲಿ ಸತತ ಸತ್ಯವ ಹುಡುಕಿದ
ಧೀರ ಧೀಮಂತ
ನಮನವಿದೋ ನಿನಗೆ ನನ್ನೆದೆಯ ಸಂತಾಪ

ತೇಲಿಹೋಗುವ ಪರಿಯಲ್ಲ
ಆಳಕ್ಕೆ ಇಳಿದು ತಳವ ಸೋಸಿ
ಅಣುಕಣವ ಬಿಡಿಸಿ
ಸತ್ಯಶೋಧನೆಯ ನಿಕಷಕ್ಕೆ ಒಡ್ಡಿ
ನಂಬಿದನ್ನು ಮುರಿದಂತೆ ಕಡ್ಡಿ
ಅತ್ತಿತ್ತ ಸರಿಯದಂತೆ ಅಡ್ಡಾದಿಡ್ಡಿ
ನಿಖರದಿ ಆಡಿದ ಸಾವಿರದ ನುಡಿ
ನೀನು ಅಭಿವ್ಯಕ್ತಿಸಿದ ರೀತಿಗೆ ನಮ್ಮನ್ನು ಪ್ರಭಾವಿಸಿದ ಪರಿಗೆ
ಇದೋ ಉಘೋ ಉಘೋ ನಮಸ್ಕಾರ

ಇಂದಲ್ಲ, ವರುಷವಿನ್ನೂರರ ನಂತರ
ಓದಿ ಮೆಚ್ಚಿದರೆ,
ಉಳಿದಿದ್ದರೆ ಸಾಹಿತ್ಯ
ಅದು ಗಟ್ಟಿ ನೀನೂ ಗಟ್ಟಿ ಎಂದು
ನಿನಗೆ ನೀನೇ ಸವಾಲೆಸದ ಧೀಮಂತ,
ಸತ್ವ ಸಾಹಿತ್ಯ ಸಂಪದವ ಶತಮಾನಗಳಿಗಿತ್ತು,
ಭೌತಿಕ ಸಂಪತ್ತು ನೊಂದವರಿಗಿತ್ತು
ಸಂತೇಶಿವರಕೆ ಜೀವ ಜಲನಿಧಿ ತರಿಸಿದ ಹರಿಸಿದ ಭಗೀರಥ
ನಿನ್ನನ್ನು ಒಪ್ಪದಿರಬಹುದು ಕೆಲರು
ಆದರೆ ನಿರಾಕರಿಸಲಾರರು


ಅದೇನು ಕೊಟ್ಟಕೊನೆಯ ಪ್ರಶಸ್ತಿ ಮೇರುವಲ್ಲ,
ದಿವಿಜರಿಗೆ ಕೊಡಲಿಲ್ಲ, ಅಡಿಗರಿಗೆ ಕೊಡಲಿಲ್ಲ
ಇಷ್ಟಕ್ಕೂ ಜ್ಞಾನಪೀಠಕ್ಕೇ ಬರುತ್ತಿತ್ತು ಗೌರವ
ಎಷ್ಟು ಹಳಿದುಕೊಂಡರೂ ತನ್ನತಾ ಪೀಠ
ಮರಳಿ ಬಾರರು ಭೈರಪ್ಪ

ಸ್ವಾಮಿ ಭೈರಪ್ಪನವರೇ
ನೀವಿಲ್ಲಿ ಇರುವಿರಿ ಶಾಶ್ವತವಾಗಿ
ಸೂರ್ಯ ಚಂದ್ರರು ಇರುವತನಕ
ಕನ್ನಡದ ಮನಸ್ಸುಗಳ ಪೀಠಾಧಿಪತಿಯಾಗಿ
ನಮ್ಮ ಆತ್ಮದ ಅರಿವಾಗಿ ಪೊಳ್ಳುನಡೆಗಳಿಗೆ ಎದುರಾಗಿ

***

'ಪರ್ವ' – ಒಂದು ಸಣ್ಣ ಪರಿಚಯ

– ಹಿಮನಾಥ



ಕನ್ನಡ ಸಾಹಿತ್ಯದ ಭವ್ಯ ನಕ್ಷತ್ರವ್ಯೂಹದಲ್ಲಿ, ಅಸಾಮಾನ್ಯ ಕಾದಂಬರಿಕಾರರಾಗಿ ಗುರುತಿಸಿಕೊಂಡವರು ಎಸ್.ಎಲ್.ಭೈರಪ್ಪ. ಅವರ ಸೃಜನಶೀಲತೆಯ ಶ್ರೇಷ್ಠ ಶಿಖರವೆಂದರೆ 1979ರಲ್ಲಿ ಹೊರಬಂದ 'ಪರ್ವ' ಕಾದಂಬರಿ.

ಮಹಾಕಾವ್ಯವಾದ ಮಹಾಭಾರತ ಅನಾದಿಯಿಂದಲೂ ಭಾರತದ ಸಂಸ್ಕೃತಿಯ ಕಣಜ. ಆದರೆ ಭೈರಪ್ಪರ ದೃಷ್ಟಿಯಲ್ಲಿ ಅದು ಕೇವಲ ಪುರಾಣವಲ್ಲ, ಮನುಷ್ಯರ ಬದುಕಿನ ಶಾಶ್ವತ ಸತ್ಯಗಳ ಸಂಕಲನ. ಅದಕ್ಕಾಗಿಯೇ 'ಪರ್ವ' ದೇವರು–ಅರಸುವ ಕಥೆಯಲ್ಲ, ಅದು ಮಾನವನ ಆಂತರಿಕ ಜಗತ್ತಿನ ಸಂಶೋಧನೆ.

ಇಲ್ಲಿ ಭೀಷ್ಮರು ಮಾನವೀಯ ದೌರ್ಬಲ್ಯಗಳನ್ನೂ ಹೊಂದಿದ್ದಾರೆ, ಕರ್ಣನು ತನ್ನ ಸ್ವಾಭಿಮಾನ ಮತ್ತು ಅಸಹಾಯಕತೆಯ ನಡುವೆ ಹೋರಾಡುತ್ತಾನೆ, ದ್ರೌಪದಿ ತನ್ನ ಅವಮಾನದಿಂದ ಮಾತ್ರವಲ್ಲ, ತನ್ನ ಅಹಂಕಾರದಿಂದಲೂ ಬದುಕನ್ನು ಎದುರಿಸುತ್ತಾಳೆ. ಕೃಷ್ಣ ಕೂಡ ಓರ್ವ ತಾತ್ವಿಕ ರಾಜಕಾರಣಿಯಾಗಿ ಕಾಣಿಸುತ್ತಾನೆ. ಪ್ರತಿಯೊಂದು ಪಾತ್ರವೂ ನಮ್ಮ ಸುತ್ತಲಿನ ನಿಜವಾದ ವ್ಯಕ್ತಿಗಳಂತೆ ಜೀವಂತವಾಗುತ್ತದೆ.

ಪರ್ವವು ಕೇವಲ ಯುದ್ಧದ ಕಾವ್ಯವಲ್ಲ; ಅದು ಯುದ್ಧದ ಕಾರಣ, ಅದರ ಬೆಲೆ, ಅದರ ಮಾನವೀಯ ಮೌಲ್ಯಗಳ ಕುರಿತು ಆಳವಾದ ಪ್ರಶ್ನೆಗಳನ್ನು ಎತ್ತುತ್ತದೆ. ಧರ್ಮವೆಂದರೆ ಏನು? ಅಧರ್ಮವೆಂದರೆ ಏನು? ಸ್ತ್ರೀಯರ ಗೌರವವೇನು? ಸಂಪ್ರದಾಯಗಳ ಮಿತಿ ಯಾವುದು? – ಈ ಪ್ರಶ್ನೆಗಳಿಗೆ ಭೈರಪ್ಪರು ನೀಡಿದ ಉತ್ತರಗಳು ಓದುಗರ ಮನಸ್ಸಿನಲ್ಲಿ ನಿರಂತರ ಚಿಂತನೆಗಳನ್ನು ಹುಟ್ಟಿಸುತ್ತವೆ.

ಈ ಕೃತಿಯಲ್ಲಿ ಲೇಖಕರು ಇತಿಹಾಸ, ಸಮಾಜಶಾಸ್ತ್ರ, ಮನೋವಿಜ್ಞಾನ, ಪುರಾತತ್ವ ಎಲ್ಲವನ್ನೂ ಸಂಯೋಜಿಸಿದ್ದಾರೆ. ಆದ್ದರಿಂದ 'ಪರ್ವ' ಕೇವಲ ಕಾದಂಬರಿ ಅಲ್ಲ; ಅದು ತತ್ತ್ವಚಿಂತನೆಯ ಪ್ರವಾಹ, ಸಂಸ್ಕೃತಿಯ ಮರುಪರಿಶೀಲನೆ, ಮನುಷ್ಯನ ಅಸ್ತಿತ್ವದ ಹುಡುಕಾಟ.

ಇಂದು 'ಪರ್ವ' ಅನೇಕ ಭಾಷಾಂತರಗಳ ಮೂಲಕ ಭಾರತದೆಲ್ಲೆಡೆ ಓದಲ್ಪಡುತ್ತಿದೆ. ಇದು ಕನ್ನಡ ಸಾಹಿತ್ಯಕ್ಕೆ ಜಾಗತಿಕ ಮಾನವನ್ನು ತಂದಿದೆ. ಭೈರಪ್ಪನವರನ್ನು ಭಾರತದ ಪ್ರಮುಖ ಕಾದಂಬರಿಕಾರರ ಸಾಲಿನಲ್ಲಿ ಶಾಶ್ವತವಾಗಿ ನೆಲೆಗೊಳಿಸಿದ ಕೃತಿಯೂ ಇದೇ.


ಮರಣಾನಂತರ ಜ್ಞಾನಪೀಠ ಪ್ರಶಸ್ತಿ ಸಿಗುವುದಿಲ್ಲ. ಸಾಹಿತ್ಯ ಕ್ಷೇತ್ರದಲ್ಲಿ ನೊಬೆಲ್ ಪುರಸ್ಕಾರ ಸಿಗಲಿ. ಕನ್ನಡಾಭಿಮಾನಿಗಳೆಲ್ಲ ಇದನ್ನು ಎಲ್ಲ ಸಾಮಾಜಿಕ ತಾಣಗಳಲ್ಲಿ ಪ್ರಚಾರ ಮಾಡಿರಿ.

***

ನಾನು ಓದಿದ ಪುಸ್ತಕ

"ಮಂದ್ರ" – ಒಂದು ಅನಿಸಿಕೆ

– ಅನುರಾಧ ನಟರಾಜ್



ಸರಸ್ವತಿ ಸಮ್ಮಾನ್ ಪ್ರಶಸ್ತಿ ವಿಜೇತ "ಮಂದ್ರ" ಓದಿದಾಗ, ನಾಯಕ, ಸಂಗೀತಗಾರ ಮೋಹನ್ ಲಾಲ್ ಪಾತ್ರವನ್ನು ಕುರಿತು ಯೋಚಿಸಿದಾಗ ಮೊದಲು ನನಗೆ ಅನಿಸಿದ್ದು ಕಲೆಗೆ ಮತ್ತು ಕಲೆಗಾರನಿಗೆ (ಅದು ಸಂಗೀತ, ನೃತ್ಯ, ಚಿತ್ರಕಲೆ, ಶಿಲ್ಪಕಲೆ, ಯಾವುದೇ ಆಗಿರಲಿ) ನೈತಿಕತೆ ಅನ್ವಯಿಸುವುದಿಲ್ಲವೇ? ಅವರು ಎಷ್ಟೇ ಪರಿಶ್ರಮದಿಂದ ಏನೆಲ್ಲ ಸಾಧನೆ ಮಾಡಿದ್ದರೂ ಸಾಮಾಜಿಕವಾಗಿ ಮನ್ನಣೆ, ಆತ್ಮತೃಪ್ತಿ ಪಡೆದಿದ್ದರೂ ವೈಯಕ್ತಿಕ ಜೀವನದಲ್ಲಿ ಅವರು ನೈತಿಕತೆಯನ್ನೇಕೆ ಪಾಲಿಸುವುದಿಲ್ಲ? ವಿರೋಧಾಭಾಸ ಏಕೆ?

"ಕಲೆ" ಎನ್ನುವುದೇ ಒಂದು ಸೃಜನಶೀಲ ಅಭಿವ್ಯಕ್ತಿ ಮಾಧ್ಯಮ. ಅದು ಜೀವನ ಮತ್ತು ಜೀವ ಭಾವಗಳನ್ನು ಅಭಿವ್ಯಕ್ತಿಸುವುದರಿಂದ "ಕಲೆ" ಮತ್ತು "ಕಲೆಗಾರ" ಯಾವುದೇ ನೈತಿಕ, ಸಾಮಾಜಿಕ ಮೌಲ್ಯಗಳಿಗೆ ಅತೀತರಾ?

ನಂತರ ಅದರ ಬಗ್ಗೆ ಜಿಜ್ಞಾಸೆ ಉಂಟಾದಾಗ ನನಗೆ ಹೊಳೆದಿದ್ದು ಭೈರಪ್ಪನವರು ಇಲ್ಲಿ ಬರೀ ಕತೆ ಹೇಳುತ್ತಿಲ್ಲ. ಕಲೆಯ ಸೌಂದರ್ಯ ಮೀಮಾಂಸೆಯಲ್ಲಿ ಪ್ಲಾಟೋ, ಟಾಲ್ ಸ್ಟಾಯ್ ಅಂಥಾ ಮಹನೀಯರು ಬಹಳ ಗಹನವಾಗಿ ಚರ್ಚಿಸಿದ "ಆರ್ಟ್ ಫಾರ್ ಆರ್ಟ್ ಸೇಕ್" (ಕಲೆಗಾಗಿ ಕಲೆ) ಮತ್ತು "ಆರ್ಟ್ ಅಂಡ್ ಮೊರಾಲಿಟಿ" (ಕಲೆ ಮತ್ತು ನೈತಿಕತೆ) ವಿಷಯ ಇದರ ಮೂಲ ಇರಬಹುದು ಎಂದೆನಿ ತು.

ಇಲ್ಲಿ ಕಥನ ತಂತ್ರ ಮುಖ್ಯವಾಗಿ "ಆತ್ಮಾವಲೋಕನ". ಅದು ಭೈರಪ್ಪನವರ ಇಷ್ಟವಾದ ಕಥನ ತಂತ್ರ. ಬಹುತೇಕ ಅವರ ಎಲ್ಲಾ ಕಾದಂಬರಿಗಳಲ್ಲೂ ತಮ್ಮ ಚಿಂತನೆ, ಆಲೋಚನೆ, ಸಿದ್ಧಾಂತಗಳನ್ನು ಪಾತ್ರದ ಮೂಲಕ ಹೇಳುವಾಗ ಇದನ್ನು ಬಳಸುತ್ತಾರೆ. ಇಲ್ಲಿ ಕೆಲವೆಡೆ ಅದು ಅಸಹಜ ಅನ್ನಿಸಿದರೂ ಸಮಂಜಸವಾಗಿಯೇ ಇದೆ. ಅದೂ ಅಲ್ಲದೇ ಆತ್ಮಾವಲೋಕನ ನೈತಿಕತೆ ಉಳ್ಳವರಿಗೆ ಮಾತ್ರ ಇರಬೇಕೆಂದೇನೂ ಇಲ್ಲ. ಭೈರಪ್ಪನವರ ಎಲ್ಲ ಕಾದಂಬರಿಗಳಂತೆ ಇದೂ ಕೂಡಾ ಸುಲಲಿತವಾಗಿ ಓದಿಸಿಕೊಳ್ಳುತ್ತದೆ.

ಸಂಗೀತ ಹಾಡುವುದು ಪರಿಣತಿ ಇದ್ದರೆ ಸುಲಭ. ಆದರೇ ಸಂಗೀತದ ಬಗ್ಗೆ, ಅದು ಮೂಡಿಸುವ ಭಾವದ ಬಗ್ಗೆ, "ರಸ"ದ ಬಗ್ಗೆ ಪದ, ವಾಕ್ಯಗಳಲ್ಲಿ ಬರೆಯುವುದು ಖಂಡಿತ ಸುಲಭವಲ್ಲ. ಮಂದ್ರ ಕೇವಲ ಮೋಹನಲಾಲನೆಂಬ ಒಬ್ಬ ಸಂಗೀತಗಾರನ ಕಥೆಯಲ್ಲ. ಅವನ ಮೂಲಕ ಭೈರಪ್ಪನವರು ಸಂಗೀತದ ಎಲ್ಲ ಆಯಾಮಗಳನ್ನೂ– ಶಾಸ್ತ್ರೀಯ ಸಂಗೀತ, ಸಂಗೀತಗಾರನ ಬದುಕು ಬವಣೆಗಳು, ಅದನ್ನು ಮೆಟ್ಟಿ ನಿಲ್ಲುವ ಸಾಧನೆ, ಸಂಗೀತದ ವಿಮರ್ಶೆ, .ಸಂಗೀತಗಾರರ ಬಲಹೀನತೆಗಳು, ಅಹಂಕಾರಗಳು, ಸಂಬಂಧಗಳು ಮಾತ್ರವಲ್ಲ.. ಸಂಗೀತದ ಕಲಿಕೆ, ಸ್ವರಸಾಧನೆ, ಮನೋಧರ್ಮ, ಸ್ಫೂರ್ತಿ, ಭಾವ, ರಸಾನುಭೂತಿ, ಸಂಗೀತ ಮತ್ತು ಇತರ ಕಲೆಗಳ (ನೃತ್ಯ) ಸಂಬಂಧ, ಯೋಗಕ್ರಿಯೆಯಾಗಬಲ್ಲ ಆಧ್ಯಾತ್ಮದ ದೈವೀಕ ಸಂಗೀತ. ಘರಾಣೆಗಳು, ಸಂಗೀತ ಸೂಕ್ಷ್ಮದ ಅಂತಾರ್ಜ್ಞಾನ... ಇತ್ಯಾದಿ ಸಂಗೀತಕ್ಕೆ ಸಂಬಂಧಿಸಿದ ಪ್ರತಿಯೊಂದನ್ನೂ ಅರ್ಥಪೂರ್ಣವಾಗಿ ವಿಶ್ಲೇಷಿಸುತ್ತಾರೆ.

ಮಂದ್ರದಲ್ಲಿ ಭೈರಪ್ಪನವರು ಏನನ್ನು ಹೇಳಿದ್ದಾರೆ ಎನ್ನುವುದಕ್ಕಿಂತಲೂ ಅದನ್ನು ಹೇಗೆ ಹೇಳಿದ್ದಾರೆ ಎನ್ನುವುದು ನನಗೆ ಇಷ್ಟವಾದದ್ದು. ಕಲಾವಿದರ ವೈಯಕ್ತಿಕ ಅನೈತಿಕತೆಯ, ಸರಿ-ತಪ್ಪುಗಳ ವಿಶ್ಲೇಷಣೆಗೆ ಅವರು ಹೋಗುವುದಿಲ್ಲ. ಇವರಿರುವುದು ಹೀಗೆ ಎಂದು ಸತ್ಯದರ್ಶನ ಮಾಡಿಸುತ್ತರಾಷ್ಟೆ. ಆದರೆ ಅದಕ್ಕೆ ಅವರ ಹಿಂದುಸ್ತಾನಿ ಶಾಸ್ತ್ರೀಯ ಸಂಗೀತ ಮಾಧ್ಯಮದ ಬಳಕೆ ಅತ್ಯದ್ಭುತವಾಗಿದೆ. ಇಡೀ ಕಾದಂಬರಿಯ ಓದು ಒಂದು ಅಸಾವರಿ ಮಂದ್ರ ಷಡ್ಜದಂತೆ ಧ್ಯಾನಸ್ಥ ಮನಸ್ಥಿತಿಯ ಒಳಗಣ್ಣಿನ ಆತ್ಮಾವಲೋಕನವಾಗಿದೆ.
(ಸಂಗೀತ ತಿಳಿಯದವರಿಗೆ: ಮಂದ್ರ ಷಡ್ಜ = ಮಂದ್ರ ಸ್ಥಾಯಿಯ ಅಂದರೆ.. ಮೆಲುದನಿಯ " ಸಾ") – ಅವರ "ಜಲಪಾತ" ಕಾದಂಬರಿಯಲ್ಲಿ ಕೂಡಾ ಅದೇ ರೂಪಕದ ಬಳಕೆ ಇದೆ.

ಕಾದಂಬರಿಯ ಪಾತ್ರಗಳು ಮತ್ತು ಸನ್ನಿವೇಶಗಳಿಗೆ ತಕ್ಕಂತೆ ಹಿಂದುಸ್ತಾನಿ ರಾಗಗಳ ಬಳಕೆ ಭಾರತೀಯ ಸಾಹಿತ್ಯದಲ್ಲೇ ಅಪರೂಪವಾಗಿದ್ದು , ವಿಶೇಷವಾಗಿದೆ. ಕಾದಂಬರಿಯ ಉದ್ದಕ್ಕೂ ಅದನ್ನು ನಾವು ಗಮನಿಸಬಹುದು.

1. ಭಗವದಂಶಿ ಪೂರಿಯಾ ರಾಗ (ಮಹಾದೇವ ಮಂದಿರದ ಗಾಯನ)
2. ರಾಜಗಾಂಭೀರ್ಯದ ಸಮಯದಲ್ಲಿ ದರ್ಬಾರಿ ರಾಗ....
3. ಪ್ರಾರ್ಥನೆ.. ಆರ್ತತೆ... ಕರುಣೆ.. ಸಮರ್ಪಣಾಭಾವದ ಕಲ್ಯಾಣಿ (ಮಧುಮಿತ ಪಾತ್ರಕ್ಕೆ ತಕ್ಕಂತೆ)
4. ಉತ್ಸಾಹದ ಚಿಲುಮೆ ಭೂಪಾಲಿ ರಾಗ (ಲಾರೆನ್ ಸ್ಮಿತ್ ಸ್ವಭಾವದಂತೆ)
5. ಉತ್ಕಟ ಭಾವಶಕ್ತಿಯ ಘನರಾಗ ಬಾಗೇಶ್ರೀ (ಮನೋಹರಿ ದಾಸ್)
6. ವೇದಘೋಷದಂತೆ ಗಂಭೀರ ಧ್ರುಪದ
7. ಯೋಗಶಕ್ತಿಯ ಆಧ್ಯಾತ್ಮಿಕ ಹದದ ಮಧ್ಯಸಪ್ತಕದ ಓಂಕಾರ

ಇವಲ್ಲದೆ ಭೈರವಿ, ತೋಡಿ, ಮಿಯಾ ಮಲ್ಹಾರ್, ಮೇಘ ಮಲ್ಹಾರ್-ಎಲ್ಲವೂ ಭಾವ ಮತ್ತು ರಸದ ಅತ್ಯುತ್ತಮ ಅಭಿವ್ಯಕ್ತಿಗಳಾಗಿವೆ.

ನನಗನ್ನಿಸಿದ ಇನ್ನೊಂದು ವಿಶೇಷ ಅಂಶವೆಂದರೆ ಧೀರ್ಘಕಾಲೀನ ಸಂಬಂಧಗಳನ್ನು ವಿವರಿಸುವಾಗ ಹಿನ್ನೆಲೆಯಾಗಿ ಬರುವ ಉತ್ಕಟ "ವಿಲಂಬಿತ" ಕಲ್ಯಾಣಿ ಭೂಪಾಲಿಗಳು. ಅಲ್ಪಾವಧಿಯ ತೀವ್ರವಲ್ಲದ ಸ್ನೇಹವನ್ನು ವರ್ಣಿಸುವಾಗ "ಠುಮ್ರಿ"ಯ ಬಳಕೆ. ಈ ಕಲ್ಪನೆಗಳು ಸಂಗೀತದಲ್ಲಿ ಅತ್ಯುತ್ತಮ ಅಭಿರುಚಿ, ಕಲಾಭಿಜ್ಞತೆ ಇರುವ ಭೈರಪ್ಪನವರಂಥ ಲೇಖಕರಿಗೆ ಮಾತ್ರ ಸಾಧ್ಯ. ಕನ್ನಡದಲ್ಲಿ ಮಾತ್ರ ಅಲ್ಲ, ವಿಶ್ವ ಸಾಹಿತ್ಯದಲ್ಲೇ ಇಂತಹ ಪ್ರಯೋಗ ಬೇರೊಂದು ಇರುವುದು ಗೊತ್ತಿಲ್ಲ.

ಮಂದ್ರದಲ್ಲಿ ಸಂಗೀತವನ್ನು ಬಳಸಿಕೊಂಡಿರುವ ಬಗ್ಗೆಯೇ ನಾವು ಸುವಿಸ್ತಾರವಾದ ಚರ್ಚೆ ನಡೆಸಬಹುದೇನೋ.

ಒಟ್ಟಿನಲ್ಲಿ ಸಂಗೀತಪ್ರಿಯರಿಗೆ ಮಾತ್ರವಲ್ಲ, ಸಂಗೀತ ಬಾರದವರಿಗೂ ಆಸಕ್ತಿ ಮೂಡಿಸುವ ವಿಶಿಷ್ಟ ಕಾದಂಬರಿ "ಮಂದ್ರ." ಶಾಸ್ತ್ರೀಯ ಸಂಗೀತ ಗೊತ್ತಿಲ್ಲದೆ ಇರುವವರಿಗೆ ಇದು ಒಬ್ಬ ಸಂಗೀತಗಾರನ ಅಸ್ತಿತ್ವದ ಹೋರಾಟದ ಕತೆ ಅನಿಸಿದರೆ, ಗೊತ್ತಿರುವವರಿಗೆ ಮಂದ್ರ ಅತ್ಯಂತ ಜಾಣ್ಮೆ, ಕೌಶಲದಿಂದ ಮೂಡಿದ ಸೃಜನಶೀಲ ಮೇರು ಕೃತಿ ಎನಿಸುವುದು. ಮಂದ್ರ ಓದುವಾಗ ಜೊತೆಯಲ್ಲೇ ಆಯಾ ಸನ್ನಿವೇಶದಲ್ಲಿ ಬರುವ ರಾಗವನ್ನೂ ಕೇಳುತ್ತಾ ಓದಿದರೆ ಪಾತ್ರಗಳು ಬಹಳ ಗಾಢವಾಗಿ ಆವರಿಸಿಕೊಳ್ಳುತ್ತವೆ.

ಅಮೂರ್ತವಾದ ಸಂಗೀತದ ಕಲ್ಪನೆಗಳು ಘನೀಭವಿಸಿ ನಮ್ಮ ಕಣ್ಮುಂದೆ ರಸ ಒಸರುವ "ಮಂದ್ರ"ದ ಓದು, ಓದುಗನಿಗೆ ಮರೆಯಲಾಗದ ಸುಂದರ ರಸಾನುಭೂತಿ.

***

ಪುಸ್ತಕ ಪರಿಚಯ

'ಎಸ್.ಎಲ್. ಭೈರಪ್ಪ ಇಷ್ಟೇ'

ಲೇಖಕ: ಹರಿಹರಪ್ರಿಯ

(ಪುಸ್ತಕಮನೆ ಪ್ರಕಾಶನ: ಜೂನ್ 2017 – ಪುಟಗಳು: 188, ಬೆಲೆ: ರೂ.226/-)

– ಬಿ.ಎಸ್. ಚಂದ್ರಶೇಖರ್

ಭೈರಪ್ಪನವರ ಕೃತಿಗಳ ಪರಿಚಯವಿಲ್ಲದ ಕನ್ನಡಿಗರು ಕಡಿಮೆ. ಅವರ ಕೃತಿಗಳನ್ನು ಕುರಿತ ಚರ್ಚೆಯೂ ವ್ಯಾಪಕವಾಗಿಯೇ ನಡೆದಿದ್ದರೂ ರಾಜ್ಯದಲ್ಲಿ, ರಾಷ್ಟ್ರದಲ್ಲಿ ತ್ರಿವಿಕ್ರಮನಂತೆ ಬೆಳೆದ ಚಿಂತಕ-ಲೇಖಕರೊಬ್ಬರನ್ನು ಕುರಿತ ಚರ್ಚೆಗೆ ಆಸ್ಪದವಿದ್ದೇ ಇರುತ್ತದೆ.

ತಮ್ಮ ಅಪ್ರತಿಮ ಅಧ್ಯಯನಾಸಕ್ತಿಯಿಂದ ಮೂಡಿದ ಬರಹಗಳಿಂದ ನಿಷ್ಠುರ ಚಿಂತಕರಾಗಿ ಗುರುತಿಸಿಕೊಂಡಿರುವ ಪುಸ್ತಕಮನೆ ಹರಿಹರಪ್ರಿಯರು ಈ ಪುಸ್ತಕದಲ್ಲಿನ ಹಲವು ಲೇಖನಗಳಲ್ಲಿ ಭೈರಪ್ಪನವರ ಸಾಹಿತ್ಯ, ಸಿದ್ಧಾಂತಗಳನ್ನು ಕುರಿತು ವಿಶಿಷ್ಟ ರೀತಿಯಲ್ಲಿ ವಿಶ್ಲೇಷಣೆ ನಡೆಸಿದ್ದಾರೆ.

'ಭೈರಪ್ಪ ಇಷ್ಟೇ' ಎಂದರೆ? ಇದು ನಿಖರವಾಗಿ ಹೇಳುವ ಒಂದು ರೀತಿಯೆಂಬುದು ಸ್ಪಷ್ಟವಾಗುತ್ತದೆ… ಇದಕ್ಕಿಂತ ಕಡಮೆಯಲ್ಲ, ಇದಕ್ಕಿಂತ ಹೆಚ್ಚೂ ಅಲ್ಲ. ಈ ಪದಪುಂಜವನ್ನೇ ಕೃತಿಯ ಶೀರ್ಷಿಕೆಯಾಗಿ ಬಳಸಲಾಗಿದೆ. ಭೈರಪ್ಪ Vs ಬೌದ್ಧಧರ್ಮ, ಭೈರಪ್ಪ Vs ಕ್ರೈಸ್ತಧರ್ಮ, ಭೈರಪ್ಪ Vs ದಲಿತರು, ಭೈರಪ್ಪ Vs ವೇದಿಕೆಗಳು, ಭೈರಪ್ಪ Vs ಸ್ತ್ರೀವಾದಿಗಳು – ಎಂಬ ವಾದಿ-ವಿವಾದಿ ನಿಲುವುಗಳನ್ನು ಸೂಚಿಸುವ ಶೀರ್ಷಿಕೆಗಳೇ ತಾರ್ಕಿಕ/ತಾತ್ತ್ವಿಕ ಘರ್ಷಣೆಗಳನ್ನು ಸೂಚಿಸುತ್ತವೆ. ಈ ರೀತಿಯ 12 ಲೇಖನಗಳ ಜತೆಗೆ 'ಪರ್ವ' ಕುರಿತ ವಿಚಾರಗೋಷ್ಠಿಯೊಂದರ ಚರ್ಚೆಯ ವಿಷಯಗಳದೊಂದು ಲೇಖನ, ಈ 13ರ ಕೊನೆಗೆ 'ಸರದಾರ ಎಸ್.ಎಲ್. ಭೈರಪ್ಪ' ಹಾಗೂ 'ಉತ್ತರೀಯ'ವೆಂಬ ತಮ್ಮ ಪ್ರತಿಕ್ರಿಯಾತ್ಮಕ ಲೇಖನಗಳನ್ನೂ ಸೇರಿಸಿ ಒಟ್ಟು 15 ಲೇಖನಗಳು ಕೃತಿಯ ಒಡಲು ತುಂಬಿವೆ.

ಭೈರಪ್ಪ Vs ಬೌದ್ಧಧರ್ಮ, ಭೈರಪ್ಪ Vs ಎಡಪಂಥೀಯರು… ಮತ್ತಿತರ ಲೇಖನಗಳಲ್ಲಿ ಭೈರಪ್ಪನವರ ಸಾಹಿತ್ಯ, ಚಿಂತನೆಗಳನ್ನು, ಧರ್ಮದ/ಸಾಹಿತ್ಯದ ಇತಿಹಾಸ ಕುರಿತಂತೆ ಹರಿಹರಪ್ರಿಯರ ಒಳನೋಟಗಳನ್ನು ಕಾಣಬಹುದು. ಲೈಫ್-360 ಪತ್ರಿಕೆಯಲ್ಲಿ ಧಾರಾವಾಹಿಯಾಗಿ ಪ್ರಕಟವಾದ ಲೇಖನಮಾಲೆಯ ಈ ಬರಹಗಳಿಗೆ ಓದುಗರ ಪ್ರತಿಕ್ರಿಯೆಗೆ ಲೇಖಕರು ಕೊಟ್ಟಿರುವ ಉತ್ತರವೇ 'ಉತ್ತರೀಯ'. 'ಫಣಿಪತಿಯ ಫಣಾರತ್ನಮುಮಂ ರನ್ನನ ಕೃತ್ನಮುಮಂ ಪೇಳ್ ಪರೀಕ್ಷಿಪರ್ಗೆಂಟೆರ್ದೆಯೇ?' ಎಂಬ ರನ್ನನ ಮಾತನ್ನು ನೆನಪಿಸುವಂಥ ಲೇಖನವಿದು. 'ಸರದಾರ ಎಸ್.ಎಲ್.ಭೈರಪ್ಪ' ಶೀರ್ಷಿಕೆಯ ಲೇಖನ ಈ ಕೃತಿಯ ಇತರ ಲೇಖನ ಗಳಿಗೆ ವಿರುದ್ಧವಾಗಿರುವಂತೆ ಕಾಣುವ ಇದನ್ನು ಸೇರಿಸಿರುವುದಕ್ಕೆ ನಿರ್ದಿಷ್ಟ ಕಾರಣಗಳನ್ನು ಲೇಖಕರಷ್ಟೇ ಕೊಡಬಲ್ಲರೇನೋ!

ಹಿರಿಯ ಬರಹಗಾರ, ಚಿಂತಕ ಕೆ.ವಿ.ತಿರುಮಲೇಶ್ ಅವರ ಬಹುತೇಕ ನಿರ್ಲಿಪ್ತ ದೃಷ್ಟಿಯ, ವಿಸ್ತಾರವಾದ ಮುನ್ನುಡಿಯೂ ಚಿಂತನೀಯವಾಗಿದ್ದು ಕೃತಿಯ ಓದಿಗೆ ಸಮರ್ಥ ಹಿನ್ನೆಲೆಯಾಗಿದೆ. ವಿಮರ್ಶಾತ್ಮಕ ಲೇಖನಗಳ ಈ ಸಂಗ್ರಹವು ಹರಿಹರಪ್ರಿಯರ ಅಧ್ಯಯನದ ಆಳ-ವ್ಯಾಪ್ತಿಗಳನ್ನೂ ವಿಶಿಷ್ಟವೆನಿಸುವ ದೃಷ್ಟಿಕೋನಗಳನ್ನೂ ನಿಚ್ಚಳವಾಗಿ ತೋರಿಸಿವೆ.

ಕೃತಿಗಳ ವಿಮರ್ಶೆಗಳಿಗಿಂತಲೂ ಕೃತಿಗಳಲ್ಲಿ ಕಂಡುಬರುವ ಅವರ ಚಿಂತನೆ, ಧೋರಣೆ, ನಿಲವುಗಳಿಗೆ ಒತ್ತುಕೊಡುವ 'ಇಷ್ಟೇ' ಭೈರಪ್ಪನವರನ್ನು ಒಟ್ಟಾರೆಯಾಗಿ ಗ್ರಹಿಸಲು ಖಂಡಿತ ಸಹಕಾರಿ. ಸದ್ಯಕ್ಕೆ ನಾನು ಹೇಳಬಯಸುವುದು 'ಇಷ್ಟೇ'.

***

ರಸ ಋಷಿಗೆ ಶ್ರದ್ಧಾಂಜಲಿ

– ಬಿ.ಎಸ್.ಶ್ರೀನಿವಾಸ್

ಚಿತ್ತ ಭಿತ್ತಿಯಲಿ ನೆಲೆಸಿದ
ಧರ್ಮಶ್ರೀ ಭೀಮಕಾಯ
ದೂರ ಸರಿದರು ಬೆಸೆವ
ಆಯಸ್ಕಾಂತೀಯ ತಂತು
ಅಸತ್ಯದ ನಿರಾಕರಣ
ಚಿರಸತ್ಯದ ಅನ್ವೇಷಣ
ಸಾರ್ಥದ ಸಾರ್ಥಕ ಯಾನ
ಭೋರ್ಗರೆವ ಜಲಪಾತ
ನಿಷ್ಠುರ ಸತ್ಯವ ನುಡಿದು
ಹಿಡಿದ ಗ್ರಹಣಕೆ
ತಬ್ಬಲಿಯು ನೀನಾದೆ ಮಗನೇ
ನವ ದಶಕಗಳಿಗೆ ಸಾಕ್ಷಿ
ವಿಜ್ಞಾನ ಸಾಹಿತ್ಯಗಳ ಬೆಸೆದ
ಅಪರೂಪದ ಗಟ್ಟಿ ತಂತು
ಕೊರಕಲುಗಳ ದಾಟುತ್ತ
ಕವಲುಗಳ ಅರಸುತ್ತ
ಅಂಚು ಕುಂಚದಲಿ ಮೂಡಿದೆ
ಕಾದಂಬರಿಗಳ ಚಿತ್ತಾರ
ಮತದಾನ ಗೃಹಭಂಗ
ವಂಶವೃಕ್ಷ ನಾಯಿ ನೆರಳು
ಆವರಣದ ಅನುರಣನ
ಮಂದ್ರದ ಮಧುರ ಗಾನ
ಉತ್ತರಕಾಂಡ ನವನೂತನ
ಮುಗಿಯಿತೊಂದು ಮಹಾಪರ್ವ
ಸರಸ್ವತಿ ಪುತ್ರ ಶಬ್ದ ಗಾರುಡಿಗ
ಸಂತೆಶಿವರ ಲಿಂಗಣ್ಣಯ್ಯ ಭೈರಪ್ಪ
ನಿಮಗಿದೋ ಹೃತ್ಪೂರ್ವಕ
ಸಾಷ್ಟಾಂಗ ಅನಂತ ನಮನ

(ಎಸ್.ಎಲ್.ಭೈರಪ್ಪನವರ ಪಾರ್ಥಿವ ಶರೀರಕ್ಕೆ ಶ್ರದ್ಧಾಂಜಲಿ ಅರ್ಪಿಸಿ ಬಂದ ನಂತರ ರಚಿಸಿದ ಈ ಕವನದಲ್ಲಿ ಅವರ ಎಲ್ಲ ಕಾದಂಬರಿಗಳ ಹೆಸರೂ ಬಂದಿದೆ)

ಯುಗಪುರುಷ ಎಸ್.ಎಲ್.ಭೈರಪ್ಪ

– ಲೀಲಾ ವಾಸುದೇವ್

ಯುಗಪುರುಷ ಮರೆಯಾದ
ಸಾಹಿತ್ಯಲೋಕದ ಧೃವತಾರೆ

ಬಡತನದಬೇಗೆಯಲಿ ಬೆಂದು
ಪುಟಕಿಟ್ಟ ಚಿನ್ನ
ಕಾದಂಬರಿಗಳ ಸರಮಾಲೆ ಸರದಾರ
ಜನ ಮೆಚ್ಚಿದರು ನಿಮ್ಮ
ಯುವಜನತೆಯಲಿ ಮೂಡಿಸಿದಿರಿ
ಸಂಚಲನಾ ವಿಶಿಷ್ಟಶಕ್ತಿ
ವಿಶೇಷ ವ್ಯಕ್ತಿತ್ವದ ಭೈರಪ್ಪನವರಲ್ಲಿ
ತುಂಬು ಹೃದಯದ ಭಕ್ತಿ
ಸಂಗೀತ ಸಾಹಿತ್ಯಾಸಕ್ತರ ಮನದಲ್ಲಿ
ಅಚ್ಚಳಿಯದೆ ಉಳಿದ ತಪಸ್ವಿ
ವೈಚಾರಿಕತೆಯ ಲೇಖನಗಳಲಿ
ಕಂಡರು ಹೆಚ್ಚು ಯಶಸ್ವಿ


ನಿರಂತರ ಅಧ್ಯಯನ ಮಾಡಿ
ಸತ್ಯಾನ್ವೇಷಣೆ ತತ್ವ ಭರಿಸಿದ ಸಂತ
ಜ್ಞಾನ ಭಂಡಾರ ತುಂಬಿಸಿಕೊಂಡು
ಮಿಡಿಸಿದರು ಓದುಗರ ನರನಾಡಿಯ
ಪ್ರತಿಷ್ಠಿತ ಬಿರುದು ಸನ್ಮಾನಗಳು
ಅರಸಿ ಬಂದವು ಇವರನ್ನೇ
ತುಂಬು ಜೀವನ ನಡೆಸಿ
ಪಂಚಭೂತಗಳಲ್ಲಿ ಲೀನವಾದರು
ದೈಹಿಕವಾಗಿ ಕಣ್ಮರೆಯಾದರೂ
ನೆಲೆನಿಂತರು ಎಲ್ಲರಂತರಂಗದಲಿ

ಸಾಹಿತ್ಯ ಕ್ಷೇತ್ರಕ್ಕೆ ಬಂದಿತು
ತುಂಬಲಾರದ ನಷ್ಟ
ಮತ್ತೊಮ್ಮೆ ಹುಟ್ಟಿ ಬರಲಿ ಲೇಖಕ
ಎಂಬುದೆ ಶಿಷ್ಯವೃಂದದ ಇಷ್ಟ

***

'ಸಾಕ್ಷಿ' – ಒಂದು ಅವಲೋಕನ

– ಶಾಂತಾ ನಾಗಮಂಗಲ



ಕಾಮ... ಕಾಮ... ಕಾಮ...

ಅದೆಷ್ಟು ಬಗೆಯ ಕಾಮದ ಮುಖಗಳನ್ನು, ಅದರ ಆಟವನ್ನು, ಪುರುಷಾರ್ಥ ಚತುಷ್ಟಯದಲ್ಲಿ ಒಂದಾಗಿ ಮನುಷ್ಯನನ್ನು ಮೋಕ್ಷದ ಕಡೆಗೆ ಕೊಂಡೊಯ್ಯಲು ಸಾಧನವಾಗ ಬಲ್ಲ ಕಾಮವು, ಧರ್ಮಕ್ಕೆ ವಿರುದ್ಧವಾಗಿ ಹೋಗಲು ತೊಡಗಿದಾಗ ಹೇಗೆ ಒಬ್ಬ ವ್ಯಕ್ತಿಯನ್ನು ಏಳಲಾಗದ ಆಳಕ್ಕೆ ಮುಳುಗಿಸುವ ಸಾಧನವೂ ಆಗುವ ರೀತಿಯನ್ನು ಬಹಳ ಮನೋಜ್ಞವಾಗಿಯೂ, ಮೈ ಝುಮ್ಮೆನ್ನುವಂತೆಯೂ ವಿಶ್ಲೇಷಿಸಿರುವ ಕಾದಂಬರಿ, ನಮ್ಮ ಮೆಚ್ಚಿನ ಕಾದಂಬರಿ ಸಾರ್ವಭೌಮ, ಅಪರವ್ಯಾಸರೇ ಆಗಿರುವ ಶ್ರೀಯುತ ಎಸ್.ಎಲ್. ಭೈರಪ್ಪನವರ "ಸಾಕ್ಷಿ".

ಇದು ಗಾತ್ರದಲ್ಲಿ ತುಂಬಾ ದೊಡ್ಡದಲ್ಲ. ಆದರೆ ವಸ್ತುವು ಹೊರಹಾಕಿರುವ ಧ್ವನಿ ಮಾತ್ರ ಅನಂತ ವಿಸ್ತಾರದ್ದು. ಈ ಸತ್ಯಶೋಧನೆಗೆ ಭೈರಪ್ಪನವರು ಈ ಕಾದಂಬರಿಯಲ್ಲಿ ಯಮನ ಮುಂದೆ ಅಂಗುಷ್ಠ ಪ್ರಮಾಣದ ಜೀವವೇ, ಈಗ ಅದಕ್ಕೆ ಲೋಕದ ಹಂಗು, ನಾಮರೂಪಗಳ ಹಂಗು ಇರದೇಇದ್ದ ಸ್ಥಿತಿಯಲ್ಲಿ ಸಾಕ್ಷಿ ಪ್ರಜ್ಞೆಯಿಂದ ಕಥನಿಸುವ ಅದ್ಭುತ ತಂತ್ರವನ್ನು ಬಳಸಿಕೊಂಡು ಗೆದ್ದಿದ್ದಾರೆ. ಕಿರಿದಾದ ಎರಡಕ್ಷರಗಳ ಶೀರ್ಷಿಕೆ. ಕಾಮವೂ ಎರಡಕ್ಷರದ ಶಬ್ದವೇ. ಹೇಗೆ ಕಾಮವು ವಿರಾಟ್ ಸ್ವರೂಪವನ್ನು ತಾಳಿ ಎಲ್ಲರನ್ನೂ ಆವರಿಸಿಕೊಂಡು, ತನ್ನ ಬಲೆಯಲ್ಲಿ ಸಿಲುಕಿಸಿ, ಹಿಸುಕಿ ಹಿಂಡಿ, ವಿಲಿಗುಟ್ಟುವಂತೆ ಮಾಡುವುದೋ.. ಹಾಗೆಯೇ ಈ ಕಾದಂಬರಿ ಸಾಕ್ಷಿ ಕೂಡ ಓದಿದ ಮೇಲೆ ಎಷ್ಟೋ ದಿನಗಳು ನಮ್ಮನ್ನು ತನ್ನೊಳಗೆ ಎಳೆದುಕೊಂಡು, ನಮ್ಮನ್ನೇ ನಾವು ಸಾಕ್ಷಿಯಂತೆ ತಡವಿ ನೋಡಿಕೊಳ್ಳುವಂತೆ ಮಾಡುತ್ತದೆ.

ತನ್ನ ಮಾಟವಾದ ಮೈಕಟ್ಟು, ಮಾತಿನ ಚಟುಕು, ದುಡ್ಡಿನ ಬಲ, ಬುದ್ಧಿವಂತಿಕೆ, ರತಿಕಲೆಯ ನೈಪುಣ್ಯ.... ಇವೆಲ್ಲ ಗುಣಗಳಿಂದ ಯಾವ ಹೆಣ್ಣನ್ನೂ ಮರುಳುಮಾಡಿ ತನ್ನ ದೇಹಕಾಮವನ್ನು ತಣಿಸಿಕೊಳ್ಳುತ್ತಿದ್ದ ಈ ಕಾದಂಬರಿಯ ಕೇಂದ್ರ ಪಾತ್ರ ಎನ್ನಬಹುದಾದ ಮಂಜಯ್ಯನ ಮಟ್ಟಿಗೆ ಇದೊಂದೇ.. ಅಂದರೆ ಮರುಳು ಮಾಡಿ ತನ್ನ ದೇಹದ ಬಯಕೆಯನ್ನು ತಣಿಸಿಕೊಳ್ಳುವುದೇ ಪರಮ ಪುರುಷಾರ್ಥ. ಅವನ ಪ್ರಕಾರ ಅದು ಧರ್ಮವೋ... ಅಧರ್ಮವೋ... ಯಾವ ಮಾರ್ಗದಿಂದ ಸಿಕ್ಕಿದರೂ ತಪ್ಪಿಲ್ಲ. ಇದಕ್ಕಾಗಿ ಅವನು ಯಾವ ಮಟ್ಟದ ಸುಳ್ಳನ್ನೂ ಹೇಳಲು ಹೇಸದವ. ಅವನ ಪ್ರಕಾರ ಅವೆಲ್ಲಾ ಅಂದರೆ ಸುಳ್ಳು, ಅಪ್ರಾಮಾಣಿಕತೆ, ಮೋಸ ಇವ್ಯಾವೂ ತಪ್ಪೇ ಅಲ್ಲ. 'Everything is fair in Love and War' ಅನ್ನುವಂತೆ. ಯಾರ ಬಗ್ಗೆಯೂ ಕರುಣೆಯ ಲವಲೇಶವೂ ಇಲ್ಲದವ... ತನ್ನ ಕಾಮದ ವಿಜೃಂಭಣೆಯೇ ಮುಖ್ಯ. ಹಾಗಾಗಿಯೇ ಕಂಚಿಯ ಹೆಂಡತಿ ಲಕ್ಕುವನ್ನು ಗಂಡ ಸತ್ತ ಅವಳ ದುಃಖವನ್ನೂ ತನ್ನ ಕಾಮದಿಂದಲೇ ತಣಿಸಿ ಗೆಲ್ಲುವ ಅಹಂ. ಸುಲಭಳಾಗಿ ಕೈಗೆ ಸಿಗದೆ ಸತಾಯಿಸುತ್ತಿದ್ದ ಸರೋಜಾಕ್ಷಿಯನ್ನು, ಅವಳ ಪತಿಯನ್ನು ಸಸ್ಪೆಂಡ್ ಮಾಡಿಸಿ, ಮಣಿಸಿ, ತನ್ನ ಕಾಲಬುಡಕ್ಕೆ ಕೆಡವಿಕೊಳ್ಳುವ ಸೇಡು, ತನ್ನ ತಾಯಿಯ ವಯಸ್ಸಿನ ಮನೆಕೆಲಸದವಳನ್ನು ಹೊಡೆಯುವ ಕ್ರೌರ್ಯ, ಲಕ್ಕುವಿನ ಮಗಳನ್ನೂ ಕಾಮಕ್ಕೆ ಬಳಸಿಕೊಳ್ಳುವ ಕೊಳಕು ಮನಸ್ಸು. ದುಡ್ಡಿಗೆ ಸುಖಕೊಡುವ ಹೆಂಗಸರಿರಲಿ, ಸ್ವಸ್ಥವಾಗಿ ಅವರವರ ಮನೆಗಳಲ್ಲಿರುವ ಹೆಂಗಸರನ್ನೂ ಮಂಚಕ್ಕೆಳೆಯುವ ನೀಚತನ ಇದು

ಮಂಜಯ್ಯನ ಕಾಮದ ಹಲವು ಮಜಲುಗಳಾದರೆ, ಅವನ ಎಲ್ಲ ಸುಳ್ಳಿನ ಮೂಲಗಳು ಎನಿಸಿಕೊಂಡರೆ, ಮಂಜಯ್ಯನ ಬಾಯಲ್ಲಿ ಆಗಾಗ ಬರುವ "ಲೌಡಿ, ಅವಳನ್ನು ಕೆಡವಿಕೊಂಡು ವಿರೋಧಿಸಲೂ ಅವಕಾಶಕೊಡದಂತೆ ಮುಗಿಸಿ ಬಿಟ್ಟರೆ, ನಾಲ್ಕು ದಿನ ಹಸಕೊಂಡಿರಲಿ. ಅವಳೇ ಬರ್ತಾಳೆ ನನ್ನತಾವ... ಆಗ.... ಮಾಡ್ತೀನಿ" ಈ ಬಗೆಯ ಮಾತುಗಳು ಗಂಡಿನ ಅಂತರಂಗದಲ್ಲಿ ಅನಾದಿಕಾಲದಿಂದ ಹುದುಗಿರುವ ಹೆಣ್ಣೆಂದರೆ ಕಾಮಕ್ಕೆ ಅಡಿಯಾಳಾಗಿಸಿಕೊಳ್ಳುವ ವಸ್ತು ಅಥವಾ ಅವಳನ್ನು ತುಳಿಯಬೇಕಾದರೆ, ಅವಮಾನ ಮಾಡಬೇಕಾದರೆ ಇದೊಂದೇ ದಾರಿ ಎಂಬ ಮನೋಭಾವ, ದುರಭಿಮಾನವೂ ಎದ್ದು ತೋರುತ್ತದೆ. ದುರ್ಯೋಧನ ದ್ರೌಪದಿಯನ್ನು ಹಲವುಬಾರಿ "ಪಾಂಡವರ ಬೊಡ್ಡಿ" ಎಂದು ಅವಮಾನಿಸುವಾಗ, ಅವಳ ವಸ್ತ್ರಾಪಹರಣದ ಸಂಚು ಮಾಡಿದಾಗ ಇದ್ದದ್ದೂ ಇದೇ ಹೀನಸ್ವಭಾವವೇ ಅಲ್ಲವೇ?

ಸರೋಜಾಕ್ಷಿಯದು ತನ್ನನ್ನು ಆಳುವ ಗಂಡಸನ್ನು ಕೂಡುವ ಕಾಮ ಆದರೆ ಯಾರಿಗೂ ಹಾನಿಯಾಗದಂತೆ ಗೋಪ್ಯತೆಯನ್ನೂ, ಸಂಸಾರವನ್ನೂ ಉಳಿಸಿಕೊಳ್ಳುವ ನಾಜೂಕಿನ ಪರಿಧಿಯಲ್ಲಿ ತಣಿಯುವ ಕಾಮ.

ಪರಮೇಶ್ವರಯ್ಯನವರ ಪತ್ನಿ ಜಾನಕಮ್ಮನವರದು ಹದಿಹರೆಯದ ಉಕ್ಕುವ ಕಾಮವಲ್ಲವಾದರೂ ಅಂಥ ಸುಂದರಾಂಗ ತಮ್ಮನ್ನು ಬಯಸಿ ಬಂದಾಗ, ಹೆಣ್ತನದ ಅಹಂ ಮೇಲೆದ್ದು ಕುಣಿದು ಪತನಕ್ಕೆ ಬಿದ್ದ ಕಾಮ.. ಹೆಚ್ಚು ಕಡಿಮೆ ಅಹಲ್ಯೆ-ಇಂದ್ರರ ಕಥೆಯಂತೆ.

ಸಾವಿತ್ರಿ.... ಮಂಜಯ್ಯನ ಧರ್ಮಪತ್ನಿ, ಮಂಜಯ್ಯನನ್ನು ಎಳೆಎಳೆಯಾಗಿ ಬಲ್ಲ ಅವಳ ತಂದೆ ಹೊಡೆದು ಬೇಡವೆಂದರೂ, ಅವನ ರೂಪಕ್ಕೆ, ಚಾಲಾಕಿತನಕ್ಕೆ ಬೇಯಿಸಿ ಮದುವೆಯಾದವಳು, ಪತಿಯ ನಿಷ್ಠೆ ತನಗೆ ಮಾತ್ರ ಇರಬೇಕು ಎಂಬ ಗೃಹಸ್ಥಧರ್ಮದ ನ್ಯಾಯಯುತವಾದ ಬಯಕೆ. ಅದು ಈಡೇರದಿದ್ದಾಗ ಅವನ ಸಂಪರ್ಕವನ್ನೇ ಕಡಿದುಕೊಳ್ಳುವ ಗಟ್ಟಿಯಾದ ಹೆಣ್ಣು. ಆಮೇಲೆ ಒಮ್ಮೆಯೂ ತಾನಾಗಿ ಅವನ ಸಂಗವನ್ನು ಬಯಸದ, ಅವನನ್ನು ನೆನೆಯದ, ಅವನ ಪಿಂಡವನ್ನು ಕಿತ್ತೇ ಬಿಸಾಕುವ ಗಟ್ಟಿ ಪಾತ್ರ.

ಅಂಗುಷ್ಠ ಪ್ರಮಾಣದ ಪ್ರೇತವಾಗಿರುವ, ಭೂಮಿಯಲ್ಲಿ ನಡೆಯುವ ಎಲ್ಲಾ ವಿದ್ಯಮಾನಗಳಿಗೂ ಸಾಕ್ಷಿಯಾಗುವಂಥಹ ಒಂದು ವಿಶೇಷ ಸವಲತ್ತನ್ನು ನಿಯಂತೃವಾದ ಯಮನಿಂದಲೇ ಪಡೆದುಕೊಂಡು ನಮಗೆ ಕಥೆ ಹೇಳುತ್ತಿರುವ ಪರಮೇಶ್ವರಯ್ಯನವರಿಗೆ ಸತ್ಯನಿಷ್ಠರಾಗಿಯೇ ಇರಬೇಕೆನ್ನುವ ಆಸೆ. ಪರಮೇಶ್ವರಯ್ಯನವರ ಮಗ ರಾಮಕೃಷ್ಣನಿಗೆ ತಾನು ಏನೇ ಆದರೂ ಲೋಭಿಯಾಗ ಬಾರದು, ತನ್ನದಲ್ಲದ ಯಾವ ವಸ್ತುವನ್ನೂ ಬಯಸದಿರಬೇಕು ಎನ್ನುವ ಬಯಕೆ. ಇವುಗಳೂ ಒಂದು ಬಗೆಯಲ್ಲಿ ನಮ್ಮ ನಮ್ಮ ಅಭಿಮಾನವನ್ನು ಪೋಷಿಸುವ ಕಾಮವೇ. ಇವು ಧರ್ಮಕ್ಕೆ ವಿರುದ್ಧವಲ್ಲದ, ಧರ್ಮಕ್ಕೆ ಮತ್ತೂ ಪೂರಕವಾದ ಕಾಮವಾದ್ದರಿಂದ ಇದು ಸಮಾಜಕ್ಕೋ ತನ್ನನ್ನು ನಂಬಿದವರಿಗೋ ಹಾನಿಮಾಡದ ಕಾಮ ಎನ್ನಬಹುದು.

ಅಂತೆಯೇ ಸತ್ಯಪ್ಪ ಸಹ ಗಟ್ಟಿಯಾದ ಪಾತ್ರ. ಮಂಜಯ್ಯನಿಂದ ಮೇಲೆದ್ದ ಕಾಮದ ಕೆಟ್ಟ ಕುತೂಹಲದ ಕಾರಣದಿಂದ ಉಂಟಾದ ಪರಿಸ್ಥಿತಿ ವಿಕೋಪಕ್ಕೆ ಹೋಗಿ, ಉಲ್ಬಣವಾಗಿ... ಅವನಿಗೇ ಜ್ಞಾನೋದಯವಾಗಿ ಮುಗಿದದ್ದು ಬಹಳ ಅದ್ಭುತವಾದ ಪ್ರಸಂಗ. ಸತ್ಯಪ್ಪ ತನ್ನ ಕಾಮವನ್ನು ಸಾಯಿಸಲು ಮಾಡಿದ ಪ್ರಯತ್ನಗಳು. ತಾನಿದ್ದ ತೋಟದ ಗುಡಿಸಲನ್ನೇ ಸುಟ್ಟುಹಾಕಿದ್ದು, ಮಗ ಕೇಳಿದಾಗ 'ಗುಡಿಸಲಿನ ಒಳಗೆ ಹಾವು ಸೇರಿಕೊಂಡಿತ್ತು, ಅದನ್ನು ಕೊಲ್ಲಲು ಗುಡಿಸಲನ್ನು ಸುಟ್ಟೆ. ಹಾವು ಸತ್ತಿತೋ ಇಲ್ಲ ತಪ್ಪಿಸಿಕೊಂಡಿತೋ ಗೊತ್ತಿಲ್ಲ' ಎಂದ ಅವನ ಮಾತುಗಳು ನಮ್ಮ ಪುರಾಣಗಳ ಕಾಮದಹನವನ್ನೂ, ಹಾವು ಕಾಮದ ಸಂಕೇತ ಎಂಬ ಸೂಚನೆಯನ್ನೂ ಬಹಳ ಮಾರ್ಮಿಕವಾಗಿ ತಂದಿರುವ ಭೈರಪ್ಪನವರ ಪ್ರತಿಭೆಗೆ ನಮೋನ್ನಮಃ ಎನ್ನಬೇಕಷ್ಟೆ. ಜೊತೆಗೆ ಸತ್ಯಪ್ಪ ಸಾವಿನ ಬಾಗಿಲವರೆಗೆ ಹೋಗಿ ತಿರುಗಿಬಂದು, ಕಾಮವನ್ನು ಸುಟ್ಟು, ಸತ್ಯವನ್ನು ಹೇಳಲು ಅಂಜದೆ ಸಮಾಜ ಮುಖಿಯಾಗಿ ಎಲ್ಲರ ಅಂತರಂಗದ ಹೊಳಹುಗಳನ್ನು ಕರಾರುವಾಕ್ಕಾಗಿ ಗ್ರಹಿಸುವ ಪಾತ್ರವಾಗಿ ಮನಸ್ಸನ್ನು ಗೆಲ್ಲುತ್ತಾನೆ.

ಧರ್ಮಕ್ಕೆ ವಿರುದ್ಧವಲ್ಲದ ಕಾಮ ನಾನಾಗಿದ್ದೇನೆ- ಎಂದು ಗೀತೆಯಲ್ಲಿ ಭಗವಂತ ಹೇಳಿದ್ದಾನೆ. ಹಾಗೆ ಮನುಷ್ಯ ಲೈಂಗಿಕ ಕಾಮನೆಗಳನ್ನೂ ಸೇರಿದಂತೆ ತನ್ನೆಲ್ಲ ಕಾಮನೆಗಳನ್ನು ತಣಿಸಿಕೊಳ್ಳುವ ಶಿಸ್ತು ಮತ್ತು ನೈತಿಕತೆಯನ್ನು ಉಳಿಸಿಕೊಂಡನಾದರೆ ಮಂಜಯ್ಯ ಕಂಡ ಅಂತ್ಯವನ್ನು ಕಾಣಬೇಕಾಗಿ ಬರುವುದಿಲ್ಲವೇನೋ.

ಭರ್ತೃಹರಿ ತನ್ನ ವೈರಾಗ್ಯ ಶತಕದಲ್ಲಿ "ಭೋಗಾ ನ ಭುಕ್ತಾ ವಯಮೇವ ಭುಕ್ತಾಃ" ಎಂದಿದ್ದಾನೆ. ಅಂದರೆ ಭೋಗಗಳು ಉಂಡು ಮುಗಿಯಲಿಲ್ಲ, ಅವು ನಮ್ಮನ್ನೇ ತಿಂದು ಮುಗಿಸಿದವು ಎಂದು. ಇದನ್ನೇ ಗೀತೆಯಲ್ಲಿ ಕೃಷ್ಣ– "ನ ಹಿ ಕಾಮಃ ಕಾಮೇನ ಉಪಶಾಮ್ಯತೇ / ಹವಿಷಾ ಕೃಷ್ಣವರ್ತ್ಮೇವ ಭೂಯ ಏವ ಅಭಿವರ್ಧತೇ//" ಎಂದಿದ್ದಾನೆ. ಅಂದರೆ ಕಾಮವು ಎಂದಿಗೂ ಕಾಮದಿಂದ ಉಪಶಾಂತಿ ಹೊಂದುವುದಿಲ್ಲ. ಕಾಮವು ಅನುಭವಿಸುತ್ತಾ ಅನುಭವಿಸುತ್ತಾ ಅಗ್ನಿಗೆ ಕೊಟ್ಟ ಹವಿಸ್ಸಿನಿಂದ ಏಳುವ ಹೊಗೆಯಂತೆ ಮತ್ತೆ ಮತ್ತೆ ದಟ್ಟವಾಗಿಯೇ ಏಳುತ್ತದೆ.

ಸಾಕ್ಷಿಯಲ್ಲಿ ಮಂಜಯ್ಯನಿಗಾದ್ದದ್ದೂ ಅದೇ. ಯಾವಾಗ ಸರೋಜಾಕ್ಷಿಯ ಮೇಲೆ ತಾನಂದುಕೊಂಡ ರೀತಿಯಲ್ಲಿ ಗೆಲುವ ಸಾಧಿಸಲಾಗಲಿಲ್ಲವೋ ಆಗ ಅವಳೇ ಅವನನ್ನು ಉತ್ತೇಜಿಸಿದರೂ ಯಾವಾಗ ಅವನ ಇಂದ್ರಿಯಗಳೇ ಕೈಕೊಟ್ಟವೋ, ಆಗ ಅವನ ಕಾಮಕ್ಕೆ ನಿಲುಗಡೆ.... ಅವನ ಸಾವು. ಕಾಮದ ಸಾಕಾರ ರೂಪವೇ ಮಂಜಯ್ಯ. ಕಾಮವಿಲ್ಲ ಎಂದರೆ ಅವನಿಲ್ಲ. ಲಕ್ಕುವಿನಿಂದ ಆದ ಅವನ ಶಿಶ್ನಚ್ಛೇದ ಕೇವಲ ನಿಮಿತ್ತ. ಮಂಜಯ್ಯ ಎಂದೋ ಸತ್ತಿದ್ದ ಎನಿಸುತ್ತದೆ. ಆದರೂ ಈ ಶಿಶ್ನಚ್ಛೇದದ ಕಲ್ಪನೆ ಮೈ ಝುಮ್ಮೆನಿಸುತ್ತದೆ. ಆದರೆ ಅತ್ಯಾಚಾರಕ್ಕೆ ಒಳಗಾದ ಎಷ್ಟೆಷ್ಟೋ ಹೆಣ್ಣುಗಳು ಬಯಸುವ ಶಿಕ್ಷೆ ಇದೇ ಏನೋ ಎನಿಸುತ್ತದೆ.

ಮಂಜಯ್ಯನ ಸಾವು, ಲಕ್ಕುವಿನಿಂದ ಜಾನಕಮ್ಮವರನ್ನೂ ಮಂಜಯ್ಯ ಭೋಗಿಸಿದ್ದ ಎನ್ನುವ ಸತ್ಯದ ಅನಾವರಣದೊಂದಿಗೆ ಕಾದಂಬರಿ ಮುಗಿದ್ದಿದ್ದರೆ ಚೆನ್ನಾಗಿತ್ತಾ...

ಮತ್ತೆ ಯಮಲೋಕ, ಮೂರೂ ಪ್ರೇತಗಳ ಮುಖಾಮುಖಿ, ಚಿತ್ರಗುಪ್ತನ ಮಾತುಗಳು... ಬೇಕಿರಲಿಲ್ಲವೇನೋ ಎನಿಸಿತು

ಬಹಳ ಒಳ್ಳೆಯ ಕಾದಂಬರಿ. ಪುರುಷಾರ್ಥ ಚತುಷ್ಟಯಗಳಲ್ಲಿ ಒಂದಾದ ಕಾಮದ ಕುರಿತಾದಂತೆ ಭಾರತೀಯ ಮೌಲ್ಯಮೀಮಾಂಸೆಯನ್ನು ಬಹಳ ಎತ್ತರದ ಮಟ್ಟದಲ್ಲಿ, ಸುಂದರವಾಗಿ ಚಿತ್ರಿಸಿರುವ ಕಾದಂಬರಿ.

('ಕಥಾಸಂಗಮ' ಕನ್ನಡದ ಕಾದಂಬರಿಗಳ ಆಡಿಯೋ ಪ್ರಸ್ತುತಿ ಗುಂಪಿನಲ್ಲಿ ಕಳೆದವರ್ಷ ಫೆಬ್ರವರಿಯಲ್ಲಿ ಓದಿದ ಭೈರಪ್ಪನವರ 'ಸಾಕ್ಷಿ' ಕಾದಂಬರಿಯನ್ನು ಕೇಳಿದ ಮೇಲೆ ಬರೆದದ್ದು)

***

ಭೈರಪ್ಪನವರು ನನ್ನನ್ನು ಪ್ರಭಾವಿಸಿದ ರೀತಿ.

– ಸರಸ್ವತಿ ನಟರಾಜ್



ಬಹುಶಃ ಎಂಟನೇ ತರಗತಿ ಮುಗಿಸಿದ ರಜಾ ದಿನಗಳು. ನಮ್ಮ ಭಾವ ಬಾಳೇಹೊನ್ನೂರಿನ ಬಳಿಯ ಕಾಫಿ ರೀಸರ್ಚ್ ಸೆಂಟರ್‌ನಲ್ಲಿ ಕೆಲಸಕ್ಕಿದ್ದರು. ಅಲ್ಲಿಯ ಕ್ವಾರ್ಟರ್ಸ್‌ನಲ್ಲಿಯೇ ವಾಸ. ರಜೆಯಲ್ಲಿ ಅಕ್ಕನ ಮನೆಯಲ್ಲಿ ನನ್ನ ಕಣ್ಣಿಗೆ ಬಿದ್ದ ಪುಸ್ತಕಗಳು – ತಬ್ಬಲಿಯು ನೀನಾದೆ ಮಗನೆ, ಧರ್ಮಶ್ರೀ, ವಂಶವೃಕ್ಷ.

ಆರನೇ ತರಗತಿಯಿಂದಲೇ ಶಾಲೆಯ ಲೈಬ್ರರಿಯಿಂದ ತಂದು ಕಾದಂಬರಿ ಓದುವ ಹುಚ್ಚು ಹಿಡಿದಿತ್ತು. 'ತಬ್ಬಲಿಯು ನೀನಾದೆ ಮಗನೆ' ನನ್ನನ್ನು ಬೇರೆಯದೇ ಪ್ರಪಂಚಕ್ಕೆ ಕರೆದೊಯ್ದಿತ್ತು. 'ಧರ್ಮಶ್ರೀ' ಜಾತಿ ಜಾತಿಗಳ ನಡುವಿನ ಗೊಂದಲ, ವಿವಿಧ ಧರ್ಮದ ಕುರಿತು ಪ್ರಶ್ನೆಗಳನ್ನು ಹುಟ್ಟುಹಾಕಿತು. 'ದಾಟು' ಓದಿ, ಸ್ತ್ರೀಯರಿಗೂ ಯಾಕೆ ಉಪನಯನ ಇಲ್ಲ. ಇದ್ದಿದ್ದರೆ! ಎಂಬ ಚಿಂತನೆ ಹಚ್ಚಿತು. ನಂಬಿಕೆ/ ಪ್ರೀತಿ/ ಪ್ರೇಮ, ಸಂಬಂಧಗಳ ಸಂಕೀರ್ಣತೆ, ಇವುಗಳ ಕುರಿತು ಯೋಚಿಸುವ ಹಾಗಾಯಿತು. 'ಮಂದ್ರ' ಕಲೆ–ಕಲಾವಿದರ ನಡುವಿನ ಸಂಬಂಧ, ಆಸ್ಥೆ, ಈರ್ಷೆ/ಸ್ವಾರ್ಥ, ಏಳುಬೀಳುಗಳ/ಪತನಗಳ ಚಿತ್ರ ಕಟ್ಟಿಕೊಟ್ಟರೆ, ನನ್ನೊಳಗೆ ಹಿಂದೂಸ್ತಾನಿ ಸಂಗೀತದ ಕುರಿತು ಅತೀವ ಆಸಕ್ತಿ ಹುಟ್ಟಿಸಿತು. ಅಲ್ಲಿ ವಿವರಿಸಲಾದ ರಾಗಗಳು, ಅವು ಉಂಟುಮಾಡುವ, ಪ್ರಚೋದಿಸುವ ಭಾವನೆಗಳು ಇವುಗಳಲ್ಲಿ ಆಸಕ್ತಿ ಉಂಟುಮಾಡಿ, ಉತ್ತರಾದಿ ಸಂಗೀತಕ್ಕೆ ಕಿವಿಗೊಡುವಂತಾಯಿತು.

ನನ್ನ ಮೊದಲ ಕಥೆ 'ಗೆಳತಿ ಇದು ಸರಿಯಲ್ಲ' ತರಂಗದಲ್ಲಿ ಪ್ರಕಟವಾಗಿ, ಗೌರವಧನವಾಗಿ ಮುನ್ನೂರು ರೂಪಾಯಿ ಕಳಿಸಿದ್ದರು. ಅದರಲ್ಲಿ 'ಭಿತ್ತಿ' ಕಾದಂಬರಿಯನ್ನು ತೆಗೆದುಕೊಂಡೆ. ಬರವಣಿಗೆಯಲ್ಲಿ ಬಂದ ಹಣವನ್ನು ನನ್ನ ನೆಚ್ಚಿನ ಲೇಖಕರ ಪುಸ್ತಕವನ್ನು ತೆಗೆದುಕೊಳ್ಳುವುದಕ್ಕಾಗಿ ವ್ಯಯಿಸುವಾಗ ನನಗಾಗಿದ್ದ ಆನಂದ ಹೇಳತೀರದು. ಭೈರಪ್ಪನವರ ಪುಸ್ತಕಗಳನ್ನು ಯಾವ್ಯಾವುದು ಎಷ್ಟು ಬಾರಿ ಓದಿದ್ದೀನಿ ಎಂಬ ಲೆಕ್ಕವಿಲ್ಲ. ಬಹುಶಃ ಯಾನ, ಉತ್ತರಾಕಾಂಡ ಇವುಗಳನ್ನು ಮಾತ್ರ ಒಂದೇ ಸಲ ಓದಿದೆ.

'ಪರ್ವ' ಒಂದೇ ಸಾಕು, ಭೈರಪ್ಪನವರ ಕಾದಂಬರಿ ರಚನೆಯ ಹಿಂದಿನ ಅಗಾಧ ಓದಿನ, ಸಂಶೋಧನೆಯ, ಪ್ರವಾಸದ, ಶ್ರಮದ ಕುರಿತು ತಿಳಿದುಕೊಳ್ಳಲು. ಇನ್ನು 'ಆವರಣ' ಹುಟ್ಟುಹಾಕಿದ ಚರ್ಚೆ, ಚಿಂತನೆ, ಪರ ವಿರೋಧದ ಮಾತುಗಳು! 'ಆವರಣದ ಅನಾವರಣ' ಎಂಬ ಪುಸ್ತಕವೂ ಬಿಡುಗಡೆ ಆಯಿತು. ಆ ಕಾರ್ಯಕ್ರಮಕ್ಕೆ ನಾನೂ ಹೋಗಿದ್ದೆ. ಅವರನ್ನು ನೋಡಬಹುದು, ಮಾತನಾಡಿಸಲು ಒಂದು ಹಿಂಜರಿಕೆ. ನಮಸ್ಕರಿಸಬಹುದು ಎಂಬ ಭಾವನೆ.


ಸಾಕಷ್ಟು ಮಂದಿ ಅವರ ಹೊಸ ಪುಸ್ತಕ ಯಾವಾಗ ಬರುತ್ತದೆ ಎಂದು ಕಾಯುತ್ತಿದ್ದುದು ನೋಡಿದರೆ ಬಹುಶಃ ಭೈರಪ್ಪನವರಿಗೆ ಮಾತ್ರ ಓದುಗರಲ್ಲಿ ಆ ನಿರೀಕ್ಷೆ, ಕಾತುರ ಹುಟ್ಟಿಸುವ ಶಕ್ತಿ ಇತ್ತು ಅನಿಸುತ್ತದೆ.

ಮೈಸೂರಿನ ಕಲಾಭವನದಲ್ಲಿ 'ಮಂದ್ರ' ನಾಟಕಕ್ಕೆ ಹೋಗಿದ್ದು, ಸಂತೇಶಿವರದಲ್ಲಿ ಭೈರಪ್ಪನವರ ತಾಯಿಯ ಹೆಸರಿನಲ್ಲಿ ಗ್ರಂಥಾಲಯದ ಉದ್ಘಾಟನೆ ಮತ್ತು ದಿನವಿಡೀ ಅವರೊಂದಿಗೆ ಸಂವಾದ ಕಾರ್ಯಕ್ರಮದಲ್ಲಿ ಭಾಗಿಯಾಗಿದ್ದು ಸವಿನೆನಪು. ಕೇಳಿದ್ದೆ, "ಬರವಣಿಗೆಯಲ್ಲಿ ಒಂದಿಷ್ಟು ನಿಮ್ಮ ಶೈಲಿ ನುಸುಳುತ್ತದೆ, ಸರಿಯೇ ತಪ್ಪೇ?" ಎಂದು. "ಪ್ರಾರಂಭದ ಹಂತದಲ್ಲಿ ಸಹಜ,

ಆದರೆ ಆದಷ್ಟು ಬೇಗ ಅದರಿಂದ ಹೊರಬರಲು ಪ್ರಯತ್ನಿಸಬೇಕು. ತನ್ನದೇ ದಾರಿಯನ್ನು ಕಂಡುಕೊಳ್ಳಬೇಕು" ಎಂದು ಉತ್ತರಿಸಿದರು.

ಭೈರಪ್ಪನವರ ಕಾಲದಲ್ಲಿಯೇ ಇದ್ದು ಶಾಶ್ವತವಾಗಿ ನಿಲ್ಲುವ, ಅವರ ಪುಸ್ತಕಗಳನ್ನು ಓದುವ ಅವಕಾಶವಾಗಿರುವುದಕ್ಕೆ ನನಗೆ ಬಹಳ ಹೆಮ್ಮೆಯಿದೆ.

***



ತೃಪ್ತಿ ಎನ್ನುವುದು ಊಟಕ್ಕೆ ಮಾತ್ರ, ಅಧ್ಯಯನಕ್ಕಲ್ಲ


– ರಾಧಿಕಾ ವಿ ಗುಜ್ಜರ್

ರಾಮೋಜಿ, ಈ ಹೆಸರು ನನ್ನ ಕಾದಂಬರಿಯ ಒಂದು ಪಾತ್ರದ ಹೆಸರು ಎಂಬುದನ್ನು ಮಾನ್ಯ ಶ್ರೀ ಎಸ್.ಎಲ್.ಭೈರಪ್ಪನವರು ನನ್ನ ಗಮನಕ್ಕೆ ತಂದಿದ್ದರು. ತನ್ನ ಸ್ನೇಹಿತನ ಹೆಸರನ್ನು ಕೃತಿಯಲ್ಲಿ ನೆನೆಯುವ ಅವರ ಹೃದಯ ವೈಶಾಲ್ಯವು ಮೊದಲ ಬಾರಿ ನನ್ನ ಅರಿವಿಗೆ ಬಂದು ಒಂದು ಅಪ್ಪಟ ಗೌರವ ಭಾವ ಮೂಡಿತು, First impression... ಎಂಬಂತೆ.

ನನ್ನ ಹಿರಿಯ ಮಗಳು ಆಗ ಮೂರು ವರ್ಷದವಳು. ಆಕೆಗೆ ಮೈಸೂರಿನ ಜೂ ತೋರಿಸಿಕೊಂಡು ಹಾಗೆಯೇ ಆಕೆಗೆ ಅಂದು ಅಂಗಡಿಯಲ್ಲಿ ಇಷ್ಟವಾದ ಚನ್ನಪಟ್ಟಣದ ರೈತ ಗಂಡ–ಹೆಂಡತಿ ಗೊಂಬೆ ಖರೀದಿಸಿ ಶ್ರೀ ಭೈರಪ್ಪ ಅವರ ಮನೆ ತಲುಪಿದೆವು. ನನ್ನ ಮಾವ ರಾಮೋಜಿಯವರು ಸಂಜೆ ಅವರ ಮನೆಯ ಹತ್ತಿರ ಬರಲು ಮೊದಲೇ ತಿಳಿಸಿದ್ದರು. ಮಾವನವರ ಅಧ್ಯಾಪನ ವೃತ್ತಿ ಮಿತ್ರರಾದ ಮೈಸೂರಿನ ಶ್ರೀ ರಾಮರಾಯರಿಗೆ ಆರೋಗ್ಯದಲ್ಲಿ ತೊಂದರೆಯಾಗಿದೆ ಎಂದು ತಿಳಿದಿದ್ದರಿಂದ, ಮೈಸೂರಿನ ಕೌಟುಂಬಿಕ ಶುಭ ಸಮಾರಂಭವೊಂದನ್ನು ಮುಗಿಸಿ ಮರುದಿನ ಶ್ರೀ ರಾಮರಾಯರ ಭೇಟಿ ಹಾಗೂ ಶ್ರೀ ಭೈರಪ್ಪನವರ ಭೇಟಿಯನ್ನು ಯೋಚಿಸಿದ್ದೆವು. ಅದರಂತೆ ಅವರಿಗೆ ತಿಳಿಸಿದ್ದೆವೂ ಸಹಾ. ಮಧ್ಯಾಹ್ನದ ಊಟ ನಮ್ಮಲ್ಲೇ ಆಗಬೇಕೆಂದು ಶ್ರೀ ರಾಮರಾಯರ ಶ್ರೀಮತಿಯವರು ಹೇಳಿದ್ದರು. ಹಾಗಾಗಿ ಸಮಾರಂಭದ ಮರುದಿನ ಬೆಳಿಗ್ಗೆ ಅತ್ತೆ–ಮಾವನವರನ್ನು ಶ್ರೀ ರಾಮರಾಯರ ಮನೆಗೆ ಕರೆದುಕೊಂಡು ಹೋಗಿ, ಮಾತನಾಡಿಸಿ ಆಶೀರ್ವಾದ ಪಡೆದು ಒಂದರ್ಧ ಗಂಟೆ ಕುಳಿತಿದ್ದು, ನಾನು ಮತ್ತು ಇವರು ಮಗಳನ್ನು ಕರೆದುಕೊಂಡು ಹೊರಟು, ಜೂ ತೋರಿಸಿ ಸಂಜೆ ೪.೦೦ರ ಸುಮಾರಿಗೆ ಭೈರಪ್ಪನವರ ಮನೆಯನ್ನು ತಲುಪಿದೆವು.

ಬಹಳ ಸ್ವಚ್ಛ ಹಾಗೂ ಸರಳ ಜೀವನ ಶೈಲಿ ಅವರದ್ದು. ಅವರ ಶ್ರೀಮತಿಯವರು ಅಂದು ಮನೆಯಲ್ಲಿರಲಿಲ್ಲ. ಅತ್ತೆ–ಮಾವನವರ ಎದುರಿಗೆ ಹೆಚ್ಚಿದ ಹಣ್ಣಿನ ತಟ್ಟೆಯಿತ್ತು. ಆತ್ಮೀಯತೆಯಿಂದ ನಮ್ಮಿಬ್ಬರನ್ನೂ ಬರಮಾಡಿಕೊಂಡರು. ಹಿರಿಯರನ್ನು ಕಂಡಕೂಡಲೇ ನಮಸ್ಕರಿಸುವ ನನ್ನನ್ನು ಬಹಳ ಸಂತೋಷದಿಂದ ತಲೆ ನೇವರಿಸಿ ನಕ್ಕರು. ನಗುವಿನಲ್ಲೂ ಒಂದು ಗೆರೆ ಆಚೀಚೆಯಾಗದ ಗಾಂಭೀರ್ಯ. "ನಮ್ಮ ಮದುವೆಯ ಸಂದರ್ಭದಲ್ಲಿ ಶುಭವಾಗಲೆಂದು ಹಾರೈಸಿ ಪತ್ರ ಬರೆದಿದ್ದಿರಿ. ಈಗ ಇಬ್ಬರೂ ನಿಮ್ಮೆದುರಿಗಿದ್ದೇವೆ ಆಶೀರ್ವದಿಸಿ" ಎಂದು ನಾನು ಹೇಳಿದಾಗ ಅವರ ನಗುವಿನ ಗೆರೆ ಕಮಾನಾಯಿತು. ಹಾಡುತ್ತೀಯಂತೆ, ಎಂದು ನೆನಪಿನಿಂದ ಕೇಳಿ, "ಅಮೃತಾಹುನಿ ಗೋಡ ನಾಮ ತುಝು ದೇವ" ಹಾಡಿದಾಗ "ವಿಷಯ ಸುಖ" ಪದವನ್ನು ಎರಡು ಮೂರು ಬಾರಿ ಉಚ್ಚರಿಸಿ ಅದರ ಅರ್ಥವನ್ನು ಆನಂದಿಸಿದರು. ಮಾವನವರು ನಿವೃತ್ತಿಯ ನಂತರ ಮತ್ತೆ ವಿದ್ಯಾಸಂಸ್ಥೆಯೊಂದಕ್ಕೆ ಆಡಳಿತಾಧಿಕಾರಿಯಾಗಿ ಮುಂದುವರೆದಿರುವುದು, ನನ್ನ ಪತಿಯ ಉದ್ಯೋಗ, ನನ್ನ ಮೂರೂ ಜನ ನಾದಿನಿಯರ ಯೋಗಕ್ಷೇಮ ಎಲ್ಲವನ್ನೂ ತಿಳಿದುಕೊಂಡರು.

ನಮ್ಮ ಮದುವೆಯ ಕರೆಯೋಲೆಗೆ ಉತ್ತರಿಸಿದ ಪತ್ರದಲ್ಲಿಯೂ ಸಹಾ ಬರೆದ ನಾಲ್ಕು ಸಾಲುಗಳಲ್ಲಿ ಸಹಪಾಠಿಯೊಡನೆಯ ಏಕವಚನದ ಸಂಭಾಷಣೆಯನ್ನು ಬಿಡದ ಆಪ್ತತೆ, ಅವನ ಜೀವನದ ಆಗುಹೋಗುಗಳನ್ನು ಅರಿತು, 'ನಿವೃತ್ತಿಯ ನಂತರ ಏನು ಮಾಡುತ್ತಿರುವೆ?' ಎಂಬ ಕಾಳಜಿ, ಸ್ನೇಹಿತನ ಶ್ರೀಮತಿಗೆ ನಮಸ್ಕಾರಗಳನ್ನು ತಿಳಿಸುವ ಸೌಜನ್ಯ, ಮಕ್ಕಳ ಬಗ್ಗೆ ಒಲವು, ಆದರಭಾವ ಕಾಣುತ್ತದೆ. ಇವೆಲ್ಲ ತಿಳಿಮನಸ್ಸೊಂದರ ಪ್ರತಿಫಲನ. ಕಿತ್ತುಕೊಳ್ಳಲು ಹಣ ಇರಲಿಲ್ಲ, ಓದಿನ ವಿಷಯವಾಗಿ ಹಂಚಿಕೊಳ್ಳಲು ಯಾರೂ ಹತ್ತಿರ ಬರುತ್ತಿರಲಿಲ್ಲ ಎಂಬಂತಹ ಬಡ ಯುವಕರಾದ ರಾಮೋಜಿ ಹಾಗೂ ಭೈರಪ್ಪ ಇಬ್ಬರಿಗೂ ಮೈಸೂರನ್ನು ನಡೆದಾಡಿ ನೋಡುವ ಮತ್ತು ಲೈಬ್ರರಿಯಲ್ಲಿ ಓದುವ ಎರಡೇ ಗೀಳುಗಳಿದ್ದವು ಎನ್ನುವುದು ಅವರಿಬ್ಬರನ್ನು ಬಲ್ಲ ಎಲ್ಲರ ಅಭಿಪ್ರಾಯವಾಗಿತ್ತು. ಬದುಕೆಂಬ ಮರ ಬೆಳೆದು ಶಾಖೆಗಳು ಬೇರೆಬೇರೆಯಾದರೂ, ಇಬ್ಬರಲ್ಲೂ ಇದ್ದ ಸ್ನೇಹದ ಬೇರು ಬೆಚ್ಚಗೆ ಆಳವಾಗಿದ್ದವು.


ಎಸ್. ಎಲ್. ಭೈರಪ್ಪ

೧೦೦೭ ಕುವೆಂಪುನಗರ
ಮೈಸೂರು-೫೭೦ ೦೨೩
ದೂರವಾಣಿ : ೦೮೨೧—೩೧೬೦೪

12-12-89

ಲೇಖನದಲ್ಲಿ ಉಲ್ಲೇಖಿಸಿದಂತೆ ಭೈರಪ್ಪನವರು ನಮ್ಮ ಮದುವೆ ಸಮಯದಲ್ಲಿ ಮಾವನವರಿಗೆ ಬರೆದ ಪತ್ರ

ತಮ್ಮ ಸಮಯವನ್ನು ಗೌರವಿಸಿ ಶ್ರದ್ಧೆಯಿಂದ ಸಾರ್ಥಕವಾಗಿ ಉಪಯೋಗಿಸುತ್ತಿದ್ದ ಅವರದು ಉಣ್ಣುವುದರಲ್ಲಿ ಮಾತ್ರ ಅಲ್ಪ ತೃಪ್ತಿಯನ್ನು ಹಾಗೂ ಅಧ್ಯಯನದಲ್ಲಿ ಸದಾ ಅರಸುವಿಕೆಯನ್ನು ಅಳವಡಿಸಿಕೊಂಡಿದ್ದ ಜೀವನ ಶೈಲಿ. ತಮ್ಮ ಸಮಾನರನ್ನು ಹಾಗೂ ನನ್ನಂತಹ ಎಳೆಯ ಯುವತಿಯನ್ನು ಒಂದೇ ರೀತಿಯಲ್ಲಿ ಗೌರವಿಸುವ ಸಮತೂಕದ ಸ್ವಭಾವ ರೂಢಿಸಿಕೊಂಡಿದ್ದರು.

ಮುಂಬಯಿಯ ಶ್ರೀಮತಿ ಉಮಾ ರಾಮರಾವ್ ಅವರ "ಭೈರಪ್ಪನವರ ಕಾದಂಬರಿಗಳ ಅವಲೋಕನ ಅಭಿಯಾನ"ದಲ್ಲಿ 'ಮತದಾನ' ಕೃತಿಯ ಕುರಿತು ಉತ್ತರಿಸಿದ್ದೆ. ಆಗ ಅನ್ನಿಸಿತ್ತು, ಗಡಿಯಾಚೆಗೆ ಇವರು ಹೀಗೂ ಬೆಳೆದಿದ್ದಾರೆಯೇ? ಎಂದು. ಕನ್ನಡಿಗರು ಇರುವೆಡೆಯಲ್ಲೆಲ್ಲಾ ಇವರು ಅವರವರ ಪಾತ್ರಗಳಿಗೆ ತಕ್ಕಂತೆ ಬದುಕಿನ ಭಾಗವಾಗಿರುತ್ತಾರೆ. ಅವರ ಸಾಹಿತ್ಯ ಕೃಷಿಯಲ್ಲಿ ಅನಾವರಣವಾಗಿರುವ ಪಾತ್ರಗಳು, ಪ್ರಾದೇಶಿಕತೆ, ವಿಷಯಗಳ ಆಯ್ಕೆ, ಸ್ಥಿತಿ–ಗತಿಗಳ ಆತ್ಮಾವಲೋಕನ, ಮಾನಸಿಕತೆಯ ಬಗ್ಗೆ ನಿಲುವು, ದ್ವಂದ್ವಗಳು, ನಿಷ್ಠುರಗಳು, ಪ್ರತಿಪಾದನೆಗಳು, ಅಲೌಕಿಕತೆ, ಅಧ್ವಾನ–ಅರಿವುಗಳು ಎಲ್ಲವೂ ಪ್ರಖರ ಮತ್ತು ವಸ್ತುನಿಷ್ಠ. ಅವರ ಆಳವಾದ ಅಧ್ಯಯನ ಹಾಗೂ ಸೂಕ್ಷ್ಮ ದೃಷ್ಟಿಯ ಪ್ರತೀಕ. ಬದುಕೆಂಬ ಯಜ್ಞಕ್ಕೆ ಒಂದೂ ಕಸಕಡ್ಡಿ ಬೀಳದಂತೆ ಅದನ್ನು ಅತ್ಯಂತ ಪ್ರಾಮಾಣಿಕವಾಗಿ ನಿರ್ವಹಿಸಿದ ವ್ಯಕ್ತಿ. ವ್ರತದ ಫಲವಾಗಿ ತಟ್ಟಿದ ಅದರ ಬಿಸಿಯನ್ನು ಸಹಾ ಸಮಭಾವದಿಂದಲೇ ಸಹಿಸಿ ಸ್ವೀಕರಿಸಿ ಬಾಳಿದ ಸಂವೇದನಾಶೀಲರು.

ಸಾಹಿತ್ಯ ಕೃಷಿಗೆ ತೊಡಗುವವರು "ಗಾಳಿಗೆ ತೂರಿ ಹೋಗದಂತಹ ಗಟ್ಟಿಯಾದ ಕೃತಿಗಳನ್ನು ಕಟ್ಟಿಕೊಡಬಲ್ಲೆವೇ?" ಎಂದು ಯೋಚಿಸಿದಾಗ ನೆನಪಾಗುವ ಮೇರು ಸಾಹಿತಿಗಳ ಸಾಲಿನಲ್ಲಿ ಮಾನ್ಯ ಭೈರಪ್ಪನವರೂ ಒಬ್ಬರು ಎಂಬುದನ್ನು ನಾವೆಲ್ಲರೂ ಒಪ್ಪಲೇಬೇಕಾದ ಸತ್ಯ.

ಇಂದು ವೇದಿಕೆಯಲ್ಲಿ ಅವರ ಬದುಕು ಮತ್ತು ಕೃತಿಗಳ ಅವಲೋಕನ ನಡೆಯುತ್ತಿದೆ ಮತ್ತು ಇದು ಅತ್ಯಂತ ಮೌಲಿಕ ಓದಿಗೆ ಅವಕಾಶ ಮಾಡಿಕೊಟ್ಟಿರುವ ಅಭಿಯಾನ. ಇದರ ಸಾರ್ಥಕತೆಗಾಗಿ ವೇದಿಕೆಯ ಸಂಚಾಲಕ ಮಂಡಳಿಗೆ ಗೌರವಪೂರ್ವಕ ನಮನಗಳು.

***

'ನಿನ್ನಿಂದಾಗಿ ಪೋಲೀಸರು ನಮ್ಮ ಮನೆಗೆ ಬರುವಂತಾಯ್ತು'

– ಟಿ.ಆರ್. ಉಷಾರಾಣಿ

ನನ್ನದೂ ಒಂದು ವಿಭಿನ್ನವಾದ ಅನುಭವ. ನಾವು ಮೈಸೂರಿನಲ್ಲಿದ್ದಾಗ ೧೯೮೭, ಮಾರ್ಚ್ ತಿಂಗಳಲ್ಲಿ ಸ್ಟೇಟ್ ಬ್ಯಾಂಕ್ ಆಫ್ ಮೈಸೂರಿನಿಂದ ನೇಮಕಾತಿ ಪತ್ರ ದೊರಕಿತು. ನಿಯಮದ ಪ್ರಕಾರ ಇಬ್ಬರು ಪರಿಚಯಸ್ಥರಿಂದ ಗುರುತು ಪತ್ರವನ್ನು ಕೆಲಸಕ್ಕೆ ಸೇರುವ ಮೊದಲು ಬ್ಯಾಂಕಿಗೆ ಸಲ್ಲಿಸಬೇಕು. ಒಂದು ಪತ್ರವನ್ನು ನಮ್ಮ ಎದುರು ಮನೆಯ ಶ್ರೀ ಸಿಂಧುವಳ್ಳಿ ಅನಂತಮೂರ್ತಿ ಅವರು ಕೊಟ್ಟರು. ಮತ್ತೊಂದು ಪತ್ರಕ್ಕಾಗಿ ಶ್ರೀ ಭೈರಪ್ಪನವರನ್ನು ವಿನಂತಿಸಿದೆ. ಮಾರನೆಯ ದಿನ ಸಂಜೆ ಬಂದು ತೆಗೆದುಕೊಳ್ಳುವಂತೆ ತಿಳಿಸಿದರು. ಹೇಳಿದ ಸಮಯಕ್ಕಾಗಿ ಸರಿಯಾಗಿ ತಮ್ಮ ಕೈಬರಹದಲ್ಲಿ ಪತ್ರವನ್ನು ತಯಾರು ಮಾಡಿಟ್ಟಿದ್ದರು. ಅದನ್ನು ಪಡೆದು ಬ್ಯಾಂಕಿಗೆ ಸಲ್ಲಿಸಿಯೂ ಆಯಿತು.

ಇದಾಗಿ ಒಂದು ತಿಂಗಳಾಗಿರಬಹುದು, ನಾನು ಮನೆಯ ಬಾಗಿಲಿಗೆ ನೀರು ಹಾಕುತ್ತಿದ್ದೆ. ಪ್ರತಿದಿನ ಭೈರಪ್ಪನವರು ನಮ್ಮ ಮನೆಯ ಮುಂದೆ ಸಾಗಿ ರಾಮಕೃಷ್ಣನಗರದ ಕಡೆ ವಾಕಿಂಗ್ ಹೋಗುತ್ತಿದ್ದರು. ಆಗ ಅಲ್ಲಿ ಯಾವ ಮನೆಯೂ ಇರಲಿಲ್ಲ. ತಲೆಗೆ ಒಂದು ಬಟ್ಟೆಯನ್ನು ರುಮಾಲಿನಂತೆ ಸುತ್ತಿಕೊಂಡಿರುತ್ತಿದ್ದರು. ಸಾಮಾನ್ಯವಾಗಿ ವಾಕಿಂಗ್ ಹೋಗುವಾಗ ಅವರು ಯಾರೊಂದಿಗೂ ಮಾತನಾಡುವುದಿರಲಿ, ನಮಸ್ಕಾರಗಳ ವಿನಿಯೋಗವೂ ಇರುತ್ತಿರಲಿಲ್ಲ. ಮನೆಗೆ ವಾಪಸ್ಸಾಗುವಾಗ ಇದ್ದಕ್ಕಿದ್ದಂತೆ ಅವರು ನನ್ನ ಹತ್ತಿರ ಬಂದು ಗಂಭೀರವಾಗಿ "ನಿನ್ನಿಂದಾಗಿ ಪೊಲೀಸರು ನಮ್ಮ ಮನೆಯವರೆಗೂ ಬರುವಂತಾಯ್ತು" ಎಂದರು. ನನಗೆ ಹೆದರಿಕೆಯುಂದ ಮಾತೇ ಹೊರಡಲಿಲ್ಲ. ನನ್ನಿಂದ ಏನು ತಪ್ಪಾಯಿತು ಎಂದು ಕೇಳಲು ಮಾತೇ ಬರುತ್ತಿಲ್ಲ. ನಾನು ಬಿಳಿಚಿ ಕೊಂಡಿರುವುದು ನೋಡಿ ತಕ್ಷಣ ಮುಖವನ್ನು ಸಡಿಲಿಸಿ, "ಈ ಹುಡುಗಿ ನನಗೆ ಗೊತ್ತು, ಒಳ್ಳೆಯ ಹುಡುಗಿ ಎಂದು ಹೇಳಿದ್ದೇನೆ" ಎಂದರು. ಪರಿಸ್ಥಿತಿಯನ್ನು ಅರ್ಥ ಮಾಡಿಕೊಳ್ಳಲು ಸ್ವಲ್ಪ ಸಮಯವೇ ಹಿಡಿಯಿತು ನನಗೆ. ಕೊನೆಗೆ ನಾನೂ ನಕ್ಕಾಗ, "ಶುಭವಾಗಲಿ" ಎಂದು ತಮ್ಮ ಮನೆಗೆ ತೆರಳಿದರು.

ನಾನು ಅವರ ಕೈಬರಹವಿದ್ದ ಪತ್ರದ ಒಂದು ಪ್ರತಿಯನ್ನಾದರೂ ಇಟ್ಟುಕೊಳ್ಳಬೇಕಿತ್ತು. ಆದರೆ ಎಡೆಬಿಡದೆ 'ಪರ್ವ' ಓದಿರುವುದಕ್ಕೆ ಅವರು ಕೊಟ್ಟ ಲೇಖನಿಯ ಉಡುಗೊರೆ ಮಾತ್ರ ನನ್ನ ಬಳಿ ಇಂದಿಗೂ ಸುರಕ್ಷಿತವಾಗಿದೆ.

***

ಶಿಕ್ಷಣ ಕುರಿತಂತೆ ಡಾ. ಎಸ್.ಎಲ್.ಭೈರಪ್ಪನವರ ಕಾಳಜಿ

– ವಿಠ್ಠಲ. ಇಜೇರಿ

ನಾನು 1963–65ರ ಅವಧಿಯಲ್ಲಿ ನಾನು ಬಾಗಲಕೋಟೆಯ ಬಸವೇಶ್ವರ ಸೈನ್ಸ್ ಕಾಲೇಜಿನಲ್ಲಿ ಓದುತ್ತಿದ್ದಾಗ ಡಾ.ಗದ್ದಗಿಮಠ ಅವರು ಪ್ರಿನ್ಸಿಪಾಲರಾಗಿದ್ದರು. ಅವರು ಕಾಲೇಜಿನಲ್ಲಿಯ ಉತ್ತಮ ಬೋಧಕರನ್ನು ಆರಿಸಿ ಆರಿಸಿ ಕರೆತಂದಿದ್ದರು. ನವೆಂಬರ 2017ರಲ್ಲಿ ಭೈರಪ್ಪನವರ ಅಭಿನಂದನಾ ಸಭೆ ಬಾಗಲಕೋಟೆಯಲ್ಲಿ ನಡೆದಾಗ ಭೈರಪ್ಪನವರು ಡಾ.ಗದ್ದಗಿಮಠ ಅವರ ಈ ಪ್ರಯತ್ನವನ್ನು ನೆನಪಿಸಿಕೊಳ್ಳುತ್ತ, "ನಾನು 1957ರಲ್ಲಿ ಹುಬ್ಬಳ್ಳಿ ಕಾಡಸಿದ್ದೇಶ್ವರ ಕಾಲೇಜಿನಲ್ಲಿ ಬೋಧಕನಾಗಿದ್ದಾಗ ಬಾಗಲಕೋಟೆ ಉತ್ತಮ ವಿದ್ಯಾ ಕೇಂದ್ರವೆಂದು ಕೇಳಿದ್ದೆ ಮತ್ತು ಪ್ರಿನ್ಸಿಪಾಲರ ವಿಷಯ ಕೇಳಿದ್ದೆ. ಯಾವುದೇ ಕಾಲೇಜು ಅಥವಾ ಯೂನಿವರ್ಸಿಟಿ ಉತ್ತಮ ಕಟ್ಟಡಗಳನ್ನು, ಉತ್ತಮ ಲೈಬ್ರರಿ, ದೊಡ್ಡ ಲ್ಯಾಬೋರೇಟರಿ, ದೊಡ್ಡ ಕ್ರೀಡಾಂಗಣ ಹೊಂದಿದ್ದರೆ ಸಾಲದು, ಬಹಳ ಮುಖ್ಯವಾಗಿ ಇರಬೇಕಾದದ್ದು ಉತ್ತಮ, ಅಪಾರ ಜ್ಞಾನ ಹೊಂದಿದ ಬೋಧಕವರ್ಗ. ಆಗ ಮಾತ್ರ ಒಳ್ಳೆಯ ವಿದ್ಯಾರ್ಥಿಗಳನ್ನು ತಯಾರು ಮಾಡಬಹುದು. ಆ ದೃಷ್ಟಿಯಲ್ಲಿ ಡಾ.ಗದ್ದಗಿಮಠ ಅವರು ಮಹತ್ವ ಪಡೆಯುತ್ತಾರೆ'' ಎಂದು ಹೇಳಿ, ಈ ಸಂದರ್ಭದಲ್ಲಿ ಭೈರಪ್ಪನವರು ಲಖನೌ ಯೂನಿವರ್ಸಿಟಿಯ ವೈಸ್ ಚಾನ್ಸಲರರ ಒಂದು ಪ್ರಸಂಗವನ್ನು ಉಲ್ಲೇಖಿಸುತ್ತಾರೆ.

ಬೆಂಗಾಲದಲ್ಲಿ ಡಾ. ದಾಸಗುಪ್ತ ಎಂಬ ದೊಡ್ಡ ವಿದ್ವಾಂಸರಿದ್ದರು. ಅವರನ್ನು ಇಟಲಿಯ ರೋಮ್‌ನಲ್ಲಿ ನಡೆಯುವ ಕಾನ್ಫರೆನ್ಸಿನಲ್ಲಿ ಭಾರತೀಯ ವೈದ್ಯ ಪದ್ಧತಿಗಳ ಕುರಿತು ಹತ್ತು ದಿನಗಳ ಸಂಜೆ ಒಂದು ಗಂಟೆ ಮಾತನಾಡಲು ಅಲ್ಲಿಯ ವ್ಯವಸ್ಥಾಪಕರು ಕೇಳಿದ್ದರು. ಡಾ. ದಾಸಗುಪ್ತ ಅವರು ಆ ದಿಶೆಯಲ್ಲಿ ಭಾಷಣಗಳಿಗೆ ತಯಾರಿ ಮಾಡಿಕೊಂಡಿದ್ದರು. ಆ ಕಾನ್ಫರೆನ್ಸಿಗೆ ಇತರ ದೇಶಗಳಿಂದ ಬಂದ ವಿದ್ವಾಂಸರು "ಡಾ. ದಾಸಗುಪ್ತ ಅವರು ಭಾರತೀಯ ವೈದ್ಯ ಪದ್ಧತಿಗಳ ಬಗ್ಗೆ ಬೇಡ, ಭಾರತೀಯ ಕಲೆಗಳ ಬಗ್ಗೆ ಮಾತನಾಡಲಿ" ಎಂದು ವ್ಯವಸ್ಥಾಪಕರಿಗೆ ವಿನಂತಿ ಮಾಡಿಕೊಂಡರು

ಹತ್ತು ದಿನಗಳು ದಾಸಗುಪ್ತ ಅವರು ಇಂಡಿಯನ್ ಆರ್ಟ್ ವಿಷಯವಾಗಿ ಮಾತನಾಡಿದರು. ಅದನ್ನು ಐದು ಆವೃತ್ತಿಯಲ್ಲಿ ಭಾರತೀಯ ವಿದ್ಯಾ ಭವನದವರು ಪ್ರಕಟಣೆ ಮಾಡಿದರು. ಅದು ಭಾರತೀಯ ಕಲೆಯ ಕುರಿತ ಅಧಿಕೃತ ದಾಖಲೆ. ಭಾರತದಲ್ಲಿ ರಿಟೈರ್ ಆದ ಮೇಲೆ ಐದು ವರ್ಷ ಕ್ಯಾಂಬ್ರಿಜ್‌ನಲ್ಲಿ ಪ್ರೊಫೆಸರ್ ಆಗಿದ್ದರು. ಅಲ್ಲಿಂದ ಮರಳಿ ಬರುವಾಗ ಅವರಿಗೆ ವಯಸ್ಸಾಗಿತ್ತು. ಆ ಸಮಯದಲ್ಲಿ ಲಖನೌ ಯೂನಿವರ್ಸಿಟಿಯಲ್ಲಿ ಒಬ್ಬ ವೈಸ್ ಚಾನ್ಸಲರ್ ಇದ್ದರು, ಅವರೂ ಸಹ ತುಂಬಾ ತಿಳುವಳಿಕೆ ಇದ್ದ ವೈಸ್ ಚಾನ್ಸೆಲರ್. ಅವರೊಂದು ಯೋಚನೆ ಮಾಡಿದರು. ಏನಾದರೂ ಮಾಡಿ ದಾಸಗುಪ್ತ ಅವರು ನಮ್ಮ ಕ್ಯಾಂಪಸ್‌ನಲ್ಲಿ ಇರುವಂತೆ ಮಾಡಿದರೆ ಕ್ಯಾಂಪಸ್‌ಗೆ ಒಂದು ಶೋಭೆ ಬರುತ್ತೆ ಅಂದುಕೊಂಡರು. ದಾಸಗುಪ್ತ ಅವರಿಗೆ ವಯಸ್ಸಾಗಿತ್ತು. ಅಲ್ಲಿ ಯಾವುದೇ ಹುದ್ದೆ ಕೊಡಲಿಕ್ಕೆ ಆಗ್ತಾ ಇರಲಿಲ್ಲ. ಅವರ ಹೆಂಡತಿ ಇದ್ದರು, ಆಕೆಯ ಹೆಸರು ಸುರಮಾ ಅಂತಾ. ಆಕೆ ವಿದ್ಯಾವಂತೆ. ಆದರೆ ಪ್ರೊಫೆಸರ್ ಹುದ್ದೆಗೆ ತಕ್ಕಷ್ಟು ಕ್ವಾಲಿಫಿಕೇಷನ್ ಇರಲಿಲ್ಲ. ಅದಕ್ಕಾಗಿ 'ಸುರಮಾ ದಾಸಗುಪ್ತ ಅವರನ್ನು ನಾವು ರೀಡರ್ ಆಗಿ ಬರಲು ವಿನಂತಿ ಮಾಡಿಕೊಳ್ಳಬೇಕು' ಎಂಬ ಸಲಹೆಯನ್ನು ಸಿಂಡಿಕೇಟ್ ಎದುರು ಇರಿಸಿದರು. ಸಿಂಡಿಕೇಟ್‌ನ ಕೆಲವರು ನಾವೇಕೆ ಕರೆಯಬೇಕು, ಅವರು ಆ ಬಗ್ಗೆ ಅರ್ಜಿ ಬರೆದು ಕೇಳಿಕೊಳ್ಳಲಿ ಎಂದು ಅಭಿಪ್ರಾಯ ನೀಡಿದರು. ವೈಸ್ ಚಾನ್ಸಲರ್ ಹೇಳಿದರು, "ನನ್ನ ಉದ್ದೇಶ ಸುರಮಾ ದಾಸಗುಪ್ತರು ಇಲ್ಲಿಗೆ ಬರಲಿ ಅಂತಾ ಅಲ್ಲ. ದಾಸಗುಪ್ತ ಅವರು ನಮ್ಮ ಕ್ಯಾಂಪಸ್ ನಲ್ಲಿ ಇರಲಿ ಎಂಬುದು ಇದರ ಹಿಂದಿನ ಉದ್ದೇಶ. ಸುರಮಾ ಅವರು ಬಂದರೆ ದಾಸಗುಪ್ತ ಅವರೂ ಬರ್ತಾರೆ ಆಗ ಸಂಜೆ ಅವರ ಬಳಿ ನಮ್ಮವರೆಲ್ಲರೂ ಗೈಡನ್ಸ್ ಕೇಳೋಕೆ ಹೋಗ್ತಾರೆ. ಹಿಸ್ಟರಿಯವರು, ಇಂಡಿಯನ್ ಮ್ಯೂಸಿಕ್ ಬಗ್ಗೆ ಕೇಳೋಕೆ, ಬೇರೆ ಬೇರೆ ವಿಷಯಗಳ ಬಗ್ಗೆ ಕೇಳೋಕೆ ಹೋಗ್ತಾರೆ, ಆ ಪ್ರಚೋದನೆಗೆ ಅವರು ಇಲ್ಲಿಗೆ ಬರ್ಲಿ ಅನ್ನೋದು. ಅವರನ್ನು ಕ್ಯಾಂಪಸಿಗೆ ಕರಸೋಕೆ ಇದಕ್ಕಿಂತ ಬೇರೆ ದಾರಿ ಏನಿದೆ.?'' ಸಿಂಡಿಕೇಟ್ ಸದಸ್ಯರು ಅವರ ಸಲಹೆ ಒಪ್ಪಿದರು. ಇದು ಆ ವೈಸ್ ಚಾನ್ಸಲರಿಗೆ ಇದ್ದಂಥ ದೂರ ದೃಷ್ಟಿ. ದಾಸಗುಪ್ತರು ಬಂದರು. ವಿಷಯ ಏನು ಅಂದರೆ ಆ ವಿಶ್ವಾವಿದ್ಯಾಲಯ ಬೆಳೆಬೇಕು ಅಂದರೆ ಬೇಕಾದದ್ದು ಆ ಮನುಷ್ಯ. ಅಂಥವರನ್ನು ಕರೆತರಬೇಕು, ಅಂಥವರನ್ನು ತಯಾರು ಮಾಡಬೇಕು. ಜ್ಞಾನವನ್ನು ವೃದ್ಧಿ ಮಾಡುವವರನ್ನು ಕರೆ ತರಬೇಕು.

ಬ್ರಿಟನ್ನಿನಲ್ಲಿ ಸುಮಾರು 75 ವರ್ಷಗಳಷ್ಟು ಹಿಂದೆ ಹೈಸ್ಕೂಲಿನಲ್ಲಿ ಶೇಕ್ಸ್ ಪೀಯರನ ಪಾಠ ಮಾಡಬೇಕಾದರೆ ಆ ಟೆಕ್ಸ್ಟ್ ಬುಕ್ ಯಾರು ತಯಾರು ಮಾಡಬೇಕು ಎಂಬ ಪ್ರಶ್ನೆ ಬಂತು. ಆ ಕಾಲದಲ್ಲಿ ಶೇಕ್ಸಪಿಯರನ ಬಗ್ಗೆ ತಿಳಿದ ವಿದ್ವಾಂಸ ವೆರಿಟಿ (Veriti) ಎಂಬವರು ಇದ್ದರು. ಅವರಿಗೆ ಆ ಕೆಲಸ ವಹಿಸಿದರು. ಅವರು ಟೆಕ್ಸ್ಟ್ ನೋಟ್ಸ್, ಹಿನ್ನೆಲೆ, ಎಲ್ಲ ಕೊಟ್ಟು ಹೈಸ್ಕೂಲ್ ಟೆಕ್ಸ್ಟ್ ತಯಾರು ಮಾಡಿದರು. ನಮ್ಮ ಇಂಡಿಯನ್ ಯೂನಿವರ್ಸಿಟಿಯಲ್ಲಿ ಅದೇ ಟೆಕ್ಸ್ಟ್ ಬುಕ್ಕನ್ನು ಎಂ.ಎ. ತರಗತಿಗೆ ಓದಲಿಕ್ಕೆ ರೆಕಮೆಂಡ್ ಮಾಡಿದರು. ಅಂದರೆ ಅಲ್ಲಿಯ ಹೈಸ್ಕೂಲಿನ ಪಠ್ಯ ನಮ್ಮಲ್ಲಿ ಎಂ. ಎ. ಓದಲಿಕ್ಕೆ!

ವಿಜ್ಞಾನವನ್ನು (ಫಿಸಿಕ್ಸ್ ಪಾಠ) ಅಂಡರ್ ಗ್ರಾಜುಯೆಟ್ಸಗಳಿಗೆ ಟೆಕ್ಸ್ಟ್ ಬುಕ್ ಯಾರು ಬರೆಯಬೇಕು ಎಂಬ ಪ್ರಶ್ನೆ ಬಂತು. ನಮ್ಮ ದೇಶದಲ್ಲಿ ಒಬ್ಬ ಸೀನಿಯರ್ ಮೋಸ್ಟ್ ವಿಷಯತಜ್ಞರಿಗೆ ಆ ಕೆಲಸ ವಹಿಸುತ್ತಾರೆ. ಅದಕ್ಕೆ ಒಂದು ಸಮಿತಿ ಇರುತ್ತೆ. ಅದಕ್ಕೊಬ್ಬರು ಡೈರೆಕ್ಟರ್, ಅವರು ಪಠ್ಯ ಬರೆಯಲ್ಲ, ಆ ವಿಷಯದ ಪಾಠ ಮಾಡುವವರಿಗೆ ಬರೆಯಲು ಹೇಳುತ್ತಾರೆ ಅಷ್ಟೇ. ಅಮೇರಿಕಾದಲ್ಲಿ ಫಿಸಿಕ್ಸ್ ವಿಷಯ ಅಂಡರ್ ಗ್ರಾಜುಯೆಟ್ಸಗೆ ಟೆಕ್ಸ್ಟ್ ಬುಕ್ ಬರೆಸಲು ಅವರು ಒಂದು ಪ್ಲಾನ್ ಮಾಡಿದರು. ರಿಚರ್ಡ್ ಸೈನಮನ್ ಎಂಬ ಬಹಳ ದೊಡ್ಡ ಫಿಸಿಕ್ಸ್ ಪಂಡಿತ. ಅವನು ಪಿ.ಎಚ್.ಡಿ.ಗಿಂತಲೂ ಹಿರಿಯ ವಿಜ್ಞಾನಿಗಳಿಗೆ ಗೈಡ್ ಮಾಡುತ್ತಿದ್ದ. ಅವನಿಗೆ ಎರಡು ವರ್ಷ ಕಾಲೇಜಿನಲ್ಲಿ ಡಿಗ್ರಿ ಓದುತ್ತಿರುವವರಿಗೆ ಪಾಠ ಮಾಡಬೇಕು ಎಂದು ಕೇಳಿಕೊಂಡರು. ಯಾಕೆಂದರೆ ನಿನ್ನ ಜ್ಞಾನ ವಿದ್ಯಾರ್ಥಿಗಳಿಗೆ ಅರ್ಥವಾಗುವ ರೀತಿಯಲ್ಲಿ ಹೇಳುವುದಕ್ಕೆ ಮೊದಲು ನೀನು ತರಬೇತಿ ಪಡೆಯಬೇಕು. ಆ ಮೇಲೆ ನೀನು ಪಾಠ ಮಾಡಿದ ಅನುಭದಿಂದ ನೀನು ಟೆಕ್ಸ್ಟ್ ಬುಕ್ ಬರೆಯಬೇಕು. ನೀನು ಪಾಠ ಮಾಡಿದ್ದೆಲ್ಲ ರೆಕಾರ್ಡ್ ಆಗಿರುತ್ತದೆ. ಅದರ ಸಹಾಯ ಪಡೆದು ಒಂದು ಟೆಕ್ಸ್ಟ್ ಬುಕ್ ಬರೆಯಬೇಕು. ಅದನ್ನು ನಮ್ಮ ದೇಶದ ಮಕ್ಕಳು ಓದಬೇಕು. ಇದು ನಿನ್ನಿಂದಾಗುವ ದೇಶ ಸೇವೆಯಾಗುತ್ತದೆ. ಅವನು ಸರಕಾರದ ಆಜ್ಞೆಗೆ ಒಪ್ಪಿ ಕಾಲೇಜಿಗೆ ಪಾಠಮಾಡಲು ಬಂದ. ಕ್ಲಾಸಿಗೆ ಬಂದು ಪಾಠ ಮಾಡುವಾಗ ವಿದ್ಯಾರ್ಥಿಗಳತ್ತ ನೋಡಿದಾಗ ಅವನಿಗೆ ತನ್ನ ಬೋಧನೆ ಎಷ್ಟು ಅರ್ಥವಾಗುತ್ತಿದೆ. ತನ್ನ ಪಾಠದ ಗುಣಮಟ್ಟ ಹೆಚ್ಚಬೇಕೋ, ಕಡಿಮೆಯಾಗಬೇಕೋ ಎಂಬುದನ್ನು ಅರಿತು ಪಾಠ ಮಾಡಿದ. ಆ ಅನುಭವದ ಹಿನ್ನೆಲೆಯಲ್ಲಿ ಭೌತಶಾಸ್ತ್ರದ ಟೆಕ್ಸ್ಟ್ ಬುಕ್ ಬರೆದ.

"ಲೆಕ್ಚರ್ಸ ಆನ್ ಫಿಸಿಕ್ಸ್" ಎಂಬ ಪುಸ್ತಕ ಎಲ್ಲ ಓದುವಾಗ ಭೋಲಾನಾಥ್ ಎಂಬವರದು ಒಳ್ಳೆ ಗುಣಮಟ್ಟದ ಪುಸ್ತಕ ಓದುತ್ತಿದ್ದೆ. ಆದರೆ ನಮ್ಮ ಮೇಷ್ಟ್ರು ಅದೆಲ್ಲ ಡೀಟೇಲ್ ಯಾಕೆ ಓದುತ್ತೀಯಾ ಮುಖರ್ಜಿ ನೋಟ್ಸ್ ಓದಿಕೋ ಪಾಸು ಮಾಡಲು ಅಷ್ಟು ಸಾಕು, ಎಂದು ಹೇಳಿದರು. ಮುಖರ್ಜಿ ನೋಟ್ಸ್ ಅಂದರೆ ಅದು ಮಾರ್ಕೆಟ್ಟಿನಲ್ಲಿರುವ ಗೈಡ್. ಮೇಷ್ಟ್ರೇ ಹೀಗೆ ದಾರಿ ತೋರಿಸಿದರೆ ನಮ್ಮ ಕಲಿಕೆಯ ಗುಣಮಟ್ಟ ಅದ್ಹ್ಯಾಗೆ ಸುಧಾರಿಸುವುದು. ನಮ್ಮ ದೇಶದಲ್ಲಿ ಶಾಲೆ, ಕಾಲೇಜು ಬೇಕಾದಷ್ಟು ಮಾಡಿದ್ದೇವೆ. ಆದರೆ ಎಲ್ಲೆಡೆ ಪ್ರತೀಶತ 35 ಅಂಕ ಗಳಿಸಿದರೆ ಪಾಸು ಎಂಬ ಅತಿ ಕಡಿಮೆ ಗುಣಮಟ್ಟದ ಶಿಕ್ಷಣಕ್ಕೆ ಅವಕಾಶಮಾಡಿ ಇರಿಸಿದ್ದೇವೆ. ನನ್ನ ದೃಷ್ಟಿಯಲ್ಲಿ ಟೆಕ್ಸ್ಟ್ ಬುಕ್ ಅಂತಾ ಮಾಡೋದೇ ಸರಿಯಲ್ಲ, ಅದಕ್ಕೆ ಬದಲು ವಿದ್ಯಾರ್ಥಿಗಳಿಗೆ ಲೈಬ್ರರಿಗೆ ಹೋಗು, ಈ ವಿಷಯದ ಬಗ್ಗೆ ಇರುವ ಎಲ್ಲ ಪುಸ್ತಕಗಳನ್ನು ಓದು ಎಂದು ಸೂಚಿಸಬೇಕು. ಆಗ ಒಂದು ವಿಷಯದ ಕುರಿತು ಬೇರೆ ಬೇರೆ ಗುಣಮಟ್ಟದ ಪುಸ್ತಕಗಳನ್ನು ಓದಿ ವಿದ್ಯಾರ್ಥಿಗಳ ಜ್ಞಾನ ವೃದ್ಧಿಯಾಗುವುದು ಬುದ್ಧಿವಂತರನ್ನು ಬೆಳೆಸುವ ಕ್ರಮ ನಮ್ಮಲ್ಲಿ ಇಲ್ಲವೇ ಇಲ್ಲ. ಎಲ್ಲವೂ ಮಿನಿಮಮ್ ಅಂದರೆ ಕಡಿಮೆ ಗುಣಮಟ್ಟದ್ದು. ಬುದ್ಧಿವಂತ ಹುಡುಗರ ತಲೆ ಮೇಲೆ ಮೆಟ್ಟಬೇಕು. ಯಾಕೆಂದರೆ ಅವರು ಮೇಷ್ಟರಿಗೆ ಪ್ರಶ್ನೆಗಳನ್ನು ಕೇಳುತ್ತಾರೆ ಎಂಬ ಭಯ. ನಮ್ಮಲ್ಲಿ ಎಷ್ಟೊಂದು ವಿಶ್ವವಿದ್ಯಾಲಯಗಳಿವೆ, ಆದರೆ ಜಗತ್ತಿನ 200 ವಿಶ್ವಾವಿದ್ಯಾಲಯಗಳಲ್ಲಿ ನಮ್ಮ ದೇಶದ ಒಂದು ವಿಶ್ವವಿದ್ಯಾನಿಲಯದ ಹೆಸರೂ ಇಲ್ಲ. (2017ರಲ್ಲಿಯ ಮಾತು) ಆಕ್ಸ್‌ಫರ್ಡ್, ಕೇಂಬ್ರಿಜ್ ಯೂನಿವರ್ಸಿಟಿಗಳಲ್ಲಿ ಮೂಲ ಸೌಕರ್ಯಗಳು ಚೆನ್ನಾಗಿ ಇವೆ. ಆ ಮೂಲ ಸೌಕರ್ಯಗಳನ್ನು ನಾವೂ ಹುಟ್ಟು ಹಾಕಬಹುದು. ಆದರೆ ಉತ್ತಮ ಗುಣ ಮಟ್ಟದ ಶಿಕ್ಷಕರನ್ನು, ಬೋಧಕರನ್ನು ಎಲ್ಲಿಂದ ತರೋದು. ಅಂಥ ಉತ್ತಮ ಗುಣಮಟ್ಟದ ಮೇಸ್ಟ್ರುಗಳಿಗೆ ತರಬೇತಿ ಹೇಗೆ ನೀಡುವುದು. ಈ ಕೆಲವು ವಿಷಯಗಳನ್ನು ಶಿಕ್ಷಕರಿರುವ ಈ ಸಭೆಯಲ್ಲಿ ಹಂಚಿಕೊಂಡಿದ್ದೇನೆ, ಎಂದಿದ್ದರು ಭೈರಪ್ಪನವರು.


(ಇದು ಶ್ರೀ ಭೈರಪ್ಪನವರು 2017ರಲ್ಲಿ ಬಾಗಲಕೋಟೆಯಲ್ಲಿ ಅಲ್ಲಿಯ ಕಾಲೇಜಿನಲ್ಲಿ ಗೌರವ ಸ್ವೀಕರಿಸಿ ಶಿಕ್ಷಕರೇ ಹೆಚ್ಚಿನ ಸಂಖ್ಯೆಯಲ್ಲಿ ಇದ್ದ ಸಭೆಯಲ್ಲಿ ಆಡಿದ ಮಾತುಗಳ ಸಾರಾಂಶ.)

***

ಎಸ್.ಎಲ್.ಭೈರಪ್ಪನವರ ಕೃತಿಗಳ ಕಿರು ಪರಿಚಯ

– ಡಾ॥ ಜೆ.ಎನ್.ಜಗನ್ನಾಥ್

ಶ್ರೀ ಎಸ್.ಎಲ್.ಭೈರಪ್ಪನವರ ಕಾದಂಬರಿಗಳು ವಿಶ್ವವಿಖ್ಯಾತವಾಗಿವೆ. ಅವರ ಕಾದಂಬರಿಗಳ ಒಂದು ಸಂಕ್ಷಿಪ್ತ ತುಲನಾತ್ಮಕ ಪರಿಚಯ ಮಾಡಲು ಪ್ರಯತ್ನಪಟ್ಟಿದ್ದೇನೆ. ಭೈರಪ್ಪನವರು ಎಂದೂ ಹೆಸರಿಗಾಗಿ, ಮನರಂಜನೆಗಾಗಿ ಬರೆಯಲಿಲ್ಲ. ಅವರ ಎಲ್ಲ ಕೃತಿಗಳೂ ಸಂಶೋಧನೆಯ ನಂತರ, ಸ್ವಂತ ಅನುಭವದ ಲೇಪನ ನೀಡಿ ಬರೆಯಲ್ಪಟ್ಟಿದೆ.






'ಭೀಮಕಾಯ'– ಅವರ ಪ್ರಥಮ ಕಾದಂಬರಿ. ಕಾಲೇಜು ದಿನಗಳಲ್ಲಿ ಬರೆದದ್ದು. ಕುಸ್ತಿ ಮಾಡುವವರ ಜೀವನ, ಅವರ ಅವಶ್ಯಕತೆಗಳು, ಅವಘಡಗಳು, ಅಸಂಖ್ಯಾತ. ಅದನ್ನು ಬರೆಯುವಾಗ ಕುಸ್ತಿ ಕಲಿಯಲು ಭೈರಪ್ಪನವರು ಬಯಸಿದರು.

'ಭಿತ್ತಿ'– ಇವರ ಬಾಲ್ಯದ ಅನುಭವದ ಕೃತಿ ಮತ್ತು ಇವರ ಆತ್ಮ ವೃತ್ತಾಂತ.

'ಪರ್ವ' – ಮಹಾಭಾರತದ ಪಾತ್ರಗಳನ್ನು ಚಿತ್ತರಿಸಿರುವ ಕೃತಿ. ಈಗ ಬೃಹತ್ ನಾಟಕವಾಗಿದೆ.

'ಧರ್ಮಶ್ರೀ' – ಜಾತೀಯತೆಯ ಬಗ್ಗೆ ಒಂದು ಕೃತಿ. ಇದರಲ್ಲೇ ಜ್ವರ ಬಂದಾಗ ಒಬ್ಬ ಕ್ರಿಶ್ಚಿಯನ್ ಮಹಿಳೆ ನೀರು ಕುಡಿಸಿ ಉಪಚರಿಸುತ್ತಾಳೆ. ಆಗ ಅವನು ತಲ್ಲಣ ಗೊಂಡು ಜಗಳವಾಡುತ್ತಾನೆ. ನಂತರ ಆಕೆಯನ್ನೇ ಮದುವೆಯಾಗುತ್ತಾನೆ. ಇದರಲ್ಲಿ ಈಸೇಗೌಡನ ಕಥೆ ಸ್ವಾರಸ್ಯಕರವಾಗಿದೆ. ಮಹಾಭಾರತ ಪಾತ್ರಗಳನ್ನೇ ನೀನು ಮುಂದಿರಿಸಿ ಬಯಲು ನಾಟಕ ಮಾಡುವೆ ಎಂದು ದೋಷಿಸುತ್ತಾರೆ. ಸ್ವಾಮಿ, ನನ್ನನ್ನು ಕ್ರಿಶ್ಚಿಯನ್ ಮಾಡಿಬಿಟ್ಟಿರಿ. ಆದರೆ ಉತ್ತಮ ಪಾತ್ರಗಳಾದ ಕರ್ಣ, ದುರ್ಯೋಧನ ಕ್ರಿಶ್ಚಿಯನ್ ಪುಸ್ತಕಗಳಲ್ಲಿ ಕೊಡಿ. '







ಗೃಹಭಂಗ' – ಬಡತನ, ಮೂಢನಂಬಿಕೆ, ಜಾತೀಯತೆ ಮತ್ತು ಪುರುಷ ಅಧಿಕಾರ ತೋರುವ ಕೃತಿ.


'ಸಾರ್ಥ' – ಆದರ್ಶ ದಾಂಪತ್ಯದ ಬಗ್ಗೆ ಒಂದು ಚಿತ್ರಣ.

'ದಾಟು'– ನಾಯಕನಿಲ್ಲದ ಒಂದು ಕಾದಂಬರಿ. ಜಾತಿಯ ಬಗ್ಗೆ ಸತ್ಯಳ ಸುತ್ತ ಹೆಣೆದಿರುವ ಕಥೆ.

'ಜಲಪಾತ' – ಒಬ್ಬ ಚಿತ್ರ ಕಲಾವಿದ ಮುಂಬೈಗೆ ಹೋಗಿ ಜೀವನ ನಡೆಸುತ್ತಾನೆ. ಬಡತನ, ಹಳ್ಳಿಗಳಲ್ಲಿ ಕಲಾವಿದರಿಗೆ ಇರುವ ತೊಂದರೆ ಬಹಳ ಚೆನ್ನಾಗಿ ಮೂಡಿದೆ.









'ನಾಯಿ ನೆರಳು' – ಪುನರ್ಜನ್ಮದ ಬಗ್ಗೆ ಬರೆದ ಒಂದು ಕಾದಂಬರಿ.

'ಗ್ರಹಣ' – ಕಥೆ ಸಾಗುತ್ತಾ ಹೋದರೂ ಸಮಾಜಕ್ಕೆ ಹಿಡಿದಿರುವ ಗ್ರಹಣ, ಮೂಢನಂಬಿಕೆ ಎಂದು ಸಾರುವ ಕಾದಂಬರಿ.

'ಯಾನ' – ಬಾಹ್ಯಾಕಾಶದ ಬಗ್ಗೆ ಒಂದು ವಿಶೇಷ ಕೃತಿ.

'ತಂತು' – ಪತ್ರಕರ್ತನ ಮತ್ತು ರಾಜಕೀಯ ವಿಡಂಬನೆಯ ಕಾದಂಬರಿ.

'ಮಂದ್ರ' – ಸಂಗೀತಗಾರನ ಕಥೆ. ಎಷ್ಟೇ ನೈಪುಣ್ಯತೆ, ಕಲೆ, ಹೆಸರು, ಇದ್ದರೂ ತನ್ನ ವೈಯುಕ್ತಿಕ ಜೀವನ ಪ್ರಶ್ನಾರ್ಥಕವಾಗಬಾರದು ಎಂಬುದನ್ನು ಬಿಂಬಿಸುವ ಕಾದಂಬರಿ. ಇದರಲ್ಲಿ ಭೈರಪ್ಪನವರು ಒಂದೊಂದು ಮನೋಸ್ಥಿತಿಗೂ ಒಂದೊಂದು ಸಂಗೀತದ ರಾಗವಿದೆ ಎಂದು ತಿಳಿಸುತ್ತಾರೆ. ಈ ಬರವಣಿಗೆಯ ನಂತರ, ಮುಂದಿನ ಜನ್ಮದಲ್ಲಿ ನಾನು ಸಂಗೀತಗಾರನಾಗಬೇಕು ಎಂದು ಅವರು ತಿಳಿಸಿದ್ದಾರೆ.

'ಮತದಾನ' – ರಾಜಕೀಯ ವಿಡಂಬನೆ, ಸಮಾಜದ ದುಸ್ಥಿತಿ, ಸಾಮಾನ್ಯನ ಅಸಹಾಯಕತೆ, ಚುನಾವಣೆ ಈ ವಿಷವರ್ತುಲದ ಬಗ್ಗೆ ತಿಳಿಸುವ ಕಾದಂಬರಿ.


'ನಿರಾಕರಣ' – ಇಬ್ಬರು ಹೆಂಡತಿಯರು, ಐದು ಮಕ್ಕಳು, ಕರ್ತವ್ಯಗಳಿಂದ ಓಡಿಹೋಗಿ ಸನ್ಯಾಸ ತೆಗೆದುಕೊಳ್ಳುವ ಯೋಚನೆ, ಮಕ್ಕಳನ್ನೇ ದತ್ತು ನೀಡಿ ಸಂಸಾರ ಸಾಗಿಸುವ ದುಸ್ಥಿತಿ ತೋರುವ ಕಾದಂಬರಿ.


'ಕವಲು' – ಮಡದಿ ಸತ್ತ ಮೇಲೆ ಒತ್ತಡದ ಮದುವೆಯಾಗಿ ಸಂಸಾರ ಸುಖ ಕಾಣದ ಕಥೆ. ಮಗಳನ್ನು ಮದುವೆ ಎಂಬ ದಡ ಮುಟ್ಟಿಸುವುದು ಉತ್ತಮವಾಗಿದೆ.


'ಆವರಣ' – ಮುಸ್ಲಿಂ ದೊರೆಗಳು ಆಕ್ರಮಣ ಮಾಡಿ ಗೆದ್ದಾಗ, ನಮ್ಮ ಸಮಾಜದ ಸ್ಥಿತಿ, ಮಹಿಳೆಯರ ಶೋಕ, ವಿಸ್ತೃತವಾಗಿ ಚಿತ್ರಿತವಾಗಿದೆ.


'ಉತ್ತರಾಯಣ' – ಸೀತೆಯನ್ನು ವಿಭಿನ್ನವಾಗಿ ಚಿತಿಸಲಾಗಿದೆ.

'ವಂಶವೃಕ್ಷ'– ಭೈರಪ್ಪನವರಿಗೆ ಹೆಸರು ತಂದುಕೊಟ್ಟ ಕೃತಿ. ಜಾತೀಯತೆಯ ಬಗ್ಗೆ ಕಥೆ ಮುಂದುವರೆದರೂ ಶಾಸ್ತ್ರಿಗಳ ಪಾತ್ರ ಬಹಳ ಅಮೋಘವಾಗಿದೆ. ನಂಬಿದ ಬೇರು ಕಿತ್ತುಬಂದಾಗ, ತಮ್ಮ ಹುಟ್ಟಿನ ಬಗ್ಗೆ ದ್ವಂದ್ವಕಂಡಾಗ, ಅವರ ಮನೋಸ್ಥಿತಿ ವರ್ಣಿಸಲಸದಳ.










'ಅಂಚು' – ಅಮೃತ ತನಗೆ ಮೋಸವಾದರೂ, ಮಕ್ಕಳನ್ನು ಚೆನ್ನಾಗಿ ಬೆಳೆಸುವ ಕಾದಂಬರಿ.

'ತಬ್ಬಲಿಯು ನೀನಾದೆ ಮಗನೆ' – ಭೈರಪ್ಪನವರ ಕಾದಂಬರಿಗಳಲ್ಲಿ ಧರ್ಮವು ಸ್ಥಾಯಿಯಾಗಿರುತ್ತದೆ. ಕಾಳಿಂಗನ ಮೊಮ್ಮಗ ಕಾಳಿಂಗ ಅಮೆರಿಕದಲ್ಲಿ ಆಧುನಿಕ ರೀತಿಯ ಕೃಷಿ ಮತ್ತು ಪಶು ಸಂಗೋಪನೆ ಕಲಿತು ಬರುತ್ತಾನೆ. ಮಡದಿ ಹಿಲ್ಡ ಪಾಶ್ಚಾತ್ಯಳು. ವ್ಯವಹಾರವಾದ ಕೃಷಿ, ಗೋಸಾಗಾಣಿಕೆ, ಹಳ್ಳಿಗಳಲ್ಲಿ ದ್ವೇಷ ಸೃಷ್ಟಿಸುತ್ತದೆ. ಕಾದಂಬರಿ ಗೋಧರ್ಮದ ಸುತ್ತ ಹರಡಿಕೊಳ್ಳುತ್ತದೆ.

'ದೂರ ಸರಿದರು' – ವ್ಯಕ್ತಿ ಅಂತರಂಗವಾಗಿ ತೊಳಲಾಡುವ ಕಾದಂಬರಿ ಎಳೆಯ ಪ್ರೇಮಿಗಳು ಪರಸ್ಪರ ದೂರವಾಗುವುದು ತಮ್ಮ ತಮ್ಮ ನೆಲೆಯಿಂದ ದೂರವಾಗುವುದು ಎರಡು ದೂರ ಸರಿದರು. ಆನಂದ, ವಿನತೆ ಸಾಹಿತ್ಯ ಅಭ್ಯಾಸಿಗಳು. ವಸಂತ, ಉಮೆ ತತ್ವಶಾಸ್ತ್ರದ ವಿಚಾರಗಳಿಗೆ ಮರುಳಾದವರು. ಚರ್ಚೆಗಳಿಂದ ಅವರು ಹತ್ತಿರವಾಗುತ್ತಾರೆ, ಆಕರ್ಷಿತರಾಗುತ್ತಾರೆ. ವಸಂತ ವಿಚಾರ ಸ್ವಾತಂತ್ರ್ಯಬಿದ್ದರೂ ಸಂಗಾತಿಗೆ ವಿಚಾರ ಸ್ವಾತಂತ್ರ ನೀಡಲು ಸೋಲುತ್ತಾನೆ. ಆನಂದನಿಗೆ ವಿನುತೆಯ ತಾಯಿಯ ಸಾಹುಕಾರಿಕೆಯಿಂದ ಸಂಬಂಧ ತಪ್ಪುತ್ತದೆ. ನಾಲ್ವರೂ ದೂರ ಸರಿಯುತ್ತಾರೆ.


'ಅನ್ವೇಷಣ' – ಗೃಹಭಂಗಕ್ಕೆ ಪೂರಕ ಕಾದಂಬರಿ. ಹುಡುಕುವ ಕಥೆ. ವಿಶ್ವನಾಥ ಟೂರಿಂಗ್ ಟಾಕೀಸ್ ಗೇಟ್ ಕೀಪರ್, ಹೋಟೆಲ್ ಮಾಣಿ, ಅಡುಗೆಯವನು, ಲೆಕ್ಕಪತ್ರ ಸಹಾಯಕ, ಸಂಗೀತಗಾರ ಆಗುತ್ತಾನೆ. ಹೋದಲ್ಲೆಲ್ಲ ತನ್ನ ವಿಚಾರ, ಆತ್ಮವಿಶ್ವಾಸ ತುಂಬುತ್ತಾನೆ. ಭೈರಪ್ಪನವರು ತಮ್ಮ ನಿಜ ಜೀವನದಲ್ಲೂ ಗೇಟ್ ಕೀಪರ್, ಅಡುಗೆಯವರು ಆಗಿದ್ದರು. ಅದು ಕಾದಂಬರಿಯಲ್ಲಿ ಕಾಣುತ್ತದೆ. ವಿಚಾರಗಳನ್ನು ಪಾತ್ರದಲ್ಲಿ ತುಂಬುತ್ತಿದ್ದ ಭೈರಪ್ಪನವರು ಈ ಕಾದಂಬರಿಯ ಮೂಲಕ ಸ್ವಭಾವವನ್ನು ಪಾತ್ರಗಳಲ್ಲಿ ಕಾಣಲು ಪ್ರಾರಂಭಿಸಿದರು. ಇದರಲ್ಲಿ ಅವರ ಆತ್ಮಕತೆಯ ಎಳೆಗಳಿವೆ.



'ಸತ್ಯ ಮತ್ತು ಸೌಂದರ್ಯ' – ಭೈರಪ್ಪನವರಿಗೆ ಸಂಶೋಧನೆಯ ನಂತರ ಪಿ ಹೆಚ್ ಡಿ ದೊರೆತದ್ದು ಈ ಗ್ರಂಥಕ್ಕೆ. 'ನಮ್ಮ ಪರಂಪರೆಯ ಕಥೆಗಳು' – ಭೈರಪ್ಪನವರ ಅನುವಾದಿತ ಕೃತಿ. 'ಗಂಗೂಬಾಯಿ ಹಾನಗಲ್' – ಭೈರಪ್ಪನವರ ಗ್ರಂಥ ಸಂಪಾದನೆ.

ಭೈರಪ್ಪನವರ ಕೃತಿಗಳು ಇಂಗ್ಲಿಷ್, ಹಿಂದಿ, ಮರಾಠಿ, ತೆಲುಗು, ಒರಿಯ, ಬೆಂಗಾಲಿ ಮತ್ತು ಗುಜರಾತಿಗೆ ಅನುವಾದವಾಗಿದೆ. ಅವರ ಪ್ರತಿಯೊಂದು ಕೃತಿಯೂ ಗಟ್ಟಿಯಾದ ಕಥೆಗಳನ್ನು ಹೊಂದಿದೆ. ಸಮಾಜದಲ್ಲಿನ ಸಮಸ್ಯೆಗಳನ್ನು ಬಹಳ ಆಳವಾಗಿ ಅಭಿವ್ಯಕ್ತಗೊಳಿಸುತ್ತದೆ. ಸಾಕಷ್ಟು ಸಂಶೋಧನೆಯ ನಂತರ ಕೃತಿಯಾಗಿ ರೂಪುತಳೆದಿವೆ.

***



ನೆಚ್ಚಿನ ಸಾಹಿತಿಗೆ ನುಡಿ ನಮನ

– ರೇಣುಕಾ ದೇಸಾಯಿ

ನಮ್ಮ ದೇಶದುದ್ದಗಲಕ್ಕೂ, ರಾಮಾಯಣ, ಮಹಾಭಾರತ ಗ್ರಂಥಗಳಿಗೆ ಎಷ್ಟೊಂದು ವ್ಯಾಖ್ಯಾನಗಳು, ವಿಮರ್ಶೆಗಳು!! ಒಂದೊಂದು ಪಾತ್ರಕ್ಕೂ ಲಕ್ಷಾಂತರ ಬರಹಗಳು. ಒಂದು ಮಾತಿನಲ್ಲಿ ಹೇಳುವುದಾದರೆ ಈ ಭೂಮಂಡಲವನ್ನು ಹೊತ್ತು ನಿಂತ ಆದಿಶೇಷನು (ಇದೊಂದು ನಂಬಿಕೆ) ಕೂಡ ಈ ಬರಹಗಳ ಭಾರಕ್ಕೆ ತಿಣುಕಿದನು ಫಣಿರಾಜ ಎನ್ನುವ ಮಾತಿದೆ.

ಇನ್ನು ಇವುಗಳ ಬಗೆಗೆ, ಇದೆಲ್ಲಕ್ಕಿಂತ ವಿಭಿನ್ನ ದೃಷ್ಟಿಕೋನ ಭೈರಪ್ಪನವರದು. ರಾಮಾಯಣ ಮಹಾಭಾರತವನ್ನು ಧರ್ಮದ ದೃಷ್ಟಿಯಿಂದ, ಪುರಾಣದಂತೆ, ದಂತಕಥೆಯಂತೆ ಮಾತ್ರ ನೋಡದೆ, ಅವುಗಳನ್ನು ಇತಿಹಾಸವೆನ್ನುವಂತೆ, ಒಂದು ದೇಶದ ನಾಗರಿಕತೆಯ ನೆನಪುಗಳಂತೆ ಸೃಷ್ಟಿಸಿದ್ದು, ನನ್ನ ಓದಿಗೊಂದು ನವನವೀನ. ಇವೆರಡು ಧರ್ಮಗ್ರಂಥಗಳನ್ನು ತಮ್ಮ ಕಾದಂಬರಿಗಳಾದ 'ಪರ್ವ' ಮತ್ತು 'ಉತ್ತರಕಾಂಡ'ದಲ್ಲಿ ಅವರು ನೋಡಿರುವ ಕ್ರಮವೇ ಹೊಸತು. ಉತ್ತರಕಾಂಡದ ಸೀತೆ ಇಲ್ಲಿ ಒಬ್ಬ ಸಾಮಾನ್ಯ ಹೆಣ್ಣುಮಗಳು, ಗಂಡನಿಂದ ಪರಿತ್ಯಕ್ತೆಯಾಗಿ, ಅವಳಿ ಮಕ್ಕಳಿಗೆ ಜನ್ಮ ನೀಡಿ, ಯಾವ ಮತ್ತು ಯಾರಿಂದಲೂ ಸಹಾಯವಿಲ್ಲದೆ ರೈತಾಪಿ ಹೆಣ್ಣುಮಕ್ಕಳಂತೆ ಹೊಲ ಊಳಿ ಬದುಕು ಸಾಗಿಸುತ್ತಾ ಎರಡು ಮಕ್ಕಳನ್ನು ಸಾಕಿ ಸಲಹುವ ಚಿತ್ರಣ ತುಂಬಾ ಆಪ್ತವಾಗಿದೆ. ನಮ್ಮ ಕಲ್ಪನೆಯಲ್ಲಿ ಸೀತೆ ನಮ್ಮಂತೆ ಕಾಣುವ, ಸಾಮಾನ್ಯ ಹೆಣ್ಣಾಗಿ, ಕಡು ಬಡತನದ ಬವಣೆಪಡುವ ಸ್ತ್ರೀಯಾಗಿ ಕಾಣುತ್ತಾಳೆ. ಆ ಪಾತ್ರದಲ್ಲಿ ದೈವತ್ವವು ದೂರ. ಒಂದು ಸಾಮ್ರಾಜ್ಯದ ರಾಣಿಯಾಗಿ, ಸಾಮಾನ್ಯ ಹೆಣ್ಣುಮಕ್ಕಳೊಂದಿಗೆ ಸಿರಿತನದ ಅಂತರವಾಗಲಿ ನಮಗೆ ಅನ್ನಿಸೋದೇ ಇಲ್ಲ.

ವಿಶಾಲ ಕ್ಯಾನ್ವಾಸಿನ ಕಥೆಯನ್ನು ತಾರ್ಕಿಕವಾಗಿ ಗ್ರಹಿಸಿ ಮತ್ತೊಂದು ರೂಪಿನಲ್ಲಿ ಕಲಾತ್ಮಕವಾಗಿ ರೂಪಿಸುವದು ಸಾಮಾನ್ಯ ಮತಿಗಳಿಗೆ ನಿಲುಕುವ ಮಾತಲ್ಲ. ಆದರೆ ಈ ಕಲಾತ್ಮಕತೆ, ರಸಸೃಷ್ಟಿ ಭೈರಪ್ಪನವರ ಪ್ರತಿ ಕಾದಂಬರಿಯಲ್ಲೂ ನಾವು ಕಂಡಿದ್ದೇವೆ. ಹೀಗಾಗಿ ಇನ್ನೂ ಹಲವಾರು ಶತಮಾನಗಳ ಕಾಲ ಒಂದು ಸಂವಾದವಾಗಿ, ಜಿಜ್ಞಾಸೆಯಾಗಿ ಭೈರಪ್ಪ ಇದ್ದೇ ಇರುತ್ತಾರೆ. ಎಲ್ಲಾ ವಾದವಿವಾದಗಳನ್ನು ಅತ್ಯಂತ ಸಹನೆಯಿಂದ, ದೃಢತೆಯಿಂದ, ಧೈರ್ಯದಿಂದ ಎದುರಿಸಿದವರು ಭೈರಪ್ಪನವರು. ತನ್ನ ದೇಶದ ಸಾಹಿತ್ಯ ಸಂಸ್ಕೃತಿಯನ್ನು ಉದ್ದೀಪನಗೊಳಿಸಬೇಕು ಎನ್ನುವ ಪ್ರತಿಪಾದಕರು, ಈ ವಿಚಾರವನ್ನು ಬಲವಾಗಿ ತಮ್ಮ ಬರವಣಿಗೆಯಲ್ಲಿ ಭೈರಪ್ಪನವರು ಪ್ರತಿಪಾದಿಸಿದವರು.

ಕನ್ನಡ ಸಾಹಿತ್ಯಕ್ಕೆ ವಿಶ್ವಮಾನ್ಯತೆ ತಂದುಕೊಟ್ಟ ಲೇಖಕರು. ಅವರಿಗೆ ಬರಹವೆಂದರೆ ಸಂಶೋಧನೆ, ತತ್ವಶಾಸ್ತ್ರದ ಸತ್ಯಶೋಧನೆ ಯಾಗಿದ್ದು, ಹಿಂದುತ್ವದ ಪ್ರತಿಪಾದಕರಾಗಿದ್ದವರು. ಹಿಂದುತ್ವದ ತಳಹದಿಯಲ್ಲಿ ರಾಷ್ಟ್ರೀಯವಾದದ ನೆಲೆಯಲ್ಲಿ ರಚಿಸಿದ ಅವರ ಕಾದಂಬರಿಗಳು ಓದುಗರ ಮನಸ್ಸನ್ನು ಬಲವಾಗಿ ಪ್ರಭಾವಿಸಿದ್ದವು. ಹೀಗಾಗಿ ಕನ್ನಡ ಸಾಹಿತ್ಯಕ್ಕೆ ವಿಶ್ವಮಾನ್ಯತೆ ತಂದುಕೊಟ್ಟ ಲೇಖಕರು. ಅವರು ಪ್ರಚಾರಪ್ರಿಯರಲ್ಲ, ಪ್ರಶಂಸೆ ಬಂದಾಗ ಏರಲಿಲ್ಲ, ಕಷ್ಟಗಳು ಬಂದಾಗ ಕುಗ್ಗಲಿಲ್ಲ. ನೇರನುಡಿಯ ಪ್ರಾಮಾಣಿಕ ವ್ಯಕ್ತಿ, ಯಾರನ್ನೂ ಮೆಚ್ಚಿಸುವ ವ್ಯಕ್ತಿ ಅವರಲ್ಲ. ರಾಷ್ಟ್ರದೆಲ್ಲೆಡೆಯ ಭಾಷೆಗಳಿಗೆ, ಅಂತರಾಷ್ಟ್ರೀಯ ಭಾಷೆಗಳಲ್ಲೂ ಅವರ ಕೃತಿಗಳು ಭಾಷಾಂತರಗೊಂಡು ಪ್ರಪಂಚದಲ್ಲಿ ಅವರಿಗೆ ಅಭಿಮಾನಿ ಓದುಗರಿದ್ದುದು ಕನ್ನಡತಿಯಾದ ನನಗೆ ಒಂದು ಹೆಮ್ಮೆಯ ವಿಷಯ.

ಅವರು ತನ್ನ ಬಾಲ್ಯ ಮತ್ತು ಪ್ರೌಢಾವಸ್ಥೆಯಲ್ಲಿ ತುಂಬಾ ಆರ್ಥಿಕ, ಕೌಟುಂಬಿಕ ಸಂಕಷ್ಟಗಳನ್ನು ಎದುರಿಸಿದ್ದರು. ಹೀಗಾಗಿ ಬಡವರ ಬಗೆಗಿನ ಅವರ ಅಂತಃಕರಣ ಅನನ್ಯ. ಅವರ ಈ ಸ್ವಭಾವವನ್ನು ಎಲ್ಲರ ಬಗೆಗೂ ಜೀವನದುದ್ದಕ್ಕೂ ತೋರಿದ ಆದರ್ಶ ವ್ಯಕ್ತಿ. ಬರೆದಂತೆ ಬದುಕಿದವರು, ಬದುಕಿದಂತೆ ಬರೆದವರು.

ಅವರ ಅಭಿಮಾನಿ ಓದುಗರು ಹೇಳುವ ಮಾತೊಂದು ಇದೆ, 'ಉತ್ತರಕಾಂಡ' ಅವರ ಕೊನೆಯ ಕೃತಿಯಲ್ಲ, ಇಳಿವಯಸ್ಸಿನಲ್ಲಿ ಅವರ ಹುಟ್ಟೂರಾದ ಸಂತೆಶಿವರಕ್ಕೆ ಭಗೀರಥ ಪ್ರಯತ್ನ ಮಾಡಿ ನೀರಿನ ವ್ಯವಸ್ಥೆ ಮಾಡಿಸಿದ್ದು ಒಂದು ಅವರ ಅಪೂರ್ವ ಕೃತಿ, ನಂತರ ತಮ್ಮ ಇಹಲೋಕ ಯಾತ್ರೆ ಮುಗಿಸುವ ಕೊನೆಯ ದಿನಗಳಲ್ಲಿ ಹಠದಿಂದ ನಿರ್ಮಿಸಿದ ಅವರ ಪ್ರತಿಷ್ಠಾನ ಮತ್ತು ಅದರಲ್ಲಿ ತಮ್ಮ ಜೀವಿತಾವಧಿಯಲ್ಲಿ ಉಳಿಸಿದ ಗಳಿಕೆ ಮುಂದೆ ಬರುವ ರಾಯಲ್ಟಿ ಹಣವನ್ನೂ ಸಮಾಜಕ್ಕೆ, ಬಡಮಕ್ಕಳ ವಿದ್ಯಾಭ್ಯಾಸಕ್ಕೆ, ಬಡವರ ಆರೋಗ್ಯ, ಔಷಧಿಗಳ ವೆಚ್ಚಕ್ಕೆ ವಿನಿಯೋಗಿಸುವಂತೆ ಮಾಡಿದ್ದು, ಹೋಗುವಾಗ ತನ್ನದು ಎನ್ನುವ ಒಂದು ಕಾಸೂ ಇರಬಾರದು ಮತ್ತು ಪ್ರತಿಷ್ಠಾನದಲ್ಲಿ ತನ್ನ ಕುಟುಂಬಸ್ಥರು ಯಾರೂ ಇರದಂತೆ ನೋಡಿ ಸ್ಥಾಪಿಸಿರುವದೊಂದು ಅವರ ಕೊನೆಯ ಅಮೂಲ್ಯ ಕೃತಿ.

ಅವರ ವೈಯಕ್ತಿಕ ಜೀವನವನ್ನು ಗಮನಿಸಿದಾಗ ನಮ್ಮ ಅನುಭವಕ್ಕೆ ಬರುವುದು, ಬದುಕಿನಲ್ಲಿ ನಮ್ಮನ್ನು ಬೆಳೆಸುವವರಿಗೆ (ಸಮಾಜ ಅವರನ್ನು ಬೆಳೆಸಿತ್ತು) ಕೃತಜ್ಞರಾಗಿರಿ, ಪರಸ್ಪರ ಗೌರವ ಪ್ರೀತಿಯಿರಲಿ, ನಿಮ್ಮ ಮಾತು, ಬರವಣಿಗೆ ಕೇಳುವವರ ಪ್ರಜ್ಞೆಗೆ ತಾಕುವಂತೆ ಇರಬೇಕು, ಸರಳತೆಯೇ ಶಕ್ತಿ, ತೃಪ್ತಿಯಿಂದಷ್ಟೇ ಸಂತೋಷವು ಹೊರಹೊಮ್ಮುತ್ತದೆ, ಸಂತೋಷವು ಖರೀದಿಯಲ್ಲಿಲ್ಲ ಎನ್ನುವ ಮೌಲ್ಯಯುತ ವಿಚಾರಗಳನ್ನು ತಮ್ಮ ಬರವಣಿಗೆ ಮತ್ತು ತಮ್ಮ ಜೀವನದುದ್ದಕ್ಕೂ ಪ್ರತಿಪಾದಿಸಿ ನಮ್ಮೆಲ್ಲರ ಮನಸ್ಸನ್ನು ಗೆದ್ದ ಆ ಹಿರಿಯ ಜೀವಕ್ಕೆ ನನ್ನದೊಂದು ಅಶ್ರುತರ್ಪಣ.

***

ಡಾ. ಎಸ್.ಎಲ್.ಭೈರಪ್ಪ – ಬದುಕು, ಬರಹ, ಗೌರವ, ಸನ್ಮಾನ

– ಮಂಡಗದ್ದೆ ಶ್ರೀನಿವಾಸಯ್ಯ


20 ಜುಲೈ 1931ರಂದು ಜನಿಸಿದ ಸಂತೇಶಿವರ ಲಿಂಗಣ್ಣಯ್ಯ ಭೈರಪ್ಪನವರು ಸಾಹಿತ್ಯದಲ್ಲಿ ಬೆಳೆದು ಬಂದ ಪರಿ ಅದ್ಭುತ. ಎಂ.ಎ. ಪದವಿಯಲ್ಲಿ ಎರಡು ಚಿನ್ನದ ಪದಕಗಳು ಮತ್ತು ಪ್ರಥಮ ಶ್ರೇಣಿ, ಬರೋಡಾದ ಮಹಾರಾಜ ಸಯ್ಯಾಜಿರಾವ್ ವಿ.ವಿ.ಯಿಂದ ಪಿ.ಎಚ್.ಡಿ., ಹುಬ್ಬಳ್ಳಿಯ ಕಾಡು ಸಿದ್ದೇಶ್ವರ ಕಾಲೇಜು, ಗುಜರಾತಿನ ಪಟೇಲ್ ವಿವಿ., ದೆಹಲಿಯ ರಾಷ್ಟ್ರೀಯ ಶಿಕ್ಷಣ ಮತ್ತು ತರಬೇತಿ ಸಂಸ್ಥೆ, ಮೈಸೂರಿನ ಪ್ರಾದೇಶಿಕ ಶಿಕ್ಷಣ ಸಂಸ್ಥೆಯಲ್ಲಿ ಅಧ್ಯಾಪಕರು, ಪ್ರಾಧ್ಯಾಪಕರು. ಭೈರಪ್ಪನವರು ಆದಿ ಶಂಕರಾಚಾರ್ಯ, ಗಾಂಧೀಜಿ, ಪರಮಹಂಸರು, ಗೊರೂರು ರಾಮಸ್ವಾಮಿ ಐಯ್ಯಂಗಾರ್ ಅವರಿಂದ ಪ್ರಭಾವಿತರು.

ವಿದ್ಯಾರ್ಥಿಯಾಗಿದ್ದಾಗ 'ಜಟ್ಟಿ ಮತ್ತು ಮಟ್ಟಿ' ಕಾದಂಬರಿ, 'ಗತ ಜನ್ಮ' ನೀಳ್ಗತೆ, 'ಭೀಮಕಾಯ' ಮತ್ತು 'ಬೆಳಕು ಮೂಡಿತು' ಎಂಬ ಎರಡು ಕಾದಂಬರಿಗಳನ್ನು ಬರೆದರು. ಸಾಹಿತ್ಯ ಮತ್ತು ಮೀಮಾಂಸಗಳಿಗೆ ಸಂಬಂಧಿಸಿದ ಉತ್ತಮ ಗ್ರಂಥಗಳನ್ನು ರಚಿಸಿದ್ದಾರೆ. ಅವರ ಬುಟ್ಟಿಯಲ್ಲಿ ಪ್ರಮುಖ ಕಾದಂಬರಿಗಳು: ಧರ್ಮಶ್ರೀ, ದೂರ ಸರಿದರು, ಮತದಾನ, ವಂಶವೃಕ್ಷ, ಜಲಪಾತ, ನಾಯಿ ನೆರಳು, ತಬ್ಬಲಿಯು ನೀನಾದೆ ಮಗನೆ, ಗೃಹಭಂಗ, ದಾಟು, ನಿರಾಕರಣ, ಗ್ರಹಣ, ಅನ್ವೇಷಣ, ಪರ್ವ, ನೆಲೆ, ಸಾಕ್ಷಿ, ಅಂಚು, ತಂತು, ಸಾರ್ಥ, ಮಂದ್ರ, ಕವಲು, ಯಾನ, ಉತ್ತರಕಾಂಡ. ಆತ್ಮ ವೃತ್ತಾಂತ– ಭಿತ್ತಿ. ಹಲವಾರು ಸಾಹಿತ್ಯ ವಿಮರ್ಶೆ, ಸೌಂದರ್ಯ ಮೀಮಾಂಸೆ. ಅನುವಾದ– ನಮ್ಮ ಪರಂಪರೆಯ ಕಥೆಗಳು. ಇಂಗ್ಲಿಷ್ ಭಾಷೆಯಲ್ಲಿ ಹಲವು ಕೃತಿಗಳು ಇವರ ಬೋಗುಣಿಯೊಳಗೆ. 'ಗಂಗೂಬಾಯಿ ಹಾನಗಲ್' ಎಂಬ ಗ್ರಂಥ ಸಂಪಾದನೆ. ಇವರ ಎಲ್ಲಾ ಕಾದಂಬರಿಗಳು ಹಲವಾರು ಮುದ್ರಣ ಕಂಡು ದಾಖಲೆಯನ್ನೇ ಸೃಷ್ಟಿಸಿವೆ. ಅಲ್ಲದೆ, ಇವರ ಕಾದಂಬರಿಗಳು ಇಂಗ್ಲಿಷ್, ಹಿಂದಿ, ಮರಾಠಿ, ತೆಲುಗು, ಒರಿಯಾ, ಬೆಂಗಾಲಿ, ಗುಜರಾತಿ, ಉರ್ದು ಹೀಗೆ ಹಲವಾರು ಭಾಷೆಗಳಿಗೆ ಅನುವಾದ.

1965ರಲ್ಲಿ ವಂಶವೃಕ್ಷ ಕಾದಂಬರಿಗೆ ಕರ್ನಾಟಕ ಸಾಹಿತ್ಯ ಅಕಾಡೆಮಿ ಪ್ರಶಸ್ತಿ, ದಾಟು ಕಾದಂಬರಿಗೆ ಕೇಂದ್ರ ಸಾಹಿತ್ಯ ಅಕಾಡೆಮಿ ಪ್ರಶಸ್ತಿ, ಕನ್ನಡ ವಿವಿ ನಾಡೋಜ ಪ್ರಶಸ್ತಿ, ಕರ್ನಾಟಕ ರಾಜ್ಯದ ಪಂಪ ಪ್ರಶಸ್ತಿ, ಸರಸ್ವತಿ ಸಮ್ಮಾನ್ ಪ್ರಶಸ್ತಿ, ವರ್ಷದ ಲೇಖಕ ಪ್ರಶಸ್ತಿ, ಮೈಸೂರು ವಿವಿ ಗೌರವ ಡಾಕ್ಟರೇಟ್, ಭಾರತ ಸರ್ಕಾರದ ಪದ್ಮಶ್ರೀ, ಪದ್ಮಭೂಷಣ ಪ್ರಶಸ್ತಿ ಹೀಗೆ ಹಲವಾರು ಗೌರವಗಳು ಲಭಿಸಿವೆ. 1999ರಲ್ಲಿ ಕನಕಪುರದಲ್ಲಿ ನಡೆದ 67ನೇ ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನದ ಅಧ್ಯಕ್ಷರು. 2020ನೇ ಸಾಲಿನ 'ಶಿವರಾಮ ಕಾರಂತ ಹುಟ್ಟೂರ' ಪ್ರಶಸ್ತಿ ಇತ್ಯಾದಿ ಅವರಿಗೆ ಲಭಿಸಿವೆ.

'ಗೃಹಭಂಗ'

– ಸುಜಾತಾ ರವೀಶ್, ಮೈಸೂರು



ನೆನಪಿನ ದಾರಿಯಲ್ಲಿ ಕಾದಂಬರಿಗಳ ಓದೂ ಸಹ ಪ್ರಮುಖ ಹೆಜ್ಜೆ ಗುರುತುಗಳೇ. ನನ್ನ ನೆಚ್ಚಿನ ಲೇಖಕ ಶ್ರೀ ಎಸ್.ಎಲ್. ಭೈರಪ್ಪ ಅವರಿಗೆ ಈ ಅಂಕಣದ ಮೂಲಕ ನುಡಿನಮನ.

ಇದು ಪರಾಮರ್ಶೆ ಎನ್ನುವುದಕ್ಕಿಂತ ಈ ಕಾದಂಬರಿ ನನ್ನ ಮನಸ್ಸಿನ ಮೇಲೆ ಉಂಟುಮಾಡಿದ ಪ್ರಭಾವ ಎಂದರೆ ಹೆಚ್ಚು ಸೂಕ್ತ, ಸಮಂಜಸ. ನಾನು ಪದೇಪದೆ ಓದಿರುವ, ನನ್ನ ಮನಸ್ಸಿನಲ್ಲಿ ಮೇಲೆ ಅತ್ಯಂತ ಪ್ರಭಾವ ಬೀರಿರುವ ಕಾದಂಬರಿಯ ಬಗ್ಗೆ ಇಂದು ಹೇಳಲು ಬಯಸುವೆ. ಅದೇ ಎಸ್ಎಲ್. ಭೈರಪ್ಪನವರ 'ಗೃಹಭಂಗ' ಕಾದಂಬರಿ. ಇದನ್ನು ಅದೆಷ್ಟು ಬಾರಿ ಓದಿದ್ದೇನೋ ನನ್ನ ಎಣಿಕೆಗೆ ಸಿಕ್ಕಿಲ್ಲ. ಒಂದೊಂದು ಬಾರಿ ಓದಿದಾಗ ಒಂದೊಂದು ವಿಷಯ ತಲೆಯೊಳಗೆ ಗುಂಗಿ ಹುಳುವಿನಂತೆ ಕೊರೆಯಲು ಆರಂಭಿಸುತ್ತದೆ. ಭೈರಪ್ಪನವರ ಎಲ್ಲಾ ಕಾದಂಬರಿಗಳು ಓದಿದ ನಂತರ ವಾರಾನುಗಟ್ಟಲೆ ತಮ್ಮ ಪ್ರಭಾವವನ್ನು ಮೂಡಿಸಿ ಚಿಂತನ ಮಂಥನ ನಡೆಸುವಂತೆ ಮಾಡಿದರೆ ಈ ಕಾದಂಬರಿಯ ಪ್ರತಿ ಓದು, ಅದೇಕೋ ನನಗೂ ಗೃಹಭಂಗಕ್ಕೂ ಏನೋ ಒಂದು ಅವಿನಾಭಾವ ಸಂಬಂಧವಿದೆ ಎನಿಸುವಂತೆ ಮಾಡಿಬಿಟ್ಟಿದೆ.

೧೯೨೦ ರಿಂದ ೧೯೪೫ರ ಕಾಲಘಟ್ಟದಲ್ಲಿ ನಡೆಯುವ ಕಥೆ. ಶಾನುಭೋಗಿಕೆ ಕಳೆದುಕೊಂಡಿದ್ದ ವಿಧವೆ ತಾಯಿ ಇಬ್ಬರು ಗಂಡು ಮಕ್ಕಳು. ಈ ಮನೆಗೆ ಸೊಸೆಯಾಗಿ ಬರುವ ಸುಸಂಸ್ಕೃತ ಜೀವಿ ನಂಜಮ್ಮ. ಸ್ವಾಭಿಮಾನಿ: ಅಮ್ಮ ಮಕ್ಕಳ ಅವಿವೇಕದಲ್ಲಿ ಇರುವ ಆಸ್ತಿಯೆಲ್ಲ ಕಳೆದುಕೊಂಡರೂ ತನ್ನ ಮೂವರು ಮಕ್ಕಳ ಬದುಕಿಗಾಗಿ ಎಲೆ ಹಚ್ಚಿ ಶಾನುಭೋಗಿಕೆ ನಡೆಸಿ ಕಷ್ಟಪಟ್ಟು ಊರಿನಲ್ಲಿ ಒಳ್ಳೆಯ ಹೆಸರು ತೆಗೆದುಕೊಂಡಿರುವ ಆಕೆಯ ಗಂಡ ನಿಷ್ಪ್ರಯೋಜಕ, ಬೇಜವಾಬ್ದಾರಿ ಹಾಗೂ ಸ್ವಾರ್ಥವೇ ಮೂರ್ತಿವೆತ್ತಂತಹ ಮುಠ್ಠಾಳ. ಅಂತಹವನ ಜತೆ ಏಗಿಕೊಂಡು ಮಗನನ್ನು ಮಾಧ್ಯಮಿಕ ಶಾಲೆ ಓದಿಸುತ್ತಾಳೆ, ಮಗಳಿಗೆ ಮದುವೆ ಮಾಡುತ್ತಾಳೆ. ಮುಂದೆ ಪ್ಲೇಗು ಬಂದು ಮಗ ಹಾಗೂ ಮಗಳು ಸಾಯುತ್ತಾರೆ. ಕಡೆಯ ಮಗ ವಿಶ್ವ ಮಾತ್ರ ಉಳಿಯುತ್ತಾನೆ. ಅವನು ತನ್ನ ಬಳಿ ಇದ್ದರೆ ವಿದ್ಯೆ ಕಲಿಯುವುದಿಲ್ಲವೆಂದು ತನ್ನ ತಂದೆಯ ಮನೆಗೆ ಕಳಿಸುತ್ತಾಳೆ. ನಂತರ ಇವಳೂ ಸಹ ಪ್ಲೇಗ್ ಬಂದು ಸಾಯುತ್ತಾಳೆ. ಇಲ್ಲಿ ಇವಳ ಸಹಾಯಕರಾಗುವ ಬಂಧುಗಳಾಗುವ ಜನರೂ ಇದ್ದಾರೆ. ಹಾಗೆಯೇ ತಮ್ಮ ಮಾತು ಕೇಳಲಿಲ್ಲವೆಂದು ಅಜ್ಜಿ ತಂದೆಯರೇ ಇವಳನ್ನು ತೊರೆಯುವ ಕಥೆ ನಿಜಕ್ಕೂ ಮನ ಕರಗುವಂತೆ ಮಾಡುತ್ತದೆ. ಅಂದಿನ ಕಾಲದ ಎಷ್ಟೋ ಹೆಣ್ಣುಗಳ ಕಥೆ ಇದು. ಆದರೆ ಇಲ್ಲಿ ವಿಶಿಷ್ಟವೆನಿಸುವುದು ನಂಜಮ್ಮನ ಸ್ವಾಭಿಮಾನ, ಕಷ್ಟಪಟ್ಟು ದುಡಿಯುವ ಬಗೆ ಹಾಗೂ ಅಲ್ಲಲ್ಲಿ ತೋರಿಸುವ ಬುದ್ಧಿವಂತಿಕೆ. ಆದರೆ ಏನಾದರೂ ನಂಟು ತೊರೆಯದ ಹಾಗೂ ಏನಾದರೂ ಗಂಡನನ್ನು ತೊರೆಯದ ಅವಳ ಸ್ವಭಾವ, ಕಷ್ಟ ಸಹಿಷ್ಣುತೆ, ಧರ್ಮಭೀರುತನ ಹಾಗೂ ಅಂದಿನ ಕಾಲದ ಹೆಚ್ಚಿನ ಮಟ್ಟಿಗೆ ಇಂದಿನ ಎಲ್ಲಾ ಭಾರತೀಯ ನಾರಿಯರ ಸ್ವಭಾವದ ಪ್ರತಿನಿಧಿಯಾಗುತ್ತದೆ.

ಈ ಕಾದಂಬರಿಯ ಪ್ರಥಮ ಓದು ನಾನು ಪುಸ್ತಕ ರೂಪದಲ್ಲಿ ಓದಲಿಲ್ಲ. ಈ ಹಿಂದೆ ಇದು ದಿನಪತ್ರಿಕೆಯಲ್ಲಿ ಧಾರಾವಾಹಿಯಾಗಿ ಬರುತ್ತಿದ್ದ ಭಾಗಗಳನ್ನು ಕತ್ತರಿಸಿ ಒಂದು ಪುಸ್ತಕದ ಮೇಲೆ ಅಂಟಿಸಿ ಇಟ್ಟಿದ್ದರು, ನೆರೆಯ ತಾತ ಒಬ್ಬರು. ಅದನ್ನು ನಾನು ಮೊದಲು ಓದಿದ್ದು. ಮೊಟ್ಟಮೊದಲು ಅವರಲ್ಲಿನ ಕೆಟ್ಟ ಬೈಗುಳಗಳು ತುಂಬಾ ಹೊಸದು ಎನಿಸಿದ್ದವು. ನಮ್ಮ ಮನೆಯಲ್ಲಿ ಎಂದೂ ಓದಲಿಕ್ಕೆ ಅಡ್ಡಿ ಆತಂಕ ಇಲ್ಲದ್ದರಿಂದ ನಾನು ಅದನ್ನು ಓದುತ್ತಿದ್ದುದನ್ನು ಗಮನಿಸಿದ ನಮ್ಮ ಅಣ್ಣ (ತಂದೆ) ಅವರಿಗೆ ಇದು ಕೆಟ್ಟದ್ದು ಅಲ್ಲವಾ, ಓದಬಾರದು. ಬರೀ ಕೆಟ್ಟ ಬೈಗುಳಗಳು ಇದೆ ಎಂದು ಕೇಳಿದ್ದೆ ಎಂದಿದ್ದರು. ಆಗ ನಾನು ಮೂರನೆಯ ಕ್ಲಾಸಿನಲ್ಲಿ ಓದುತ್ತಿದ್ದೆ. ಆಗ ನಮ್ಮ ತಂದೆ ಹೇಳಿದ್ದು ಇನ್ನೂ ನನ್ನ ನೆನಪಿನಲ್ಲಿದೆ "ಕೆಟ್ಟದ್ದನ್ನು ತಿಳಿಯಬೇಕು, ಏಕೆಂದರೆ ನಾವು ಆ ರೀತಿ ಮಾಡಬಾರದು ಎಂದು ಕಲಿಯಲಾದರೂ".

ಮೊದಲ ಬಾರಿ ಓದಿನಲ್ಲಿ ನನಗೆ ನಂಜಮ್ಮ ಅಷ್ಟಾಗಿ ಪ್ರಭಾವಿಸಿರಲಿಲ್ಲ. ಪಾರ್ವತಿಯ ಪಾತ್ರದ ಜೊತೆಗೆ ಸಮೀಕರಿಸಿಕೊಂಡಿತ್ತು ನನ್ನ ಮನಸ್ಸು. ತಮ್ಮ-ತಂಗಿ ಪ್ರೀತಿ ಹೀಗೆ ಇರುತ್ತಿತ್ತು. ರಾಮು ಮತ್ತು ಪಾರ್ವತಿ ಸತ್ತ ಸಂದರ್ಭ ಓದುವಾಗಲಂತೂ ಬಿಕ್ಕಿಬಿಕ್ಕಿ ಅತ್ತಿದ್ದೆ. ಯಾಕೋ ನನ್ನ ತಂಗಿಯರು ಸತ್ತುಹೋಗಿಬಿಟ್ಟರೆ ಎಂಬ ಭಯ ಆವರಿಸಿ ರಾತ್ರಿಯೆಲ್ಲ ಬಿಕ್ಕುತ್ತಿದ್ದೆ. ಆಗ ಒಂದು ಕಥೆ ಅದು ಅಷ್ಟೇ.

ನಂತರದ ಓದುಗಳಲ್ಲಿ ನಂಜಮ್ಮನ ಪಾತ್ರ ತುಂಬಾ ಪ್ರಭಾವಿಸಿತು. ಅವಳದೇ ಓರಿಗೆಯ ಅತ್ತಿಗೆ ಕಮಲು ಸೇರಿದ ಮನೆಯಲ್ಲಿ ಎಷ್ಟೇ ಅನುಕೂಲಗಳಿದ್ದರೂ ಹಳ್ಳಿ ಎಂಬ ಒಂದೇ ಕಾರಣಕ್ಕೆ ಮನೆಯನ್ನು ನರಕ ಮಾಡುತ್ತಿರುತ್ತಾಳೆ, ಹೊಂದಿಕೊಂಡಿರುವುದಿಲ್ಲ. ಇವಳ ಓರಗಿತ್ತಿ ಸಾತು ಹೊಂದಲು ಮೊದಲಿಗೆ ಕಷ್ಟಪಟ್ಟರೂ ಕಡೆಗೆ ಸರಿಹೋಗದೆ ದೂರವಾಗಿ ತನ್ನದೇ ದಾರಿ ಹುಡುಕಿ ಕೊಳ್ಳುತ್ತಾಳೆ. ಬೇರೆಯವರು ಹೀಗೆ ಸುಲಭದ ದಾರಿಗಳನ್ನು ಕಣ್ಣೆದುರಿಗೆ ಹಿಡಿಯುವುದು ಕಾಣುತ್ತಿದ್ದರೂ ತಾನು ಮಾತ್ರ ಸತ್ಯದ ದಾರಿಯಲ್ಲಿ ನಡೆದು ಶ್ರಮಪಡುತ್ತಾ ಸಂಸಾರವನ್ನು ಒಂದು ಹಂತಕ್ಕೆ ತರಲು ಶ್ರಮಿಸುವ ನಂಜಮ್ಮನ ಬಗ್ಗೆ ಒಂದು ರೀತಿಯ ಕುತೂಹಲ. ಆಸಕ್ತಿ ಬೆಳೆಯತೊಡಗಿತ್ತು. ಕಷ್ಟಗಳು ಕಳೆದು ಸ್ವಲ್ಪ ಸುಖ ಕಾಣುವ ವೇಳೆಗೆ ಮಕ್ಕಳನ್ನು ಕಳೆದುಕೊಂಡಾಗ ಅವಳು ಪಡುವ ದುಃಖ; ಮಕ್ಕಳು ಸತ್ತ ದಿನ ಸತ್ತ ಮೇಲೆ ಸ್ಮಶಾನಕ್ಕೆ ಹೋಗಿ ಬೂದಿ ಆರಿಸಿಕೊಂಡು ತಾನೂ ಸಾಯುವೆನೆಂದು ಬಾವಿಯ ತನಕ ಹೋಗಿ ಕಡೆಯ ಮಗನನ್ನು ನೆನೆಸಿಕೊಂಡು ವಾಪಸ್ ಬರುವ ದೃಶ್ಯವಂತೂ ಮನ ಕಲಕಿಬಿಟ್ಟಿತ್ತು. ಹಾಗೆಯೇ ಪಾರ್ವತಿಯು ಬುದ್ಧಿವಂತೆ. ಮನೆಕೆಲಸ ಬೊಗಸೆ ಹಾಡುಹಸೆ ಎಲ್ಲವನ್ನೂ ಕಲಿತು ಎರಡನೆಯ ಮದುವೆಯಾದರೂ ಮಲ ಮಗುವನ್ನು ಚೆನ್ನಾಗಿ ಹಚ್ಚಿಕೊಂಡಿದ್ದಳು. ಸಂಸಾರ ಆರಂಭಿಸುವ ಮೊದಲೇ ಪ್ಲೇಗ್ ಮಾರಿಗೆ ತುತ್ತಾಗುತ್ತಾಳೆ. ದೇವರು ಯಾಕಿಷ್ಟು ಕ್ರೂರಿ ಎಂದೆನಿಸಿತ್ತು. ತಂದೆಯ ಸ್ವಭಾವ ಹೊತ್ತುಕೊಳ್ಳದೆ ಮಗ ರಾಮು ಆ ವಯಸ್ಸಿಗೆ ಜವಾಬ್ದಾರಿಯ ಮಾತುಗಳನ್ನಾಡುವುದು, ಹೆಂಗರುಳು ತೋರಿಸುವುದು ಅವನನ್ನು ದೂರ ಮಾಡಿದ ದೇವರ ಮೇಲೆ ಕೋಪ ಬರುವಂತೆ ಆಗುತ್ತಿತ್ತು.

ನಾವು ಹುಟ್ಟುವ ಅಷ್ಟು ಮೊದಲಿನ ಆ ಜಮಾನಾದ ಸಾಮಾಜಿಕ ಜೀವನದ ಬಗ್ಗೆ ಹೊಸ ಬೆಳಕು ಮೂಡುವಂತೆ ಮಾಡಿತ್ತು. ಪ್ಲೇಗಿನ ಹರಡುವಿಕೆ, ಅದಕ್ಕೆ ಕೊಡುವ ಚುಚ್ಚುಮದ್ದು, ಶೆಡ್ಡುಗಳನ್ನು ನಿರ್ಮಿಸಿಕೊಂಡು ಊರಿನಾಚೆ ಹೋಗುವುದು ಇದೆಲ್ಲಾ ಆಗ ಹೊಸದು ಎನಿಸಿದರೂ ಕರೋನಾ ಬಂದಮೇಲೆ ಮತ್ತೆ ಇತಿಹಾಸದ ಮರುಕಳಿಕೆಯಾ ಎನಿಸುವಂತೆ ಮಾಡಿದ್ದು ಸುಳ್ಳಲ್ಲ. ಕಾದಂಬರಿಗಳು ಆಯಾ ಕಾಲಮಾನದ ದರ್ಪಣ ಎನ್ನುವುದು ಇದಕ್ಕೆ ತಾನೇ

ಇನ್ನೂ ಸ್ವಲ್ಪ ಕಾಲ ಕಳೆದ ನಂತರದ ಓದುಗಳಲ್ಲಿ ಬೇರೆ ಪಾತ್ರಗಳ ಬಗ್ಗೆ ಮನ ಚಿಂತಿಸಲು ಆರಂಭಿಸಿತ್ತು ಅಕ್ಕಮ್ಮ ತನ್ನ ಉಳಿದ ಇಬ್ಬರು ಮೊಮ್ಮಕ್ಕಳ ಯೋಗಕ್ಷೇಮವನ್ನು ಚೆನ್ನಾಗಿ ನೋಡುವ ಆಕೆ ತನ್ನ ಮೊಮ್ಮಗನಿಗೆ ಮರಿ ಮಗಳನ್ನು ಕೊಡಲಿಲ್ಲವೆಂದು ಸಿಟ್ಟು ಮಾಡಿಕೊಳ್ಳುವುದು. ಆದರೂ ನಂಜಮ್ಮನ ಮಕ್ಕಳು ಸತ್ತಾಗ ಮನಕರಗಿ ಓಡಿ ಬರುವುದು ಮೊಮ್ಮಗಳು ಸತ್ತ ನಂತರ ಜೀವಿಸಲು ಮನಸ್ಸಾಗದೆ ಔಷಧಿ ಕುಡಿಯದೆ ತಾನೂ ಸಾಯುವುದು; ಇದೇ ಅಲ್ಲವೆ ಕರುಳಿನ ಸಂಬಂಧ ಅಂತಃಕರಣ ಎಂದರೆ? ಇನ್ನು ನಂಜಮ್ಮಳ ಸದಾಕಾಲದ ಆಪ್ತಸಖಿ ಸರ್ವಕ್ಕ ತನ್ನ ಕಷ್ಟ ಸುಖಗಳನ್ನೆಲ್ಲಾ ಹೇಳಿಕೊಳ್ಳುವುದು, ಅವಳ ಮಗಳು ರುದ್ರಾಣಿ ಸತ್ತಾಗ ನಂಜಮ್ಮ ಮತ್ತು ಸರ್ವಕ್ಕ ಮಾತನಾಡುತ್ತಾರೆ "ಏನಿದೆ ಎಂದು ಈ ಬದುಕು ಬದುಕಬೇಕು?" ಇಡೀ ಹೆಣ್ಣಿನ ಜೀವನದ

ಇತಿಹಾಸ ದುರಂತವನ್ನೆಲ್ಲ ಕಣ್ಮುಂದೆ ತಂದು ನಿಲ್ಲಿಸುವಂತಹ ಮಾತುಗಳು. ಕೆಟ್ಟ ಹೆಸರು ಹೊತ್ತುಕೊಂಡು ಬಾಳುವ ನರಸಿಯ ಎದೆಯಲ್ಲೂ ಕರುಣೆಯ ಸೆಲೆ, ನಂಜಮ್ಮ ಮತ್ತು ಅವಳ ಮಕ್ಕಳಿಗಾಗಿ ಅವಳ ಎದೆ ಮಿಡಿಯುವುದು. ನಿಜಕ್ಕೂ ಆ ಪಾತ್ರದ ಚಿತ್ರಣ ತುಂಬ ಪ್ರಭಾವಶಾಲಿಯಾಗಿ ಮೂಡಿಬಂದಿದೆ. ಸುಲಭ ಜೀವನದ ದಾರಿಯನ್ನು ಹುಡುಕಿಕೊಂಡು ಹೋಗುವ ಸಾತು ಸಹ ಒಂದು ಪಾಠ ಹೇಳುತ್ತಾಳೆ. ಇದ್ದುದರಲ್ಲಿ ಸುಖವಾಗಿರದೇ ಜೀವನವನ್ನೇ ನರಕ ಮಾಡಿಕೊಳ್ಳುವ ಕಮಲುವಿನಿಂದಲೂ ಕಲಿಯುವುದಿದೆ.

ಇಡೀ ಕಾದಂಬರಿಯ ಭಾವ ಸೇತುವಾಗಿ ಹೊಸೆದು ಕೊಳ್ಳುವವರು ಕಂತೆಭಿಕ್ಷೆ ಮಹದೇವಯ್ಯನವರು. ಊರಿನಲ್ಲಿ ಭಿಕ್ಷೆ ಬೇಡಿ ಬದುಕುತ್ತಿದ್ದರೂ ಎಲ್ಲರ ಕಷ್ಟಸುಖಗಳಿಗೆ, ನೋವು ನಲಿವುಗಳಿಗೆ ಸ್ಪಂದಿಸುವ ಧೈರ್ಯ, ಸಾಂತ್ವನ ಹೇಳುವ ಹಿರಿಯ ಜೀವಿ. ಕಡೆಯಲ್ಲಿ ನಂಜಮ್ಮನ ಮಗ ವಿಶ್ವ ಬೀಳುವುದೂ ಸಹ ಇವರ ಆಸರೆಗೇ. ನಂಜಮ್ಮನ ಮಕ್ಕಳು ಸತ್ತಾಗ ಇವರು ಹೇಳುವ ಈ ತತ್ವ ಪದ ಎಷ್ಟು ಅರ್ಥಪೂರ್ಣ ನೋಡಿ.

ಹಳ್ಳಕೊಳ್ಳದ ಬಳಿ ತನುವು ತಂಪಿದ ಬಳಿ
ಗುಳ್ಳದ ಹಣ್ಣು ಫಲಮಾದುದು ಗುಳ್ಳದ ಹಣ್ಣು ನೆಲಕುದುರಿ ಬೀಳುವಾಗ
ಅದರ ಬಳ್ಳಿಗೆ ಹೇಳಿ ಹೋಯಿತೆ ಒಂದು ಮಾತ

ಇನ್ನು ಗಂಗಮ್ಮನ ಪಾತ್ರದ ಬಗ್ಗೆ ಏಕೋ ಈಗ ಚಿಂತನೆ ಹೊರಳುತ್ತಿದೆ. ವಯಸ್ಸಾದ ಶಾನುಭೋಗರಿಗೆ ಎರಡನೆಯ ಹೆಂಡತಿಯಾಗಿ ಬಂದು ಇಬ್ಬರು ಮಕ್ಕಳು ಹುಟ್ಟಿ ಶ್ಯಾನುಭೋಗರು ಗತಿಸಿದ ಮೇಲೆ ಅಂಕೆಶಂಕೆಯಿಲ್ಲದ ಕಡಿವಾಣವಿಲ್ಲದ ಕುದುರೆಯಂತೆ ಮಕ್ಕಳನ್ನೂ ನೆಟ್ಟಗೆ ಬೆಳೆಸದೆ ಒಂದುರೀತಿ ಎಲ್ಲಾ ಅನರ್ಥಗಳ ಮೂಲ ಕಾರಣವಾಗುವ ಈ ಪಾತ್ರ ಮೊದಲಿಗೆ ಕೋಪ ಹುಟ್ಟಿಸಿದರೂ ಈಗ ಏಕೋ ಅವಳ ಅಂತರಾಳವನ್ನು ಅರಿಯುವ ಬಯಕೆಯಾಗುತ್ತಿದೆ. ಸೊಸೆ ಕಾಯಿಲೆ ಬಿದ್ದು ನರಳುವ ಸಮಯದಲ್ಲಿ ಅವಳ ಔಷಧೋಪಚಾರದ ಜವಾಬ್ದಾರಿ ಹೊತ್ತು ಕಡೆಗೆ ಸಾಯುವಾಗ ಗಂಗೋದಕವನ್ನು ಹಾಕುವವಳೂ ಅವಳೇ. ಮುಂದೆ ಆ ಪಾತ್ರದ ವಿಶ್ಲೇಷಣೆ ಮಾಡುವಷ್ಟು ಪ್ರಬುದ್ಧತೆ ಬಂದಾಗ ಖಂಡಿತ ಅದರ ಬಗ್ಗೆ ಬರೆಯುತ್ತೇನೆ.

ಇನ್ನು ನಂಜಮ್ಮನ ಗಂಡ ಚೆನ್ನಿಗರಾಯ ಹಾಗೂ ಮೈದುನ ಅಪ್ಪಣ್ಣ ಇಂತಹ ಬೇಜವಾಬ್ದಾರಿ ಮನುಷ್ಯರ ಪಾತ್ರ ಸೃಷ್ಟಿಸುವ ಮೂಲಕ ಭೈರಪ್ಪನವರು ಸಮಾಜದಲ್ಲಿನ ಅಂತಹ ಅದೆಷ್ಟೋ ಗಂಡಸರ ಸ್ವಭಾವದ ಮೇಲೆ ಕ್ಷಕಿರಣ ಬೀರಿದ್ದಾರೆ. ಹೇಗಿರಬಾರದು ಎಂದು ತಿಳಿಯುವುದಕ್ಕೆ ಇವರು ಸೊಗಸಾದ ಉದಾಹರಣೆಗಳು.

ಕಡೆಯಲ್ಲಿ ಕಾಯಿಲೆ ಆಗಿದ್ದಾಗ ನಂಜಮ್ಮ ಮಹದೇವಯ್ಯನವರ ಬಳಿ ಹೇಳುತ್ತಾಳೆ. "ಚಿಕ್ಕಂದಿನಲ್ಲಿ ಒಮ್ಮೆ ತಂದೆ ಕೋಪಗೊಂಡು ತೊಟ್ಟಿಲನ್ನೇ ಮಳೆಯಲ್ಲಿ ಇಟ್ಟಿದ್ದರಂತೆ. ಪುಣ್ಯವಶಾತ್ ಕಾಲು ಮಾತ್ರ ಮಳೆಗೆ ಸಿಕ್ಕು ಪ್ರಾಣ ಉಳಿಯಿತು. ಆದರೆ ಆಗಲೇ ಸತ್ತು ಹೋಗಬೇಕಿತ್ತು. ಇಂತಹ ಗಂಡನನ್ನು ಕಟ್ಟಿಕೊಂಡು ಎಷ್ಟೆಲ್ಲಾ ಕಷ್ಟಪಟ್ಟು ಮುತ್ತಿನಂತಹ ಮಕ್ಕಳನ್ನು ನೋಡಿ ಸಂತೋಷಪಡುವ ಸಮಯದಲ್ಲಿ ಅವರನ್ನು ಕಳೆದುಕೊಂಡು ಕಡೆಯ ಮಗನಿಗಾಗಿ ಎಂದು ಬದುಕಿ ಈಗ ಅದನ್ನೂ ಪೂರೈಸಲಾಗದೆ ಹೋಗುತ್ತಿದ್ದೇನೆ. ಈ ಬದುಕಿಗೇನು ಅರ್ಥ?" ಹೌದು ಎಷ್ಟೋ ಹೆಣ್ಣುಮಕ್ಕಳ ಹೃದಯದ ಕೂಗು, ಅಂತರಂಗದ ಆಲಾಪ ಅದುವೇ ತಾನೆ?

ಆದರೆ ಬದುಕು ಎಲ್ಲರಿಗೂ ಹೂವಿನ ಹಾಸಿಗೆಯಾಗಿರುವುದಿಲ್ಲ ಮುಳ್ಳಿನ ನಡುವೆಯೂ ಅಲ್ಲಲ್ಲಿ ಸುಖ ಕಾಣುತ್ತಾ ಹೋಗುವುದೇ ಬದುಕು. ಚಿಕ್ಕಪುಟ್ಟ ಸಂತೋಷಗಳಲ್ಲಿ ನೆಮ್ಮದಿ ಅರಸುವುದೇ ಬದುಕು. ಜೀವನದಲ್ಲಿ ಯಾವುದೇ ಕಷ್ಟಬರಲಿ ಎದುರಿಸುತ್ತ ಹೋಗಬೇಕು, ಅಂಜಿ ಹೇಡಿಗಳಾಗಬಾರದು ಎಂಬ ಪಾಠವನ್ನು ನಂಜಮ್ಮ ಕಲಿಸುತ್ತಾಳೆ, ಗೃಹಭಂಗ ತಿಳಿಸುತ್ತದೆ.

ಬೇಸರವಾದಾಗ ಒಮ್ಮೆ ಸುಮ್ಮನೆ ಕಣ್ಣಾಡಿಸಿದರೆ ಮತ್ತೆ ಹೊಳಹುಗಳು ಮತ್ತೆ ಏನೇನೋ ಚಿಂತನೆಗಳು ಸದ್ಯಕ್ಕೆ ಮನ ಕಾಡುವ ಚಿಂತೆಯನ್ನು ದೂರಮಾಡುತ್ತದೆ. ಮತ್ತೆ ಯಾವುದೋ ಪಾತ್ರದ ಬಗ್ಗೆ ಆಳವಾಗಿ ಯೋಚಿಸುವ ಹಾಗಾಗುತ್ತದೆ. ಮತ್ತೆ ಮತ್ತೆ ನನ್ನ

ಮನದಲ್ಲಿ ನಂಜಮ್ಮ, ಪಾರ್ವತಿ, ರಾಮು ಆವರಿಸುತ್ತಾರೆ. ನಮ್ಮ ಅಣ್ಣ ಹೇಳಿದ ಮಾತುಗಳೇ ನೆನಪಿಗೆ ಬರುತ್ತದೆ "ಎಂದೂ ಹಂಸಕ್ಷೀರ ನ್ಯಾಯದಂತೆ ಬದುಕು. ನೋಡುತ್ತಾ ಹೋಗಬೇಕು. ಕೆಲವರನ್ನು ನೋಡಿ ಹೀಗಿರಬೇಕು ಎಂದು ಅರಿಯಬೇಕು; ಕೆಲವರನ್ನು ಕಂಡು ಹೀಗಿರಬಾರದು ಎಂಬ ಪಾಠ ಕಲಿಯಬೇಕು".

ತುಂಬ ಚಿಕ್ಕ ವಯಸ್ಸಿನಲ್ಲೇ ಓದಿದ್ದರಿಂದಲೋ ಏನೋ ಇದರರ್ಥ ದಿನದಿಂದ ದಿನಕ್ಕೆ ಹೊಸ ಹೊಸ ಆಯಾಮ ಪಡೆಯುತ್ತದೆ. ಒಂದು ರೀತಿಯ ಗುಂಗಿನ ನಶೆ ಬಿಡಿಸಲಾರದ ಗಂಟು ಅಳಿಸಲಾಗದ ನಂಟು ನನಗೂ ಈ ಪುಸ್ತಕಕ್ಕೂ ತನ್ಮೂಲಕ ನಂಜಮ್ಮನಿಗೂ...

ಕಾದಂಬರಿಯ ಕಡೆಯ ದೃಶ್ಯ ಘನೀಭವಿಸಿದ ವಿಷಾದತೆ ಸದಾಕಾಲ ಮನದಲ್ಲಿ ಅಚ್ಚೊತ್ತಿಬಿಟ್ಟಿದೆ

***

ಕುಸುಮಾಂಜಲಿ

– ಎನ್. ಶಂಕರ ರಾವ್

ಕಾದಂಬರಿಗಳ ಕಣಜವನು ತುಂಬಿದ ಸಾಧಕ
ಜೀವನದ ಸತ್ಯವನು ಹುಡುಕಿದ ತತ್ವಜ್ಞ
ಪದ ಪದಗಳಲ್ಲಿ ನಿಜದ ಬೆಳಕು ಹರಡಿದ
ಭೈರಪ್ಪನವರೆಂದರೆ ಕನ್ನಡದ ಅಭಿಮಾನ//

'ವಂಶವೃಕ್ಷ', 'ಪರ್ವ', ನೆಲೆ, ಆವರಣ'
ಮಾನವ ಮನದೊಳಗೆ ಸತ್ಯದ ಯಾನ
ಅಭ್ಯಾಸಿ, ಅಧ್ಯಯನಶೀಲ, ನಿರಂತರ ಸಂಶೋಧನೆ
ಸಾಹಿತ್ಯದಲ್ಲಿ ಮೂಡಿಸಿದ ನಿತ್ಯ ನವೀನತನ//

ಭಾವನೆಗಿಂತ ತತ್ವವನು ಮೀರಿದ ಶಕ್ತಿ
ಪ್ರಶ್ನೆಗಳ ಹಿಂದೆ ಸತ್ಯಾನ್ವೇಷಣೆಯ ದೃಷ್ಟಿ
ಜನಾಂಗದ ಮನದ ಮೌಢ್ಯ ತೊಲಗಿಸುವ ಚಿಂತನ
ಭೈರಪ್ಪನವರ ಸಾಹಿತ್ಯ ಶಾಶ್ವತ ಚಂದನವನ//

ಅವರ ಕೃತಿ ಸಮಾಜದ ಪ್ರತಿಬಿಂಬ
ಅವರ ಬರವಣಿಗೆಯಲ್ಲಿ ಇತಿಹಾಸದ ಕುಂಭ
ಸತ್ಯ, ಧರ್ಮ, ಸಂಸ್ಕೃತಿಯ ಅಚಲ ದಾರಿದೀಪ
ಭೈರಪ್ಪನವರ ಸಾಹಿತ್ಯವೇ ಕನ್ನಡದ ಅನನ್ಯ ಸ್ವರೂಪ//

***

ತನಗಗಳು

– ಗೋವಿಂದ ಹೆಗ್ಡೆ

೧.
ಟೀಕೆಗೆಲ್ಲ ಉತ್ತರ
ಮೌನದಲ್ಲೇ ಕೊಟ್ಟರಾ?
ಸುಮ್ಮನಿದ್ರು ಭೈರಪ್ಪ
"ಬೇಕಾದಷ್ಟು ಬಯ್ರಪ್ಪ"


೨.
ಅಮೃತಕ್ಕೆ ಹಾರಿದ
ಗರುಡನಂತಿವರು
ಲೋಕದಂತರಂಗವ
ಪರಿಶೋಧಿಸಿದರು

೩.
ಸಾಹಿತ್ಯ ಜಗತ್ತಿನ
ಅದ್ವಿತೀಯ ಸಾಹಸಿ
ಬರಹ ತಪವಾದ
ಅಸಾಮಾನ್ಯ ತಾಪಸಿ

***

ಡಾ. ಎಸ್.ಎಲ್.ಭೈರಪ್ಪರವರ ಕಾದಂಬರಿ
'ನಾಯಿ ನೆರಳು' – ನನ್ನ ಅನಿಸಿಕೆ

– ಗಣಪತಿ ಹೆಗಡೆ



ಸನಾತನ ಧರ್ಮದ ಪುನರ್ಜನ್ಮದಲ್ಲಿಯ ನಂಬಿಕೆಯನ್ನು ಅರ್ಥಮಾಡಿಕೊಂಡವರಿಗೆ, ಡಾ. ಎಸ್.ಎಲ್. ಭೈರಪ್ಪರವರ ಕಾದಂಬರಿ 'ನಾಯಿ ನೆರಳು' ಶೀರ್ಷಿಕೆ ಆಶ್ಚರ್ಯವನ್ನು ಉಂಟುಮಾಡುವ ಹಾಗಿಲ್ಲ. ಪಾಂಡವರು ಸ್ವರ್ಗಾರೋಹಣ ಮಾಡುವ ಸಂದರ್ಭದಲ್ಲಿ ಧರ್ಮರಾಯನನ್ನು ಹಿಂಬಾಲಿಸಿದ ನಾಯಿ 'ಕರ್ಮದ ಸಂಕೇತ' ಅಂತ ತಿಳಿದಿದ್ದೇ ಆಗಿದೆ.

ಈ ಕಾದಂಬರಿಯಲ್ಲಿ ಬರುವ ಘಟನೆಗಳು, ಮೂಢನಂಬಿಕೆಗಳಿಗೆ ಅಥವಾ ಮನಶ್ಶಾಸ್ತ್ರೀಯ (parapsychological) ವಿಶ್ಲೇಷಣೆಗೆ ಉದಾಹರಣೆ ಅಂತ ಬಹಳಷ್ಟು ಜನರು ಅಭಿಪ್ರಾಯಪಟ್ಟರೂ, ಇದೊಂದು ಕರ್ಮಾನುಸಾರವಾದ ಪುನರ್ಜನ್ಮದ ಉದಾಹರಣೆ ಅಂತ ನನ್ನ ಅನಿಸಿಕೆ.

ವೆಂಕಮ್ಮನ ಗಂಡ 'ವಿಶ್ವೇಶ್ವರ' ತೀರ್ಥಯಾತ್ರೆಗೆ ಪುಟ್ಟಣ್ಣಯ್ಯನ ಜೊತೆಗೆ ಹೋದವನು ಪ್ರಯಾಗದಲ್ಲಿ ಕಾಲು ಜಾರಿ ಬಿದ್ದು ಸತ್ತವನು, ಗಂಗಾಪುರ ಊರಿನಲ್ಲಿ ತಿರುಮಲ ಜೋಯಿಸರ ಮಗ 'ಕ್ಷೇತ್ರಪಾಲ'ನಾಗಿ ಹುಟ್ಟಿ, ಪುನಃ ಜೋಗಿಹಳ್ಳಿಯ 'ವಿಶ್ವೇಶ್ವರ'ನಾಗಿ, ಅವನನ್ನು ವಿಧವೆಯಾದ ವೆಂಕಮ್ಮಳನ್ನು ಪುನಃ ಗಂಡನಾಗಿ ಸ್ವೀಕರಿಸಿ ಮಗ ಅನಂತನನ್ನು ಪಡೆಯುವುದು ಕಾದಂಬರಿಯ ಒಂದು ಸುತ್ತು.

ಕಾದಂಬರಿಯಲ್ಲಿ ಬರುವ ಭಾಸ್ಕರಾಚಾರಿ ಹಾಗೂ ಅವನ ಮಾಟ–ಮಂತ್ರ, ಗ್ರಾಮದೇವತೆ ಕೆಂಪಮ್ಮ, ಗಂಡು ಹೆಣ್ಣು ಬೇತಾಳಗಳು ನಮ್ಮ ನಂಬುಗೆಯಲ್ಲಿ ಹಾಸು ಹೊಕ್ಕಾಗಿರುವ ಅತೀಂದ್ರಿಯ ಶಕ್ತಿಗಳ ಕುರಿತಾದ ಭಾವನೆಗಳ ಜೊತೆಗೆ ಬೇವಿನಮರದಿಂದ ಬೀಳುವ ಸಿಹಿಹಾಲನ್ನು ಮೂಢನಂಬಿಕೆ ಅಂತ ತಿಳಿಸುವ ವೈಜ್ಞಾನಿಕ ಕಾರಣಗಳು ಕಾದಂಬರಿಯಲ್ಲಿ ಕಂಡುಬರುವುದಿಲ್ಲ.

ಅಚ್ಚಣ್ಣಯ್ಯ ಗಂಗಾಪುರಕ್ಕೆ ಹೋಗಿ ಕ್ಷೇತ್ರಪಾಲನಲ್ಲಿ ವ್ಯವಹರಿಸುವಾಗ ಅಚ್ಚಣ್ಣಯ್ಯ ಅಪ್ಪ ಅಂತ ತಿಳಿದು ನಮಸ್ಕರಿಸಿ ಅವರ ಹೆಸರನ್ನು ಹೇಳಿದುದು, ಉಪ್ಪಾರ ಪಾಪಯ್ಯನ ಹೆಸರನ್ನು ಹೇಳಿದುದು, ಅಚ್ಚಣ್ಣಯ್ಯನ ಮನೆಯ ಗುರುತನ್ನು ಗಂಗಾಪುರದಲ್ಲಿ ಇದ್ದಾಗಲೇ ಹೇಳಿದ್ದು ಮುತಾದವುಗಳಿಗೆ ವೈಜ್ಞಾನಿಕ ಕಾರಣಗಳು ಕಾದಂಬರಿಯಲ್ಲಿ ಎಲ್ಲಿಯೂ ದೊರೆಯುವುದಿಲ್ಲ. ಇದೇ ಕಾರಣಕ್ಕಾಗಿಯೇ ಅಚ್ಚಣ್ಣಯ್ಯನವರಿಗೆ ಸಂಶಯ ಬರುವ ಪ್ರಮೇಯವೇ ಕಂಡುಬರುವುದಿಲ್ಲ.

ಕರಿಯನ ಮಗಳ ಜೊತೆಗಿನ ಸಂಬಂಧ, ಕಾದಂಬರಿಗೆ ಹೊಸ ತಿರುವನ್ನು ಕೊಟ್ಟು, ಅಚ್ಯುತನ ಲಾಭಕ್ಕಾಗಿ ವಕೀಲರು ಹೆಣೆದ ದುಷ್ಟ ಯೋಚನೆಗೆ ಸಾಕ್ಷಿಯಾಗಿ ವಿಶ್ವೇಶ್ವರನಿಗೆ ಜೈಲುಶಿಕ್ಷೆಯಾಗಲು ಕಾರಣವಾಯಿತು. ಈ ಕಾರಣಕ್ಕಾಗಿಯೇ, ತನ್ನ ಹೆಂಡತಿ ಹಾಗೂ ಅಪ್ಪ ತನ್ನನ್ನು ಉದ್ದೇಶಪೂರ್ವಕವಾಗಿ ಜೈಲಿನಲ್ಲಿ ಇಡಲು ಪ್ರಯತ್ನ ಮಾಡಿದ್ದಾರೆ ಎಂದು ಭಾವಿಸಿ ಭೇಟಿಯಾಗಲು ಒಪ್ಪುವುದಿಲ್ಲ.

ಸನಾತನ ಧರ್ಮದಲ್ಲಿಯ ಮೂಢನಂಬಿಕೆಯನ್ನು ವಿರೋಧಿಸುತ್ತಾ, ಕ್ರಿಶ್ಚಿಯನ್ ಧರ್ಮಪ್ರಚಾರದ ಹಿನ್ನೆಲೆಯನ್ನು ವಿವರಿಸಿ, ಕೊನೆಗೆ ಕ್ರಿಶ್ಚಿಯನ್ ಧರ್ಮದಲ್ಲಿಯೂ ಕಂಡುಬರುವ ಮೂಢನಂಬಿಕೆಯನ್ನು ಜಿಜ್ಞಾಸೆ ಮಾಡುವ ಅಚ್ಯುತನ ಆಲೋಚನೆ, ಡಾ.ಭೈರಪ್ಪನವರು ಸಹಜವಾಗಿ ಬಿಂಬಿಸುವ 'ಧರ್ಮಾಂತರ' ದ ಕಲ್ಪನೆಗೆ ಸರಿಯಾಗಿಯೇ ಇದೆ.

ಋತುಮತಿಯಾದ ಕಾವೇರಿಯನ್ನು 'ಶಾಸ್ತ್ರಕ್ಕೆ ವಿರೋಧವಾಗಿ' ಅಚ್ಯುತ ಮದುವೆಯಾದುದರಿಂದಲೇ ಮಕ್ಕಳಾಗಲಿಲ್ಲ ಎನ್ನುವದು ಕಾಕತಾಳೀಯವಾದರೂ ಇದು ಶಾಸ್ತ್ರವಿರೋಧದಿಂದಲೇ ಅಂತ ಅಚ್ಯುತ ನಂಬುವಂತಾದದ್ದು ವಿಚಿತ್ರವೇ ಸರಿ. ಇದರ ಜೊತೆ ಅಪ್ಪನನ್ನು ಜೈಲಿಗೆ ಕಳುಹಿಸಿದ ಪಾಪವೇ ಮಕ್ಕಳಾಗದೇ ಇರಲು ಕಾರಣ ಎಂದು ಊರವರು ಹೇಳಿಕೊಳ್ಳುತ್ತಿರುವುದೂ ಅಚ್ಯುತನ ಗಮನಕ್ಕೆ ಬಂದಿತ್ತು.

ತನ್ನ ತಂದೆ ಜೋಗಯ್ಯನಿಗೆ ಮೋಸ ಮಾಡಿ ಬಂಗಾರದ ನಾಣ್ಯಗಳನ್ನು ಲಪಟಾಯಿಸಿದ್ದು ವಿಶ್ವೇಶ್ವರನಿಗೆ ಗೊತ್ತಾಗಿ ಪ್ರಯಾಗಕ್ಕೆ ಹೋಗಲು ಮನಸ್ಸು ಮಾಡಿದ್ದು, ಪುಟ್ಟಣ್ಣಯ್ಯನ ಜೊತೆ ಪ್ರಯಾಗಕ್ಕೆ ಕುಂಭಮೇಳಕ್ಕೆ ಹೋಗಿ ಹಿಂದೂಸ್ತಾನಿಯಲ್ಲಿಯೇ ಮಾತನಾಡಿ ಅಲ್ಲಿಯ ಶೇಠಿಗೆ ಬಂಗಾರದ ನಾಣ್ಯವನ್ನು ಕೊಟ್ಟು ಜೋಗಯ್ಯನ ಋಣ ವಿಮೋಚನೆಯಾದದ್ದು ಎಲ್ಲವೂ ವಿಚಿತ್ರವಾಗಿಯೇ ಕಾಣುತ್ತದೆ.

ಜೋಗಯ್ಯ ಹಾಗೂ ಸನ್ಯಾಸಿಗಳ ನಡತೆಗಳೂ ವಿಚಿತ್ರವಾಗಿಯೇ ಕಾಣುತ್ತವೆ.


ಅಂತೂ ಕಾದಂಬರಿಯನ್ನು ಓದಿ ಮುಗಿಸಿದಾಗ ನಂಬಿಕೆ ಯಾವುದು, ಮೂಢನಂಬಿಕೆ ಯಾವುದು, ಕಾಕತಾಳೀಯ ಯಾವುದು ಎನ್ನುವುದು ಗೋಜಲು ಗೋಜಲಾಗಿಯೇ ಕಾಣಿಸುತ್ತವೆ.

ಆದರೆ ಇವೆಲ್ಲ ಘಟನೆಗಳು ನಡೆದಿರಬಹುದು ಅಂತ, ನಮ್ಮ ಹಿಂದಿನವರು ಹೇಳುತ್ತಿರುವ ವಿಷಯಗಳಿಂದ ಸಮೀಕರಿಸಬಹುದು.

***

ಎಸ್.ಎಲ್. ಭೈರಪ್ಪನವರ
'ಯಾನ' ಕಾದಂಬರಿ ಕುರಿತು

– ಎನ್. ಶಂಕರ ರಾವ್



ಸಂತೇಶಿವರ ಲಿಂಗಣ್ಣಯ್ಯ ಭೈರಪ್ಪ ಆಧುನಿಕ ಕನ್ನಡ ಸಾಹಿತ್ಯದ ಕಾದಂಬರಿಕಾರರು ಮತ್ತು ಲೇಖಕರು. ಕನ್ನಡ ಭಾಷೆಯಲ್ಲಿ ಪುಸ್ತಕಗಳನ್ನು ಬರೆದಿರುವ ಇವರ ಕೃತಿಗಳು ಇಂಗ್ಲೀಷ್ ಹಾಗೂ ಭಾರತೀಯ ಭಾಷೆಗಳಿಗೆ ಅನುವಾದಗೊಂಡು ಭಾರತದ ಸಾಹಿತ್ಯ ವಲಯದಲ್ಲಿ ಹೆಸರಾಗಿದ್ದಾರೆ.

ಖಗೋಳ ಶಾಸ್ತ್ರವನ್ನು ಸಾಮಾನ್ಯ ಓದುಗನಿಗೆ ಬಹಳ ವಿವರವಾಗಿ ಕನ್ನಡದಲ್ಲಿ ಪರಿಚಯ ಮಾಡಿಕೊಟ್ಟಿರುವುದು ಭೈರಪ್ಪನವರ 'ಯಾನ' ಕಾದಂಬರಿಯ ವಿಶೇಷತೆಯೆಂದು ಹೇಳಬಹುದು.

ಹಿನ್ನುಡಿಯಲ್ಲಿ ಭೈರಪ್ಪನವರು, ಇದನ್ನು ಬರೆಯುವ ಮೊದಲು ಅವರು ಮಾಡಿದ ಸಂಶೋಧನೆ, ಸ್ನೇಹಿತರ ಸಹಕಾರ ಮತ್ತು ಉಪಕಾರಗಳ ಬಗ್ಗೆ ಬರೆಯುತ್ತಾರೆ.

ಯಾನವು ವೈಜ್ಞಾನಿಕ ಪ್ರಯೋಗಕ್ಕಾಗಿ ಭೂಮಿಯಿಂದ ರಾಕೆಟ್ ಮೂಲಕ ಬೇರೊಂದು ನಕ್ಷತ್ರ, ಗ್ರಹಕ್ಕೆ ಪ್ರಯಾಣಿಸುವ ಕತೆಯಾಗಿದೆ. ಯಾನ ಎಂಬುದು ಇಲ್ಲಿ ಎರಡು ಅರ್ಥಗಳನ್ನು ಒಳಗೊಳ್ಳಬಹುದು, ಒಂದು, ಬೇರೆ ಗ್ರಹಕ್ಕೆ ಮಾಡುವ ಪ್ರಯಾಣ ಮತ್ತೊಂದು ಜೀವನದಲ್ಲಿ ಒಂದು ಹಂತದಿಂದ ಮತ್ತೊಂದು ಹಂತಕ್ಕೆ ಮಾಡುವ ಪ್ರಯಾಣ.

ವಿಜ್ಞಾನದ ಕುರಿತು ಕೆಲವೊಂದು ಉಪಯುಕ್ತ ಮಾಹಿತಿಗಳನ್ನೂ ಸಹ ಈ ಕಾದಂಬರಿ ಒದಗಿಸುತ್ತದೆ. ಅದರ ಜೊತೆಗೆ ಮನುಷ್ಯರ ಜೀವನದಲ್ಲಿ ಸಹಜವಾಗಿ ನಡೆಯುವ ಸರಸ ಸಲ್ಲಾಪ, ಅನ್ವೇಷಣಾ ಗುಣ, ವಿರಸ, ಆಧ್ಯಾತ್ಮ, ಶರಣಾಗುವಿಕೆ, ಅಹಂ ಇನ್ನೂ ಮುಂತಾದ ಸೂಕ್ಷ್ಮ ಸಂಗತಿಗಳನ್ನು ಹಲವಾರು ಘಟನೆಗಳ ಮೂಲಕ ಕಾದಂಬರಿ ಹೊರಗೆಡಹುತ್ತದೆ.

೧೫೦ ಅಡಿ ಅಗಲ, ೩೦೦ ಅಡಿ ಉದ್ದದ ಆಕಾಶ ನೌಕೆಯನ್ನು ಕಟ್ಟಿ ಅದರಲ್ಲಿ ಒಬ್ಬ ಗಂಡು, ಒಬ್ಬಳು ಹೆಣ್ಣನ್ನು ಕೂರಿಸಿ ೪.೬ ಜ್ಯೋತಿರ್ವರ್ಷ ದೂರದಲ್ಲಿರುವ ಪ್ರಾಕ್ಸಿಮಾ ಸೆಂಟಾರಿಸ್ ನಕ್ಷತ್ರಮಂಡಲವನ್ನು ತಲುಪುವ ಯೋಜನೆಗೆ ಕಳಿಸುತ್ತಾರೆ. ಸೂರ್ಯಮಂಡಲದಲ್ಲಿ ಸೃಷ್ಟಿಸಿಕೊಂಡ ನೈತಿಕ ನಿಯಮಗಳು ಸೂರ್ಯನ ಗುರುತ್ವಾಕರ್ಷಣೆಯ ವಲಯದ ಆಚೆಗೆ ಹೋದ ಮೇಲೂ ಸಿಂಧುವಾಗುತ್ತವೆಯೇ ಎಂಬಂಥ ಪ್ರಶ್ನೆಗಳನ್ನು ಈ ಪಾತ್ರಗಳು ಎದುರಿಸಬೇಕಾಗುತ್ತದೆ.

ಭೈರಪ್ಪನವರ ಪಾತ್ರಶೋಧನೆಯು ಇದುವರೆಗೆ ವಿಸ್ತರಿಸಿಕೊಂಡಿರದ ವ್ಯಾಪ್ತಿಗೆ 'ಯಾನದಲ್ಲಿ ಬೆಳೆದಿದೆ. ಕನ್ನಡ ಸಾಹಿತ್ಯದಲ್ಲಿ ಇಲ್ಲಿಯತನಕ ಕಾಣದ ವಸ್ತುವು ಈ ಕಾದಂಬರಿಯಲ್ಲಿ ಜೀವಂತವಾಗಿ ಮೂಡಿಬಂದಿದೆ.

೨೧ನೆಯ ಶತಮಾನದ ಭಾರತ, ತನ್ನ ಅನುಪಮ ತಂತ್ರಜ್ಞಾನದ ಮೂಲಕ, ಸೂರ್ಯಮಂಡಲದಾಚೆಗೆ ಮಾಡುವ ನಕ್ಷತ್ರ ಲೋಕದ ಯಾನದಲ್ಲಿ, ಮಾನವನ ನೈತಿಕ ಚೌಕಟ್ಟುಗಳಲ್ಲಾಗುವ ಪಲ್ಲಟವೇ ಈ ಕಾದಂಬರಿಯ ವಸ್ತು.

ನಮ್ಮ ಸೂರ್ಯಮಂಡಲದ ಭೌತಿಕ ನಿಯಮಗಳಿಗೆ ಬದ್ಧವಾಗಿ, ಮಾನವ ರಚಿಸಿಕೊಂಡಿರುವ ಸಾಮಾಜಿಕ, ಮತ್ತು ನೈತಿಕ ನಿಯಮಗಳು, ಸೂರ್ಯನ ಗುರುತ್ವವನ್ನು ದಾಟಿ ನಡೆದ ಮೇಲೂ ಅವನಿಗೆ ಅನ್ವಯವಾಗುವುದೇ, ಆ ಮೌಲ್ಯಗಳನ್ನು ಅವನಿಗೆ ಕಾಪಾಡಿಕೊಳ್ಳಲು ಸಾಧ್ಯವೇ, ಅಲ್ಲಿ ಅವನು ಎದುರಿಸುವ ವಿವಿಧ ಸಮಸ್ಯೆಗಳನ್ನು ವಿಶ್ಲೇಷಿಸಿ ವಿವರಿಸುವ ಪ್ರಯತ್ನವೇ, ಯಾನ ಕಾದಂಬರಿಯಲ್ಲಿನ ಒಂದು ಪ್ರಯತ್ನ.

ವೈಜ್ಞಾನಿಕತೆ ಮತ್ತು ತತ್ವಗಳು ಸಹಜವಾಗಿ ಏಕಮುಖವಾಗಿ ಚಲಿಸಿ ಭೇಟಿಯಾದಂತೆ ಭಾಸವಾಗುತ್ತದೆ. ದಿನೇದಿನೇ ಬದಲಾಗುತ್ತಿರುವ ಸಾಮಾಜಿಕ ಕಟ್ಟುಪಾಡು, ಧೋರಣೆಗಳು ಭವಿಷ್ಯದ ಜನಾಂಗದ ಮೇಲೆ ಬೀರುವ ಪ್ರಭಾವ, ಪರಿಣಾಮಗಳ ಕುರಿತು 'ಯಾನ' ಒಂದು ಯಶಸ್ವಿಯಾದ ಕಾದಂಬರಿ. ಸೌರಮಂಡಲದಿಂದಾಚೆಗೆ ಪಯಣ ಮಾಡುವಾಗ ಮಾನವನ ನೈತಿಕ ಚೌಕಟ್ಟುಗಳಲ್ಲೂ ಆಗುವ ಪಲ್ಲಟವೇ ಈ ಕಾದಂಬರಿಯ ವಸ್ತು.

ಕಾದಂಬರಿಯು ಸೀಮಿತ ಪಾತ್ರಧಾರಿಗಳ ನಡುವೆ ಮಾನವೀಯ ಸಂಬಂಧಗಳು ಮತ್ತು ಮೌಲ್ಯಗಳ ಅರಿತ, ನಿರೂಪಣೆ ಹಾಗೂ ಸೀಮಿತತೆ ಬಗ್ಗೆ ಬಹು ವೈಚಾರಿಕವಾಗಿ ಚರ್ಚಿಸುತ್ತ ಅಂತಃಕರಣ ಸ್ಪರ್ಶಮಾಡುತ್ತದೆ.

ಕಾದಂಬರಿಯ ಮುಖ್ಯಪಾತ್ರಗಳು – ಉತ್ತರೆ, ಸುದರ್ಶನ, ಮೇದಿನಿ, ಆಕಾಶ್ ಮತ್ತು ಯಾದವ್. ಕಾದಂಬರಿ ಪುರುಷ ಸ್ತ್ರೀ ಸಹಜ ಸಂಬಂಧದ ನಿಲುವಿಗಾಗಿ ತಹತಹಿಸುತ್ತದೆ. ಸ್ತ್ರೀ ಪುರುಷರ ಅವಶ್ಯ ಲೈಂಗಿಕ ಸಂಬಂಧದ ಆಧ್ಯಾತ್ಮಿಕ ಮತ್ತು ವೈಜ್ಞಾನಿಕ ಮಜಲನ್ನು ಕಾದಂಬರಿ ವಿವರಿಸುತ್ತದೆ.

ಯಾನದ ನಾಯಕ ಸುದರ್ಶನ್, ಮಾನವ ಸಹಜ ಸ್ವಭಾವದಂತೆ ಒಂದು ಗಂಡಿನ ರೀತಿಯಲ್ಲಿ, ಉತ್ತರೆಯ ಮೇಲೆ ಆಕ್ರಮಣ ನಡೆಸಿ ಅವಳನ್ನು ಗರ್ಭಿಣಿಯನ್ನಾಗಿಸುವ ಪ್ರಯತ್ನ, ನಂತರ ತನ್ನ ವರ್ತನೆಗೆ ಪಡುವ ಪಶ್ಚಾತ್ತಾಪ, ಆ ನಕ್ಷತ್ರಯಾನದ ಸಫಲತೆಯ ದೃಷ್ಟಿಯಿಂದ, ಮುಂದಿನ ಪೀಳಿಗೆಯ ಸೃಷ್ಟಿಗಾಗಿ ಸುದರ್ಶನ್ ಉತ್ತರೆಯನ್ನು ಬೇಡಿಕೊಳ್ಳುವ ಪ್ರಯತ್ನ, ಇವೆಲ್ಲ ಸನ್ನಿವೇಶಗಳೂ ಓದುಗನಲ್ಲಿ ಈ ಪಾತ್ರಗಳ ಬಗ್ಗೆ ಅನುಕಂಪವನ್ನು ಮೂಡಿಸುತ್ತದೆ. ಅವನ ಪ್ರಯತ್ನಗಳು ಸಫಲವಾಗದಿದ್ದಾಗ, ಅವನು ತನ್ನಲ್ಲಿ ಬೆಳೆಸಿಕೊಳ್ಳುವ ವೇದಾಂತಿಯ ಮನೋಭಾವನೆ, ಕಡೆಗೊಮ್ಮೆ ನಾಯಕಿ ಉತ್ತರಾ, ಪ್ರನಾಳದಲ್ಲಿ ಶೇಖರಿಸಿದ್ದ ಗರ್ಭಾಂಕುರಗಳ ನೆರವಿನಿಂದ ಮಕ್ಕಳನ್ನು ಹೆರುವ ನಿರ್ಧಾರ ಮಾಡಿದಾಗ ಅವಳಿಗೆ ನೀಡುವ ಬೆಂಬಲ, ಮಕ್ಕಳಿಗೆ ನೀಡುವ ತರಬೇತಿ, ಇವೆಲ್ಲವೂ ಲೇಖಕರು ತಮ್ಮ ಪಾತ್ರಗಳನ್ನು ಅರ್ಥಮಾಡಿಕೊಂಡು ಅವನ್ನು ಸಂಪೂರ್ಣವಾಗಿ ತಮ್ಮದೇ ಆದ ಅಸಾಮಾನ್ಯವಾದ ರೀತಿಯಲ್ಲಿ ಬೆಳೆಸಿರುವುದನ್ನು ತೋರುತ್ತದೆ.

ನಕ್ಷತ್ರಯಾನದಂತಹ ಭವಿಷ್ಯದ ಪರಿಕಲ್ಪನೆಗಳಲ್ಲಿ ಉಂಟಾಗಬಹುದಾದ ಅನೇಕ ಸಮಸ್ಯೆಗಳನ್ನು ಉತ್ತಮ ರೀತಿಯಲ್ಲಿ ವಿಶ್ಲೇಷಿಸಿದ್ದಾರೆ. ಉದಾಹರಣೆಗೆ, ನಕ್ಷತ್ರಯಾನಕ್ಕೆ ಅಭ್ಯರ್ಥಿಗಳನ್ನು ಆಯ್ಕೆಮಾಡುವ ಸಂಧರ್ಭದಲ್ಲಿ ಎದುರಾಗುವ ನೈತಿಕ ಸಮಸ್ಯೆಗಳು, ತನ್ನ ಪ್ರಿಯಕರನೊಂದಿಗಲ್ಲದೇ, ಇನ್ನೊಬ್ಬನೊಂದಿಗೆ ಈ ಯಾನಕ್ಕೆ ಹೋಗುವ ಇಚ್ಛೆಯಿಲ್ಲ ಎನ್ನುವ ನಾಯಕಿಯನ್ನು, ತಮ್ಮ ನಯವಾದ ಮತ್ತು ಚತುರ ರೀತಿಗಳಿಂದ ಮನವೊಲಿಸಿ, ಅವಳನ್ನು ಯಾನಕ್ಕೆ ಒಪ್ಪಿಸುವ ಅಂತರಿಕ್ಷ ವಿಜ್ಞಾನ ಸಂಸ್ಥೆಯ ಮುಖ್ಯಸ್ಥ ವೆಂಕಟ್ ಅವರ ಬುದ್ಧಿಕುಶಲತೆಗಳು, ತಾನು ಒಲಿದ ಯಾದವ್, ಮಾತೃಗ್ರಹವನ್ನು ತೊರೆದು ಬರಲಾರೆ ಎಂದಾಗ, ಆಂತರಿಕ ತುಮುಲದಲ್ಲಿ ತೊಳಲಾಡುವ ಉತ್ತರೆಯ ಹೆಣ್ಣಿನ ಹೃದಯದ ಮನಸ್ಥಿತಿ, ಇದೇ ಯಾನಕ್ಕಾಗಿ ಆಯ್ಕೆಯಾಗುವ ಮತ್ತೊಬ್ಬ ಅಭ್ಯರ್ಥಿ ಸುದರ್ಶನ್ ಜೀವನದ ವಿಭಿನ್ನ ಅನುಭವಗಳು, ಮತ್ತು ಅವನ ಆಂತರಿಕ ಹೋರಾಟ, ಹೀಗೆ ಹಲವು ಹತ್ತು ಸಂಕೀರ್ಣವಾದ ಅಂಶಗಳನ್ನು ಬಹಳ ಚತುರತೆಯಿಂದ ನಿಭಾಯಿಸಿ, ಓದುಗರನ್ನು ಪುಸ್ತಕದಲ್ಲಿ ಬಿಗಿಯಾಗಿ ಬಂಧಿಸಿಡುವುದರಲ್ಲಿ ಭೈರಪ್ಪನವರು ಸಫಲರಾಗಿದ್ದಾರೆ.

***

ಭೈರಪ್ಪನವರೊಂದಿಗೆ ಎರಡು ದಿನ

– ಬೆಂ.ಶ್ರೀ. ರವೀಂದ್ರ



೨೦೧೭ರ ಸೆಪ್ಟೆಂಬರ್ ೮ ಮತ್ತು ೯ನೆಯ ತಾರೀಖುಗಳು ನನ್ನ ಬದುಕಿನಲ್ಲಿ ಮರೆಯಲಾಗದ ದಿನಗಳು ಎಂದು ಭಾವಿಸುತ್ತೇನೆ. ಆ ಎರಡು ದಿನಗಳು, ಕನ್ನಡ ಅಭಿವೃದ್ಧಿ ಪ್ರಾಧಿಕಾರದ ನಿಯೋಗದ ಸದಸ್ಯನಾಗಿ ದೆಹಲಿ ಹೋಗಿ, ಅಂದಿನ ಕೇಂದ್ರ ಸರ್ಕಾರದ ಸಚಿವರನ್ನು/ಪ್ರತಿನಿಧಿಗಳನ್ನು ಭೇಟಿಮಾಡುವ ಅವಕಾಶ ಸಿಕ್ಕಿತ್ತು. ನಿಯೋಗದ ಉದ್ದೇಶ; ಸಾರ್ವಜನಿಕ ವಲಯದ ಬ್ಯಾಂಕುಗಳಲ್ಲಿ ಮತ್ತು ಕೇಂದ್ರೋದ್ಯಮಗಳಲ್ಲಿ ಕನ್ನಡ ಬಲ್ಲವರನ್ನು/ ಕನ್ನಡಿಗರನ್ನು ನೇಮಕಾತಿ ಮಾಡಲು ಒತ್ತಾಯ ಮಾಡುವುದಾಗಿತ್ತು.

ಪ್ರಾಧಿಕಾರದ ಅಂದಿನ ಅಧ್ಯಕ್ಷರಾಗಿದ್ದ ಶ್ರೀ ಎಸ್.ಜಿ.ಸಿದ್ದರಾಮಯ್ಯನವರ ನೇತೃತ್ವದ ನಿಯೋಗದಲ್ಲಿ ಸರ್ವಶ್ರೀ ಮನು ಬಳಿಗಾರ್, ಎಲ್. ಹನುಮಂತಯ್ಯ, ಕವಿ ಸಿದ್ದಲಿಂಗಯ್ಯ, ಬಿ.ಟಿ.ಲಲಿತಾ ನಾಯಕ್, ರಿಸರ್ವ ಬ್ಯಾಂಕ್ ಕನ್ನಡ ಸಂಘದ ರಂಗ ಬರಹಗಾರ ನಾರಾಯಣ ರಾಯಚೂರು, ಮುಖ್ಯಮಂತ್ರಿ ಚಂದ್ರು, ಜ್ಞಾನಪೀಠ ಪ್ರಶಸ್ತಿ ವಿಜೇತ ಚಂದ್ರಶೇಖರ ಕಂಬಾರ (ಆಗ ಅವರು ಕೇಂದ್ರ ಸಾಹಿತ್ಯ ಅಕಾಡೆಮಿಯ ಅಧ್ಯಕ್ಷರಾಗಿದ್ದರು; ಸೆಪ್ಟೆಂಬರ್ ಒಂಬತ್ತರಂದು ಮಾತ್ರ ಭಾಗವಹಿಸಿದ್ದರು ಎಂದು ನನ್ನ ನೆನಪು), ಎಲ್ಲಕ್ಕೂ ಮಿಗಿಲಾಗಿ ಕನ್ನಡದ, ವಿಶ್ವದ ಅಗ್ರಮಾನ್ಯ ಕಾದಂಬರಿಕಾರ ಶ್ರೀ ಎಸ್.ಎಲ್. ಭೈರಪ್ಪನವರು ಇದ್ದರು. ಆಗ ಅವರಿಗೆ ೮೬ರ ಪ್ರಾಯ.

ಭೈರಪ್ಪನವರು ಉಡುಗೆ ತೊಡುಗೆಯಲ್ಲಿ ಶಿಸ್ತಿನ ಸಿಪಾಯಿ. ಯಾವುದೋ ಜುಬ್ಬಾ, ಪಾಯಿಜಾಮ ಧರಿಸಿ ಸಾಹಿತಿಯಂತೆ ಭಂಗಿ ತೋರಿ ಬರಲಿಲ್ಲ. ತುಂಬು ತೋಳಿನ ಚಂದದ ಇಸ್ತ್ರಿ ಮಾಡಿದ ಶರಟು, ಇಸ್ತ್ರಿಯ ಗೆರೆ ಕಾಣುವಂತಹ ಪ್ಯಾಂಟು. ಶರಟು ಪ್ಯಾಂಟಿನೊಳಗಿಳಿದು ಬೆಲ್ಟಿನ ಬಿಗಿಯಲ್ಲಿ ಆರಾಮವಾಗಿ ಕುಳಿತಿತ್ತು. ಕಾಲಿಗೆ ಮಿರಮಿರ ಮಿರುಗುವ ಕರಿಚರ್ಮದ ಬೂಡ್ಸು. ಹೆಚ್ಚಾಗಿ ನಗು ಕಾಣದ ಮುಖ. ಕನ್ನಡನಾಡಿನ ಜನ ಭೈರಪ್ಪನವರನ್ನು ಇದೇ ರೀತಿಯಲ್ಲಿ ಕಣ್ತುಂಬಿಸಿಕೊಂಡಿದ್ದಾರೆ. ಅಭಿನಂದಿಸಿದ್ದಾರೆ. ಕೆಲವರು ಆರಾಧಿಸಿದ್ದಾರೆ.

ಬೆಂಗಳೂರಿನಿಂದ ಪ್ರಯಾಣಿಸಿದ ಮೇಲೆ ದೆಹಲಿಯ ಕರ್ನಾಟಕ ಭವನದಲ್ಲಿ ನಮ್ಮ ವಾಸ್ತವ್ಯ. ಮೊದಲ ದಿನ, ಆಗಿನ ಕೇಂದ್ರ ಹಣಕಾಸು ಸಚಿವರಾಗಿದ್ದ ಶ್ರೀ ಅರುಣ್ ಜೈಟ್ಲಿಯವರನ್ನು ಪಾರ್ಲಿಮೆಂಟ್ ಭವನದಲ್ಲಿ ಭೇಟಿಯಾದೆವು. ಬ್ರಿಟಿಶರು ಕಟ್ಟಿಸಿದ ಹಳೆಯ ಪಾರ್ಲಿಮೆಂಟ್ ಭವನವದು. ಚಾವಡಿಯ ದಾರಿಗಳಲ್ಲಿ, ಮೊಗಸಾಲೆಯಲ್ಲಿ, ಮೆಟ್ಟಿಲುಗಳ ಮೇಲೆ ಕೆಂಪುಹಾಸು. ಅಷ್ಟೇನು ಸ್ವಚ್ಛವಾಗಿ ಕಾಣುತ್ತಿರಲಿಲ್ಲ. ಅಲ್ಲಲ್ಲಿ ಮಡಚುಗಳು. ಜೈಟ್ಲಿಯವರ ಕಛೇರಿ ಇದ್ದದ್ದು ಮೊದಲ ಮಹಡಿಯಲ್ಲಿ. ಭೈರಪ್ಪನವರು ನಿಧಾನವಾಗಿ ನಡೆದು ಬಂದರು. ಮರದ ಕೈಕಂಬಿಯನ್ನು ಹಿಡಿದು ಮೆಟ್ಟಲುಗಳನ್ನು ಏರಿದರು.



ಶ್ರೀ ಭೈರಪ್ಪನವರು ಮತ್ತು
ನಾರಾಯಣ ರಾಯಚೂರು ಅವರೊಂದಿಗೆ



ಅವರನ್ನು ನಾನು ಅನುಸರಿಸಿದೆ. ಜೈಟ್ಲಿಯವರ ಕಛೇರಿಗೆ ಶ್ರೀ ಅನಂತ ಕುಮಾರ್ (ಅಂದಿನ ಕೇಂದ್ರ ಸಚಿವರು) ಬಂದರು. ಭೈರಪ್ಪನವರು ಕಡಿಮೆ ಮಾತನಾಡಿದರೂ, ಸಾರ್ವಜನಿಕ ವಲಯದ ಬ್ಯಾಂಕುಗಳು ಮತ್ತು ಕೇಂದ್ರೋದ್ಯಮಗಳಲ್ಲಿ ಕನ್ನಡಿಗರ ನೇಮಕಾತಿಯ ಬಗ್ಗೆ, ಕನ್ನಡ ಪರೀಕ್ಷೆಗಳನ್ನು ನಡೆಸುವ ಅಗತ್ಯದ ಬಗ್ಗೆ ಜೈಟ್ಲಿಯವರಿಗೆ ಮನವರಿಕೆಯಾಗುವಂತೆ ತಿಳಿಸಿದರು. ಕೇಂದ್ರದ ಹಿಂದಿ ಪರ ಧೋರಣೆ ಒಕ್ಕೂಟದ ಒಗ್ಗಟ್ಟಿಗೆ ತೊಂದರೆಯಾಗುತ್ತದೆ ಎಂದು ಸ್ಪಷ್ಟ ಮಾತುಗಳಲ್ಲಿ ತಿಳಿಸಿದರು.

ಆಶ್ಚರ್ಯಕರ ಸಂಗತಿಯೆಂದರೆ ಗುಜರಾತಿನ ಒಳಭಾಗದಲ್ಲಿ ಇರುವವರಿಗೆ ಹಿಂದಿಯೂ, ಇಂಗ್ಲಿಷೂ ಬರುವುದಿಲ್ಲ. ಅವರೂ ಉದ್ಯೋಗದಲ್ಲಿ ಕನ್ನಡಿಗರ ರೀತಿಯಲ್ಲಿ ಸಮಸ್ಯೆಯನ್ನು ಎದುರಿಸುತ್ತಿದ್ದಾರಾ? ಎಂದು ಜೈಟ್ಲಿಯವರು ಕೇಳಿದರು. "ಹೌದು, ಭಾರತದ ಬಹುತೇಕ ರಾಜ್ಯಗಳಲ್ಲಿ ಭಾಷಾ ಸಮಸ್ಯೆ ಇದೆ ಮತ್ತು ಉದ್ಯೋಗದಲ್ಲಿ ಹಿಂದಿತೇತರರಿಗೆ ತಾರತಮ್ಯವಾಗುತ್ತಿದೆ'' ಎಂದು ಎಸ್.ಜಿ. ಸಿದ್ದರಾಮಯ್ಯನವರು ತಿಳಿಸಿದರು. ಅಂದೇ, ಪ್ರಧಾನ ಮಂತ್ರಿಯವರ ಕಛೇರಿ ಹಾಗೂ ಸಿಬ್ಬಂದಿ ವಿಭಾಗದ ರಾಜ್ಯ ಮಂತ್ರಿಯಾಗಿದ್ದ ಡಾ.ಜಿತೇಂದ್ರ ಸಿಂಗ್ ಅವರನ್ನು ಭೇಟಿಮಾಡಿದೆವು.

ಸೆಪ್ಟೆಂಬರ್ ೯ರಂದು ಶ್ರೀ ಅನಂತ ಕುಮಾರ್ ಮನೆಯಲ್ಲಿ ಬೆಳಗಿನ ಫಲಾಹಾರ ಆಯ್ತು. ಭೈರಪ್ಪನವರು ಉಪಾಹಾರ ಸೇವಿಸುತ್ತಾ ಅನಂತ್ ಕುಮಾರ್ ಅವರೊಂದಿಗೆ ಕನ್ನಡಿಗರ ಉದ್ಯೋಗದ ಸಮಸ್ಯೆಗಳ ಹಲವಾರು ಮಗ್ಗುಲುಗಳನ್ನು ಚರ್ಚಿಸಿದರು. ಅಂದು ವಿರೋಧ ಪಕ್ಷದ ಶ್ರೀ ಮಲ್ಲಿಕಾರ್ಜುನ ಖರ್ಗೆಯವರನ್ನೂ ಭೇಟಿಮಾಡಿದೆವು. ಇದರ ಜೊತೆಗೆ ಕರ್ನಾಟಕ ಭವನದಲ್ಲಿ ಸಭೆಗಳು ನಡೆದವು. ಜೆಎನ್‌ಯು ಗೆ ಭೇಟಿ, ದೆಹಲಿ ಕರ್ನಾಟಕ ಸಂಘದಲ್ಲಿ ಸಮಾರಂಭ ಎಲ್ಲವೂ ಇತ್ತು.

ಬಹುತೇಕ ಎಲ್ಲಾ ಪ್ರಮುಖ ಸಭೆಗಳಲ್ಲಿ ಭೈರಪ್ಪನವರು, ತಮ್ಮ ವಯೋಮಾನವನ್ನು ಲೆಕ್ಕಿಸದೆ ಭಾಗವಹಿಸಿದರು. ಕನ್ನಡ, ಕರ್ನಾಟಕ, ಕನ್ನಡಿಗರ ಬಗ್ಗೆ ಅವರ ಬದ್ಧತೆ ಅನುಕರಣೀಯವಾಗಿತ್ತು.

ಭೈರಪ್ಪನವರು ತಿಂಡಿಯನ್ನಾಗಲಿ, ಊಟವನ್ನಾಗಲಿ ತಮ್ಮ ಕೋಣೆಗೆ ತರಿಸಿಕೊಳ್ಳಲಿಲ್ಲ. ಊಟದ ಮನೆಗೇ ಬಂದರು (ಇತರ ಕೆಲವರು ಹಾಗೆ ಮಾಡಲಿಲ್ಲ). ನಾನು ಮಾತನಾಡಿಸಿದಾಗ ಆರಾಮದಿಂದ ಮಾತನಾಡಿದರು. ಫೋಟೋ ತೆಗೆಸಿಕೊಂಡರು.


ಸಸಕಸ ವೇದಿಕೆಯು "ಭೈರಪ್ಪನವರ ದಿನ" ನಡೆಸುತ್ತಿರುವ ಇಂದು, ಭೈರಪ್ಪನರೊಡನೆ ಕಳೆದ ಎರಡು ದಿನಗಳ ನನ್ನ ಅನುಭವವನ್ನು ಹಂಚಿಕೊಳ್ಳಲು ಸಂತೋಷವಾಗುತ್ತದೆ.

***

ಭೈರಪ್ಪನವರ 'ಉತ್ತರಕಾಂಡ'

– ಒಂದೆರಡು ಅನಿಸಿಕೆಗಳು

– ಬಿ.ಎಸ್. ಚಂದ್ರಶೇಖರ್



ಕನ್ನಡ ಸಾಹಿತ್ಯ ಕಂಡ ಅಪ್ರತಿಮ ಕಾದಂಬರಿಕಾರ ಎಸ್.ಎಲ್.ಭೈರಪ್ಪನವರ ಇತ್ತೀಚಿನ ಕಾದಂಬರಿ ಉತ್ತರಕಾಂಡ' (2017). ಜನಪ್ರಿಯತೆಯ ಉತ್ತುಂಗದಲ್ಲಿರುವ ಭೈರಪ್ಪನವರ ಕಾದಂಬರಿಗಳು ಚರ್ಚಾಸ್ಪದವೂ ಹೌದು. ಕೃತಿಯನ್ನು ನಿಷ್ಪಕ್ಷಪಾತ ದೃಷ್ಟಿಯಿಂದ ಓದಿ ಪರಿಚಯದ ಉದ್ದೇಶದ ಒಂದಿಷ್ಟು ಅನಿಸಿಕೆಗಳನ್ನು ಹಂಚಿಕೊಳ್ಳುವುದಕ್ಕೆ ಈ ಬರಹ. ಬೇರೆ ಅಭಿಪ್ರಾಯಗಳು ಇದ್ದೇ ಇರಲಿ.

ಶೀರ್ಷಿಕೆಯೇ ಸ್ಪಷ್ಟವಾಗಿ ಸೂಚಿಸುವಂತೆ ಇದು ರಾಮಾಯಣದ ಉತ್ತರಕಾಂಡದ ಕತೆಯ ಆಧಾರದ ಮೇಲೆ ಕಾದಂಬರಿಕಾರರು ಕಟ್ಟಿಕೊಟ್ಟಿರುವ ರಚನೆ. 'ಉತ್ತರಕಾಂಡ' ವಾಲ್ಮೀಕಿ ರಾಮಾಯಣಕ್ಕೆ ಸೇರಿದ್ದಲ್ಲವೆಂಬುದು ಮತ್ತು ಪ್ರಕ್ಷೇಪಿತವಾದ ಈ ಭಾಗದಲ್ಲಿ ಹಲವು ವಾದಗ್ರಸ್ತ ವಿಷಯಗಳು ಸೇರಿಕೊಂಡಿರುವುದು ಸಾಹಿತ್ಯದ ಪ್ರಬುದ್ಧ ಓದುಗರಿಗೆ ತಿಳಿಯದ್ದೇನಲ್ಲ. ಆದರೂ ಅದರ ಕತೆ ರೋಚಕತೆಯ ಜತೆಗೆ ಹಲವು ಬಗೆಯ ಅರ್ಥಪೂರ್ಣ ಚಿಂತನೆಗಳಿಗೆ ಪ್ರೇರಕವಾಗಿರುವುದೆಂದು ಒಪ್ಪಬೇಕು.

ಚಿಂತನ ಪ್ರಧಾನವಾದ ಈ ಕೃತಿಯಲ್ಲಿ ಸಿಂಹಾವಲೋಕನ ಕ್ರಮದಿಂದ ಇಡೀ ರಾಮಾಯಣವೇ ತೆರೆದುಕೊಳ್ಳುವವುದನ್ನು ಕಾಣಬಹುದು – ರನ್ನನ 'ಸಾಹಸ ಭೀಮ ವಿಜಯ'ದಲ್ಲಿ ಮಹಾಭಾರತದ ಕಥೆ ತೆರೆದುಕೊಳ್ಳುವಂತೆ. ರಾಮಾಯಣ ರಾಮ ಕೇಂದ್ರಿತವಾಗಿದ್ದರೆ ಉತ್ತರಕಾಂಡವು ಸೀತಾ ಕೇಂದ್ರಿತವಾದದ್ದು. ಕೃತಿಯಲ್ಲಿ ಸ್ತ್ರೀಪರ (ಸ್ತ್ರೀ 'ವಾದಿ'ಯೆನ್ನಲಾರೆ) ಚಿಂತನೆಗಳನ್ನು ಸಮರ್ಥವಾಗಿ ಬಿತ್ತರಿಸಲು ಕಾದಂಬರಿಕಾರರಿಗೆ ಈ ಅಂಶ ನೆರವಾಗಿದೆ.

ರಾಮನಿಂದ ಪರಿತ್ಯಕ್ತಳಾದ ಸೀತೆ ವಾಲ್ಮೀಕಿ ಮುನಿಯ ಆಶ್ರಮದಲ್ಲಿ ಗತವನ್ನು ನೆನೆಯುತ್ತಾ ಘಟನೆಗಳನ್ನು, ವ್ಯಕ್ತಿಗಳನ್ನು ವಿಶ್ಲೇಷಿಸುವ ಇಲ್ಲಿನ ಪರಿ ಅನನ್ಯವೆನ್ನುವ ಹಾಗಿಲ್ಲ. ಇದೇ ಲೇಖಕರ ಮಹಾಭಾರತ ಆಧರಿತ 'ಪರ್ವ'ವನ್ನಿಲ್ಲಿ ನೆನಪಿಸಿಕೊಳ್ಳ ಬಹುದು. ಇಡೀ ಕಾದಂಬರಿ ಸೀತೆಯ ಆಲೋಚನೆಗಳ ಮೂಲಕವೇ ನಿರೂಪಿತವಾಗಿರುವುದು ವಿಶೇಷ. ಇಲ್ಲಿ ಸೀತೆ ದೇವಿಯಲ್ಲ, ಇತರರಂತೆಯೇ ಒಂದು ಹೆಣ್ಣು; ಹಾಗೆಯೇ ರಾಮನೂ ಒಬ್ಬ ಸಾಧಾರಣ ಗಂಡು. ಅತಾರ್ಕಿಕವಾದ, ಪವಾಡ ಸದೃಶವಾದ ಯಾವ ಘಟನೆಯೂ ಇಲ್ಲಿಲ್ಲ. ಯಾವ ಪಾತ್ರವನ್ನೂ ಉದಾತ್ತೀಕರಿಸುವ ಗೋಜಿಗೆ ಹೋಗದೆ ಮಾನವ ಸಹಜ ದೌರ್ಬಲ್ಯಗಳನ್ನುಳ್ಳ ವ್ಯಕ್ತಿಗಳನ್ನಾಗಿಯೇ ಕಾಣಿಸುವ ಉತ್ತರಕಾಂಡ ವಾಸ್ತವ ಪ್ರಪಂಚಕ್ಕೆ ನಿಕಟವಾಗುತ್ತದೆ. ದಶರಥ, ಕೈಕೇಯಿ, ಭರತ, ರಾವಣ, ಇಂದ್ರಜಿತು ಮೊದಲಾದ ಪಾತ್ರಗಳು ರಾಮಾಯಣವು ಕಡೆದ ಅವುಗಳ ಮೂರ್ತಿಗಳಿಗೆ ಹೋಲಿಸಿದಂತೆ ತೇಜೋಹೀನವೆನಿಸುವುದಿರಲಿ, ಜನಮಾನಸದಲ್ಲಿ ಪುರುಷೋತ್ತಮನಾಗಿ ಬಿಂಬಿತನಾದ ರಾಮನ ಚಿತ್ರವೂ ಪ್ರಭಾವಳಿ ಕಳೆದುಕೊಂಡಿದೆ. ವ್ಯಂಗ್ಯ, ವಿಡಂಬನೆಗಳಿಂದ ರಾಮನ ಆದರ್ಶಗಳ ಅತಿರೇಕತೆಯನ್ನು ಕಾಣಿಸುವ ಈ ಕೃತಿಯಲ್ಲಿ ಲಕ್ಷ್ಮಣ ಅತ್ಯಂತ ವ್ಯವಹಾರ ಕುಶಲನಾಗಿ, ತೇಜೋವಂತನಾಗಿ ಚಿತ್ರಿತನಾಗಿದ್ದಾನೆ. (ಊರ್ಮಿಳೆಯ ಕೈಲಿ ರಾಮಾಯಣ ಬರೆಸಿ ನೋಡದರೆ ಹೇಗೋ ಎಂಬುದು ಊಹೆಗೆ ಬಿಟ್ಟ ವಿಷಯ!) ಇದೇನೇ ಇದ್ದರೂ ರಾಮನ ಶೌರ್ಯ, ಏಕಪತ್ನೀ ವ್ರತ, ಸ್ತ್ರೀ ಸಹಾನುಭೂತಿ, ಸತ್ಯ-ಧರ್ಮನಿಷ್ಠೆ, ಉದಾರಗುಣಗಳಿಗೆ ಎಲ್ಲೂ ಧಕ್ಕೆಯಾಗದಂತೆ ನೋಡಿಕೊಳ್ಳಲಾಗಿದೆ.

ದಶರಥನ ಸ್ತ್ರೀ ದೌರ್ಬಲ್ಯ, ಜನಕನ ಆಸ್ಥಾನದ ಅಧ್ಯಾತ್ಮ ವಿಚಾರ ಗೋಷ್ಠಿಗಳು, ವನವಾಸದಲ್ಲಿ ಆಹಾರ ಸಂಗ್ರಹಣೆ, ಸಂಚಾರಗಳ ಕಷ್ಟ, ಋಷಿಪತ್ನಿ ಅನಸೂಯೆಯು ಸೀತೆಗೆ ತನ್ನ ಆಭರಣಗಳನ್ನು ನೀಡುವ ಸನ್ನಿವೇಶ (ಈ ಆಭರಣಗಳು ಕೊನೆಯವರೆಗೂ ಆಗಾಗ್ಗೆ ಕಾಣಿಸಿಕೊಳ್ಳುತ್ತವೆ), ವಿಭೀಷಣನ ಸತಿ ಸರಮೆ, ಗುಹ, ವಾಲ್ಮೀಕಿ ಮೊದಲಾದವರ ಪಾತ್ರಗಳೇ ಮುಂತಾದ ಅನೇಕ ಸಂಗತಿಗಳು ಅತ್ಯಂತ ಪರಿಣಾಮಕಾರಿಯಾಗಿ ಚಿತ್ರಿತವಾಗಿವೆ. ಅಹಲ್ಯೆಯ ಪ್ರಸಂಗ ಮನೋವೈಜ್ಞಾನಿಕ ನೆಲೆಯಲ್ಲಿ ಅಧ್ಯಯನ / ವಿಶ್ಲೇಷಣೆಗೆ ಅರ್ಹವೆನಿಸುವಂತೆ ಮೂಡಿದೆ. ಪರ್ವ ಮತ್ತು ಉತ್ತರಕಾಂಡಗಳ ತುಲನಾತ್ಮಕ ಅಧ್ಯಯನವೂ ಸಂಶೋಧನೆಯ ವಿಷಯವಾದೀತು.

ಕೃತಿಯಲ್ಲಿನ ಸ್ತ್ರೀಪರ ಚಿಂತನೆಗಳು ಮೆಚ್ಚುಗೆ ಮೂಡಿಸುತ್ತವೆ ಎನ್ನುವುದಕ್ಕಿಂತ ಕೃತಿಯು ಅಂಥ ಚಿಂತನೆಗಳಿಂದಲೇ ತುಂಬಿವೆ ಯೆಂಬುದೇ ಸಮಂಜಸ. ಕೃತಿಯ ಆರಂಭದಲ್ಲಿ ಲವಕುಶರಿಗೆ ಮೊಲೆಯೂಡಿಸುತ್ತ ಸೀತೆ ತೀರ ಸಾಮಾನ್ಯ ಸ್ತ್ರೀಯಂತೆ ಕಾಣಿಸಿಕೊಳ್ಳುತ್ತಾಳೆ. ಕೃತಿಯುದ್ದಕ್ಕೂ ಅಲ್ಲಲ್ಲಿ ಬರುವ ರಾಮನ ಪರೋಕ್ಷ ಖಂಡನೆ ಅವನನ್ನು ಪುರುಷೋತ್ತಮನೆಂದು ನಂಬದವರಿಗೂ ಅತಿಯಾಯಿತೆನಿಸಲು ಸಾಧ್ಯ. ಸೀತೆಯ ಪಾತ್ರ ಓದುಗರ ಮನಸ್ಸಿನಲ್ಲಿ ಬೇರೂರಿ ಬೆಳೆಯುತ್ತಾ ಕೊನೆಗೆ ಬಹುತೇಕ ದೈವತ್ವಕ್ಕೇರುವಂತಿದೆಯೆನಿಸಬಹುದಾದರೂ ರಾಮನು ಗತಿಸಿದನೆಂಬ ವಾರ್ತೆಗೆ ಅವಳ ಪ್ರತಿಕ್ರಿಯೆ ಸಾಂಪ್ರದಾಯಿಕ ಮನಸ್ಸುಗಳಲ್ಲಿ ಗೊಂದಲ ಮೂಡಿಸುವಂತಿದೆ. ಗತಿಸಿದ ಪತಿಯನ್ನು ನೋಡಲೂ ಬಯಸದಿರುವ ನೊಂದ ಸತಿಯ ಮನೋಭಾವವನ್ನು ಎರಡು ಬಗೆಯಲ್ಲಿ ಅರ್ಥೈಸಲು ಸಾಧ್ಯ. ಅದು ತಿರಸ್ಕಾರವಾಗಿರಬಹುದು ಅಥವಾ ಪತಿಯ ಶಾಶ್ವತ ಅಗಲಿಕೆಯನ್ನು ಒಪ್ಪಿಕೊಳ್ಳದ ಮನಸ್ಸಿನ ಪ್ರತಿಕ್ರಿಯೆಯೂ ಆಗಿರಬಹುದು. ಕ್ಷುಲ್ಲಕ ಕಾರಣಕ್ಕೆ ತನ್ನನ್ನು ತ್ಯಜಿಸಿದ ಗಂಡನನ್ನು ತಾನೇಕೆ ಆದರಿಸಬೇಕೆಂಬ ಸೀತೆಯ ಆಲೋಚನೆಯಲ್ಲಿ ತಿರಸ್ಕಾರ ಕಂಡರೆ, ವಿಧವೆಯಾಗುವ ಗಳಿಗೆಗೆ ಮೊದಲೇ ಇಚ್ಛಾ ಮರಣವನ್ನಪ್ಪುವ ನಿರ್ಧಾರ ಪತಿಯ ಶಾಶ್ವತ ಅಗಲಿಕೆಯನ್ನೊಪ್ಪದ ಮನೋಭಾವ ಕಾಣುತ್ತದೆ. ಹೀಗೆ ವಿಧವೆಯ ಪಟ್ಟವನ್ನು ಧಿಕ್ಕರಿಸುವುದೂ ಪಾತಿವ್ರತ್ಯದ ಒಂದು ನಡೆಯೇ ಇದ್ದೀತು. ಇದೇನೇ ಇದ್ದರೂ ಉತ್ತರಕಾಂಡದ ಸೀತೆ ಅನೇಕ ಮಹಿಳೆಯರಿಗೂ ಅಪ್ರಿಯವಾಗಿದ್ದರೆ ಆಶ್ಚರ್ಯವಲ್ಲ.

ಇಂಥ ಕೃತಿಯಲ್ಲಿ ಆಡುಮಾತುಗಳು ಮತ್ತು ತೀರಾ ಸಾಮಾನ್ಯ ಭಾಷೆಯ ಬಳಕೆ ಸಮರ್ಥನೀಯವೇ ಎಂದರೂ ಲಕ್ಷ್ಮಣ, ಭರತನಂಥ ಪಾತ್ರಗಳು ಕೈಕೇಯಿ, ದಶರಥ ಮೊದಲಾದವರನ್ನು ಕೀಳು ಮಾತುಗಳಲ್ಲಿ ನಿಂದಿಸುವಂತೆ ಚಿತ್ರಿತವಾಗಿರುವುದು ಬೇಕಾಗಿರಲಿಲ್ಲವೇನೋ. ಇಷ್ಟಾದರೂ ಭೈರಪ್ಪನವರ ಕಾದಂಬರಿ ಓದಿಸಿಕೊಂಡು ಹೋಗುತ್ತದೆ ಎಂದುಹೇಳುವ ಅಗತ್ಯವಿದೆಯೇ?


ವಿಷಾದ ಮೂಡಿಸುವ ಉತ್ತರಕಾಂಡ ಒಂದು ದುರಂತ ಕಾದಂಬರಿ. ಜೋಡಿಹಕ್ಕಿಗಳಲ್ಲಿ ಬೇಡನು ಒಂದನ್ನು ಹೊಡೆದು ಅಗಲಿಸಿದ ದುಃಖದಿಂದ ಆರಂಭವಾದ ತನ್ನ ರಾಮಾಯಣ ದುಃಖಾಂತ್ಯವಾಗುವುದು ಸಹಜವೇ ಇದ್ದೀತೆಂದು ವಾಲ್ಮೀಕಿಯ ಬಾಯಲ್ಲೇ ಹೇಳಿಸಿರುವುದೂ ಈ ಅಭಿಪ್ರಾಯವನ್ನೇ ಮತ್ತಷ್ಟು ದೃಢೀಕರಿಸೀತು. ಆದರೆ 'ಕಾವ್ಯದಲ್ಲಿ ಕೂಡ ಸುಖವನ್ನು ಸೃಷ್ಟಿಸುವುದು ಸಾಧ್ಯವಿಲ್ಲ'ವೆಂಬ ಕೃತಿಯ ಭರತವಾಕ್ಯ ವಿಷಾದವನ್ನು ಮತ್ತಷ್ಟು ಗಾಢವಾಗಿಸುತ್ತದೆ.

ಒಟ್ಟಾರೆ ರಾಮಾಯಣದ ಮಥನವೂ ಒಂದು ಬಗೆಯ ಸಮರ್ಥ ವಿಶ್ಲೇಷಣೆಯೂ ಆಗಿರುವ 'ಉತ್ತರಕಾಂಡ' ಯಶಸ್ವಿಯಾಗಿದೆಯೆನ್ನಲು ಅಡ್ಡಿಯಿಲ್ಲ. ಈ ನಿಟ್ಟಿನಲ್ಲಿ ಭೈರಪ್ಪನವರಿಗೆ ಅಭಿನಂದನೆ ಸಲ್ಲಬೇಕು.

***

ನನ್ನ ಮೆಚ್ಚಿನ ಕಾದಂಬರಿ 'ನೆಲೆ'

– ಅನುರಾಧ ನಟರಾಜ್



"ನೆಲೆ" – ನಾನು ಭೈರಪ್ಪನವರ ಕಾದಂಬರಿಗಳಲ್ಲೇ ತುಂಬಾ ಇಷ್ಟಪಡುವ ಕೃತಿ.

ಇದು ಭೈರಪ್ಪನವರ ಕಾದಂಬರಿಗಳಲ್ಲೇ ಅತ್ಯಂತ ವಿಭಿನ್ನ ಹಾಗೂ ವಿಶಿಷ್ಟವಾದ ಕೃತಿ. ಸಾಮಾನ್ಯವಾಗಿ ನಾವು ಭೈರಪ್ಪನವರ ಕಾದಂಬರಿಗಳಲ್ಲಿ ಜೀವನಪ್ರೀತಿ, ಸಂಘರ್ಷ, ಮನುಷ್ಯ ಸಂಬಂಧಗಳ ಭಾವುಕತೆ ಸಂಕೀರ್ಣತೆಗಳನ್ನು ಕಾಣುತ್ತೇವೆ. ನೆಲೆಯ ಕಥಾವಸ್ತು ಇವೆಲ್ಲದರ ಜೊತೆಗೆ– ಕೋಟಿ ಕೋಟಿ ಜ್ಯೋತಿರ್ವರ್ಷಗಳ ವಿಸ್ತಾರದ ಅನಂತ ವಿಶ್ವದಲ್ಲಿ ಮನುಷ್ಯನ ಅಸ್ತಿತ್ವ... ನಿರಪೇಕ್ಷ ಅಗಾಧ "ಸಾವು" ಮತ್ತು ಅದರ ನಡುನಡುವೆ ಯಾವ ಬೇರೂ ಇಲ್ಲದೆ ಮಿನುಗಿ ಇಲ್ಲವಾಗುವ "ಜೀವನ" ಎಂಬ ವಿಸ್ಮಯ'' (೧೩೧).

ಮನುಷ್ಯ ಸದಾ ತನ್ನ ದೈನಂದಿನ ಸಂಸಾರ, ವ್ಯವಹಾರಗಳ ವಾರ್ತೆಗಳಲ್ಲೇ ತೊಡಗಿದ್ದು ಅವನಿಗೆ ವಿಸ್ತಾರವಾದ ನಭೋ ಮಂಡಲದಲ್ಲಿ ತನ್ನ ಅಸ್ತಿತ್ವದ ಅರಿವು. ಉದ್ದೇಶಗಳ ಬಗ್ಗೆ.... ಸಾವಿನ ಬಗ್ಗೆ ಆಲೋಚಿಸಲು ವ್ಯವಧಾನವೇ ಇರುವುದಿಲ್ಲ. (ಕಾದಂಬರಿಯ ಕುಮಾರ. ಮಾಲತಿ. ಸ್ವಲ್ಪಮಟ್ಟಿಗೆ ಕಾಳಪ್ಪ ನವರು). ಇದಕ್ಕೆ ಮತ್ತೊಂದು ಕಾರಣ ಮನುಷ್ಯನ ಒಳಗೇ ಕಾಣದಂತೆ ಅಡಗಿರುವ ಜೀವನ ಪ್ರೀತಿ. ನಮ್ಮ ಹುಟ್ಟಿಗೆ ನಾವು ಕಾರಣರಲ್ಲವೆಂದು ನಾವು ಯಾರೂ ಆತ್ಮಹತ್ಯೆ ಮಾಡಿಕೊಳ್ಳುವುದಿಲ್ಲ ಅಲ್ಲವೇ? (ಕುಮಾರನನ್ನು ಕಾಳಪ್ಪನವರು ಕಟ್ಟಡದಿಂದ ಹಾರುವಂತೆ ಹೇಳುವ ಪ್ರಸಂಗ). ಆದರೂ ಕೆಲವೊಮ್ಮೆ "ಮೃತ್ಯುಪ್ರಜ್ಞೆ" ವ್ಯಕ್ತಿಯಲ್ಲಿ ಜಾಗೃತವಾದಾಗ – ಈ ವಿಶಾಲವಾದ ಅನಂತ ವಿಶ್ವದಲ್ಲಿ ತಾನು ಒಬ್ಬಂಟಿಯೇ? ತಾನು ಹೇಗೆ ಬಂದೆ? ಯಾಕೆ ಬಂದೆ? ತನ್ನಂತೆಯೇ ನಕ್ಷತ್ರ ಸಮೂಹದಿಂದ ಕೂಡಿದ ನಭೋಮಂಡಲದ ಯಾವುದೋ ಮೂಲೆಯಲ್ಲಿ ಮತ್ತೊಬ್ಬ ಜೀವಿ ಇರಬಹುದಲ್ಲವೇ? ಸಾಯುವುದಂತು ಖಂಡಿತ ನಾನೇ. ಆದರೆ ತನ್ನ ಸಾವಿಗೆ ಏನಾದರೂ ಅರ್ಥವುಂಟೆ? ತನ್ನ "ನೆಲೆ"ಯ ಅಥವಾ ಇರುವಿಕೆಯ ಉದ್ದೇಶವೇನು? ಎನ್ನುವ ಹಲವಾರು ಆಲೋಚನೆಗಳು ಬರುವುದುಂಟು.

"ನೆಲೆ"ಯಲ್ಲಿ "ಮೃತ್ಯುಪ್ರಜ್ಞೆ" ಜಾಗೃತವಾಗುವುದು ಮುಖ್ಯವಾಗಿ ಮೂರು ಸನ್ನಿವೇಶಗಳಲ್ಲಿ :–

೧. ಮನುಷ್ಯ ತಾನೇ ಸಾವಿನ ಅಂಚಿಗೆ ಹೋಗಿ ಹಿಂತಿರುಗಿದಾಗ (ಕಾಳಪ್ಪನವರು)

೨. ಮನುಷ್ಯ ತನ್ನ ಜೀವದಷ್ಟೆ ಆತ್ಮೀಯರಾದ ಸ್ನೇಹಿತ/ಸಂಬಂಧಿಕನನ್ನು ಕಳೆದುಕೊಂಡಾಗ (ಜವರಾಯಿಯ ಸಾವು ಕಾಳಪ್ಪ ನವರಲ್ಲಿ ಮೂಡಿಸುವ ಭಾವನೆಗಳು)

೩. ಕೆಲವೊಮ್ಮೆ ತನ್ನನ್ನು ದ್ವೇಷಿಸುತ್ತಿದ್ದ ಬದ್ಧ ವೈರಿಯ ಸಾವು (ನಾಯಿ ನಾಗರಾಜಯ್ಯನ ಸಾವು ಜವರಾಯಿಯಲ್ಲಿ ಮೂಡಿಸುವ ಖಾಲಿತನ ಮತ್ತು ಜೀವಭಯ)

ಈ ಮೃತ್ಯುಪ್ರಜ್ಞೆ ಜಾಗೃತವಾದಾಗ ಮನುಷ್ಯ ಹಿಂತಿರುಗಿ ನೋಡುತ್ತಾನೆ. ತನ್ನ ಜೀವನವನ್ನೇ ಮಾಪನ ಮಾಡಿಕೊಳ್ಳುತ್ತಾನೆ. ಅರ್ಥ ಹುಡುಕುವ ಪ್ರಯತ್ನ ಮಾಡುತ್ತಾನೆ. ನೆಲೆಯಲ್ಲಿ ಭೈರಪ್ಪನವರು ಈ ವಸ್ತುವಿನ ಎಲ್ಲ ಆಯಾಮಗಳನ್ನು ಗಹನವಾಗಿ

ಚರ್ಚಿಸುತ್ತಾರೆ. ಭಾರತೀಯ, ಹಿಂದೂ ಸಂಸ್ಕೃತಿಯಲ್ಲಿ ಮರಣ, ಆತ್ಮ, ಅಸ್ತಿತ್ವಗಳ ಬಗ್ಗೆ ಇರುವ ನಂಬಿಕೆಗಳು, ತತ್ಸಂಬಂಧಿ ವಿಧಿ ವಿಧಾನಗಳು, ಶ್ರಾದ್ಧಾದಿ ಕಾರ್ಯಾಚರಣೆಗಳು, ವೇದೋಪನಿಷತ್, ಗರುಡ ಪುರಾಣಗಳಲ್ಲಿ ಕಂಡುಬರುವ ವಿವರಣೆಗಳ ಜೊತೆಗೆ ವೈಜ್ಞಾನಿಕವಾಗಿ ಇಂದಿನ ಖಗೋಳ ವಿಜ್ಞಾನಿಗಳು ನಡೆಸಿರುವ ಸಂಶೋಧನೆಗಳು, ಹುಡುಕಾಟಗಳ ಚರ್ಚೆಯೂ ಕಾಳಪ್ಪ-ರಾಮುವಿನ ಪಾತ್ರಗಳ ಮೂಲಕ ಮೂಡಿಬಂದಿವೆ.

ಮಾತ್ರವಲ್ಲ, ಸಾವು-ಅಸ್ತಿತ್ವಗಳ ಕುರಿತಾದ ಕುತೂಹಲ ಗಂಡನ್ನು ಕಾಡುವಷ್ಟು ಹೆಂಗಸರನ್ನು ಕಾಡುವುದಿಲ್ಲ. ವೇದೋಪನಿಷತ್, ವಿಜ್ಞಾನ ಸಂಶೋಧನೆಗಳ ಮೂಲಪುರುಷರು ಗಂಡಸರೇ ಎಂದು ಹೇಳುತ್ತಾ ಭೈರಪ್ಪನವರು, "ಹೆಣ್ಣು ತಾನೇ ಮತ್ತೊಂದು ಜೀವಕ್ಕೆ ಜನ್ಮ ಕೊಡುವುದರ ಮೂಲಕ ತನ್ನ ಹುಟ್ಟನ್ನು ತಾನೇ ಮತ್ತೊಮ್ಮೆ ಅನುಭವಿಸುತ್ತಾಳೆ. ಹಾಗಾಗಿ ಈ ವಿಷಯಗಳ ಬಗ್ಗೆ ಗಂಡಿಗಿರುವ ಅಚ್ಚರಿ ಹೆಣ್ಣಿಗಿಲ್ಲ" ಎಂಬ ಅಭಿಪ್ರಾಯವನ್ನು ಪಾರ್ವತಿಯ ಪಾತ್ರದ ಮೂಲಕ ಹೇಳಿಸುತ್ತಾರೆ. ಹಾಗಿದ್ದರೆ ಮನುಷ್ಯ ತಾನು ಚಿರಂಜೀವಿಯಾಗಿರಲು ಸಾಧ್ಯವಿಲ್ಲದ ಕಾರಣ ವಂಶಾಭಿವೃದ್ಧಿ ಮಾಡುತ್ತಾನೆಯೇ? ಈ ಸಂತತಿಯ ಮುಂದುವರಿಕೆಯ ಪ್ರಕ್ರಿಯೆಯ ಉದ್ದೇಶವೇನು? ಮನುಷ್ಯ ಸಂಬಂಧಗಳ (ಗಂಡು-ಹೆಣ್ಣು) ಮೂಲ ಉದ್ದೇಶ ಇದೆಯೇ? ಹೀಗೆ ನಮ್ಮ "ನೆಲೆ"ಯ ಬಗ್ಗೆ ಅನೇಕ ಚಿಂತನೆಗಳಿಗೆ "ನೆಲೆ" ಪ್ರಚೋದನೆ ನೀಡುತ್ತದೆ.

ಭಾರತೀಯ ಸಾಹಿತ್ಯದಲ್ಲೇ ಈ ರೀತಿಯ ಅಪರೂಪದ ವಿಷಯವನ್ನು ಎತ್ತಿಕೊಂಡು ಎಷ್ಟು ಆಳವಾಗಿ ಚರ್ಚಿಸಿರುವ ಕಾದಂಬರಿ ಮತ್ತೊಂದಿಲ್ಲ. "ನೆಲೆ" ಗಾತ್ರದಲ್ಲಿ ಚಿಕ್ಕ ಪುಸ್ತಕ. ಆದರೆ ವಸ್ತುವಿನಲ್ಲಿ ಬಹಳ ಘನವಾದದ್ದು. ಗಂಭೀರವಾದ ವಿಷಯವಾದರೂ ನಿರೂಪಣೆಯ ಸಹಜತೆ, ಸರಳತೆ ಮತ್ತು ನಿರ್ಭಾವುಕತೆ ನಮ್ಮ ಮನಸ್ಸನ್ನು ತಟ್ಟುತ್ತದೆ. ಈ ಕಥೆಗೆ ಹಿನ್ನೆಲೆಯಾಗಿ ಭೈರಪ್ಪನವರು ಬಳಸಿಕೊಂಡಿರುವುದು ಓದುಗನಿಗೆ ಚಿರಪರಿಚಿತವಾದ ಚೆನ್ನರಾಯಪಟ್ಟಣ ಸುತ್ತಮುತ್ತಲಿನ ಪ್ರದೇಶ. ಭಾಷೆ, ಸನ್ನಿವೇಶಗಳು. ಆದ್ದರಿಂದಲೇ ನಮಗೆ ಭೈರಪ್ಪನವರು ಇಷ್ಟವಾಗುವುದು. "ಪರ್ವ"ದ ನಂತರ "ನೆಲೆ" ಬಂದಿದ್ದರಿಂದ ನನಗೆ "ಪರ್ವ"ದಲ್ಲಿ ಏಳುವ ಪ್ರಶ್ನೆಗಳಿಗೆ "ನೆಲೆ"ಯಲ್ಲಿ ಭೈರಪ್ಪನವರು ಇನ್ನೂ ಎತ್ತರದ ಚಿಂತನೆಯಲ್ಲಿ ಉತ್ತರ ಹುಡುಕಿದ್ದಾರೇನೋ ಎಂದು ಅನೇಕ ಲ ಅನ್ನಿಸಿದೆ.

ಕೆಲವು ಓದುಗರು "ನೆಲೆ" ಒಂದು ರೀತಿಯ "ಹೆವೀ ರೀಡಿಂಗ್" ಅರ್ಥ ಆಗುವುದು ಕಷ್ಟ ಎಂದು ಅಭಿಪ್ರಾಯಪಟ್ಟಿದ್ದಾರೆ. ಆದರೆ ನನ್ನ ಅಭಿಪ್ರಾಯದಲ್ಲಿ ಇವತ್ತಿನ ಜನಾಂಗಕ್ಕೆ "ನೆಲೆ" ಬಹಳ ಪ್ರಸ್ತುತವಾದ ಕೃತಿ. ಏಕೆಂದರೆ ಸದಾ ಟಾಸ್ಕ್ ಟಾರ್ಗೆಟ್ ನೆಟ್ ಅಚೀವ್ಮೆಂಟ್ ನೆವರ್ ಫೇಲ್... ಟೆನ್ಶನ್... ಟೆನ್ಶನ್. .(೩೯) ಎಂಬ ಅರ್ಥವಿಲ್ಲದ ಕುದುರೆಯ ಪಂದ್ಯದ ಓಟದಲ್ಲಿ ತೊಡಗಿರುವ ಜನರಿಗೆ "ನೆಲೆ" ಜೀವ/ಜೀವನ, ಅಸ್ತಿತ್ವದ ಬಗ್ಗೆ ಒಂದು ವಿಶಾಲವಾದ ದೃಷ್ಟಿಕೋನವನ್ನು (macro vision) ಬೆಳೆಸಿಕೊಂಡು ಜೀವನವನ್ನು ಗಂಭೀರವಾಗಿ ನೋಡಲು, ಬದುಕಿನ ಸಣ್ಣತನಗಳನ್ನು ಮೀರುವ ಪ್ರಬುದ್ಧತೆಯನ್ನು ಬೆಳೆಸಿಕೊಳ್ಳಲು ಸಹಾಯ ಮಾಡುತ್ತದೆ. ನೆಲೆಯನ್ನು ನಾನು ಜೀವನದ ಬೇರೆಬೇರೆ ಘಟ್ಟಗಳಲ್ಲಿ ಓದಿದಾಗ ಪ್ರತಿಸಾರಿಯೂ ಹೊಸ ಅರ್ಥ ಹೊಳೆಸಿದೆ. "ನೆಲೆ" ನಿಜವಾಗಿಯೂ ಭೈರಪ್ಪನವರ ಅತಿ ವಿಶಿಷ್ಟವಾದ, ಆಳವಾದ ಅರ್ಥಗರ್ಭಿತವಾದ ಕಾದಂಬರಿ ಎಂದು ನನಗೆ ಓದಿದಾಗೆಲ್ಲ ಅನ್ನಿಸಿದೆ.

ನೆಲೆ ಖಂಡಿತ ಓದಿ.

("ನೆಲೆ" ಕಾದಂಬರಿಯ ಬಗ್ಗೆ ನಾನು ಕೆಲವು ವರ್ಷಗಳ ಹಿಂದೆ 'ಡಾ.ಎಸ್.ಎಲ್.ಭೈರಪ್ಪ ಕಾದಂಬರಿಪ್ರಿಯರ ಕೂಟ'ಕ್ಕೆ ಬರೆದಿದ್ದ ಲೇಖನ)

***

ಪ್ರತಿ ಓದಿನಲ್ಲೂ ಹೊಸ ಹೊಳಹು, ಹೊಸ ಭಾವ

– ಲಕ್ಷ್ಮೀ ವಿಠಲ್, ಅಮೆರಿಕ

ಎಸ್ ಎಲ್ ಭೈರಪ್ಪ... ಏನೆಂದು ಬರೆಯಲಿ ಅವರ ಬಗ್ಗೆ!

ಅವರ ಕಾದಂಬರಿಗಳು ಎಲ್ಲವನ್ನೂ ಹೇಳುತ್ತವೆ. ಹೊಗಳಿಕೆಗೆ ಹಿಗ್ಗದ, ನಿಂದನೆಗೆ ಕುಗ್ಗದ, ಪ್ರಶಸ್ತಿ ಪುರಸ್ಕಾರಗಳ ಬಗ್ಗೆ ಕಿಂಚಿತ್ತೂ ಮೋಹವಿರದ, ಅಸಾಧಾರಣ ಲೇಖಕ ಈ ಭೈರಪ್ಪನವರು.

ಕಳೆದ ಹದಿನೈದು ವರ್ಷಗಳಲ್ಲಿ ಅವರ ಎಲ್ಲಾ ಕಾದಂಬರಿಗಳನ್ನು ಓದಿದ ಭಾಗ್ಯ ನನ್ನದು. ಪ್ರತಿ ಓದಿನಲ್ಲೂ ಹೊಸ ಹೊಳಹುಗಳನ್ನು, ಹೊಸ ಭಾವಗಳನ್ನು ನನ್ನ ಭಾವಕೋಶಕ್ಕೆ ಸೇರಿಸುತ್ತಾ ಆ ಮಹಾನ್ ಚೇತನದ ಶಕ್ತಿಗೆ ಸೋಲುತ್ತಾ ಬಂದೆ. ನನ್ನ ತಿಳುವಳಿಕೆ, ಆಲೋಚನಾ ಸರಣಿ, ಕ್ಲಿಷ್ಟಕರ ಸಮಯದಲ್ಲೂ ಎದೆಗುಂದದ ಗಟ್ಟಿತನ ನನ್ನಲ್ಲಿ ಬೆಳೆದು ಬಂದದ್ದು ಅವರ ಕೃತಿಗಳನ್ನು ಓದಿದುದರಿಂದ ಎಂದು ಹೆಮ್ಮೆಯಿಂದ ಹೇಳಿಕೊಳ್ಳುತ್ತೇನೆ.

ಅವರು ಮನುಷ್ಯನ ಭಾವಕೋಶವನ್ನು ತಮ್ಮ ಲೇಖನಿಯಿಂದ ಅರಳಿಸಿದಂತೆ, ಬೇರಾವ ಸಾಹಿತಿಯಿಂದ ಆಗಿರಲಾರದು, ಮುಂದೆ ಅಗಲಾರದು. ಪ್ರತಿ ಕಾದಂಬರಿಯೂ ಅಪಾರ ಜೀವನದರ್ಶನ ಮಾಡಿಸುತ್ತವೆ. ಮೊದಲು ಮೊದಲು ಓದಿದ ವಂಶವೃಕ್ಷ, ಆ ನಂತರ ಧರ್ಮಶ್ರೀ, ತಬ್ಬಲಿಯು ನೀನಾದೆ ಮಗನೆ, ಪರ್ವ, ಮಂದ್ರ, ಸಾಕ್ಷಿ, ಕವಲು ಇತ್ಯಾದಿ. ಕೆಲವು ವರ್ಷದ ನಂತರ ನನ್ನದೇ ಸಂಗ್ರಹದಲ್ಲಿ ಮೊದಲ ಸ್ಥಾನ ಪಡೆದ ಕೃತಿಗಳೆಂದರೆ ಭೈರಪ್ಪನವರದೇ. ನಂತರ ಬಂದವರು ಕುವೆಂಪು, ಕಾರಂತರು ಮತ್ತೆಲ್ಲಾ ಗಣ್ಯ ಸಾಹಿತಿಗಳ ಪುಸ್ತಕಗಳು.

ಸಾರ್ಥ, ಆವರಣ, ಮಂದ್ರ, ತಂತು, ಜಲಪಾತ, ಗೃಹಭಂಗ ಗಳಂತಹ ಕೃತಿಗಳನ್ನು ಓದಿದ ಮೇಲಂತೂ ನಾನು ನಾನಾಗಿರಲಿಲ್ಲ, ಅಷ್ಟೊಂದು ಭಾವ ತೀವ್ರತೆಗೊಳಗಾಗಿದ್ದೆ. ನಮ್ಮ ಧರ್ಮದ ಬಗ್ಗೆ ನನಗೆ ಮತ್ತೂ ಹೆಚ್ಚಿನ ಅಭಿಮಾನ, ಹೆಮ್ಮೆಗಳು ಅವರ ಆವರಣ ಕೃತಿಯಿಂದ ಉಂಟಾಯಿತೆಂದರೆ ಅತಿಶಯೋಕ್ತಿಯಲ್ಲ.

ಒಂದೊಂದೂ ಕೃತಿಯೂ ಅಪ್ರತಿಮ, ಅನುಪಮ ಹೋಲಿಕೆಗೆ ಸಿಗಲಾರದಂತಹವು. ಅವರ ಕೃತಿಗಳನ್ನು ಓದಲುಪಕ್ರಮಿಸಿದರೆ ಒಂದು ಸಾಲನ್ನೂ ಬಿಡದೆ ಓದಬೇಕು, ಹಾಗಿದ್ದರೆ ಮಾತ್ರ ಮುಂದಿನ ಭಾಗ ನಮ್ಮನ್ನು ತಟ್ಟಲು ಸಾಧ್ಯವಾಗುವುದು.

ಆ ಹಿರಿಯರು ಇದ್ದ ಕಾಲದಲ್ಲಿ ನಾವಿದ್ದೆವು ಎನ್ನುವುದೇ ಸಂತಸದ ವಿಚಾರ.

2015-16ರಲ್ಲಿ ನಾನು ಕೆನರಾ ಬ್ಯಾಂಕ್, ಕುವೆಂಪುನಗರ, ಮೈಸೂರು ಶಾಖೆಯಲ್ಲಿ ಕಾರ್ಯ ನಿರ್ವಹಿಸುವಾಗ, ಶ್ರೀ ಭೈರಪ್ಪನವರು ನಮ್ಮ ಗೌರವಾನ್ವಿತ ಗ್ರಾಹಕರು. ಅವರು ಕೌಂಟರಿನ ಒಳಗೇ ಬಂದು ಚೆಕ್ಕು ನೀಡಿ ಹಿಂಬದಿಯಲ್ಲಿದ್ದ ಕುರ್ಚಿಯಲ್ಲಿ ಗಂಭೀರವಾಗಿ ಕುಳಿತುಕೊಳ್ಳುತ್ತಿದ್ದರು. ಕೂಡಲೇ ಮಹಿಳಾಮಣಿಗಳೇ ಹೆಚ್ಚಿದ್ದ ನಮ್ಮ ಶಾಖೆಯಲ್ಲಿ, ಎಲ್ಲರೂ ಬಂದು ಅವರಿಗೆ ನಮಸ್ಕರಿಸಿ, ಉಭಯ ಕುಶಲೋಪರಿ ಮಾತನಾಡಿಸಿ ಹೋಗುತ್ತಿದ್ದರು. ಬ್ಯಾಂಕಿನಲ್ಲಿ ಇರುವಷ್ಟು ಹೊತ್ತೂ, ಸಭ್ಯ, ಗಂಭೀರ, ನಡೆಯ ಭೈರಪ್ಪನವರನ್ನು ಮೆಚ್ಚದಿರಲು ಸಾಧ್ಯವೇ ಇಲ್ಲ.

ನನಗೆ ಮೊತ್ತ ಮೊದಲು ಅವರನ್ನು ನೋಡಿ ಸಂತೋಷಕ್ಕೆ ಪಾರವೇ ಇಲ್ಲ. ಅವರ ಚೆಕ್‌ನ್ನು ನಾನೇ ವೆರಿಫೈ ಮಾಡಿ ಕಳಿಸಬೇಕಿತ್ತು. ಕೂಡಲೇ ಹಣ ತೆಗೆದುಕೊಂಡು ಅವರಲ್ಲಿಗೇ ಹೋಗಿ ಕೊಟ್ಟು ನಮಸ್ಕರಿಸಿದೆ. ನಿಮ್ಮ ಸಾಹಿತ್ಯವನ್ನು ಅಪಾರವಾಗಿ ಮೆಚ್ಚುತ್ತೇನೆ, ನಿಮ್ಮನ್ನು ಕಂಡದ್ದು ನನ್ನ ಭಾಗ್ಯವೇ ಸರಿ ಎಂದೆ. ಕೂಡಲೇ ಕೇಳಿದರು ಯಾವ ಯಾವ ಕೃತಿಗಳನ್ನು ಓದಿರುವಿರಿ, ಯಾವುದರಿಂದ

ನೀವು ಪ್ರಭಾವಿತರಾಗಿ ಹೀಗೆ ಹೇಳುತ್ತಿದ್ದೀರಿ ಎಂದು. ಕೃತಿಗಳ ಹೆಸರು ಹೇಳಿದೆ, ಅದರಲ್ಲೂ ಆವರಣ ನನ್ನನ್ನು ತುಂಬಾ ಭಾವತೀವ್ರತೆಗೊಡ್ಡಿದ ಕಾದಂಬರಿ ಎಂದೆ. ನನ್ನ ಮಾತಿನಲ್ಲಿ ವಿಶ್ವಾಸ ಮೂಡಿತು.

ಹಾಗೇ ನನಗೆ ಇಷ್ಟವಾಗದ ಯಾನ ಮತ್ತು ಉತ್ತರಕಾಂಡ ದ ಬಗ್ಗೆಯೂ ಹೇಳಿದೆ. ವಿವರಣೆ ಕೇಳಿದರು. ಯಾನದ ಬಗ್ಗೆ ಹೇಳಿದೆ. ಆ ಕೂಡಲೇ ಇನ್ನು ಐವತ್ತು ವರ್ಷಗಳಲ್ಲಿ ಅಂತಹ ಪ್ರಸಂಗಗಳು ನಡೆಯುವ ಸಾಧ್ಯತೆ ಬಹಳವೇ ಇದೆಯೆಂದು ಕೃತಿಯ ಕುರಿತು ಹೇಳಿದರು.

ಶ್ರೀ ಸ್ಟೀಫನ್ ಹಾಕಿಂಗ್ಸ್ ಇವರು ನಿಮಗೆ ತಿಳಿದಿರುವಂತೆ ಅಸಾಧಾರಣ ವ್ಯಕ್ತಿ, ಕೈಕಾಲುಗಳನ್ನು ಆಡಿಸಲಾಗದ, ಅದೆಷ್ಟೋ ವರ್ಷಗಳು ಕುರ್ಚಿಯಲ್ಲೇ ಕುಳಿತು, ಕೇವಲ ತಮ್ಮ ಕೈಬೆರಳಿನಿಂದಲೇ ಸಾಕಷ್ಟು ಸಂಶೋಧನಾ ವಿವರಣೆಗಳನ್ನು, ಪ್ರಬಂಧಗಳನ್ನು ಬರೆದ ವಿಜ್ಞಾನಿ. ಶ್ರೀ ಭೈರಪ್ಪ ನವರು ಸ್ಟೀಫನ್ ಅವರ ಹೆಸರನ್ನು ಉದ್ಧರಿಸಿ, ಅವರೂ ತಮ್ಮ ಸಂಶೋಧನೆಯಲ್ಲಿ ಈ ಮಾತುಗಳನ್ನು ಹೇಳಿದ್ದಾರೆ. ಹೀಗೆಂದು ತಮ್ಮ ಕೃತಿಯ ಬಗ್ಗೆ ಸಮರ್ಥನೆ ನೀಡಿದ ಆ ಮಹಾನ್ ಲೇಖಕರನ್ನು ಏನೆಂದು ಬಣ್ಣಿಸಲಿ.

ಇಂದು ಕಾಲನ ನಿಯಮದಂತೆ ಭೈರಪ್ಪನವರು ಭೌತಿಕವಾಗಿ ನಮ್ಮಿಂದ ಅಗಲಿದ್ದಾರೆ. ಕನ್ನಡ ಭಾಷೆ ಇರುವವರೆಗೆ, ಅವರ ಕೃತಿಗಳು ಅಜರಾಮರ. ಓದು ಬರೆಹ ಕಲಿತ ಪ್ರತಿಯೊಬ್ಬ ಕನ್ನಡಿಗನೂ ಭೈರಪ್ಪನವರ ಕೃತಿಗಳನ್ನು ಓದಬೇಕು, ಆ ಮೂಲಕ ಅವರನ್ನು ಸದಾ ನೆನೆಯುವಂತಾಗಬೇಕು.ಕನ್ನಡ ಸಾಹಿತ್ಯವನ್ನು ಅಜರಾಮರ ಕೃತಿಗಳಿಂದ ಬೆಳಗಿದ ಮಾನ್ಯ ಭೈರಪ್ಪನವರ ಆತ್ಮಕ್ಕೆ ಚಿರಶಾಂತಿ ದೊರೆಯಲಿ.

***

ಬದುಕಿನ ಸಾರ್ಥಕತೆ ಮೆರೆದ ಧೀಮಂತ

– ಪೂರ್ಣಿಮ ಭಗವಾನ್

ಬರೆದಂತೆ ಬದುಕಿದ, ಬದುಕಿದಂತೆ ಬರೆದ, ಆದರ್ಶ ವ್ಯಕ್ತಿತ್ವ ಹೊಂದಿರುವ ನಮ್ಮ ಕಾಲದ ಹಿರಿಯ ಮೇರು ಲೇಖಕರು, ಸಮಾಜ ಸೇವಾ ತತ್ಪರರು ಆದ ಶ್ರೀಯುತ. ಎಸ್.ಎಲ್.ಭೈರಪ್ಪನವರ ವ್ಯಕ್ತಿತ್ವವನ್ನು ಪದಗಳಲ್ಲಿ ಹಿಡಿದಿಡುವುದು ಕಷ್ಟ. ಆಕಾಶವನ್ನು ಅಳತೆ ಮಾಡಲು ಹೊರಟಹಾಗೆ.

2025ರ ಜೂನ್ 14ರಂದು ಉದ್ಘಾಟನೆಯಾದ ಭೈರಪ್ಪ ಪ್ರತಿಷ್ಠಾನದ ಧ್ಯೇಯ, ಉದ್ದೇಶಗಳು ಈಡೇರಲಿ. ಈ ಸಂದರ್ಭದಲ್ಲಿ ಪುರಂದರ ದಾಸರ ಕೆರೆಯ ನೀರನು ಕೆರೆಗೆ ಚೆಲ್ಲಿ ಎನ್ನುವ ಹಾಡು ನೆನಪಾಗುತ್ತಿದೆ. ಸರಸ್ವತಿಯ ವರಪುತ್ರ ಭೈರಪ್ಪನವರು ತಮ್ಮೆಲ್ಲಾ ಗೌರವಧನ, ಸಂಪಾದನೆಯನ್ನು ಸಮಾಜಸೇವೆಗೆ ಮುಡಿಪಾಗಿಟ್ಟಿದ್ದಾರೆ. ತನ್ನೂರಾದ ಸಂತೆಶಿವರದಲ್ಲಿ ವಿಶಾಲವಾದ ಕೆರೆ ಕಟ್ಟಿಸಿ ಅಲ್ಲಿನ ಜನರಿಗೆ ಅನುಕೂಲ ಮಾಡಿಕೊಟ್ಟಿದ್ದಾರೆ. ಮೇರು ವ್ಯಕ್ತಿತ್ವದ ಸಾಹಿತಿ ಭೈರಪ್ಪನವರನ್ನು ಸ್ಮರಿಸಿ ಅವರ ಆದರ್ಶಗಳನ್ನು ಮೈಗೂಡಿಸಿಕೊಂಡಾಗ ಜೀವನ ಪಾವನ. ಸಾವನ್ನು ಶಾಂತವಾಗಿ ಸ್ವೀಕರಿಸುವ ಸ್ವಭಾವ ಕಲಿಸುವುದೇ ಬದುಕು ಎನ್ನುವ ದಾರ್ಶನಿಕತೆಯನ್ನು ಜೀವನದಲ್ಲಿ ಅಳವಡಿಸಿಕೊಳ್ಳುವುದು ಎಷ್ಟು ಜನರಿಗೆ ಸಾಧ್ಯ. ಅಂತಹ ಧೀಮಂತ ವ್ಯಕ್ತಿಯನ್ನು ಸ್ಮರಿಸುವುದರ ಜೊತೆಗೆ ಅಲ್ಪಸ್ವಲ್ಪವಾದರೂ ಜೀವನದಲ್ಲಿ ಅಳವಡಿಸಿಕೊಂಡು ಬದುಕನ್ನು ಪಾವನವಾಗಿಸೋಣ.

***

ಭೈರಪ್ಪ ಎಂಬ ಬೆರಗು

– ಸುನೀಲ್ ಹಳೆಯೂರು

ಬದುಕುವುದು ವೈಯುಕ್ತಿಕ ಸ್ವಾತಂತ್ರ್ಯ. ತನ್ನ ಸುತ್ತಲಿನ ವ್ಯವಸ್ಥೆ, ತಾನು ಬದುಕಿದ್ದ ಕಾಲಮಾನದ ಪ್ರಭಾವದಿಂದಾಗಿ ವ್ಯಕ್ತಿಯ ಸಾಮರ್ಥ್ಯ ಮತ್ತು ದೌರ್ಬಲ್ಯಗಳು ನಿರ್ಧರಿಸಲ್ಪಡುತ್ತವೆ. ಇವೆಲ್ಲರ ಗ್ರಹಿಕೆಯೇ ಆ ವ್ಯಕ್ತಿಯ ಬದುಕನ್ನು ರೂಪಿಸುತ್ತದೆ.

ಹೀಗೊಂದು ಮಾತಿದೆ.....

ಬದುಕುತ್ತಾ ಹೋಗಿ
ಬದುಕೇ ನಿರ್ಧರಿಸುತ್ತದೆ
ನೀವು ಯಾರೆಂದು

ಈ ಮಾತಿಗೆ ತಕ್ಕ ಹಾಗೆ ಅರ್ಥಪೂರ್ಣವಾಗಿ ಬದುಕಿದವರು ನಮ್ಮ ಹೆಮ್ಮೆಯ ವಿಶ್ವ ಮಾನ್ಯ ಸಾಹಿತಿ ದಿವಂಗತ ಡಾ.ಎಸ್.ಎಲ್. ಭೈರಪ್ಪ ಅವರು.

ಬಾಲ್ಯದಿಂದ ಮೊದಲುಗೊಂಡು ಕೊನೆಯ ಉಸಿರು ಇರುವವರೆಗೂ ಅವರದ್ದು ದಿಟ್ಟತನದ ಅರ್ಥಪೂರ್ಣ ಬದುಕು. ಬಾಲ್ಯದಲ್ಲೇ ಪ್ಲೇಗ್ ಮಹಾಮಾರಿಯಿಂದ ತನ್ನ ಕುಟುಂಬದ ಸದಸ್ಯರನ್ನು ಕಳೆದುಕೊಂಡು; ಬದುಕಲು, ವಿದ್ಯಾಭ್ಯಾಸ ಮುಂದುವರೆಸಲು ಅವರು ಮಾಡಿದ ಸಾಹಸ ಅಷ್ಟಿಷ್ಟಲ್ಲ.

ಹಲವಾರು ಸಮಸ್ಯೆ ಸವಾಲುಗಳ ನಡುವೆಯೂ ತನ್ನ ವಿದ್ಯಾಭ್ಯಾಸವನ್ನು ಮುಂದುವರಿಸಿ ಉನ್ನತ ವಿದ್ಯಾಭ್ಯಾಸವನ್ನು ಪಡೆದ ಭೈರಪ್ಪನವರು ಉನ್ನತ ಹುದ್ದೆಯನ್ನೂ ಅಲಂಕರಿಸಿದವರು.

ತನ್ನ ವೃತ್ತಿ ಜೀವನದಲ್ಲಿ ಹಲವಾರು ಸ್ಥಳಗಳಲ್ಲಿ ವಾಸಿಸುತ್ತಾ ಅಲ್ಲಿಯ ಸಂಸ್ಕೃತಿ ಸಂಪ್ರದಾಯಗಳನ್ನ ಬಹಳ ಸೂಕ್ಷ್ಮವಾಗಿ ಅವಲೋಕಿಸಿದವರು. ಅವರು ಸೃಷ್ಟಿಸಿದ ಸಾಹಿತ್ಯ; ಅಧ್ಯಯನಶೀಲತೆಯಿಂದ ಮತ್ತು ಅನುಭವದಿಂದ ಕೂಡಿದೆ. ತಾನು ಏನೇ ಬರೆದರೂ ಅದನ್ನು ಸಮಾಜ ಓದುತ್ತದೆ ಎಂಬ ಧೋರಣೆ ಇಟ್ಟುಕೊಳ್ಳದೆ ತಾನು ಬರೆದಿದ್ದು ಸತ್ಯ ಮತ್ತು ವಾಸ್ತವಿಕತೆಯಿಂದ ಕೂಡಿರಬೇಕು ಎಂದು ಬರೆದವರು ಹಾಗೂ ಬದುಕಿದವರು ಭೈರಪ್ಪನವರು.

ನಾನು ಇಲ್ಲಿ ಅವರ ಕಾದಂಬರಿಗಳ ಬಗ್ಗೆ ಆಗಲಿ, ಅವರ ಸೃಷ್ಟಿಸಿದ ಸಾಹಿತ್ಯದ ಬಗೆಗಾಗಲಿ, ಬರೆಯಲು ಹೋಗುವುದಿಲ್ಲ. ಕಾರಣ ಹೆಚ್ಚಿನ ಅಂಶ ಸಾಹಿತ್ಯ ಆಸಕ್ತರಿಗೆ ಭೈರಪ್ಪನವರ ಬರವಣಿಗೆಯ ಕುರಿತಾದ ಅರಿವು ಇದ್ದೇ ಇರುತ್ತದೆ.

ಹುಟ್ಟಿದ ಊರನ್ನು ಸದಾ ನೆನೆಸುತ್ತಿದ್ದ ಅವರು, ತಾನು ಹುಟ್ಟಿದ ಊರಿಗಾಗಿ ಏನಾದರೂ ಉಪಕಾರ ಮಾಡಬೇಕೆಂದು ಪಣತೊಟ್ಟವರು. ತನ್ನ ಊರಿಗಾಗಿ ಏತ ನೀರಾವರಿಯ ಮೂಲಕ ನೀರನ್ನು ತಂದು ಊರಿನ ಕೆರೆಯನ್ನು ತುಂಬಿಸುವುದರ ಮೂಲಕ ಸುತ್ತಲಿನ ಹತ್ತಾರು ಹಳ್ಳಿಗಳ ಅಂತರ್ಜಲ ಹೆಚ್ಚಲು ಕಾರಣೀಭೂತರಾದವರು ಭೈರಪ್ಪನವರು. ಈ ಪ್ರಯತ್ನದಲ್ಲಿ ಅವರು ಸರ್ಕಾರದ ಎಡತಾಕಿ ಅಧಿಕಾರಿ ರಾಜಕಾರಣಿಗಳ ಮೂಲಕ ನಿರಂತರ ಪ್ರಯತ್ನವನ್ನು ಸಾಧಿಸಿ ಏತ ನೀರಾವರಿ ಯೋಜನೆಯನ್ನು ಸಾಕಾರಗೊಳಿಸಿದ ಕೀರ್ತಿ ಅವರದ್ದು.

ಹಲವಾರು ಸಂಘ ಸಂಸ್ಥೆಗಳಿಗೆ, ವಿದ್ಯಾಭಿವೃದ್ಧಿ ಕಾರ್ಯಗಳಿಗೆ, ಬಡ ವಿದ್ಯಾರ್ಥಿಗಳಿಗೆ ಹಣಕಾಸಿನ ನೆರವು ನೀಡಿ ಅವರ ಬದುಕಿನಲ್ಲಿ ನೆಮ್ಮದಿಯನ್ನು ಕಲ್ಪಿಸಿಕೊಟ್ಟವರು ಭೈರಪ್ಪನವರು.

ಒಬ್ಬ ವ್ಯಕ್ತಿ ತನ್ನ ಭಾವನೆಗಳನ್ನು, ತಾನು ನೋಡಿದ, ಅನುಭವಿಸಿದ ಬದುಕನ್ನು ಯಾವ ರೀತಿಯಲ್ಲಾದರೂ ಪ್ರಕಟಿಸಬಹುದು, ಅದು ಆತನ ವೈಯಕ್ತಿಕ ಸ್ವಾತಂತ್ರ್ಯ. ತನ್ನ ಸಮೃದ್ಧ ಸಾಹಿತ್ಯದ ಮೂಲಕ ಸಮಾಜದ ಅಂಕುಡೊಂಕುಗಳನ್ನು ಬಿಂಬಿಸುವ ಪ್ರಯತ್ನವನ್ನು ಮಾಡಿದ್ದರ ಜೊತೆಗೆ ನಮ್ಮ ಸಮಾಜದಲ್ಲಿರುವ ಶ್ರೇಷ್ಠ ವಿಚಾರಗಳನ್ನು ಕೂಡ ತನ್ನ ಬರಹಗಳ ಮೂಲಕ ವ್ಯಕ್ತಪಡಿಸಿದ್ದು ಭೈರಪ್ಪನವರ ಹೆಗ್ಗಳಿಕೆ.

ಭೈರಪ್ಪನವರು ಹಾಗೆ ಬದುಕಬೇಕಿತ್ತು, ಹೀಗೆ ಬದುಕಬೇಕಿತ್ತು ಎನ್ನುತ್ತಾ ನಮ್ಮ ನಮ್ಮ ವೈಯಕ್ತಿಕ ಅಭಿಪ್ರಾಯಗಳನ್ನು ಹೇಳುವುದರ ಬದಲು ಅವರು ಆಯ್ಕೆ ಮಾಡಿಕೊಂಡ ಅವರದ್ದೇ ಬದುಕನ್ನು ಗೌರವಿಸುವುದು ಒಳಿತು. ತನ್ನ ಬದುಕನ್ನು ಸಾರ್ಥಕವಾಗಿ ಬದುಕಿದ್ದು ಭೈರಪ್ಪನವರ ಅಸಾಧಾರಣ ವ್ಯಕ್ತಿತ್ವಕ್ಕೆ ಸಾಕ್ಷಿ.

***

ಗಝಲ್

– ಡಾ. ಗೋವಿಂದ ಹೆಗಡೆ

ನಾಯಿ– ನೆರಳುಗಳ ದಾಟಿದ್ದಕ್ಕೆ ಯಾವ ಸಾಕ್ಷಿ
ಆವರಣದ ನಿರಾಕರಣಕ್ಕೆ ಯಾವ ಸಾಕ್ಷಿ

ತಬ್ಬಲಿಯು ನೀನಾದೆ ಮಗನೇ ನೆಲೆಯೆಲ್ಲಿ
ಉತ್ತರಕಾಂಡದ ಅನ್ವೇಷಣಕ್ಕೆ ಯಾವ ಸಾಕ್ಷಿ

ಗೃಹಭಂಗದಲ್ಲೂ ಮಿಡಿದ ಧರ್ಮಶ್ರೀಯ ಮಂದ್ರ
ಕವಲುದಾರಿಯ ಸಾರ್ಥ ಯಾನಕ್ಕೆ ಯಾವ ಸಾಕ್ಷಿ

ವಂಶವೃಕ್ಷದ ನೆರಳಲ್ಲೂ ದೂರ ಸರಿದರು ಸಖೀ
ಜಲಪಾತದ ಸ್ವನ ಪರ್ವಕ್ಕೆ ಯಾವ ಸಾಕ್ಷಿ

ಭಿತ್ತಿಯ ಅಂಚಿಗೆ ಇದೆ ಸತ್ಯ ಮತ್ತು ಸೌಂದರ್ಯ
'ಜಂಗಮ'ನೆದೆಯ ತಂತು ಮೀಟಿದ್ದಕ್ಕೆ ಯಾವ ಸಾಕ್ಷಿ

***

ಸಾಹಿತ್ಯಲೋಕದ ಧ್ರುವತಾರೆ

– ಪೂರ್ಣಿಮ ಭಗವಾನ್

ಬರವಣಿಗೆ ವೈಖರಿಗೆ ತಮಗೆ ತಾವೇ ಸಾಟಿ
ಸರಸತಿಯ ವರಪುತ್ರ ಭೈರಪ್ಪನವರು
ಗರಿಮೆ ದರ್ಶನ ಹಿರಿಮೆ ಶಾಶ್ವತದ ಬರಹಗಳು
ಚಿರನೂತನವು ನೆನಪು ನೇತ್ರತನಯೆ

ಭಿತ್ತಿಯಲಿ ಬಿತ್ತಿದರು ಆತ್ಮಕಥೆ ನೆನಪುಗಳ
ಹೊತ್ತಿಸುತ ಕನ್ನಡದ ದೀವಿಗೆಯ ಜಗದಿ
ಮತ್ತೆ ಮತ್ತೇ ಓದಿಸುವ ಪಾತ್ರ ಚಿತ್ರಣದಿ
ಚಿತ್ತದಲಿ ಚಿರಕಾಲ ನೇತ್ರತನಯೆ

ಐರಾವತವು ತನ್ನ ಲೋಕವನು ಸೇರಿತೇ
ಭೈರಪ್ಪನವರಗಲಿಕೆಯು ನಷ್ಟ ಜಗಕೆ
ಸಾರಭರಿತವು ಅವರ ಸಾಹಿತ್ಯ ಕೊಡುಗೆಗಳು
ಭಾರತದ ಧ್ರುವತಾರೆ ನೇತ್ರತನಯೆ

ಹಿಂದಿಲ್ಲ ಮುಂದಿಲ್ಲ ಸರಿಸಮರು ಲೋಕದಲಿ
ಗಂಧ ಕಂಪನು ನೀಡಿ ತಾ ಸವೆದ ತೆರದಿ
ಬಂದಿರುವ ಬರುವಂತ ಹಣದ ಸದ್ವಿನಿಯೋಗ
ಸಂದೇಶ ಅನವರತ ನೇತ್ರತನಯೆ

ಸಿರಿತನದ ಹಂಗಿರದೆ ಹಿರಿತನವ ಗಳಿಸಿದರು
ಕರೆದು ನೀಡುವ ಮನವು ಎಷ್ಟು ಜನಕಿಹುದು
ಬರಿದೆ ನುಡಿಯದೆ ಮಾಡಿ ತೋರಿಸಿದ ಧೀಮತಿಯು
ಮರೆಯಲುಂಟೇ ಅವರ ನೇತ್ರತನಯೆ.

***

ಭೈರಪ್ಪನವರ ಕೃತಿಗಳಲ್ಲಿ ಹಾಸ್ಯವಿದೆಯೇ?

– ಎಂ.ಎಸ್.ನರಸಿಂಹ ಮೂರ್ತಿ

ನೀನು ನಿಸ್ಸೀಮ!

23 ವರ್ಷಗಳ ಹಿಂದೆ ಭೈರಪ್ಪನವರ ಅಭಿನಂದನಾ ಗ್ರಂಥಕ್ಕೆ ಪ್ರಕಾಶಕ ಗೌರಿ ಸುಂದರ್ ನನ್ನಿಂದ ಲೇಖನ ಕೇಳಿದರು, ಇದು ಆಗ ನಾನು ಬರೆದ ಲೇಖನ.

ಈ ಪುಸ್ತಕ ಬಿಡುಗಡೆ ಆಗಿದ್ದು ಬೆಂಗಳೂರಿನ ಹನುಮಂತನಗರದಲ್ಲಿ. ಬಿಡುಗಡೆ ಸಂದರ್ಭದಲ್ಲಿ ಗ್ರಂಥದ ಎಲ್ಲ ಲೇಖಕರಿಗೆ ಭೈರಪ್ಪನವರ ಜೊತೆ ಊಟಕೂಟ ಏರ್ಪಡಿಸಿದ್ದರು. 'ಭೈರಪ್ಪನವರ ಕೃತಿಗಳಲ್ಲಿ ಹಾಸ್ಯವಿದೆಯೇ?' ಎಂಬ ನನ್ನ ಲೇಖನ ಓದಿದ ಭೈರಪ್ಪ ನವರು ಮುಗುಳ್ನಕ್ಕು, "ನೀನು ಅಸಾಧ್ಯ ಇದ್ದೀಯ. ಇಲ್ಲದೆ ಇರೋದನ್ನ ಹುಡುಕಿ ತೆಗೆಯೋದ್ರಲ್ಲಿ ನಿಸ್ಸೀಮ, ಲೇಖನ ಚೆನ್ನಾಗಿದೆ" ಎಂದಿದ್ದರು.

23 ವರ್ಷಗಳ ಹಿಂದಿನ ಪುಸ್ತಕದ ಮುದ್ರಿತ ಪುಟಗಳನ್ನು ಅಕ್ಷರ ರೂಪಕ್ಕೆ ಪರಿವರ್ತಿಸಿಕೊಟ್ಟ ಶ್ರೀ ಜಿ.ಎನ್. ನರಸಿಂಹಮೂರ್ತಿ, ಕಾರ್ಯದರ್ಶಿ, ಕನ್ನಡ ಗಣಕ ಪ್ರತಿಷ್ಠಾನ ಅವರಿಗೆ ವಂದನೆಗಳು

– ಎಂ.ಎಸ್. ನರಸಿಂಹ ಮೂರ್ತಿ

ಭೈರಪ್ಪನವರ ಕೃತಿಗಳಲ್ಲಿ ಹಾಸ್ಯ ಹುಡುಕುತ್ತಿದ್ದೇನೆ ಎಂದಾಗ ಗೆಳೆಯರು ನನ್ನನ್ನು ಕನಿಕರದಿಂದ ನೋಡಿದ್ದುಂಟು. ಚಿನ್ನದ ಅಂಗಡಿಯಲ್ಲಿ ಚಿತ್ರಾನ್ನ ದೊರೆಯುವುದಿಲ್ಲ ಎಂದವರುಂಟು. ಚಿನ್ನದ ಅಂಗಡಿಯವರಿಗೂ ಚಿತ್ರಾನ್ನದ ಆಸೆಯಿದ್ದರೂ ಅವರು ಪಕ್ಕದ ಹೋಟೆಲ್ಲಿಗೆ ಹೋಗಿ ಬಂದುಬಿಡುತ್ತಾರೆ. ಸ್ವತಃ ತಯಾರಿಸಬೇಕಾದ ಅವಶ್ಯಕತೆಯಾಗಲಿ, ಸಮಯವಾಗಲಿ ಇರುವುದಿಲ್ಲ.

ಆದರೆ ಬೈಪ್ರಾಡೆಕ್ಟ್ ಎಂಬುದು ಇದೆ. ಚಿನ್ನವನ್ನು ಅದಿರಿನಿಂದ ತೆಗೆಯುವಾಗ ಅಯಾಚಿತವಾಗಿ ಬೆಳ್ಳಿಯೂ ಬರುತ್ತದೆ. ಇದೇ ರೀತಿ ವೈಚಾರಿಕ ಕಾದಂಬರಿಗಳಲ್ಲಿ ಬೈಪ್ರಾಡೆಕ್ಟ್ ಆಗಿ ಭೈರಪ್ಪನವರ ಹಾಸ್ಯದ ಎಳೆಗಳನ್ನು ಗುರುತಿಸುವ ಪ್ರಯತ್ನವಿದು.

ನವರಸಗಳಿಲ್ಲದೆ ಮಹಾಕಾವ್ಯವನ್ನು ಬೈಂಡು ಮಾಡಿಸಲು ಆಗುವುದಿಲ್ಲ. ಆದರೆ ಭೈರಪ್ಪನವರ ಮಹಾ ಕಾದಂಬರಿಗಳಲ್ಲಿ ಹಾಸ್ಯಕ್ಕೆಂದೇ ಪಾತ್ರಗಳಾಗಲಿ, ಸನ್ನಿವೇಶಗಳಾಗಲಿ ಅಧ್ಯಾಯಗಳಾಗಲಿ ಮೀಸಲಾಗಿಟ್ಟಿಲ್ಲ. ಕಾದಂಬರಿಗೆ ವಸ್ತುವನ್ನು ನೇರವಾಗಿ ಬದುಕಿನಿಂದಲೇ ಹೆಕ್ಕಿ ತೆಗೆಯುವುದರಿಂದ ಕೆಲವೆಡೆ ಹಾಸ್ಯದ ಮಿಂಚು ಗೋಚರಿಸುತ್ತದೆ. ಹಾಸ್ಯ ಪ್ರತ್ಯೇಕವಾಗಿ ನಿಲ್ಲದೆ ಕಾದಂಬರಿಯ ಸಂವೇದನೆಯಲ್ಲಿ ಹಾಸುಹೊಕ್ಕಾಗಿ ಇರುವುದು ಇಲ್ಲಿನ ವಿಶೇಷ.

'ಗೃಹಭಂಗ'ದ ಪ್ರಾರಂಭದಲ್ಲೇ ಬರುವ ಪ್ಲೇಗ್ ಪ್ರಕರಣ ಸಹಜ ಸುಂದರವಾಗಿ ಮೂಡಿಬಂದಿದೆ. ವಾಸ್ತವವಾಗಿ ನಡೆಯುವ ಘಟನೆ ಗಂಭೀರವಾಗಿದ್ದರೂ ಆ ದೃಶ್ಯವನ್ನು ಮೂರನೆಯ ಕಣ್ಣಿಂದ ನೋಡಿದಾಗ ತಿಳಿಹಾಸ್ಯ ಮೂಡುತ್ತದೆ.

ನಾಗಲಾಪುರದ ಬೆಸ್ತರ ಕೇರಿಯಲ್ಲಿ ಇಲಿ ಬಿದ್ದಿತು. ಅಂದರೆ ಪ್ಲೇಗ್ ಮಾರಮ್ಮ ಊರಿಗೆ ಬರುತ್ತಾಳೆ. ಹರಕೆ ನೀಡದವರನ್ನು ನುಂಗಿ, ನೀರು ಕುಡಿಯುತ್ತಾಳೆ. ಪ್ಲೇಗ್ ಮಾರಮ್ಮ ಬರುವುದರೊಳಗೆ ಜನ ಮನೆ ಕೇರಿಗಳನ್ನು ಬಿಟ್ಟು ಊರ ಹೊರಗೆ ಹೊಲದಲ್ಲೋ, ತೋಟದಲ್ಲೋ ಸೋಗೆ ಗುಡಿಸಲು ಹಾಕಿಕೊಂಡು ಮೂರು ತಿಂಗಳು ಇರಬೇಕು.

ಗೋಡೆ ಮಾರಮ್ಮನವರು ತಲೆ ಮೇಲೆ ದೇವರನ್ನು ಹೊತ್ತು ತಂದರು. ರಟ್ಟೆ ದಪ್ಪದ ಮಾರುದ್ದದ ಸೆಣಬಿನ ಚಾವಟಿಯನ್ನು ಬೀಸಿ ತನ್ನ ಮೈಯಿಗೆ ಫಟಾರನೆ ಹೊಡೆದುಕೊಳ್ಳುತ್ತಾ ಮೈಗೆ ಅರಶಿನ, ಕುಂಕುಮಗಳನ್ನು ಮೆತ್ತಿಕೊಂಡಿದ್ದ ಅಮ್ಮನವನು ಗೂಡೆ ಹೊತ್ತು ಬಂದ. ಅವನ ಹಿಂದೆ ಅವನ ಹೆಂಡತಿ ಕಣಿ ಹೇಳುತ್ತಿದ್ದಳು.

'ಸುತ್ತ ಅರವತ್ತ ನಾಲ್ಕು ಹಳ್ಳಿಯಾಗೆ ಅಮ್ಮ ಕಾಣಿಸಿಕೊಂಡವ್ಳೆ! ಧೂಳಿ ದುಪ್ಪಟ ಮಾಡತವ್ಳೆ! ತಾಯೀರ ಬಿಟ್ಟು ಮಗೂನ ತಿಂತವವ್ಳೆ! ಮಕ್ಕಳ ತಾಯಿರ ಎಳಕೊಂಡು ಹೋಗ್ತವ್ಳೆ! ಸೋಬನವಾಗದ ಹುಡುಗೀ ತಿಂತವ್ಳೆ! ಸೋಬನಕ್ಹೋದ ಗಂಡಿನ ಮುಂಡಿಗೆ ಮುರಿದವ್ಳೆ! ಬಸಿರ ಹೆಂಗಸಿನ ಜೀವ ತೆಗದವ್ಳೆ'

“ಹಾ, ಲ.. ಲಲಲಲಲಲಲ ಛಟೀಚ್, ಛಟ್' ಎಂದು ನಡುನಡುವೆ ಗಂಡಸು ಚಾವಟಿಯಿಂದ ತನ್ನ ಬರಿಯ ಮೈಮೇಲೆ ಹೊಡೆದುಕೊಳ್ಳುತ್ತಿದ್ದ.

ಊರಿಗೆ ಊರೇ ಖಾಲಿಯಾಯಿತು. ಕಂಠಿ ಜೋಯಿಸರು ಒಬ್ಬರೇ ಉಳಿದರು. ವೀರಾಚಾರಿ ಅವರನ್ನು ಮಾತಾಡಿಸಲು ಬಂದ.

'ಏನು ವೀರಾಚಾರೀ, ಬಿಟ್ಟ ಊರೊಳಕ್ಕೆ ಬಂದುಬಿಟ್ಟೆ?”

“ನಿಮ್ಮನ್ನೇ ನೋಡಿಕೊಂಡು ಹೋಗಾನಾ ಅಂತ

'ಬಾ, ಬಾ, ಒಳಗೆ ಕೂತುಕೋ' ಎಂದರು ಕಂಠಿ ಜೋಯಿಸರು.

ವೀರಾಚಾರಿ ಒಳಗೆ ಬಂದು ಕುಳಿತ. ತಮ್ಮ ಆಸನದ ಹತ್ತಿರ ಕಂಠೀ ಜೋಯಿಸರು ನಾಲ್ಕು ಹಳೇ ಎಕ್ಕಡಗಳನ್ನು ಇಟ್ಟಿದ್ದರು. ವೀರಾಚಾರಿ ಗಮನಿಸಿ ಕೇಳಿದ:

“ಅಳೇ ಕೈಗೆ ತಗಂಡ್ ನಿಂತ್ಕಂಡ್ರೆ ಯಾವನಾದ್ರೂ ಮಾತು ಕೇಳ್ತಾನೆ'

“ಅದುಕ್ಕಲ್ಲ ಯೋಳಿದ್ದು, ಗಾಳಿ ಪೀಡೆ ಓಡಿಸ್ತದಂತೆ ಅದು'

'ಅದೂ ಆಗುತ್ತೆ. ನಾನು ಇಸ್ಕೊಂಡಿರೋದು ಮನುಷ್ಯರಿಗೆ'

ಹಳೆಯ ಎಕ್ಕಡಗಳನ್ನು ಮನುಷ್ಯರಿಗೆ ಹೊಡೆಯಲು ಇಟ್ಟುಕೊಂಡಿರುವ ಕಂಠೀ ಜೋಯಿಸನ ಮನೆಯ ಹೆಂಚನ್ನು ಯಾರಾದರೂ ಮುರಿದರೆ ಸುಮ್ಮನೆ ಬಿಟ್ಟಾನೆಯೇ?

ವೀರಾಚಾರಿ ಜೊತೆ ಕೂತಿದ್ದಾಗ ಜೋಯಿಸರಿಗೆ ಮಗಳ ನೆನಪು ಬಂತು.

'ನಾನು ಮಗಳ್ನ ಹೋಗಿ ನೋಡಿಯೇ ಇಲ್ಲ. ಆ ಬದ್ಮಾಷ್ ಶಾಮಣ್ಣ ಪಂಚಾಯ್ತೀಲಿ ಕಟ್ಟು ಮಾಡಿಸಿದ ಅಂತ ನಾನ್ಯಾಕೆ ಹೆದರಿಕೊಂಡು ಅಲ್ಲಿಗೆ ಹೋಗದೆ ಇರಬೇಕು? ನಾಳೆ ಹೋಗಿ ನೋಡ್ಕೊಂಡೇ ಬತ್ತೀನಿ. ಅವನು ನನ್ನತಾವ ಅದೇನು ಕಿತ್ಕತಾನೋ ನೋಡ್ಞೋಣ. ಅಷ್ಟೇನಾದ್ರೂ ಗುರ್ ಅಂದ್ರೆ ಚಮ್‌ಡ ನಿಕಾಲ್ ಮಾಡ್ತೀನಿ. ಮಾದರ್ ಚೋದಂದು, ತನ್ನ ಪಂಚಾಯ್ತಿ ಕಟ್ಟಿಗೆ ಹೆದರ್ಕಂಡೇ ಕಂಠಿ ಬರಲಿಲ್ಲ ಅಂತ ತಿಳ್ಕೊಂಡು ಅವ್ನು ಮೀಸೆ ತಿರುವಕತ್ತಿರಬೌದು. ನನ್ನ ಉಚ್ಚೇಲಿ ಬೋಳಿಸಬೇಕು ಆ ಮಿಂಡ್ರಿಗೆ ಉಟ್ಟಿದ ಮಗನ ಮೀಸೇನ'

ಈ ಯೋಚನೆಯಲ್ಲಿದ್ದಾಗ ಮನೆಯ ಮೇಲೆ ಇಪ್ಪತ್ತು ಮೂವತ್ತು ಕಲ್ಲುಗಳು ರೊಂಯ್ ರೊಂಯ್ ಅಂತ ಬಿದ್ದು ಹೆಂಚುಗಳ ಪುಡಿಪುಡಿ ಮಾಡಿದರೆ ಜೋಯಿಸರು ಬಿಟ್ಟಾರೆಯೇ ಅವರನ್ನು ಅಟ್ಟಿಸಿಕೊಂಡು ಹೋದರು. ಒಬ್ಬ ಸಿಕ್ಕಿಬಿದ್ದ.

ಅವನ ಹೆಸರು ಜುಟ್ಟಗ, ಭಯದಿಂದ ನಡುಗುತ್ತಿದ್ದ. 'ಕಂಠಿ ಜೋಯಿಸರೆಂದರ ಒಂದು ಮಾರಮ್ಮನಿಗೆ ಸಮಾನ. ಬಿಟ್ಟ ಊರಲ್ಲಿ ಮಾರಮ್ಮ ಇದ್ದೇ ಇರುತ್ತಾಳೆ ಎಂದು ಅವನು ಕೇಳಿದ್ದ. ನಡುರಾತ್ರಿಯಲ್ಲಿ ತನ್ನನ್ನು ಹಿಡಿದು ಕೆಡವಿಕೊಂಡಿರುವುದು ಮಾರಮ್ಮನೋ ಅಥವಾ ಕಂಠಿ ಜೋಯಿಸರೋ ಎಂಬುದು ಅವನಿಗೆ ನಿಶ್ಚಯವಾಗಿ ತಿಳಿಯಲಿಲ್ಲ. ಕಂಠಿ ಜೋಯಿಸರೆಂದು ಸ್ಪಷ್ಟವಾಗಿ ತಿಳಿದಿದ್ದರೂ ಅವರೂ ಮಾರಮ್ಮ ಅಲ್ಲವೆಂದು ನಂಬಿಕೆಯಾಗುತ್ತಿರಲಿಲ್ಲ.'

ವಿಧವೆ ಗಂಗಮ್ಮ ತನ್ನ ತುಂಟ ಮಕ್ಕಳ ಬಗ್ಗೆ ಮಠದ ಅಯ್ಯನವರ ಬಳಿ ದೂರು ಹೇಳಿದ ರೀತಿಯೂ ಚೆನ್ನಾಗಿದೆ. ಅಯ್ಯನವರು ಭಜನೆ ಮುಗಿಸಿ ಕಣ್ಣು ತೆರೆದ ಕೂಡಲೇ ಗಂಗಮ್ಮ ಆಡಿದ ಮಾತುಗಳು ಇವು:

"ಈ ನನ್ನ ಸೂಳೆ ಮಕ್ಕಿಗೆ ಬುದ್ಧಿ ಬರಾದು ಯಾವತ್ತು ಮಾದೇಯ್ಯನೋರೆ?"

"ಗಂಗವ್ವಾ, ಬುದ್ದಿ ನಿಧಾನವಾಗಿ ಬತ್ತೈತೆ. ನೀವು ಒಳ್ಳೆ ಮಾತಾಡುದು ಮೊದಲು ಕಲೀರಿ"

"ನಾನೇನ್ ಕೆಟ್ ಮಾತಂದದ್ದು?"

"ಈ ಸೂಳೇಮಕ್ಕಿಗೆ ಅಂತ ಯಾಕ್ ಅಂತೀಯಾ? ನಮ್ಮ ಹುಡುಗರಿಗೆ ಅಂತನ್ನಿ" ತನ್ನ ಮಾತನ್ನು ತಿದ್ದಿಕೊಳ್ಳಲು ಮಾದೇವಯ್ಯನವರು ಗಂಗಮ್ಮನಿಗೆ ಹೇಳುತ್ತಿರುವುದು ಇದು ಮೊದಲ ಸಲವಲ್ಲ.

"ಮಠಕ್ಕೆ ಕಳಿಸಿದ್ರಲ ಅಪ್ಪಣ್ಣಯ್ಯನ್ನ, ಅಲ್ಲಿ ಅವನು ಓಚಯ್ಯನೋರನ್ನೇ ಸೂಳೇಮಗನೇ ಅಂತ ಬೈದು ಓಡಿ ಬಂದನಂತೆ. ಈ ಮಾತ್ರ ಅವನು ಎಲ್ಲಿ ಕಲ್ತುಕೊಂಡ?"

"ನನ್ನ ಹಣೆಬರಹ ಕಣ್ರೀ. ಅದೇ ಅವನ ಬಾಯಲ್ಲಿ ಹೀಗ್ ಆಡ್ಸುತ್ತೆ. ಆಮೇಲೆ ಆ ಸೂಳೇಮಗನ್ನ ಓಚಯ್ಯನೋರು ಸುಮ್ಮೆ ಬಿಟ್ರಾ?"

"ಅಲ್ಲಿಂದ ಓಡಿ ಬಂದಮೇಲೆ ಅಲ್ಲವಾ ಅಣ್ಣ ತಮ್ಮಂದಿರು ಹಂಚು ಒಡ್ಡದ್ದು?"

"ಈ ಮುಂಡೇ ಮಕ್ಕಳ ಮನೆತನ ಹಾಳಾಗ"

"ಮತ್ತೆ ಕೆಟ್ ಮಾತು ಆಡ್ತೀರಲ್ಲ ಗಂಗವ್ವಾ?"

ಇದೇ ಬಗೆಯ ಸಂಭಾಷಣೆ ಮುಂದುವರೆಯುತ್ತದೆ.

***

ಹಾಸ್ಯದ ಪ್ರಕಾರಗಳಲ್ಲಿ ಮೂದಲಿಕೆ ಮತ್ತು ನಿಂದೆಯೂ ಸೇರಿವೆ. ಇವೆರಡೂ ಒಂದೇ ವರ್ಗಕ್ಕೆ ಸೇರುತ್ತವೆ. ಇವುಗಳಿಗೆ ಮೂಲ ಎಂದರೆ ಬೈಗುಳ. ಮೂದಲಿಕೆಯಲ್ಲಿ ಚಮತ್ಕಾರ ಜನ್ಯವಾಗಿ ವ್ಯಂಗ್ಯ ಹಾಸ್ಯದ ಜೊತೆ ಬೆರೆತಿರುತ್ತದೆ. ಆದರೆ ನಿಂದೆಯಲ್ಲಿ ಮಾತು ನೇರ. ಮಾಡಿದ ತಪ್ಪನ್ನು ಕುರಿತು ಸಂಸ್ಕಾರ ಜನ್ಯವಾದ ಭಾಷೇಲಿ ಬಯ್ಯುವುದನ್ನು ನಾವು ಕಾಣಬಹುದು.

'ನಿರಾಕರಣ' ಕೃತಿಯಲ್ಲಿ ಹೊಗೆಸೊಪ್ಪು ಅಂದರೆ ವೇಶ್ಯೆ ಎಂಬುದಕ್ಕೆ ಸೊಗಸಾದ ನಿದರ್ಶನವಿದೆ.

ನರಹರಿಗಿಂತ ಒಂದೆರಡು ವರ್ಷ ಹೆಚ್ಚು ವಯಸ್ಸಿನ ರಾಮಕೃಷ್ಣ ಎಸ್.ಎಸ್.ಎಲ್.ಸಿ. ಓದಿ ತಿಂಗಳಿಗೆ ಇನ್ನೂರೈವತ್ತು ರೂಪಾಯಿ ಸಂಬಳ ದುಡಿಯುತ್ತಿದ್ದ. ಒಂದು ದಿನ ಸಂಜೆ ರಾಮಕೃಷ್ಣ ನರಹರಿಯ ರೂಮಿಗೆ ಕುಡಿದು ಬಂದ. ನರಹರಿ ಬುದ್ಧಿಮಾತು ಹೇಳಿದ.

"ಕುಡಿದರೆ ತಪ್ಪಿಲ್ಲ. ಆದರೆ ಅದೇ ಚಟವಾಗಬಾರದು. ನಾನು ದಿನಾ ಕುಡಿಯುವುದಿಲ್ಲ" ಎಂದು ರಾಮಕೃಷ್ಣ.
"ಕೆಟ್ಟದ್ದನ್ನು ಒಂದು ಸಲವಾದರೂ ಯಾಕೆ ಸೋಂಕಿಸಬೇಕು'?

''ಒಳ್ಳೇದ್ಯಾವುದು, ಕೆಟ್ಟದ್ಯಾವುದು? ಎಲ್ಲ ರಿಲೇಟಿವ್.
ನೀವು ಯಾಕೆ ಹೊಗೆಸೊಪ್ಪಿಗೆ ಅಂಟಿಕೊಂಡಿರಿ? ಹೊಗೆಸೊಪ್ಪು ಅಂದರೆ ಏನು ಗೊತ್ತೆ? ಸೂಳೆ! ತಂಬಾಕು ತಿನ್ನುವ ಜನ ಸೂಳೆಮನೆಗೆ ಹೋದ ಪಾಪ ಮಾಡ್ತಾರೆ''

''ಹ್ಯಾಗೆ?" ಅಂದ ನರಹರಿ,

'ಪುರಾಣದಲ್ಲೇ ಆಧಾರವಿದೆ. ಬ್ರಹ್ಮನಿಗೆ ಒಂದು ಹೆಣ್ಣು ಮಗು ಹುಟ್ಟಿತು. ಅದರ ಹಣೆಯ ಬರಹ ಅವನೇ ಬರೆಯಬೇಕಿತ್ತು. ಪ್ರಪಂಚದಲ್ಲಿ ಹುಟ್ಟುವ ಮಕ್ಕಳ ಹಣೆಯ ಮೇಲೆ ಬರೆಯೋದು ತಾನೇ ಬ್ರಹ್ಮನ ಕೆಲಸ? ಇದು ಹ್ಯಾಗೂ ತನ್ನ ಮಗು. ವಿಶೇಷವಾಗಿಯೇ ಬರೀಬೇಕು ಅಂತ ಯೋಚಿಸಿ, 'ಕಡು ಜಾಣೆ' ಅಂತ ಬರೆದ. ಆದರೆ ಕತ್ತಲಲ್ಲಿ ಕೈ ತಪ್ಪಿ 'ಕಡುಜಾರೆ' ಅಂತ ಬಿದ್ದುಬಿಡ್ತು, ಬೆಳಿಗ್ಗೆ ನೋಡಿದಾಗ ತಪ್ಪು ಅವನಿಗೇ ಗೊತ್ತಾಯ್ತು. ತಿದ್ದೋಕ್ಕೆ ಏನೇನೋ ಪ್ರಯತ್ನಪಟ್ಟ, ಮುಂದಿನ ರಾತ್ರಿ 'ರೆ'ಯ ಮೇಲೆ ಏನೇನೋ ತಿಕ್ಕಿ ಅಳಿಸೋಕೆ ಕಷ್ಟಪಟ್ಟ. ಒಂದು ಸಲ ಬರೆದ ಮೇಲೆ ಅದನ್ನು ತಿದ್ದೋಕೆ ಅವನ ಕೈಲೂ ಆಗೋಲ್ಲ. ಕೊನೆಗೆ 'ರೆ'ಯ ಮೇಲೆ 'ಣೆ' ಅಂತಲೂ ಬರೆದ, ಪರಿಣಾಮ ಅವಳು ಕಡುಜಾಣೆಯಾದ ಕಡುಜಾರೆಯಾದಳು....''

ಬ್ರಹ್ಮ ಬರೆದುದನ್ನು ಅಳಿಸಲಾಗದೆ ಪಟ್ಟ ಪಾಡು ಇಲ್ಲಿ ಚಿತ್ರಿತವಾಗಿದೆ. ಪುರಾಣ ಕತೆಯನ್ನು ಹೇಳಿರುವ ರೀತಿ ಹಾಸ್ಯಮಯವಾಗಿದೆ.

''ಅಂದರೆ ಬ್ರಹ್ಮನಿಗಿಂತ ಹೆಚ್ಚಿನದು ಹಣೇಬರಹ ಅನ್ನಿ. ಮುಂದೇನಾಯ್ತು?''

''ಬರಹಗಾರನಿಗಿಂತಲೂ ಬರಹ ಯಾವಾಗಲೂ ದೊಡ್ಡದು'' ಎನ್ನುವಾಗ ಶ್ಲೇಷಾರ್ಥವಿಡುತ್ತಾರೆ.

''ಮಗಳು ದೊಡ್ಡವಳಾದಳು. ಹಣೆಬರಹವನ್ನು ತಾನು ತಪ್ಪಾಗಿ ಬರೆದ ಬಗ್ಗೆ ಬ್ರಹ್ಮನಿಗೆ ಯೋಚನೆ ಇದ್ದೇ ಇತ್ತು. ಸರಿಯಾಗಿ ಆಳುವಂಥ ಗಂಡನಿಗೆ ಕೊಟ್ಟರೆ ಜಾರೆಯಾಗೋದು ತಪ್ಪಬಹುದು ಅಂತ ಮಗಳನ್ನು ಅಗ್ನಿಗೆ ಕೊಟ್ಟು ಮದುವೆ ಮಾಡಿದ. ಎಲ್ಲವನ್ನೂ ಜ್ವಲಿಸಿಬಿಡುವ ಅಗ್ನಿಯನ್ನು ಕಂಡರೆ ಯಾರು ಹೆದರೋಲ್ಲ? ಅವಳೂ ಹೆದರಿದಳು. ಆಕೆ ಕೆಲವು ದಿನಗಳಷ್ಟೆ, ಅನಂತರ ಅವಳಲ್ಲಿದ್ದ ಜಾರ ಪ್ರವೃತ್ತಿ ಬಲವಾಯಿತು. ಗಂಡ ಯಜ್ಞಯಾಗಾದಿಗಳಲ್ಲಿ ಹವಿಸ್ಸು ಸ್ವೀಕರಿಸೋಕೆ ಭೂಲೋಕಕ್ಕೆ ಹೋದ ಸಮಯ ನೋಡಿಕೊಂಡು ದೇವೇಂದ್ರನ ಜೊತೆ ವ್ಯಭಿಚಾರ ಪ್ರಾರಂಭ ಮಾಡಿದಳು. ರಂಭೆ, ಊರ್ವಶಿಯರ ಪರಿಚಯವಾಯಿತು. ಸಿಕ್ಕಿ ಸಿಕ್ಕಿದ ಗಂಡಸರ ಜೊತೆ ಚಾಲು ಶುರುವಾಯಿತು. ವ್ಯಭಿಚಾರ ಎಷ್ಟು ದಿನ ಅಂತ ಗುಟ್ಟಿನಲ್ಲಿರೋಕೆ ಆಗುತ್ತೆ? ಗಂಡ ಅಗ್ನಿಗೆ ತಿಳೀತು. ಅವನು ಕೋಪದಿಂದ ಪ್ರಜ್ವಲಿಸಿಬಿಟ್ಟ. ಅವಳು ಸುಟ್ಟು ಬೂದಿಯಾದಳು"

''ಆಮೇಲೆ?'

''ಶರೀರ ಸತ್ತಿತು. ಜೀವ ಯಮನ ಹತ್ತಿರಕ್ಕೆ ಹೋಯಿತು. ಆದರೆ ಆಯಸ್ಸು ಪೂರ್ತಿಯಾಗದೆ ಸತ್ತ ಜೀವಕ್ಕೆ ಯಮ ಏನೂ ಮಾಡುವಂತಿಲ್ಲ. ಬ್ರಹ್ಮನೇ ಬಂದ. ಯಮನಿಗೆ ಹೇಳಿದ: ಪಾಪವೇನೋ ಮಾಡಿದ್ದಳು. ಆದರೆ ಪಾಪ ಮಾಡಿದ ಶರೀರ ಭಸ್ಮವಾಗಿದೆ. ಜೀವಕ್ಕೆ ನಾನು ಬೇರೆ ಶರೀರ ಸೃಷ್ಟಿಸಿಕೊಡ್ತೀನಿ. ಇವಳನ್ನು ನೀನೇ ಮದುವೆ ಮಾಡಿಕೋ ಎಂದು ಮಂತ್ರಶಕ್ತಿಯಿಂದ ಅವಳಿಗೆ ಬೇರೆ ಒಂದು ಸುಂದರ ಶರೀರ ಸೃಷ್ಟಿಸಿಕೊಟ್ಟ. ಯಮ ಮೆಚ್ಚಿ ಮದುವೆಯಾದ. ಹೊಸ ಸಂಸಾರ ಶುರುವಾಯಿತು. ಯಮನಿಗೂ ಕರ್ತವ್ಯವಿರುತ್ತಲ್ಲ? ಸತ್ತ ಜೀವಿಗಳ ಪಾಪ ಪುಣ್ಯ ವಿಚಾರಣೆ ಮಾಡಲಿಕ್ಕೆ ಅವನು ಇತ್ತ ಬಂದರೆ, ಅಲ್ಲಿ ಅವಳು ತನ್ನ ಮೊದಲಿನ ಆಟ ಶುರುಮಾಡಿದಳು. ದೇವಲೋಕಕ್ಕೆ ಹಳೆಯ ಗಣೆಯರು ಬಂದು, ಸಜ್ಜೆ ಮನೆಯಲ್ಲಿ ದೃಶ್ಯರೂಪ ಪಡೆದು ಆಮೇಲೆ ಅದೃಶ್ಯರಾಗಿ ಹೊರಟು ಹೋಗ್ತಾ ಇದ್ದರು. ಯಮ ಎಷ್ಟಾದರೂ ಯಮನೇ, ಪೋಲೀಸ್ ಮುಖ್ಯಾಧಿಕಾರಿ ಇದ್ದ ಹಾಗೆ, ಅನುಮಾನ ಇದ್ದೇ ಇತ್ತು. ಅವನೂ ಅದೃಶ್ಯರೂಪದಲ್ಲಿ ಮಧ್ಯೆ ಮಧ್ಯೆ ಹೋಗಿ ಕಾಯ್ತಾ ಇದ್ದ. ಇವಳ ಆಟ ಸಿಕ್ಕಿಬಿತ್ತು. ಹೆಣ್ಣು ಕೊಟ್ಟ ಮಾವ ಬ್ರಹ್ಮನನ್ನೇ ಕರೆಸಿದ. ಯಮನಂಥೋರೂ ಸೋತ ಮೇಲೆ

ಇವಳನ್ನು ತಿನ್ನೋಕೆ ಆಗೋಲ್ಲ ಅಂತ ನಿಶ್ಚಯಿಸಿ, ಹೆತ್ತ ಅಪ್ಪ ಬ್ರಹ್ಮನೇ ಶಾಪ ಕೊಟ್ಟುಬಿಟ್ಟ : ಭೂಲೋಕದಲ್ಲಿ ನೀನು ಹೊಗೆಸೊಪ್ಪಾಗಿ ಹುಟ್ಟು, ಹೋಗು" ಅಂತ.

"ಅಂದರೆ?"

"ಬೀಡಿ, ಸಿಗರೇಟು, ನಶ್ಯ, ಹೊಗೆಸೊಪ್ಪು ಹೀಗೆ ನಾನಾ ರೂಪದಲ್ಲಿ ಸದಾ ಗಂಡಸರನ್ನು ಸೇವಿಸ್ತಾ ಇರು. ಅಂದರೆ ಒಂದಲ್ಲ ಒಂದು ವಿಧದಲ್ಲಿ ಸಿಕ್ಕಿದ ಗಂಡಸರನ್ನು ಪ್ರಚೋದಿಸಿ ಸೇವಿಸುವ ವ್ಯಭಿಚಾರ ರೂಪವೇ ಈ ಹೊಗೆಸೊಪ್ಪು"

ಜಾಣೆ, ಜಾರೆ ಎಂಬ ಶಬ್ದದ ಅದಲು ಬದಲಿಂದ ನಡೆದಿರುವ ಈ ಕಥೆ ಕನ್ನಡದಕ್ಕೇ ಆಗಿರಬೇಕು. ಏಕೆಂದರೆ ಹಿಂದೂಸ್ಥಾನದ ಇತರ ಭಾಷೆಗಳಲ್ಲಿ 'ಜಾರೆ' ಇದೆ. 'ಜಾಣೆ' ಇಲ್ಲ.

"ಇದನ್ನು ನಿಮಗೆ ಯಾರು ಹೇಳಿದರು ರಾಮಕೃಷ್ಣ?"

"ನಮ್ಮಪ್ಪ ಬದುಕಿದ್ದಾಗ ನಶ್ಯ ಹಾಕ್ತಾ ಇದ್ದ. ನಮ್ಮಮ್ಮ ಹೇಳಿದ್ದಳು. ಅವಳಿಗೆ ಅವಳ ಅಜ್ಜಿ ಹೇಳಿದ್ದಳಂತೆ",

ಇಂದಿಗೂ ಈ ಕತೆ ಪ್ರಸ್ತುತವೇ. ಇಲ್ಲಿ ಕಥೆ ಹೇಳಿರುವ ರೀತಿ ಬಹಳ ಮೋಜಿನ ಶೈಲಿಯಲ್ಲಿದೆ. ಭೈರಪ್ಪನವರ ಕೃತಿಗಳಲ್ಲಿ ಇರುವ ತಾತ್ವಿಕ ಜಿಜ್ಞಾಸೆ ಅವರ ನಿರೂಪಣಾ ತಂತ್ರದಿಂದಾಗಿ ನಮಗೆ ಆಪ್ಯಾಯಮಾನವಾಗಿರುತ್ತದೆ. ವಸ್ತು ವಿನ್ಯಾಸ, ಗಂಭೀರ ವಿಚಾರಗಳು ಜೀವನದ ಪ್ರತೀಕವಾಗುತ್ತವೆ.

**

'ತಂತು' ಕೃತಿಯಲ್ಲಿನ 'ರಾಗಿಂಗ್' ಪ್ರಕರಣ ಮನಸ್ಸಿಗೆ ತರುವಂತೆ ವರ್ಣಿಸಲಾಗಿದೆ.

ಮೊದಲ ವರ್ಷದ ವಿದ್ಯಾರ್ಥಿ ಅನೂಪ್‌ನನ್ನು ರೋಬೋಟ್ ನಂಜುಂಡಪ್ಪ, ರಾಕೆಟ್ ರಂಗನಾಥ, ಸ್ಪೀಡ್ ಕಿಂಗ್ ರೆಡ್ಡಿ ಮೊದಲಾದವರು ಸೇರಿ ಬ್ಯಾಗ್ ಮಾಡಿದ ವಿವರವಿದೆ.

ರೂಮಿನೊಳಗೆ ಅನೂಪ್‌ನನ್ನು ಕೂಡಿ ಹಾಕಿ ಅವನ ಬಟ್ಟೆ ಬಿಚ್ಚಿಸುತ್ತಾರೆ.

"ಲೇ, ಈಗ ನಿನಗೊಂದು ಅವಕಾಶ ಕೊಟ್ಟಿದ್ದೀವಿ. ನೀನೇ ಪ್ಯಾಂಟು, ನಿಕ್ಕರು ಕಳಚಿ ತೋರಿಸ್ತೀಯೋ ಅಥವಾ ಬ್ಲೇಡಿನಲ್ಲಿ ಹರಿದು ಬಿಸಾಕೋಣವಾ?" ಅಧ್ಯಕ್ಷ ಸ್ಥಾನದಿಂದ ರೆಡ್ಡಿ ಕೇಳುತ್ತಾನೆ.

ಅನೂಪ್ ಹೆದರಿ ಸುಮ್ಮನಿದ್ದಾಗ ಎಲ್ಲರೂ ಸೇರಿ ಅವನ ಬೆಲ್ಟು, ಗುಂಡಿ, ಕೊಂಡಿ ತೆಗೆದು ಪ್ಯಾಂಟು ನಿಕ್ಕರುಗಳನ್ನು ಕೆಳಗೆಳೆದು ಬೆತ್ತಲೆ ಮಾಡಿಬಿಡುತ್ತಾರೆ. ಅನೂಪ್ ನಾಚಿಕೆಯಿಂದ ಕಣ್ಣು ಮುಚ್ಚಿಕೊಳ್ಳುವ.

"ಕಣ್ಣು ಮುಚ್ಚಿಕೊಂಡಿದ್ದಾನೆ. ಆದ್ದರಿಂದ ಹಿಜಡಾ ಗಂಡಸಂತೂ ಅಲ್ಲ" ಎಂದು ರಾಕೆಟ್ ರಂಗನಾಥ ಹೇಳುತ್ತಾನೆ.

ಈ ಘಟನೆಯ ಮುಖ್ಯ ಭಾಗ ಎಂದರೆ ಪೋಲೀಸರು ಬಂದು ರಾಗಿಂಗ್ ಮಾಡಿದ ನಾಲ್ವರು ವಿದ್ಯಾರ್ಥಿಗಳನ್ನು ಒದ್ದು ಎಳೆದುಕೊಂಡು ಹೋಗುವುದು, ವಿಚಾರದ ಜೊತೆ ಎಚ್ಚರಿಕೆಯನ್ನು ಕೊಡುತ್ತಾ ಸಾಗುತ್ತದೆ ಈ ಪ್ರಕರಣ.

**

'ಭಿತ್ತಿ'ಯಲ್ಲಿನ ಲೇಖಕರ ಜೀವನಾನುಭವ ಹೇಳಿರುವ ರೀತಿಯಲ್ಲಿ ಹಾಸ್ಯವಿದೆ. ವಾರಾನ್ನಕ್ಕೆ ಲಿಂಗಾಯತ ಮೇಷ್ಟ್ರು ಮಾಡಿದ ವ್ಯವಸ್ಥೆ ಅಂದಿನ ದಿನಗಳಲ್ಲಿನ ಜಾತೀಯ ವಿಚಾರಗಳನ್ನು ಕಣ್ಮುಂದೆ ತರುತ್ತದೆ.

ಇಂತಿಂಥ ಮನೆಗಳಲ್ಲಿ ಹೋಗಿ ವಿಚಾರಿಸು ಎಂದು ಅವರೇ ಸೂಚಿಸುತ್ತಾರೆ. ಐದು ದಿನಗಳಿಗೆ ವಾರಾನ್ನ ಸಿಗುತ್ತದೆ.

"ಇನ್ನೆರಡು ದಿನ ನಮ್ಮ ಮನೇಲಿ ಊಟ ಮಾಡು. ಆದರೆ ಇಲ್ಲಿ ಊಟ ಮಾಡ್ತೀನಿ ಅಂತ ಯಾರಿಗೂ ಹೇಳಬೇಡ, ಲಿಂಗಾಯತರ ಮನೇಲಿ ತಿಂತಾನೇ ಅಂತ ಗೊತ್ತಾದರೆ, ಈಗ ವಾರ ಕೊಟ್ಟಿರೋ ಮನೆಯವರು ತಪ್ಪಿಸಿಬಿಟ್ಟರೆ ಕಷ್ಟ. ಅಷ್ಟರಲ್ಲಿ ಬೇರೆ ಎಲ್ಲಾದರೂ ವಾರ ಸಿಕ್ಕಿದರೆ ನಮ್ಮ ಮನೇದು ಬಿಡು. ಒಟ್ಟಿನಲ್ಲಿ ನಮ್ಮದು ರಿಸರ್ವ್ ಜಾಗ ಅಂತ ತಿಳಿದುಕೋ'

ದಿನಾ ಬೆಳಿಗ್ಗೆ ಮೇಷ್ಟ್ರ ಜೊತೆ ವಾಕಿಂಗ್ ಹೋಗುವಾಗ ಸರಿಯಾದ ಇಂಗ್ಲಿಷ್‌ನಲ್ಲಿ ಮಾತಾಡುವುದು ಹೇಗೆ ಎಂದು ಅವರು ಹೇಳುತ್ತಿದ್ದರು.

"ಐ ವಿಲ್ ನಾಟ್ ಈಟ್ ವಾಟರ್" ಎಂದು ವಿದ್ಯಾರ್ಥಿ ಹೇಳಿದಾಗ ಗುರುಗಳು 'ಈಟ್' ಮತ್ತು 'ಡ್ರಿಂಕ್'ಗೆ ಇರುವ ವ್ಯತ್ಯಾಸ ತಿಳಿಸಿ, ಭಾಷೆ ಸರಿಪಡಿಸುತ್ತಿದ್ದರು.

ಒಂದು ದಿನ ಮಾಸ್ತರುಗಳಿಬ್ಬರು ಮನೆಯ ಒಳ ಅಂಗಳದಲ್ಲಿ ಕುಳಿತು ತುಮಕೂರು ಮೇಡಂ ಬಗ್ಗೆ ಮಾತಾಡುತ್ತಿದ್ದರು. ಸ್ವಾಮಿ ಮೇಷ್ಟ್ರು ಹೇಳುತ್ತಿದ್ದರು:

"ತುಮಕೂರು ಗರ್ಲ್ಸ್ ಮಿಡ್ಲ್ ಸ್ಕೂಲ್ ಹೆಡ್‌ಮಿಸ್ಟ್ರೆಸ್ ಅರ್ತಮಿಟಿಕ್. ಏನು ರೇಗಿಬಿಟ್ಟಳು ಅಂತೀರ? ವಾಟ್ ಐಸೇ? ಯೂ ಆರ್ ಎ ಟೀಚರ್ ಐಸೇ? ಐ ವಿಲ್ ಹ್ಯಾಂಡ್ ಓವರ್ ಯು ಟು ಪೋಲೀಸ್ ಐಸೇ. ರಿಪೋರ್ಟ್ ಇಟ್ ಟು ಡಿ.ಇ..ಓ. ಅಂಡ್ ಡಿ.ಪಿ.ಐ. ಐಸೇ ಅಂತ ಗಟ್ಟಿಯಾಗಿ ಅಂದಳು. ನನಗೆ ಮೈಯೆಲ್ಲಾ ಬೆವರು ಕಿತ್ಕಂಡ್ ಬಿಡ್ತು"

"ಆಮೇಲೆ?"

"ಆಮೇಲೇನು? ಕೊನೆಗೆ ಒಪ್ಕೊಂಡಳು. ಎಷ್ಟುರೀ ಧೈರ್ಯ. ಹಿಂಗ್ ಬಂದು ಕೇಳ್ತೀರಲ್ಲ ಅಂತಲೇ ದುಡ್ಡಿಸ್ಕಂಡು ನಂಬರ್ ಲಿಸ್ಟ್‌ನೂ ತಗೊಂಡು ಮಡಿಸಿಟ್ಟು ಕೊಂಡಳು. ಸೂಳೇರು ಸಹ ವ್ಯಾಪಾರ ಕುದುರಿಸೋ ತನಕ ದೊಡ್ಡ ಗರತಿ ಹಾಗೆ ಅಬ್ಬರ ಮಾಡ್ತಾರಲ್ಲ, ಹಂಗೆ"

**

ವಿಚಾರವನ್ನೂ ಹೇಳುವ ಜೊತೆಯಲ್ಲೇ ಅಲ್ಲಿನ ಆಚಾರ, ಸಂಬಂಧಗಳು, ಕುಸಿಯುತ್ತಿರುವ ಜೀವನ ಮೌಲ್ಯಗಳನ್ನು ಲೇಖಕರು ಪರಿಚಯಿಸುತ್ತಾರೆ.

ಭೈರಪ್ಪನವರ ಕೃತಿಗಳಲ್ಲಿ ಅಲ್ಲೊಮ್ಮೆ ಇಲ್ಲೊಮ್ಮೆ ಇಂತಹ ನಗೆ ಮಾತುಗಳು ಮಿಂಚಿ ಮರೆಯಾಗುತ್ತವೆ. ಈ ಮಾತುಗಳು ಸಹ ಸತ್ಯದ ತಳಹದಿಯ ಮೇಲೆ ನಿಂತಿರುತ್ತವೆ. ಭಾವುಕನಾದ ಓದುಗ ಭೈರಪ್ಪನವರ ಕಥನ ತಂತ್ರ ಕೌಶಲ್ಯಕ್ಕೆ ಮನಸೋತು ಕೃತಿಯಲ್ಲಿ ಮುಳುಗಿಬಿಡುತ್ತಾನೆ. ಉಳಿದೆಲ್ಲ ರಸಗಳ ಜೊತೆ ಹಾಸ್ಯರಸ ಬೆರೆತುಹೋಗಿರುತ್ತದೆ. (ಮಾರ್ಚ್ 2002)

***

ನನ್ನಲ್ಲಿ ಶಾಶ್ವತ ನೆಲೆ ನಿಂತವರು

– ಸಂತೋಷಕುಮಾರ್ ಮೆಹೆಂದಳೆ

- ಕನ್ನಡ ಸಾಹಿತ್ಯ ಲೋಕದ ಪಿತಾಮಹ, ಯಾವತ್ತೂ ಎಡಬಿಡಂಗಿ ವಾದಕ್ಕೆ ತಲೆಬಾಗದ, ಬರಹ ಮತ್ತು ಕಾದಂಬರಿ ಎಂದರೆ ಕನ್ನಡದಲ್ಲಿ ಭೈರಪ್ಪ ಮಾತ್ರ ಎನ್ನುವಂತೆ ಬರೆದುಬಿಟ್ಟ...
- ಯಾವ ಕಾಲಕ್ಕೂ ಓದಬೇಕು ಎನ್ನುವ ಓದಿನ ಆಸ್ಥೆಗೆ ತಳ್ಳುತ್ತಿದ್ದ...
- ತನಗೆ ಲಭ್ಯವಾಗಬೇಕಿದ್ದ ಜ್ಞಾನಪೀಠವನ್ನು ಉದ್ದೇಶಪೂರ್ವಕವಾಗಿ ತಪ್ಪಿಸುತ್ತಲೇ ಇದ್ದ ಕ್ಷುದ್ರ ಜಂತುಗಳ ಬಗ್ಗೆ ಗೊತ್ತಾಗುತ್ತಿದರೂ ಆ ಬಗ್ಗೆ ತುಟಿ ಪಿಟಕ್ಕೆನ್ನದೆ ಬರೆಯುತ್ತಿದ್ದ...
- ಪ್ರಶಸ್ತಿ/ಅಕಾಡೆಮಿ/ವೇದಿಕೆ ಸರಕಾರಿ ಕಾರ್ಯಕ್ರಮಗಳು ಮತ್ತು ಮುಖ್ಯ ವೇದಿಕೆಗಳಿಂದೆಲ್ಲ ಯಾವತ್ತೂ ಅವರನ್ನು ದೂರವೇ ಇರಿಸಿ ಬೇಕೆಂದೆ ಕಾಲೆಳೆಯುತ್ತಿದರೂ, ಇವ್ಯಾವುದಕ್ಕೂ ಯಾವತ್ತೂ ಬೆನ್ನು ಬೀಳದ...
- ಓದುಗ ದೊರೆ ಮಾತ್ರ ಅಂತಿಮ ಎನ್ನುವಂತೆ ಕಂತೆಗಟ್ಟಳೇ ಬರೆದುಬಿಟ್ಟು, ಕೊನೆಯ ಕಾಲದವರೆಗೂ ಸಾಹಿತ್ಯದ ಋಷಿಯಾಗೇ ಬದುಕಿದ...
- ಒಬ್ಬೇ ಒಬ್ಬ ಎಡಬಿಡಂಗಿ ಇವತ್ತು ಅವರನ್ನು ನೆನೆಯದಿದ್ದರೂ – ಅವರನ್ನು ಓದದಿದ್ದರೂ ಅವರ ಪುಸ್ತಕಗಳಿದ್ದ ಜನಪ್ರಿಯತೆ ಮತ್ತು ಮಾರುಕಟ್ಟೆಯಿಂದ ಅವರ ಪ್ರಸ್ತಾಪ ಇಲ್ಲದೆ ಹೇಗಪ್ಪಾ ಈ ಜನಪ್ರಿಯತೆಯನ್ನು ಕ್ರ್ಯಾಕ್ ಮಾಡುವುದು ಎಂದು ತಲೆ ಬಿಸಿಮಾಡಿಕೊಳ್ಳುವಂತೆ ತಮ್ಮ ಬರಹದ ಮೂಲಕವೇ ಬರ್ನಾಲ್ ನೀಡಿದ...
- ಮೋದಿಜೀ ಬಂದ ಮೇಲೆ ಪ್ರಧಾನಿಯಾದ ಕಾರಣಕ್ಕೆ ಕನಿಷ್ಠ, ಪದ್ಮಶ್ರೀ, ಪದ್ಮಭೂಷಣ ಮತ್ತು ರಾಷ್ಟ್ರೀಯ ಪ್ರಾಧ್ಯಾಪಕ ಹುದ್ದೆಗೆ ಆಯ್ಕೆಯಾದ ನಿಸ್ಪೃಹ ಕಾದಂಬರಿಕಾರ...
- ಸರಸ್ವತಿ ಸಮ್ಮಾನ ಮೂಲಕ ಉತ್ತರ ನೀಡಿದ...
- ಕಾದಂಬರಿ ನೀಡಿದರೆ ಹೀಗೆ ಕೊಡಬೇಕು ಎನ್ನುವ ಹುಕಿಯನ್ನು ನನ್ನಲ್ಲಿ ಬಿತ್ತಿದ, ಅದಕ್ಕಾಗಿ ಕ್ಷೇತ್ರಕಾರ್ಯ ಮತ್ತು ಪ್ರವಾಸದಂತಹ ಅಭ್ಯಾಸ ಮಾಡಿಸಿದ...
- ಯಾವತ್ತೂ ಬರಹದ ಹೊರತಾಗಿ ಮಸಾಲೆ ಮಾತಾಡದೆ ಬರೆದು ಬರೆದೇ ಬರಿದಾಗಿ ಹೋದ ನಿಸ್ಪೃಹ ಪಿತಾಮಹ...
- ಕೊನೆ ಕೊನೆಯಲ್ಲಿ (ಬಹುಶ: ಯಶಸ್ವಿ ಪ್ರತಿ ಪುರುಷ ಎದುರಿಸಬಹುದಾದ ಸಮಸ್ಯೆ ಇದು) ಅನಿವಾರ್ಯವಾಗಿ ಮನೆ ಬಿಟ್ಟು ಹೊರಬಿದ್ದು ಬದುಕಿಬಿಟ್ಟ, ಆಗಲೂ ಸಾಹಿತ್ಯ ಹೊರತಾಗಿ ಹೊಸದೇನನ್ನೂ ಧೇನಿಸದ... (ಹಲವರು ಅವರ ಸುತ್ತ ಕೋಟೆ ಕಟ್ಟಿ ವಯಸ್ಸಿನ ಫಾಯ್ದೆ ತೆಗೆದುಕೊಂಡರಾ ಅಂತ ಅಲ್ಲಲ್ಲಿ ಗೊಣಗಾಟ ಇತ್ತಾದರೂ ಮಾತಾಡುವವರು ಯಾರು? ಕೆಲವು ಕಾದಂಬರಿಗಳು ಇದಕ್ಕೆ ಪುಷ್ಟಿಯೂ ಹೌದು – ಏನಕೇನ ಪ್ರಕಾರೇಣ ಪ್ರಸಿದ್ಧಿಗೂ ಬಂದುಬಿಟ್ಟರು);
- ಕನ್ನಡದಲ್ಲಿ ವಿಜಯ ಕರ್ನಾಟಕದಂತಹ ಹೊಸ ಪ್ರಯೋಗ ಶುರುವಾದ ಮೇಲೆ ಪತ್ರಿಕೆಗಳಲ್ಲಿ ನಿಮಗೆ ಆಗೀಗ ಜಾಗ ಮತ್ತು ಹೆಸರು ಪ್ರಸ್ತಾಪ ಆಗತೊಡಗಿತ್ತು ಎಂದರೆ ಅದೆಷ್ಟು ಬರ್ನಾಲ್ ಕೊಟ್ಟಿದ್ದೀರಿ ನೀವು ಆ ಬುಡಗಳಿಗೆ. ಅಲ್ಲಿವರೆಗೆ ವೇದಿಕೆ/ಪತ್ರಿಕೆ ಇತ್ಯಾದಿ ಸಾಹಿತ್ಯ ವಲಯಕ್ಕೆ ವರ್ಜ್ಯದಂತೆ ಬದುಕಿದರೂ ಅದ್ಭುತ ಕಾದಂಬರಿ ಬರೆಯುತ್ತಲೇ ನಿಮ್ಮ ಧೃಢವಾದ ಛಾಪು ಮೂಡಿಸಿದಿರಿ.

ಹಲವು ಬಾರಿ ನಿಮ್ಮನ್ನು ಭೇಟಿಯಾಗಬೇಕೆಂದು ಹೊರಟಾಗಲೆಲ್ಲ ಮೊದಲೊಮ್ಮೆ ಆದ ಕಹಿ ಅನುಭವದ ಕಾರಣ (ಮೈಸೂರಿನ ಪತ್ರಕರ್ತೆಯೊಬ್ಬಳು ಮಾಡಿದ – ಈ ಸದ್ಯದಲ್ಲೆ ಬರೆಯುತ್ತೇನೆ) ಹಾಗೆ ಉಳಿದು ಹೋದರೂ ನಿಮ್ಮ ಬಗ್ಗೆ ನನಗೆ ಒಂದು ದಿವ್ಯ ಗೌರವ ಇದ್ದಿದ್ದು ಹೌದು.

ಅದಕ್ಕಾಗಿ ಮತ್ತೊಮ್ಮೆ ಬನ್ನಿ ಎಂದು ಬಾಲಿಶವಾಗಿ ಹಾರೈಸಲಾರೆ..

ನಿಮ್ಮ ಬರಹದ ಮೂಲಕ ನನ್ನಲ್ಲಿ ಶಾಶ್ವತ ನೀವು.

***

ಭೇಟಿಯ ನೆನಪುಗಳು

– ಪು.ರಾ. ಮುರಳೀಧರ

ಅಂದು ಮೈಸೂರಿನಲ್ಲಿ ಭೈರಪ್ಪನವರ ಪರ್ವ ಕುರಿತ ವಿಚಾರ ಸಂಕಿರಣ ನಡೆದಿತ್ತು. ಅವರ hardcore ಅಭಿಮಾನಿಗಳಾದ ನಾನು, ಮೀರಾ, ಕುಲಕರ್ಣಿ, ಭಾರತಿ ಹಾಗೂ ಕಟ್ಟೀಮನಿಯವರೆಲ್ಲಾ ಸೇರಿ ಹಿಂದಿನ ದಿನವೇ ಮೈಸೂರು ಸೇರಿಕೊಂಡೆವು. ಮಾರನೆಯ ದಿನ ಕಾರ್ಯಕ್ರಮದ ಪ್ರಾರಂಭಕ್ಕೆ ಒಂದು ಘಂಟೆ ಮುಂಚೆಯೇ ಸಭಾಂಗಣ ತಲುಪಿದೆವು. (ಶಾರದಾ ವಿಲಾಸ ಕಾಲೇಜು ಎಂದು ನೆನಪು). ಘಂಟೆ ಹತ್ತಾಯಿತು ಹನ್ನೊಂದಾಯಿತು ಕಾರ್ಯಕ್ರಮ ಪ್ರಾರಂಭವಾಗುವ ಸೂಚನೆಯೇ ಕಾಣಲಿಲ್ಲ. ಇನ್ನೂ ಬೆರಳೆಣಿಕೆಯಷ್ಟೇ ಜನ. (ಬೆಂಗಳೂರಿನಲ್ಲಿ ಭೈರಪ್ಪನವರು ಬರುತ್ತಾರೆಂದರೆ ಒಂದು ಘಂಟೆ ಮುಂಚೆಯೇ ತಲುಪಿ ಕುರ್ಚಿ ಹಿಡಿಯಬೇಕಿತ್ತು) ವೇದಿಕೆ ಇನ್ನೂ ಸಿದ್ಧವಾಗುತ್ತಿತ್ತು. ಮೀರಾ ಅವರಿಗೆ ಪರಿಚಯವಿದ್ದ ಒಬ್ಬರು ಬಂದರು. ಮೀರಾ ಅವರನ್ನು ಕಾರ್ಯಕ್ರಮ ಎಷ್ಟು ಹೊತ್ತಿಗೆ ಎಂದು ಕೇಳಿದಾಗ ಅವರು ಹೇಳಿದ್ದು– 'ಮೇಡಂ ಇದು ಮೈಸೂರು. ಇಲ್ಲಿ ಸಮಯಕ್ಕೆ ಸರಿಯಾಗಿ ಯಾರೂ ಬರುವುದಿಲ್ಲ' ಎಂದರು. ನಂತರ ಒಬ್ಬೊಬ್ಬರಾಗಿ ಬರತೊಡಗಿದರು. ಆಮೇಲೆ ಸಂಘಟಕರು ಭೈರಪ್ಪನವರನ್ನು ಕರೆತಂದರು. ಎಲ್ಲರೂ ಕುರ್ಚಿಗಳಲ್ಲಿ ಕುಳಿತುಕೊಳ್ಳತೊಡಗಿದರು. ಮೀರಾ ಅಭ್ಯಾಸದಂತೆ ಗಣ್ಯರಿಗೆ ಇರುವ ಮುಂದಿನ ಸಾಲಿನಲ್ಲಿ ಹೋಗಿ ಕುಳಿತರು .(ವೇದಿಕೆಯ ಮೇಲೆ ಕುರ್ಚಿ ಖಾಲಿ ಇದ್ದಿದ್ದರೆ ಬಹುಶ: ಅಲ್ಲೇ ಹೋಗಿಬಿಡ್ತಾರೆ ಅಂತ ನಾನು ಕುಲಕರ್ಣಿ ತಮಾಷೆ ಮಾಡುತ್ತಿದ್ದೆವು). ಕಾರ್ಯಕ್ರಮ ಪ್ರಾರಂಭವಾಯಿತು. ಸ್ವಾಗತ ಭಾಷಣದಲ್ಲಿ ಸಂಘಟಕರು ಬೆಂಗಳೂರಿನಿಂದ ಬಂದ ನಮಗೆಲ್ಲ ವಿಶೇಷ ಸ್ವಾಗತ ಕೋರಿದರು. ಭೈರಪ್ಪನವರಿಗೆ ಆಶ್ಚರ್ಯ. ಅವರ ಭಾಷಣದಲ್ಲಿ ಕೂಡಾ ಅವರು ಬೆಂಗಳೂರಿನಿಂದ ಬಂದ ನಮ್ಮ ಬಗ್ಗೆ ಪ್ರಸ್ತಾಪಿಸಿದರು. ಭೈರಪ್ಪನವರ ಪ್ರಬುದ್ಧ ಭಾಷಣ ಮನ ತುಂಬಿತು. ಕಾರ್ಯಕ್ರಮ ಮುಗಿಯುವ ಸ್ವಲ್ಪ ಹೊತ್ತಿನ ಮುಂಚೆ ನಾವೆಲ್ಲ ಹೊರಟು ನಿಂತೆವು. ವಾಪಸು ಬೆಂಗಳೂರಿಗೆ ಬರಬೇಕಿತ್ತು. ಈಗಿನಂತೆ ಎಕ್ಸ್‌ಪ್ರೆಸ್ ವೇ ರೈಲು ಇರಲಿಲ್ಲ. ನಮ್ಮಲ್ಲೊಬ್ಬರು (ನಾನೇ ಇರಬೇಕು) ಕ್ಷಮಿಸಿ, ನಾವು ಬೆಂಗಳೂರಿಗೆ ಹೋಗಬೇಕಾಗಿರುವುದರಿಂದ ಹೊರಡುತ್ತೇವೆ ಎಂದು ಭೈರಪ್ಪನವರಿಗೆ ತಿಳಿಸಿ ನಮಸ್ಕರಿಸಿದೆವು ಆಗಲೂ ಭೈರಪ್ಪನವರು ಅಚ್ಚರಿಯಿಂದ ಈ ಕಾರ್ಯಕ್ರಮಕ್ಕಾಗಿ ಬೆಂಗಳೂರಿನಿಂದ ಬಂದಿರಾ ಎಂದರು. ನಾವು ಹೌದೆಂದಾಗ ಸಂತೋಷಪಟ್ಟರು. ಬೆಂಗಳೂರಿಗೆ ಸಂತೃಪ್ತಿಯಿಂದ ಮರಳಿದೆವು.

ಇದೇ ಗುಂಪು ಸಂತೆಶಿವರಕ್ಕೂ ಹೋಗಿತ್ತು. ಜೀವನದಲ್ಲಿ ಮರೆಯಲಾಗದ ಕಾರ್ಯಕ್ರಮ ಅದು. ಭೈರಪ್ಪನವರು ಹುಟ್ಟಿ ಬೆಳೆದ ಮನೆ, ಮಹದೇವಯ್ಯನವರ ಗುಡಿ, ನೆಂಟರಿಷ್ಟರ ಮನೆಗಳು, ಪ್ಲೇಗಿನಿಂದ ತೀರಿಕೊಂಡ ತಮ್ಮನನ್ನು ಹೆಗಲಮೇಲೆ ಹೊತ್ತು ಕೊಂಡುಹೋಗಿ ಸುಟ್ಟು ಬಂದ ಜಾಗ, ಓದಲು ಕೂರುತ್ತಿದ್ದ ಕೆರೆ ಬಳಿಯ ದೇವಸ್ಥಾನ ಎಲ್ಲವನ್ನೂ ತೋರಿಸಿದರು. ಭಿತ್ತಿ ಒದಿದವರಿಗಂತೂ ಅತ್ಯಂತ ಆತ್ಮೀಯ ಕಾರ್ಯಕ್ರಮ ಅದು. ಅವರೊಂದಿಗೆ ಫೋಟೋ ತೆಗೆಸಿಕೊಳ್ಳಲು ದೊಡ್ಡ ಸರತಿಯ ಸಾಲೇ ನಿಂತಿತ್ತು. ಬಹುಶ: ಅಂಥಾ ಕಾರ್ಯಕ್ರಮ ಇನ್ನು ನಮ್ಮ ಜನ್ಮದಲ್ಲಿ ಕಾಣಸಿಗದು. ಭೈರಪ್ಪನವರು ಇನ್ನೇನಿದ್ದರೂ ನೆನಪು. ಅದರೆ ಅವರ ಕಾದಂಬರಿಯ ಪಾತ್ರಗಳು, ಆವರ ಜೀವನ ಯಾನ ಮರೆಯಲಾಗದ. ನಮ್ಮ ಕಾಲಘಟ್ಟದಲ್ಲಿ ಭೈರಪ್ಪನವರಂಥಾ ಮೇರು ವ್ಯಕ್ತಿತ್ವದ ಸಾಧಕರು ಜೀವಿಸಿದ್ದೇ ನಮ್ಮ ಅದೃಷ್ಟ.

***

ಯುಗಪುರುಷನಿಗೆ ವಂದನೆ

– ಜಿ.ವಿ. ನಿರ್ಮಲ

ನಾನು 'ಪರ್ವ' ಕಾದಂಬರಿಯನ್ನು ಅದು ಪ್ರಕಟವಾದ ದಿನಗಳಲ್ಲಿಯೇ ಓದಿದೆ. ಓದುವುದು ನನ್ನ ಹವ್ಯಾಸವಾದರೂ ವಿಮರ್ಶಾತ್ಮಕವಾಗಿ ಓದುವಷ್ಟು ಪ್ರೌಢಿಮೆ ಇರಲಿಲ್ಲ. ಈಗಲೂ ಇಲ್ಲವೆಂದೇ ಒಪ್ಪಿಕೊಳ್ಳುತ್ತೇನೆ. ಆದರೆ ಅಂದಿನಿಂದ ಇಂದಿನವರೆಗೂ ನನ್ನ ಮನಸ್ಸಿನಲ್ಲಿ ಅಚ್ಚಳಿಯದೆ ಉಳಿದಿದೆ ಈ ಕಾದಂಬರಿಯ ವಿವಿಧ ಮುಖಗಳು. ಬಹಳ ಮುಖ್ಯವಾಗಿ ಎಲ್ಲರಿಗೂ ಪೌರಾಣಿಕವಾಗಿ ಚಿರಪರಿಚಿತವಾಗಿದ್ದ ಕಾದಂಬರಿಗೆ ದೊಡ್ಡ ತಿರುವು ನೀಡುವ ಆಲೋಚನೆ ಆಗ ೪೮ ವರ್ಷದ ಶ್ರೀ ಭೈರಪ್ಪನವರಿಗೆ ಬಂದದ್ದು ಆಶ್ಚರ್ಯ. ಪ್ರತಿಯೊಂದು ಸಂದರ್ಭದ ಅತಿಮಾನುಷ ಸಂಗತಿಗಳನ್ನು ಮಾನುಷವಾಗಿ ಮಾರ್ಪಡಿಸಿದ ಇಂದ್ರಜಾಲ ಓದುಗರನ್ನು ಬೇರೆ ಲೋಕಕ್ಕೇ ಒಯ್ಯುತ್ತದೆ; ಬೆರಗುಗೊಳಿಸುತ್ತದೆ. ಮಹಾಭಾರತದ ಕಥೆ ಹಾಗೂ ಪರ್ವದ ಕಥೆಯನ್ನು ಬಲ್ಲವರಿಗೆ ಮತ್ತೊಮ್ಮೆ ಅದೇ ಕಥೆಯನ್ನು ನಾನು ಹೇಳುವ ಅಗತ್ಯವಿಲ್ಲ. ಆದರೆ ಭೈರಪ್ಪನವರು ಕಥೆಯನ್ನು ಬೇರೆ ರೀತಿಯಲ್ಲಿ ಒಪ್ಪುವಂತೆ ಕಾದಂಬರಿ ಬರೆದಿರುವ ಪರಿ ಅದ್ಭುತ.

ಇದಲ್ಲದೆ ಹಲವಾರು ಕಾದಂಬರಿಗಳನ್ನು ತಪಸ್ಸಿನಂತೆ ಬರೆದಿರುವ ಶ್ರೀಯುತರ ಸಾಮರ್ಥ್ಯ ಅಸದೃಶ.

ಮತ್ತೊಂದು ಕಾದಂಬರಿಯನ್ನು ನಾನು ಓದುವಾಗ ಅಲ್ಲಿಯ ಒಂದು ಪಾತ್ರ ನನಗೆ ಪರಿಚಿತರಿದ್ದ ಮಹನೀಯರೊಬ್ಬರನ್ನು ಕಣ್ಮುಂದೆ ನಿಲ್ಲಿಸಿದಂತಾಯಿತು. ಅನಂತರ ಆ ಮಹನೀಯರ ಬಗ್ಗೆಯೇ ಬರೆದಿರುವುದೆಂದು ಚರ್ಚೆಯಾಗಿದ್ದು ನನಗೆ ತಿಳಿಯಿತು. ನಮ್ಮ ನಡುವೆ ಇರುವ ಮನುಜರನ್ನು ಸೂಕ್ಷ್ಮವಾಗಿ ಗಮನಿಸಿ, ತಮ್ಮ ಕಾದಂಬರಿಯಲ್ಲಿ ಪಾತ್ರವಾಗಿಸಿ, ಸುಸ್ಪಷ್ಟವಾಗಿ ಓದುಗರಿಗೆ ತಲುಪಿಸುವ ಕಲೆ ಅವರಿಗೆ ಸಿದ್ಧಿಸಿತ್ತು.

ಅವರ ಪತ್ನಿಯೇ ಹೇಳಿರುವಂತೆ ಶ್ರೀಯುತರು ಬೆಟ್ಟವನ್ನೋ, ಗುಡ್ಡವನ್ನೋ ನೋಡುತ್ತಲೇ ಬೇರೆಯೇ ಲೋಕಕ್ಕೆ ಪಯಣಿಸುತ್ತಿದ್ದರಂತೆ.



'ಪರ್ವ' ನಾಟಕ ಅಭಿನಯಿಸಿದ ಕಲಾವಿದರೊಂದಿಗೆ ಭೈರಪ್ಪ

ಅವರ ಆತ್ಮಚರಿತ್ರೆಯನ್ನು ಕಟ್ಟಿಕೊಡುವ 'ಭಿತ್ತಿ' ಕಾದಂಬರಿ ಮನಕಲಕಿತು. ಅವರ ಬಾಲ್ಯ, ವಿದ್ಯಾಭ್ಯಾಸದ ಹಂತಗಳು ಹೃದಯಕ್ಕೆ ಮುಟ್ಟಿವೆ. ನನಗೆ ಅವರನ್ನು ನೋಡುವ ತವಕ ಹೆಚ್ಚಿಸಿದ್ದೂ ಹೌದು.

ದೈವಚಿತ್ತ. ಅದೂ ಆಕಸ್ಮಿಕವಾಗಿ ಇತ್ತೀಚಿಗೆ ನೆರವೇರಿತು. ಮೇ ತಿಂಗಳ ೧೬ರಂದು 'ಪರ್ವ' ನಾಟಕ ವೀಕ್ಷಿಸಲು ಗೆಳತಿಯರೊಂದಿಗೆ ಹೋಗಿದ್ದೆ. ಅಂದು ಧ್ವನಿವರ್ಧಕ ತೊಂದರೆ ನೀಡಿದ್ದರಿಂದ ನಾಟಕ ಸ್ಥಗಿತವಾಯ್ತು. ಮತ್ತೊಂದು ಪ್ರದರ್ಶನ ಮೇ ೧೯ರಂದು ಅಂದಿನ ಪ್ರೇಕ್ಷಕರಿಗಾಗಿ ಏರ್ಪಡಿಸುವುದಾಗಿ ನಾಟಕದ ನಿರ್ಮಾಪಕ ಹಾಗೂ ನಿರ್ದೇಶಕ ಪ್ರಕಾಶ್ ಬೆಳವಾಡಿಯವರು ಕಳಕಳಿಯಿಂದ ವಿನಂತಿಸಿದರು. ಮತ್ತೆ ೧೯ರಂದು ನಾವು ಹೋದೆವು. ಅಂದು ನಮಗೆ ಅಶ್ಚರ್ಯವೊಂದು ಕಾದಿತ್ತು. ೯೪ರ ಹರೆಯದ ಭೈರಪ್ಪನವರು ಅವರ ಮಾನಸ ಪುತ್ರಿ ಸಹನಾ ವಿಜಯಕುಮಾರ್ ಮತ್ತಿತರೊಡನೆ ಸುಮಾರು ಎಂಟೂವರೆ ಘಂಟೆಗಳ ಕಾಲ ಸಭಾಂಗಣದಲ್ಲಿ ಕುಳಿತು, ಸಂಪೂರ್ಣ ನಾಟಕವನ್ನು ವೀಕ್ಷಿಸಿದರು. ಅವರಿಗೆ ಬಹಳಷ್ಟು ರಕ್ಷಣೆ ಒದಗಿಸಿದ್ದರೂ ಉಲ್ಲಂಘಿಸಿ ಅವರನ್ನು ಭೇಟಿ ಮಾಡಿದ್ದು ನಾನು ಮರೆಯಲಾಗದ ನೆನಪು. ರಕ್ಷಣೆಯವರ ಕೂಗಿಗೂ ಕಿವಿಗೊಡದೆ ಅವರ ಪಾದಸ್ಪರ್ಶ ಮಾಡಿ, ನನ್ನ ಗೆಳತಿಯ ಪೋನ್ ನಲ್ಲಿ ಒಂದು ಪೋಟೋ ಕ್ಲಿಕ್ಕಿಸಿಕೊಂಡದ್ದು ಶಾಶ್ವತ ನೆನಪು.

ಮಹಾನ್ ಯುಗಪುರುಷರೊಬ್ಬರಿಗೆ ವಂದಿಸುತ್ತಾ ಅವರ ಸಮಕಾಲೀನರಾಗಿ ಬದುಕಿದ್ದು ನನ್ನ ಸೌಭಾಗ್ಯವೆಂದು ಭಾವಿಸುತ್ತೇನೆ.

***



ಭೈರಪ್ಪನವರ ಊರು ಸಂತೆಶಿವರದ ಕೆರೆ

ಪುಸ್ತಕ ಅವಲೋಕನ

'ಉತ್ತರಕಾಂಡ' ಕಾದಂಬರಿ

ಲೇಖಕರು: ಎಸ್.ಎಲ್.ಭೈರಪ್ಪ – ಪ್ರಕಾಶಕರು ಸಾಹಿತ್ಯ ಭಂಡಾರ ಪ್ರಕಾಶನ

– ಸುಜಾತಾ ರವೀಶ್, ಮೈಸೂರು

ಕನ್ನಡ ಸಾಹಿತ್ಯ ಪ್ರೇಮಿಗಳಿಗೆ ಚಿರಪರಿಚಿತ ಹೆಸರು ಸಂತೇಶಿವರ ಲಿಂಗಣ್ಣಯ್ಯ ಭೈರಪ್ಪನವರದು. ವಿಶಿಷ್ಟ ರೀತಿಯ ಕಥಾವಸ್ತುಗಳು ವಿಭಿನ್ನ ಹಂದರದ ಕಾದಂಬರಿಗಳಿಂದ ಮನೆಮಾತಾಗಿರುವ ಇವರ ಕಾದಂಬರಿಗಳು ಹೆಚ್ಚು ಹೆಚ್ಚು ಮುದ್ರಣಗಳನ್ನು ಕಾಣುತ್ತಿರುವುದು ಜನಪ್ರಿಯತೆಗೆ ಸಾಕ್ಷಿ. ೨೬.೦೭.೧೯೩೧ರಂದು ಜನಿಸಿದ ಭೈರಪ್ಪನವರದು ಕಡುಬಡತನದ ಕುಟುಂಬ. ಐದನೆಯ ವಯಸ್ಸಿನಲ್ಲಿಯೇ ತಾಯಿಯನ್ನು ಕಳೆದುಕೊಂಡು ಬಹಳ ಕಷ್ಟದಲ್ಲಿ ವಿದ್ಯಾಭ್ಯಾಸ ಮುಂದುವರೆಸಿ ನೆಲೆನಿಂತವರು. 'ಭಿತ್ತಿ' ಕಾದಂಬರಿಯು ಇವರ ಆತ್ಮ ಕಥನವೇ ಆಗಿದೆ. ಅವರೇ ಹೇಳಿಕೊಂಡಂತೆ ಗೊರೂರು ರಾಮಸ್ವಾಮಿ ಐಯಂಗಾರ್, ಆದಿಶಂಕರಾಚಾರ್ಯ, ಮಹಾತ್ಮಾಗಾಂಧಿ, ರಾಮಕೃಷ್ಣ ಪರಮಹಂಸ ಮತ್ತು ವಿವೇಕಾನಂದರ ವಿಚಾರಧಾರೆಗಳಿಂದ ಪ್ರಭಾವಿತರಾಗಿದ್ದರು. ಒಟ್ಟು ಇಪ್ಪತ್ತೈದು ಕಾದಂಬರಿಗಳು, ಜೀವನ ಚರಿತ್ರೆ ಭಿತ್ತಿ ಮತ್ತು ಇತರೆ ನಾಲ್ಕು ಗ್ರಂಥಗಳನ್ನು ಬರೆದಿರುವ ಇವರ ಹದಿನೈದು ಕಾದಂಬರಿಗಳು ಮತ್ತು ಎರಡು ಗ್ರಂಥಗಳು ಇಂಗ್ಲಿಷ್ ಹಾಗೂ ಬೇರೆ ಬೇರೆ ಭಾರತೀಯ ಭಾಷೆಗಳಿಗೆ ತರ್ಜುಮೆ ಹೊಂದಿವೆ. ವಂಶವೃಕ್ಷ, ತಬ್ಬಲಿಯು ನೀನಾದೆ ಮಗನೆ, ಮತದಾನ, ನಾಯಿ ನೆರಳು ಮತ್ತು ದಾಟು ಕಾದಂಬರಿಗಳು ಚಲನಚಿತ್ರಗಳಾಗಿವೆ. ಗೃಹಭಂಗ ಮತ್ತು ದಾಟು (ಹಿಂದಿ) ಟಿವಿ ಧಾರಾವಾಹಿಗಳಾಗಿವೆ. ಕನ್ನಡ ಸಾಹಿತ್ಯ ಅಕಾಡೆಮಿ, ಕೇಂದ್ರ ಸಾಹಿತ್ಯ ಅಕಾಡಮಿ, ಪಂಪ ಪ್ರಶಸ್ತಿ, ಎನ್ ಟಿ ಆರ್ ರಾಷ್ಟ್ರೀಯ ಪ್ರಶಸ್ತಿ, ಗುಲಬರ್ಗಾ ವಿಶ್ವವಿದ್ಯಾನಿಲಯದ ಗೌರವ ಡಾಕ್ಟರೇಟ್, ಸರಸ್ವತಿ ಸಮ್ಮಾನ್ ಪ್ರಶಸ್ತಿ, ನಾಡೋಜ ಪ್ರಶಸ್ತಿ, ವಾಗ್ವಿಲಾಸಿನಿ ಪುರಸ್ಕಾರ್, ಡಾಕ್ಟರ್ ಬೆಟಗೇರಿ ಕೃಷ್ಣಶರ್ಮ ಪ್ರಶಸ್ತಿ, ಸಾಹಿತ್ಯ ಫೆಲೋ ಅಕಾಡಮಿ ಗೌರವ ಮುಂತಾದವು ಇವರ ಪ್ರತಿಭೆಗೆ ಸಂದ ಗೌರವಗಳಾಗಿವೆ. ಕನ್ನಡ ಸಾಹಿತ್ಯ ಪ್ರೇಮಿಗಳಲ್ಲಿ ಇವರು ಮೂಡಿಸಿರುವ ಛಾಪು ಅವಿಸ್ಮರಣೀಯ. ಇತ್ತೀಚೆಗೆ ಕ್ಲಬ್ ಹೌಸ್ ನಲ್ಲಿ ಇವರೊಡನಿನ ಸಂವಾದ ಅಂದಿನ ಎಲ್ಲಾ ಕ್ಲಬ್ ಹೌಸ್ ಸಂವಾದಗಳಿಗಿಂತ ಹೆಚ್ಚು ಶ್ರೋತೃವರ್ಗ ಹೊಂದಿದ ದಾಖಲೆಯಾಗಿದೆ.

ಭೈರಪ್ಪನವರ 'ಉತ್ತರಕಾಂಡ' ಕಾದಂಬರಿ – ೧೬.೦೧.೨೦೧೭ರಂದು ಪ್ರಥಮ ಮುದ್ರಣಗೊಂಡು ೨೬.೦೧.೨೦೧೭ ಅಂದರೆ ಹತ್ತು ದಿನದ ಒಳಗೆ ದಾಖಲೆ ಆರು ಮುದ್ರಣಗಳನ್ನು ಕಂಡ ಕಾದಂಬರಿ ಇದು.

ಭೈರಪ್ಪನವರ ಹೇಳಿದಂತೆ ಇದು ವಾಲ್ಮೀಕಿ ರಾಮಾಯಣವನ್ನು ಅವಲಂಬಿಸಿದ ನೇರ ಸೃಜನಶೀಲ ಪ್ರತಿಕ್ರಿಯೆ.

ವಾಲ್ಮೀಕಿ ರಾಮಾಯಣ ಹಾಗೂ ಇನ್ನಿತರ ರಾಮಾಯಣಗಳಲ್ಲಿ ರಾಮನ ದೃಷ್ಟಿಯಿಂದ ಅವನನ್ನೇ ಕೇಂದ್ರೀಕರಿಸಿ ರಾಮಾಯಣ ಬರೆದಿದ್ದರೆ ಈ ಉತ್ತರಕಾಂಡ ಸಂಪೂರ್ಣವಾಗಿ ಸೀತಾಯಣ. ಸೀತೆಯ ದೃಷ್ಟಿಯಲ್ಲಿ ರಾಮಾಯಣವನ್ನು ಮತ್ತೊಮ್ಮೆ ಓದಿದ ಅನುಭವ.

ಇನ್ನೇನು ಪಟ್ಟಾಭಿಷಿಕ್ತಳಾಗಿ ಮೆರೆಯಬೇಕಿದ್ದ ಅವಳು ರಾಮನ ಜೊತೆ ವನವಾಸಕ್ಕೆ ಕಾಡಿಗೆ ಹೋಗಬೇಕಾಗಿ ಅಲ್ಲೆಲ್ಲಾ ಕಷ್ಟ ಅನುಭವಿಸಿ ರಾವಣನಿಂದ ಅಪಹೃತಳಾಗಿ ಅಲ್ಲಿಂದ ಬಂದು ಅಗ್ನಿಪರೀಕ್ಷೆಯ ಕಂಟಕವನ್ನು ಎದುರಿಸಿ ಅಯೋಧ್ಯೆಗೆ ಮರಳಿ ಬಂದು ಗರ್ಭಿಣಿಯಾಗಿರುವಾಗ ಗಂಡನಿಂದ ಪರಿತ್ಯಕ್ತಳಾಗುತ್ತಾಳಲ್ಲಾ! ಆ ವೈದೇಹಿಯ ಮನದ ಭಾವನೆಗಳು, ತುಮುಲಗಳು, ಗೊಂದಲಗಳು, ಅಭಿಪ್ರಾಯಗಳು ನಿಜವಾಗಿ ಅವಳ ಸ್ವಗತವಾಗಿ ಇಲ್ಲಿ ಹೊರಬಂದಿದೆ. ಸೀತೆಯನ್ನು ಪತಿವ್ರತೆ ಎಂದಿದ್ದೇ ಇಷ್ಟೆಲ್ಲಾ ಕಷ್ಟಗಳನ್ನು ಏನೊಂದೂ ಪ್ರತಿನುಡಿಯದೆ ತುಟಿಕಚ್ಚಿ ಅನುಭವಿಸಿದಳಲ್ಲ ಅದಕ್ಕೇನಾ ಎನಿಸಿದ್ದು ಎಷ್ಟೋ ಬಾರಿ . ಆದರೆ ಸಾಮಾನ್ಯ ಸ್ತ್ರೀಯಂತೆ ಅವಳ ಭಾವನೆಗಳು ಇಲ್ಲಿ ಅನಾವರಣಗೊಳ್ಳುತ್ತವೆ. ಆ ಪರಿ ನಿಜಕ್ಕೂ ತುಂಬಾ ಖುಷಿ ಕೊಟ್ಟಿತು. ಅಲ್ಲದೆ ಭೈರಪ್ಪ ನವರಿಗೆ ಸ್ತ್ರೀ ಸಂವೇದನೆಗಳನ್ನು ತುಂಬಾ ಚೆನ್ನಾಗಿ ಅರಿಯುವ ಶಕ್ತಿ ಇದೆ. ಅವರನ್ನು ಸ್ತ್ರೀಪಕ್ಷಪಾತಿ ಬರಹಗಾರ ಎಂದೂ ಅನ್ನುತ್ತಾರೆ. ಅದಕ್ಕೆ ಈ ಉತ್ತರಕಾಂಡದ ಸೀತೆ ಅತ್ಯುತ್ತಮ ನಿದರ್ಶನವಾಗಿ ನಿಲ್ಲುತ್ತಾಳೆ.

ಕ್ರೌಂಚ ಪಕ್ಷಿಯ ಜೋಡಿಗಳಲ್ಲಿ ಒಂದಕ್ಕೆ ಬಾಣ ತಗುಲಿ ಸಾಯುವಾಗ ಅದನ್ನು ನೋಡಿದ ವಾಲ್ಮೀಕಿ ಮಹರ್ಷಿಗಳಿಂದ ರಾಮಾಯಣ ಕಾವ್ಯ ಜನಿಸುತ್ತದೆ.

ಅದೇ ವಾಲ್ಮೀಕಿಗಳು ಮುಂದೆ ಒಂದುಕಡೆ ಹೀಗೆನ್ನುತ್ತಾರೆ, ಘಟನೆಗಳ ವಾಸ್ತವತೆ ಹೆಚ್ಚಾದರೆ ಅದರ ಭಾರಕ್ಕೆ ಕಾವ್ಯ ನಲುಗುತ್ತದೆ. ಅದು ಕಾವ್ಯವಾಗದೆಯೇ ಹೋಗಬಹುದು. ಈ ಮಾತನ್ನು ಆಧಾರವಾಗಿಟ್ಟುಕೊಂಡು ನೋಡಿದರೆ ಈಗ ನಮ್ಮ ಕಣ್ಣಿಗೆ ಬೀಳುವ ಮಹಾಕಾವ್ಯಗಳು ವಾಸ್ತವದ ಪರಿಧಿಯಿಂದ ಚೌಕಟ್ಟಿನಿಂದ ಅದೆಷ್ಟೋ ದೂರ ಸರಿದು ಬಂದಿರಬಹುದು; ಸಾಮಾನ್ಯ ಘಟನೆಗಳಿಗೆ ಅಸಾಮಾನ್ಯತೆಯ ಬಣ್ಣ ಬಳಿದಿರಬಹುದು; ಪವಾಡಗಳ ಲೇಪನವಾಗಿರಬಹುದು. ಹಾಗಾಗಿ ಘಟನೆಗಳನ್ನು ಹೇಗೆ ಇತ್ತೋ ಹಾಗೆ ಯಥಾವತ್ತಾಗಿ ಸಾಮಾನ್ಯರ ದೃಷ್ಟಿಯಲ್ಲಿ ನೋಡುತ್ತಾ ಹೋಗಿದೆ ಈ ಕಥನ. ಹಿಂದೆ ಪರ್ವ ಕಾದಂಬರಿಯಲ್ಲಿ ಭೈರಪ್ಪನವರು ಇದೇ ರೀತಿಯ ಸಾಮಾನ್ಯತೆಯ ಅನಾವರಣ ಮಾಡಿದ್ದಾರೆ.

ವಾಲ್ಮೀಕಿಯ ಆಶ್ರಮದಲ್ಲಿ ಲವ ಕುಶರಿಗೆ ಜನ್ಮ ಕೊಟ್ಟ ನಂತರದ ಘಟನೆಗಳ ಸಾಗುವಿಕೆಯೊಂದಿಗೆ ಸೀತೆಯು ತನ್ನ ಜೀವನದ ಹಿಂದಿನ ಘಟನೆಗಳನ್ನು ನೆನೆಸಿಕೊಳ್ಳುತ್ತಾ ಹೋಗುವಂತೆ ಕಥೆ ನೇಯ್ದಿರುವುದು ಇಲ್ಲಿನ ವಿಶಿಷ್ಟ ತಂತ್ರ. ಇಲ್ಲಿ ಗೌತಮ ಅಹಲ್ಯೆ ಪ್ರಸಂಗದಲ್ಲಿ ಅಹಲ್ಯೆ ಕಲ್ಲಾದಳು ಎನ್ನುವ ಅಸಾಧಾರಣ ಘಟನೆಯನ್ನು ಬೇರೆಯದೇ ರೀತಿಯ ಚಿತ್ರಣ ನೋಡಿ ಸಂಭವನೀಯ ಎನಿಸಿದ್ದಾರೆ. ಅಂತೆಯೇ ದಶರಥ ಪುತ್ರಕಾಮೇಷ್ಟಿ ಯಾಗದಿಂದ ಮಕ್ಕಳನ್ನು ಪಡೆದ ವಿಧಾನವನ್ನು ಆಯುರ್ವೇದದ ರೀತ್ಯ ಚಿಕಿತ್ಸೆ ಪಡೆದು ಮಕ್ಕಳಾದಂತೆ ಹೇಳುವ ಪರಿ ನಿಜ ಜೀವನಕ್ಕೆ ಹೆಚ್ಚು ಹತ್ತಿರ ಎನಿಸುತ್ತದೆ.

ಮುಂದೆ ವನವಾಸದ ಸಂದರ್ಭದಲ್ಲಿ ಲಕ್ಷ್ಮಣನು ರಾಮ ಸೀತೆಗಾಗಿ ಪಡುವ ಕಷ್ಟಗಳು, ಅಗ್ನಿ ಪರೀಕ್ಷೆಯ ಸಮಯದಲ್ಲಿ ರಾಮನನ್ನು ವಿರೋಧಿಸಿ ಸೀತೆಯನ್ನು ತಡೆಯುವುದು, ಹಾಗೆಯೆ ಸೀತೆಯನ್ನು ಪರಿತ್ಯಜಿಸುವ ನಿರ್ಧಾರ ತೆಗೆದುಕೊಂಡ ರಾಮನನ್ನು ವಿರೋಧಿಸಿ ಅಯೋಧ್ಯೆಯನ್ನೇ ಬಿಟ್ಟು ತಾನು ಬೇರೆ ಕಡೆ ನೆಲೆಗೊಳ್ಳುವುದು ಈ ರೀತಿಯಲ್ಲಿ ಲಕ್ಷ್ಮಣನ ವ್ಯಕ್ತಿತ್ವದ ಮತ್ತೊಂದು ಆಯಾಮವನ್ನು ತೆರೆದಿಟ್ಟಿದ್ದಾರೆ. ಅಂತೆಯೇ ಇಲ್ಲಿಯ ಊರ್ಮಿಳೆಯೂ ಅಷ್ಟೇ ನೇಪಥ್ಯಕ್ಕೆ ಸರಿದ ನಾಯಕಿಯಲ್ಲ, ಮುಂದೆಯೂ ರಾಮನ ಆಜ್ಞೆಯ ವಿರುದ್ಧವೇ ಸೀತೆಗೆ ಸಹಾಯ ಮಾಡುತ್ತಾ ಅವಳ ಸಂಪರ್ಕವನ್ನಿಟ್ಟುಕೊಂಡು ಧೈರ್ಯ ತುಂಬುವ ನಿಜವಾದ ಸೋದರಿ.

ಕೈಕೇಯಿ ದಶರಥನನ್ನು ವಿವಾಹವಾಗಿ ಬಂದ ಸಂದರ್ಭದ ಹಿನ್ನೆಲೆ ಮುಂದೆ ಭರತನನ್ನು ರಾಜನನ್ನಾಗಿ ಅವಳು ಮಾಡುವ ರಾಜಕೀಯ ಹುನ್ನಾರ ರಾಮನನ್ನು ವನವಾಸಕ್ಕೆ ಕಳುಹಿಸಿಸುವಲ್ಲಿ ಅವಳು ತೋರುವ ರಾಜಕೀಯ ಮುತ್ಸದ್ದಿತನ ಇದೆಲ್ಲವೂ ನಿಜ ಜೀವನಕ್ಕೆ ಹೆಚ್ಚು ಹೆಚ್ಚು ಹತ್ತಿರವೆನಿಸುತ್ತದೆ.

ವನವಾಸದ ಸಂದರ್ಭದಲ್ಲಿ ಮುಂದೆ ಅನಸೂಯೆ ಅತ್ರಿಗಳ ಆಶ್ರಮದಲ್ಲಿ ಸೀತೆಗೆ ಹೇಳುವ ಈ ಮಾತುಗಳು ಗಮನೀಯ "ಅಲಂಕರಿಸಿಕೊಂಡು ತನ್ನ ಚೆಲುವನ್ನು ಕಾಪಾಡಿಕೊಳ್ಳುವುದು ಹೆಣ್ಣಿನ ಅಗತ್ಯ ಧರ್ಮ" ಎಂದು ಹೇಳುತ್ತಾ ಸೀತೆಗೆ ಆಭರಣಗಳನ್ನು ರೇಷ್ಮೆ ಸೀರೆಗಳನ್ನು ಉಡುಗೊರೆಯಾಗಿ ನೀಡುತ್ತಾಳೆ. ಬೇರೆಯವರಿಗಾಗಿ ಅಲ್ಲದೆ ನಮ್ಮ ಮನಸ್ಸಂತೋಷಕ್ಕಾಗಿ ಅಲಂಕರಿಸಿ ಕೊಳ್ಳಬೇಕು ಎನ್ನುವುದು ಅಂದಿನ ಕಾಲದಿಂದಲೂ ಇದ್ದದ್ದೇ ಎಂದು ತಿಳಿದು ಅಚ್ಚರಿಯಾಗುತ್ತದೆ.

ಮುಂದೆ ಲಂಕೇಶನೇ ಕಪಟ ಸನ್ಯಾಸಿಯಾಗಿ ಬಂದು ಸೀತೆಯನ್ನು ಅಪಹರಿಸುತ್ತಾನೆ ಎನ್ನುವ ಸರ್ವವಿಧಿತ ಅಂಶವನ್ನು ಬಿಟ್ಟು ರಾವಣ ತನ್ನ ಸೇವಕರನ್ನು ಕಳುಹಿಸಿ ಸೀತೆಯನ್ನು ಅಪಹರಿಸುತ್ತಾನೆ ಎಂಬ ಅಂಶ ಇಲ್ಲಿ. ರಾವಣನ ಬಳಿ ಸೆರೆಯಾಳಾಗಿ ಇರುವ ಸೀತೆಯಲ್ಲಿ ಮೂಡುವ ಈ ವಿಚಾರಗಳು ಎಷ್ಟು ಸಾರ್ವಕಾಲಿಕ ನೋಡಿ. "ದೇಹಶುದ್ಧಿಯು ನಷ್ಟವಾದರೆ ಯಾಕೆ ಹೆಂಗಸಿಗೆ ಸರ್ವನಾಶವಾದ ಭಾವ ಬರುತ್ತೆ? ದೇಹವು ಆತ್ಮ ಜೀವ ಬುದ್ಧಿ ಮನಸ್ಸುಗಳಿಗಿಂತ ಜಡವಾದದ್ದು. ಜಡವು ಅಶುದ್ಧವಾಗಿಯೂ ಆತ್ಮ ಜೀವ ಮನಸ್ಸುಗಳು ಶುದ್ಧವಾಗಿರಲು ಸಾಧ್ಯವಿಲ್ಲವೇ? ಅತ್ಯಾಚಾರದ ಪಾಪವು ಅತ್ಯಾಚಾರಿಗೆ ಮಾತ್ರ ಮೆತ್ತಿಕೊಳ್ಳಬೇಕೇ

ಹೊರತು ಬಲಿಯಾದವಳಿಗೆ ಯಾಕೆ ತಗುಲಬೇಕು? ಅವಳೇಕೆ ಆ ದೇಹವನ್ನು ತ್ಯಜಿಸಬೇಕು". ಎಷ್ಟು ಪುರೋಗಾಮಿ ಹಾಗೂ ಸತ್ಯವಾದ ಆಲೋಚನೆಗಳು! ಆದರೆ ಅವುಗಳ ಅರಿವು ಇಂದಿಗೂ ಆಗದಿರುವುದು ಮಾತ್ರ ನಿಜಕ್ಕೂ ವಿಷಾದನೀಯ.

ಮುಂದೆ ವಾಲ್ಮೀಕಿಗಳ ಆಶ್ರಮದ ಬಳಿ ತಾನೇ ವ್ಯವಸಾಯವನ್ನು ರೂಢಿಸಿಕೊಂಡು ಭೂಮಿಪುತ್ರಿ ಎಂಬ ನಾಮಕ್ಕೆ ಅನ್ವರ್ಥ ವಾಗುವಂತೆ ಸ್ವಾವಲಂಬಿಯಾಗಿ ಕೃಷಿಕಳಾಗಿರುವ ಸೀತೆ ನಿಜಕ್ಕೂ ಮಾದರಿಯಾಗಿ ತನ್ನ ಅಸ್ಮಿತೆಯನ್ನು ತೋರಿಸಿಕೊಳ್ಳುವವಳು. ಅಂತೆಯೇ ಆ ಸಮಯದಲ್ಲಿ ತನ್ನ ಮಕ್ಕಳಿಗೆ ನನ್ನನ್ನು ನಿಷ್ಕರುಣೆಯಿಂದ ಪರಿತ್ಯಜಿಸಿದವನ ಮೇಲೆ ನನ್ನ ಮಕ್ಕಳ ಮನಸ್ಸಿನಲ್ಲಿ ಶಾಶ್ವತ ದ್ವೇಷ ಬೆಳೆಯುವಂತೆ ಒರೆಯಬೇಕು ಎಂದೆನಿಸಿದರೂ ತನ್ನ ತಂದೆ ಕೊಟ್ಟ ಸಂಸ್ಕಾರ ಕ್ಕೆ ಸರಿಯಾಗಿ ನಡೆಯಬೇಕು ಎಂದು ಹೇಳಿ ಆ ಯೋಚನೆಯನ್ನು ತ್ಯಜಿಸುತ್ತಾಳೆ. ಹಾಗಾಗಿಯೇ ಮುಂದೆ ಲವಕುಶರು ರಾಮನನ್ನು ದ್ವೇಷಿಸದೆ ಅಯೋಧ್ಯೆಗೆ ಹೋಗುವುದು.

ಅಶ್ವಮೇಧ ಯಾಗದ ಸಂದರ್ಭದಲ್ಲಿ ಸೀತೆಯನ್ನು ಮತ್ತೆ ಸ್ವೀಕರಿಸುವೆ ಎಂಬ ರಾಮನ ಕರೆಗೆ ಓಗೊಡದ ಸೀತೆ ವಿಶಿಷ್ಟವಾಗಿ ಎದ್ದುತೋರುತ್ತಾಳೆ. ಹೆಣ್ಣೆಂದರೆ ಆಟದ ವಸ್ತು ಹೇಗೆ ಬೇಕಾದರೂ ನಡೆಸಿಕೊಳ್ಳಬಹುದು ಎನ್ನುವ ಪುರುಷ ಪ್ರಧಾನ ಸಮಾಜಕ್ಕೆ ಸಡ್ಡು ಹೊಡೆಯುವಂತೆ ಮತ್ತೆ ವಾಲ್ಮೀಕಿ ಆಶ್ರಮಕ್ಕೆ ವಾಪಸ್ಸು ಬರುತ್ತಾಳೆ. ಇಲ್ಲಿನ ಸೀತೆ ಆಪ್ತಳಾಗುವುದು ಅದಕ್ಕಾಗಿಯೇ.

ಯಾಜ್ಞವಲ್ಕ್ಯರು ಆಧ್ಯಾತ್ಮವನ್ನು ಬೋಧಿಸಿ ಎಂದು ಹೇಳಿದ ತಮ್ಮ ಪತ್ನಿ ಮೈತ್ರೇಯಿಗೆ ಹೇಳಿದ ಈ ಶ್ಲೋಕ ಇಲ್ಲಿ ಉದ್ಧೃತವಾಗಿದೆ. ನ ವಾ ಅರೇ ಪತ್ಯುಃ ಕಾಮಾಯ ಪತಿಃ ಪ್ರಿಯೋ ಭವತಿ, ಆತ್ಮನಸ್ತು ಕಾಮಾಯ ಪತಿಃ ಪ್ರಿಯೋ ಭವತಿ, ನ ವಾ ಅರೇ ಜಾಯಾಯೈ ಕಾಮಾಯ ಜಾಯ ಪ್ರಿಯಾ ಭವತಿ, ಆತ್ಮನಸ್ತು ಕಾಮಾಯ ಜಾಯಾ ಪ್ರಿಯಾ ಭವತಿ

ಗಂಡನ ಪ್ರಯೋಜನಕ್ಕಾಗಿ ಅವನ ಹೆಂಡತಿಗೆ ಪ್ರಿಯನಾಗುವುದಿಲ್ಲ, ಅವಳ ಪ್ರಯೋಜನಕ್ಕಾಗಿ ಪ್ರಿಯನಾಗಿರುತ್ತಾನೆ: ಹಾಗೆಯೇ ಹೆಂಡತಿಯ ಪ್ರಯೋಜನಕ್ಕಾಗಿ ಅವಳು ಗಂಡನಿಗೆ ಪ್ರಿಯಳಾಗಿರುವುದಿಲ್ಲ, ತನ್ನ ಪ್ರಯೋಜನಕ್ಕಾಗಿ ಪ್ರಿಯಳಾಗಿರುತ್ತಾಳೆ; ಮಕ್ಕಳ ಪ್ರಯೋಜನಕ್ಕಾಗಿ ತಂದೆತಾಯಿಯರು ಅವರನ್ನು ಪ್ರೀತಿಸುವುದಿಲ್ಲ, ತಮ್ಮ ಪ್ರಯೋಜನಕ್ಕಾಗಿ ಪ್ರೀತಿಸುತ್ತಾರೆ. ಹಾಗೆಯೇ ಧನ ಪಶುಗಳು ಎಲ್ಲವೂ ತನಗಾಗುವ ಸಂತೋಷಕ್ಕಾಗಿ ಎಲ್ಲರೂ ಇತರ ಎಲ್ಲರನ್ನೂ ಪ್ರೀತಿಸುತ್ತಾರೆ ಎಂದರೆ ಎಲ್ಲ ಪ್ರೀತಿಯೂ ಸ್ವಕೇಂದ್ರಿತವಾದ್ದೇ.

ನಿಜ ಜೀವನದ ತಿರುಳು ಇದೆಯಲ್ಲವೇ? ಈ ಆಧಾರದ ಮೇಲೆಯೇ ಸೀತೆ ತನ್ನ ಮತ್ತು ರಾಮನ ಸಂಬಂಧದ ನಡುವಿನ ಘಟನೆಗಳನ್ನು ಒರೆ ಹಚ್ಚುತ್ತಾಳೆ ಹಾಗೂ ತನ್ನ ಅನುಭವದ ಮೂಸೆಯಲ್ಲಿ ತಿಕ್ಕುತ್ತಾಳೆ.

ಆದರೆ ರಾಮನು ತಾನು ಅವನನ್ನು ಮತ್ತೆ ಸ್ವೀಕರಿಸದೆ ವಾಪಸ್ಸು ಬಂದನಂತರ ಲವಕುಶರಿಗೆ ಪಟ್ಟಕಟ್ಟಿ ಲಕ್ಷ್ಮಣನನ್ನು ಅವರ ಬೆಂಬಲವಾಗಿರಿಸಿ ಬೇರೆಲ್ಲದರಲ್ಲೂ ಆಸಕ್ತಿ ಕಳೆದುಕೊಂಡು ನದಿಯಲ್ಲಿ ಪ್ರಾಣತ್ಯಾಗ ಮಾಡಿದ ವಿಷಯ ತಿಳಿದ ನಂತರ ನಾನು ಅವನನ್ನು ತ್ಯಜಿಸಿದ್ದಕ್ಕಾಗಿ ಈ ವೈಧವ್ಯದ ಶಿಕ್ಷೆಯನ್ನು ಕೊಟ್ಟನೇನೋ ಎಂದು ಪರಿತಪಿಸುವ ಸೀತೆ ಕಡೆಗೆ ಸಾಲಂಕೃತ ಮುತ್ತೈದೆಯಾಗಿ ಇಚ್ಛಾ ಮರಣವನ್ನು ಕೈಗೊಂಡು ಮಣ್ಣಿನೊಳಗೆ ಐಕ್ಯಳಾಗುವ ಸಂಧರ್ಭ ತುಂಬಾ ಮನಸ್ಸಿಗೆ ತಟ್ಟುವ ಹಾಗೆ ಚಿತ್ರಿತವಾಗಿದೆ. ಸುಮ್ಮನೆ ಭೂಮಿಯಲ್ಲಿ ಐಕ್ಯಳಾದಳು ಎನ್ನುವ ರೀತಿಗಿಂತ ಇದು ಬೇರೆಯೇ ಪರಿಕಲ್ಪನೆಯಾಗಿ ಮೂಡಿಬಂದಿದೆ.

ಕಾದಂಬರಿಯ ಕಡೆಯ ಸಾಲುಗಳಾಗಿ ವಾಲ್ಮೀಕಿ ಮಹರ್ಷಿಗಳು ಹೇಳುತ್ತಾರೆ "ಕಾವ್ಯದಲ್ಲಿ ಕೂಡಾ ಸುಖವನ್ನು ಸೃಷ್ಟಿಸುವುದು ಸಾಧ್ಯವಿಲ್ಲದಂತಾಯಿತಲ್ಲ, ಕವಿಯು ಏನನ್ನು ತಾನೆ ಬದಲಿಸಬಲ್ಲ ಎಂಬ ವೈಫಲ್ಯ ಬಾಧಿಸುತ್ತಿದೆ".

ತೀವ್ರ ವಿಷಾದ ತಟ್ಟುವಂತಹ ಒಂದು ಅಲೌಕಿಕ ಕಥೆಯ ಅಂತ್ಯಕ್ಕೆ ತಕ್ಕನಾದ ಉಪಸಂಹಾರ.

***